

# ಶ್ರೀಮದ್ಭಗವದ್ಗೀತಾ

(ಮೂಲ, ಅರ್ಥ, ಟಿಪ್ಪಣಿ, ಮಹಾತ್ಮ್ಯ)

ಅನುವಾದಕರು:

ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು

ಪ್ರಕಾಶಕರು:

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ,

ಹೊಳೆನರಸೀಪುರ

ಅಧ್ಯಾತ್ಮಗ್ರಂಥಾವಳಿ

# ಶ್ರೀಮದ್ಭಗವದ್ಗೀತಾ

(ಮೂಲ, ಅರ್ಥ, ಟಿಪ್ಪಣಿ, ಮಾಹಾತ್ಮ್ಯ)

ಅನುವಾದಕರು :

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ : 68

ಪ್ರಕಾಶಕರು

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ –573211

2012

ಮೊದಲನೆಯ ಮುದ್ರಣ : 1939 (1000 ಪ್ರತಿಗಳು)
ಎರಡನೆಯ ಮುದ್ರಣ : 1956 (4000 ಪ್ರತಿಗಳು)
ಮೂರನೆಯ ಮುದ್ರಣ : 1964 (3000 ಪ್ರತಿಗಳು)
ನಾಲ್ಕನೆಯ ಮುದ್ರಣ : 1974 (3000 ಪ್ರತಿಗಳು)
ಐದನೆಯ ಮುದ್ರಣ : 1994 (3000 ಪ್ರತಿಗಳು)
ಆರನೆಯ ಸಂಸ್ಕರಣ : 2004 (3000 ಪ್ರತಿಗಳು)
ಏಳನೆಯ ಸಂಸ್ಕರಣ : 2012 (3000 ಪ್ರತಿಗಳು)

ಪುಟಗಳು : xii + 363 = 375

**ಬೆಲೆ : 20 ರೂ.**

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಅಕ್ಷರಜೋಡಣೆ:*
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ.45, ನೇತಾಜಿರಸ್ತೆ, ನಾಗಸಂದ್ರ
ಟಿ.ಆರ್. ನಗರ, ಬೆಂ.–28 , ದೂ. : 26764650

ಮುದ್ರಣಕಾರರು:
**ಗಣೇಶ ಮಾರುತಿ ಪ್ರಿಂಟರ್ಸ್**
ನಂ. 76, 6ನೇ ಮುಖ್ಯರಸ್ತೆ 3ನೇಬ್ಲಾಕ್,
ಬೆಂ– 560 028, ದೂ. 9845347095

# ಮುನ್ನುಡಿ

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿ ಬರೆದು ಸಿದ್ಧಪಡಿಸಿದ್ದ ಶ್ರೀಮದ್ಭಗವದ್ಗೀತೆಯ ಮೂಲ, ಮಾಹಾತ್ಮ್ಯ, ಅರ್ಥಾನುವಾದಗಳನ್ನೊಳಗೊಂಡ ಪುಟ್ಟಪುಸ್ತಕವನ್ನು (Pocket Size) ಕಾರ್ಯಾಲಯದಲ್ಲಿ ಪ್ರಥಮಬಾರಿಗೆ ಪ್ರಮಾಥಿ ಸಂವತ್ಸರದಲ್ಲಿ (1939) ಪ್ರಕಟಿಸಲಾಯಿತು. ಪುನಃ ಎರಡನೆಯ ಬಾರಿಗೆ ಸಂಸ್ಕರಿಸಿ ತಪ್ಪುಗಳನ್ನೆಲ್ಲಾ ತಿದ್ದಿ ಶ್ಲೋಕಗಳನ್ನು ವಿಷಯಾನುಗುಣವಾಗಿ ವಿಭಾಗಿಸಿ, ಶ್ಲೋಕಗಳ ಅರ್ಥಭಾಗವನ್ನು ಅಲ್ಲಲ್ಲಿಯೇ ಸೇರಿಸಿ, ಟಿಪ್ಪಣಿ ಸಮೇತ ದುರ್ಮುಖಿ ನಾಮಸಂವತ್ಸರ (1956)ದಲ್ಲಿ ಮುದ್ರಿಸಲಾಯ್ತು. ಈ ಮುದ್ರಣದಲ್ಲಿ ಪಾರಾಯಣಮಾಡುವವರ ಸೌಕರ್ಯಕ್ಕಾಗಿ ಶ್ಲೋಕಗಳನ್ನು ಮಾತ್ರ ಕಪ್ಪಕ್ಷರದಲ್ಲಿ (Antique) ಅಳವಡಿಸಲಾಯಿತು. ಸಂಸ್ಕರಣಗೊಂಡ ಮುಂದಿನ ನಾಲ್ಕು ಮುದ್ರಣಗಳು 1964, 1974, 1994ರಲ್ಲಿ,

ಮತ್ತು 2004ರಲ್ಲಿ ಅಚ್ಚಾಗಿ ಒಟ್ಟು 17000 ಪ್ರತಿಗಳು ಮಾರಾಟವಾಗಿರುವದು ಈ ಶ್ರೇಷ್ಠ ಗ್ರಂಥದ ಅಸಾಧಾರಣ ಉಪಯುಕ್ತತೆ ಮತ್ತು ಜನಪ್ರಿಯತೆಯ ದ್ಯೋತಕವಾಗಿದೆ.

ಈಗಲೂ ಹಾಗೆಯೇ ಬೇಡಿಕೆ ಮುಂದುವರೆಯುತ್ತಿರುವದರಿಂದ ಹೊರಬರುತ್ತಿರುವ ಪರಿಷ್ಕೃತ ಏಳನೆಯ ಮುದ್ರಣ ಅಧ್ಯಾತ್ಮಾಸಕ್ತ ಗೀತಾಪ್ರಿಯರಿಗೆ ಮೆಚ್ಚುಗೆಯಾಗಿ ಅವರಿಗೆ ಶ್ರೇಯಸ್ಸನ್ನು ನೀಡಲಿ. ಇದು ಗೀತೆಯ ಪ್ರಥಮ ಪಾಠ ಮಾತ್ರ. ಇದರ ರುಚಿಯನ್ನು ಕಂಡು ಗೀತೆಯ ಅಂತರಂಗವನ್ನು ತಿಳಿದು ಅದರ ತತ್ತ್ವಾನುಷ್ಠಾನಮಾಡಬಯಸುವವರಿಗಾಗಿ, ಕಾರ್ಯಾಲಯದಿಂದ ಪ್ರಕಟವಾಗಿರುವ, ಶ್ರೀಶ್ರೀಗಳವರ ಅನುಪಮವಾದ, ಗೀತಾಶಾಸ್ತ್ರಾರ್ಥವಿವೇಕ (52 ಪು.), ಭಗವದ್ಗೀತೆಯ ಸಾರ ಮತ್ತು ಪ್ರಧಾನೋಪದೇಶಗಳು (66), ಭಗವದ್ಗೀತಾರ್ಥಸರ್ವಸ್ವ (228) ಭಗವದ್ಗೀತೆಯ ಉಪನ್ಯಾಸಗಳು (1192, 2 ಸಂಪುಟಗಳು), ಶ್ರೀಮದ್ಭಗವದ್ಗೀತಾಭಾಷ್ಯ (ಶಾಂಕರ ಭಾಷ್ಯಸಮೇತ– 1208) ಗ್ರಂಥಗಳೂ, ಜೊತೆಯಲ್ಲಿ ಶ್ರೀಮಹಾಭಾಗವತರ ಸುಂದರಪ್ರವಚನ ಮಾಲಿಕೆಯನ್ನು ಲೇಖನದಲ್ಲಿ ಹಿಡಿದಿಟ್ಟ ಶ್ರೀ ಹೊಸಕೆರೆ ಚಿದಂಬರಯ್ಯನವರ ಭಗವದ್ಗೀತಾ ಸಾರವಿಚಾರ (224)ವೂ ಮತ್ತು ಗೀತಾರ್ಥ ಚಂದ್ರಿಕೆ (408) ಗಳೂ ಅತಿಶಯ ಉಪಕಾರಿಗಳಾಗಿವೆ.

# ಗ್ರಂಥಪ್ರಕಟಣೆಗೆ ಸಹಾಯ ಮಾಡಿದ ದಾನಿಗಳು

## 10,000ರೂ. ಮತ್ತು ಮೇಲ್ಪಟ್ಟು

1) ಶ್ರೀ ಹೆಚ್.ಎನ್. ವಿಶ್ವನಾಥ್ ಬೆಂ. 2) ಶ್ರೀ ಶಂಕರನಾರಾಯಣರಾವ್ ಬೆಂ.
3) ಶ್ರೀ ಹೆಚ್.ಎಸ್. ಅನಂತರಾಮಯ್ಯ, ಕೆ.ಜಿ.ಎಫ್. 4) ಶ್ರೀಮತಿ ಎ. ಉಷಾ, ಬೆಂ.

## 5,000 ರೂ. ಮತ್ತುಮೇಲ್ಪಟ್ಟು

1) ಶ್ರೀಮತಿ ವಿಜಯ ಮೂರ್ತಿ 2) ಶ್ರೀ ಜಿ.ಎಸ್. ನಾಗರಾಜ್ ಬೆಂ,
3) ಸುಮಾ– ಭೂಮಾ ಛಾರಿಟಬಲ್ ಟ್ರಸ್ಟ್, ಬೆಂ.

## 500ರೂ. ಮತ್ತು ಮೇಲ್ಪಟ್ಟು

1) ಶ್ರೀ ಎಂ.ವಿ. ಶ್ರೀಧರ್, ಮೈಸೂರು 2) ಶ್ರೀ ಎ.ವಿ. ನಾಗರಾಜ್, ಬೆಂ.
3) ಶ್ರೀ ವಿಷ್ಣುಪಾದ ಸ್ವಾಮಿಜೀ 4) ಶ್ರೀಮತಿ ಪ್ರತಿಭಾ ಮಯ್ಯ, ಧಾರವಾಡ
5) ಶ್ರೀ ಕೆ.ಎಸ್. ಮಂಜುನಾಥ್, ಹಾಸನ 6) ಶ್ರೀ ಸುರೇಶ್, ಬೆಂ.
7) ಶ್ರೀಮತಿ ಲಲಿತಮ್ಮ –ಅರುಂಧತಿ, ಬೆಂ. 8) ಶ್ರೀಮತಿ ಪಾರ್ವತಿ–ಶಂಕರ್, ಬೆಂ.

9) ಶ್ರೀ ಹೆಚ್.ವಿ. ಹಿರಣ್ಣಗೌಡರು, ಬೆಂ. 10) ಶ್ರೀ ಪ್ರಬೋಧ, ಬೆಂ.
11) ಶ್ರೀಮತಿ ನಾಗರತ್ನ, ಬಾನುವಳ್ಳಿ 12) ಶ್ರೀಮತಿ ಗೀತಾ–ರಾವ್, ಬೆಂ.
13) ಶ್ರೀ ಸತ್ಯನಾರಾಯಣ, ಬೆಂ. 14) ಶ್ರೀ ಬಿ.ಎಸ್.ವಿ. ಭಟ್ಟರು, ಬೆಂ.
15) ಶ್ರೀ ಎಸ್. ರಮೇಶ್, ಬೆಂ. 16) ಡಾ. ಹೆಚ್.ಎ. ನಾರಾಯಣ, ಬೆಂ.
17) ಶ್ರೀಮತಿ ವನಮಾಲಾ–ಜ್ಯೋಷಿ, ಬೆಂ. 18) ಶ್ರೀಮತಿ ನಾಗರತ್ನ, ಬೆಂ.
19) ಶ್ರೀ ಕೆ.ಸಿ. ಸುಬ್ರಹ್ಮಣ್ಯ, ಬೆಂ. 20) ಶ್ರೀ ಜಿ. ರಾಧಾಕೃಷ್ಣಮೋಹನ್, ಬೆಂ.

ಈ ಪ್ರಕಟಣೆಗೆ ಯಥೋಚಿತ ಧನಸಹಾಯ ಮಾಡಿರುವ ಮೇಲ್ಕಂಡ ಉದಾರಹೃದಯಿ ಅಭಿಮಾನಿಗಳಿಗೂ ಕುಟುಂಬ ಪರಿವಾರವರ್ಗಕ್ಕೂ ಗೀತಾಚಾರ್ಯನು ಸನ್ಮಂಗಳಗಳನ್ನು ಅನುಗ್ರಹಿಸಲೆಂದು ಪ್ರಾರ್ಥನೆ.

ನಂದನ ಸಂವತ್ಸರ–
ಮಾರ್ಗಶಿರ ಶುದ್ಧ ಏಕಾದಶಿ
23–12–2012

ಪ್ರಕಾಶಕರು

॥ ಶ್ರೀ ॥

# ಪಾರಾಯಣಪ್ರಾರಂಭೇ ಪಠನೀಯಾಃ ಶ್ಲೋಕಾಃ

ಶುಕ್ಲಾಂಬರಧರಂ ವಿಷ್ಣುಂ । ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ । ಸರ್ವವಿಘ್ನೋಪಶಾನ್ತಯೇ ॥ 1 ॥
ಗುರುರ್ಬ್ರಹ್ಮಾ ಗುರುರ್ವಿಷ್ಣುಃ । ಗುರುರೇವ ಮಹೇಶ್ವರಃ ।
ಗುರುಃ ಸಾಕ್ಷಾತ್ಪರಬ್ರಹ್ಮ । ತಸ್ಮೈ ಶ್ರೀಗುರವೇ ನಮಃ ॥ 2 ॥
ನಾರಾಯಣಂ ನಮಸ್ಕೃತ್ಯ । ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ । ತತೋ ಜಯಮುದೀರಯೇತ್ ॥ 3 ॥
ವ್ಯಾಸಂ ವಸಿಷ್ಠನಪ್ತಾರಂ । ಶಕ್ತೇಃ ಪೌತ್ರಮಕಲ್ಮಷಮ್ ।
ಪರಾಶರಾತ್ಮಜಂ ವನ್ದೇ । ಶುಕತಾತಂ ತಪೋನಿಧಿಮ್ ॥ 4 ॥
ವ್ಯಾಸಾಯ ವಿಷ್ಣುರೂಪಾಯ । ವ್ಯಾಸರೂಪಾಯ ವಿಷ್ಣವೇ ।
ನಮೋ ವೈ ಬ್ರಹ್ಮನಿಧಯೇ । ವಾಸಿಷ್ಠಾಯ ನಮೋ ನಮಃ ॥ 5 ॥

ಅಚತುರ್ವದನೋ ಬ್ರಹ್ಮಾ। ದ್ವಿಬಾಹುರಪರೋ ಹರಿಃ।
ಅಫಾಲಲೋಚನಃ ಶಮ್ಭು–ರ್ಭಗವಾನ್ ಬಾದರಾಯಣಃ ॥ 6 ॥

### ನ್ಯಾಸಧ್ಯಾನಾದಿಕ್ರಮಃ

ಓಂ ಅಸ್ಯ ಶ್ರೀ ಭಗವದ್ಗೀತಾಮಾಲಾಮಂತ್ರಸ್ಯ – ಭಗವಾನ್ ವೇದವ್ಯಾಸ ಋಷಿಃ। ಅನುಷ್ಟುಪ್ ಛನ್ದಃ । ಶ್ರೀಕೃಷ್ಣಃ ಪರಮಾತ್ಮಾ ದೇವತಾ । ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸ ಇತಿ ಬೀಜಮ್। ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ಇತಿ ಶಕ್ತಿಃ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚ ಇತಿ ಕೀಲಕಮ್ ॥

ನೈನಂ ಛಿನ್ದನ್ತಿ ಶಸ್ತ್ರಾಣಿ ನೈನಂ ದಹತಿ ಪಾವಕ ಇತ್ಯಙ್ಗುಷ್ಠಾಭ್ಯಾಂ ನಮಃ । ನ ಚೈನಂ ಕ್ಲೇದಯನ್ತ್ಯಾಪೋ ನ ಶೋಷಯತಿ ಮಾರುತ ಇತಿ ತರ್ಜನೀಭ್ಯಾಂ ನಮಃ । ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ ಇತಿ ಮಧ್ಯಮಾಭ್ಯಾಂ ನಮಃ । ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನ ಇತ್ಯನಾಮಿಕಾಭ್ಯಾಂ ನಮಃ । ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶ ಇತಿ ಕನಿಷ್ಠಿಕಾಭ್ಯಾಂ ನಮಃ । ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚೇತಿ ಕರತಲಕರಪೃಷ್ಠಾಭ್ಯಾಂ ನಮಃ। ನೈನಂ

ಛಿನ್ದಂತಿ ಶಸ್ತ್ರಾಣಿ ನೈನಂ ದಹತಿ ಪಾವಕ ಇತಿ ಹೃದಯಾಯ ನಮಃ। ನ ಚೈನಂ ಕ್ಲೇದಯನ್ತ್ಯಾಪೋ ನ ಶೋಷಯತಿ ಮಾರುತ ಇತಿ ಶಿರಸೇ ಸ್ವಾಹಾ। ಅಚ್ಛೇದ್ಯೋಽಯಮದಾಹ್ಯೋಽಯಮ-ಕ್ಲೇದ್ಯೋಽಶೋಷ್ಯ ಏವ ಚ ಇತಿ ಶಿಖಾಯೈ ವಷಟ್। ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನ ಇತಿ ಕವಚಾಯ ಹುಮ್। ಪಶ್ಯ ಮೇ ಪಾರ್ಥರೂಪಾಣಿ ಶತಶೋಽಥ ಸಹಸ್ರಶ ಇತಿ ನೇತ್ರತ್ರಯಾಯ ವೌಷಟ್। ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ ಇತಿ ಅಸ್ತ್ರಾಯ ಫಟ್॥

ಶ್ರೀ ಕೃಷ್ಣಪರಬ್ರಹ್ಮಪ್ರೀತ್ಯರ್ಥೇ ಪಾಠೇ ವಿನಿಯೋಗಃ॥

ಓಂ ಭೂರ್ಭುವಃ ಸುವರೋಮಿತಿ ದಿಗ್ಬನ್ಧಃ

## ಅಥ ಧ್ಯಾನಮ್

ಓಂ ಪಾರ್ಥಾಯ ಪ್ರತಿಬೋಧಿತಾಂ ಭಗವತಾ ನಾರಾಯಣೇನ ಸ್ವಯಂ
ವ್ಯಾಸೇನ ಗ್ರಥಿತಾಂ ಪುರಾಣಮುನಿನಾ ಮಧ್ಯೇ ಮಹಾಭಾರತಮ್।

ಅದ್ವೈತಾಮೃತವರ್ಷಿಣೀಂ ಭಗವತೀಮಷ್ಟಾದಶಾಧ್ಯಾಯಿನೀಮ್
ಅಂಬ ತ್ವಾಮನುಸಂದಧಾಮಿ ಭಗವದ್ಗೀತೇ ಭವದ್ವೇಷಿಣೀಮ್ || 1 ||

ನಮೋಽಸ್ತು ತೇ ವ್ಯಾಸ ವಿಶಾಲಬುದ್ಧೇ ಫುಲ್ಲಾರವಿನ್ದಾಯತಪತ್ರನೇತ್ರ ।
ಯೇನ ತ್ವಯಾ ಭಾರತತೈಲಪೂರ್ಣಃ ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ || 2 ||

ಪ್ರಪನ್ನಪಾರಿಜಾತಾಯ । ತೋತ್ರವೇತ್ರೈಕಪಾಣಯೇ ।
ಜ್ಞಾನಮುದ್ರಾಯ ಕೃಷ್ಣಾಯ । ಗೀತಾಮೃತದುಹೇ ನಮಃ || 3 ||

ಸರ್ವೋಪನಿಷದೋ ಗಾವೋ । ದೋಗ್ಧಾ ಗೋಪಾಲನನ್ದನಃ ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ । ದುಗ್ಧಂ ಗೀತಾಮೃತಂ ಮಹತ್ || 4 ||

ವಸುದೇವಸುತಂ ದೇವಂ । ಕಂಸಚಾಣೂರಮರ್ದನಮ್ ।
ದೇವಕೀಪರಮಾನನ್ದಂ । ಕೃಷ್ಣಂ ವನ್ದೇ ಜಗದ್ಗುರುಮ್ || 5 ||

ಭೀಷ್ಮದ್ರೋಣತಟಾ ಜಯದ್ರಥಜಲಾ ಗಾನ್ಧಾರನೀಲೋಪಲಾ
ಶಲ್ಯಗ್ರಾಹವತೀ ಕೃಪೇಣ ವಹನೀ ಕರ್ಣೇನ ವೇಲಾಕುಲಾ ।

ಅಶ್ವತ್ಥಾಮವಿಕರ್ಣಘೋರಮಕರಾ ದುರ್ಯೋಧನಾವರ್ತಿನೀ
ಸೋತ್ತೀರ್ಣಾ ಖಲು ಪಾಂಡವೈ ರಣನದೀ ಕೈವರ್ತಕಃ ಕೇಶವಃ ॥ 6 ॥

ಪಾರಾಶರ್ಯವಚಃ ಸರೋಜಮಮಲಂ ಗೀತಾರ್ಥಗನ್ಧೋತ್ಕಟಮ್
ನಾನಾಖ್ಯಾನಕಕೇಸರಂ ಹರಿಕಥಾಸಮ್ಬೋಧನಾಬೋಧಿತಮ್ ।
ಲೋಕೇ ಸಜ್ಜನಷಟ್ಪದೈರಹರಹಃ ಪೇಪೀಯಮಾನಂ ಮುದಾ
ಭೂಯಾದ್ಭಾರತಪಙ್ಕಜಂ ಕಲಿಮಲಪ್ರಧ್ವಂಸಿ ನಃ ಶ್ರೇಯಸೇ ॥ 7 ॥

ಮೂಕಂ ಕರೋತಿ ವಾಚಾಲಂ ಪಙ್ಗುಂ ಲಙ್ಘಯತೇ ಗಿರಿಮ್ ।
ಯತ್ಕೃಪಾ ತಮಹಂ ವನ್ದೇ ಪರಮಾನನ್ದಮಾಧವಮ್ ॥ 8 ॥

ಯಂ ಬ್ರಹ್ಮಾ ವರುಣೇಂದ್ರರುದ್ರಮರುತಃ ಸ್ತುನ್ವನ್ತಿ ದಿವ್ಯೈಃ ಸ್ತವೈ-
ರ್ವೇದೈಃ ಸಾಙ್ಗಪದಕ್ರಮೋಪನಿಷದೈರ್ಗಾಯನ್ತಿ ಯಂ ಸಾಮಗಾಃ ।
ಧ್ಯಾನಾವಸ್ಥಿತತದ್ಗತೇನ ಮನಸಾ ಪಶ್ಯನ್ತಿ ಯಂ ಯೋಗಿನೋ
ಯಸ್ಯಾನ್ತಂ ನ ವಿದುಃ ಸುರಾಽಸುರಗಣಾ ದೇವಾಯ ತಸ್ಮೈ ನಮಃ ॥ 9 ॥

ಇತಿ ಧ್ಯಾನಮ್

**ವಿಶೇಷ ಸೂಚನೆ :** ಇಲ್ಲಿ ಕೊಟ್ಟಿರುವ ಮಂಗಳಶ್ಲೋಕಗಳನ್ನೂ ನ್ಯಾಸಧ್ಯಾನಾದಿ ಶ್ಲೋಕಗಳನ್ನೂ ಎಲ್ಲರೂ ಹೇಳಿಕೊಳ್ಳುವದಿಲ್ಲ. ಇವನ್ನು ಎಲ್ಲರೂ ಇದೇ ಕ್ರಮದಲ್ಲಿಯೂ ಹೇಳಿಕೊಳ್ಳುವದಿಲ್ಲ, ಅವರವರ ಸಂಪ್ರದಾಯದಂತೆ ಹೇಳಿಕೊಳ್ಳಬೇಕು. ಹೆಚ್ಚಿನ ಕಾಲ ವ್ಯವಧಾನವಿಲ್ಲದವರು ಮೊದಲನೆಯ ಆರು ಶ್ಲೋಕಗಳನ್ನೂ "ಪಾರ್ಥಾಯ ಪ್ರತಿಬೋಧಿತಾಂ" ಎಂಬ ಶ್ಲೋಕವನ್ನೂ ಹೇಳಿಕೊಂಡರೂ ಸಾಕಾಗುತ್ತದೆ. ಮತ್ತೆ ಯಾವ ಶ್ಲೋಕಗಳನ್ನೂ ಹೇಳದೆ "ಓಂ ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ" ಎಂದು ಮೊದಲಿನಲ್ಲಿಯೂ "ಓಂ ತತ್ಸತ್ ಶ್ರೀಕೃಷ್ಣಪರಬ್ರಹ್ಮಾರ್ಪಣಮಸ್ತು" ಎಂದು ಕೊನೆಯಲ್ಲಿಯೂ ಹೇಳಿಕೊಂಡು ಪಾರಾಯಣಮಾಡುವವರೂ ಉಂಟು. ಮುಖ್ಯವಾಗಿ ಭಕ್ತಿಯಿಂದ ಪಾರಾಯಣವನ್ನು ಪ್ರಾರಂಭಿಸಿ ಭಕ್ತಿಯಲ್ಲಿ ಕೊನೆಗಾಣಿಸಬೇಕೆಂಬುದೇ ಇಲ್ಲಿ ನೆನಪಿಡಬೇಕಾದದ್ದು.

ಮೊದಲು ನ್ಯಾಸವನ್ನು ಮಾಡಿರುವವರು ಕೊನೆಯಲ್ಲಿ ಮತ್ತೊಂದು ಸಲ "ನೈನಂ ಛಿನ್ದನ್ತಿ ಶಸ್ತ್ರಾಣಿ ನೈನಂ ದಹತಿ ಪಾವಕ ಇತಿ ಹೃದಯಾಯ ನಮಃ" ಇತ್ಯಾದಿಯಾಗಿ ನ್ಯಾಸವನ್ನು ಮಾಡಿ "ಓಂ ಭೂರ್ಭುವಃಸುವರೋಮಿತಿ ದಿಗ್ವಿಮೋಕಃ ॥ ಓಂ ತತ್ಸತ್ ಶ್ರೀಕೃಷ್ಣ ಪರಬ್ರಹ್ಮಾರ್ಪಣಮಸ್ತು" ಎಂದು ಮುಗಿಸಬೇಕು.

——————

॥ ಓಂ ॥

# ಅಥ ಶ್ರೀಮದ್ಭಗವದ್ಗೀತಾ

## ಪ್ರಥಮೋಽಧ್ಯಾಯಃ

**ಧೃತರಾಷ್ಟ್ರ ಉವಾಚ –**

**ಧರ್ಮಕ್ಷೇತ್ರೇ ಕುರುಕ್ಷೇತ್ರೇ। ಸಮವೇತಾ ಯುಯುತ್ಸವಃ।**
**ಮಾಮಕಾಃ ಪಾಂಡವಾಶ್ಚೈವ। ಕಿಮಕುರ್ವತ ಸಞ್ಜಯ ॥ 1 ॥**

## ಒಂದನೆಯ ಅಧ್ಯಾಯ

**ಧೃತರಾಷ್ಟ್ರನು ಕೇಳಿದ್ದು:**

ಸಂಜಯನೆ, ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧಮಾಡಬೇಕೆಂಬ ತವಕದಿಂದ ಒಕ್ಕಡೆ ಸೇರಿದ ನಮ್ಮವರೂ ಪಾಂಡವರೂ ಏನು ಮಾಡಿದರು? (1)

ಸಞ್ಜಯ ಉವಾಚ –

ದೃಷ್ಟ್ವಾ ತು ಪಾಣ್ಡವಾನೀಕಂ। ವ್ಯೂಢಂ ದುರ್ಯೋಧನಸ್ತದಾ।
ಆಚಾರ್ಯಮುಪಸಙ್ಗಮ್ಯ। ರಾಜಾ ವಚನಮಬ್ರವೀತ್ ॥ 2 ॥

ಪಶ್ಯೈತಾಂ ಪಾಣ್ಡುಪುತ್ರಾಣಾ–ಮಾಚಾರ್ಯ ಮಹತೀಂ ಚಮೂಮ್
ವ್ಯೂಢಾಂ ದ್ರುಪದಪುತ್ರೇಣ। ತವ ಶಿಷ್ಯೇಣ ಧೀಮತಾ ॥ 3 ॥

ಅತ್ರ ಶೂರಾ ಮಹೇಷ್ವಾಸಾ। ಭೀಮಾರ್ಜುನಸಮಾ ಯುಧಿ।
ಯುಯುಧಾನೋ ವಿರಾಟಶ್ಚ। ದ್ರುಪದಶ್ಚ ಮಹಾರಥಃ ॥ 4 ॥

ಧೃಷ್ಟಕೇತುಶ್ಚೇಕಿತಾನಃ। ಕಾಶಿರಾಜಶ್ಚ ವೀರ್ಯವಾನ್।
ಪುರುಜಿತ್ ಕುನ್ತಿಭೋಜಶ್ಚ। ಶೈಬ್ಯಶ್ಚ ನರಪುಙ್ಗವಃ ॥ 5 ॥

ಯುಧಾಮನ್ಯುಶ್ಚ ವಿಕ್ರಾನ್ತ– ಉತ್ತಮೌಜಾಶ್ಚ ವೀರ್ಯವಾನ್।
ಸೌಭದ್ರೋ ದ್ರೌಪದೇಯಾಶ್ಚ। ಸರ್ವ ಏವ ಮಹಾರಥಾಃ ॥ 6 ॥

ಸಂಜಯನು ಹೇಳಿದ್ದು:

ಆಗ ಎದುರಿಗೆ ಒಡ್ಡಿದ್ದ ಪಾಂಡವರ ಸೈನ್ಯವನ್ನು ಕಂಡು, ದುರ್ಯೋಧನರಾಯನು ದ್ರೋಣಾಚಾರ್ಯರ ಬಳಿಗೆ ಹೋಗಿ ಈ ಮಾತನ್ನೆಂದನು : "ಆಚಾರ್ಯನೆ, ಜಾಣನಾದ ನಿನ್ನ ಶಿಷ್ಯ ದ್ರುಪದಪುತ್ರನು ಒಡ್ಡಿರುವ ಪಾಂಡವರ ಈ ದೊಡ್ಡ ಸೇನೆಯನ್ನು ನೋಡು. ಇಲ್ಲಿ ಶೂರರೂ ಯುದ್ಧದಲ್ಲಿ ಭೀಮಾರ್ಜುನರಿಗೆ ಸಮರಾದ ದೊಡ್ಡದೊಡ್ಡ ಬಿಲ್ಲಾಳುಗಳೂ ಆದ ಯುಯುಧಾನ, ವಿರಾಟ, ಮಹಾರಥನಾದ ದ್ರುಪದ, ಧೃಷ್ಟಕೇತು, ಚೇಕಿತಾನ, ಬಲಶಾಲಿಯಾದ ಕಾಶಿರಾಜ, ಪುರುಜಿತ್ತು, ಕುಂತಿಭೋಜ, ಮಾನವಶ್ರೇಷ್ಠನಾದ ಶೈಬ್ಯ, ಪರಾಕ್ರಮಿಯಾದ ಯುಧಾಮನ್ಯು, ಬಲಿಷ್ಠನಾದ ಉತ್ತಮೌಜಸ್ಸು , ಸುಭದ್ರೆಯ ಮಗನು, ದ್ರೌಪದಿಯ ಮಕ್ಕಳು – ಇವರುಗಳಿರುವರು. ಇವರೆಲ್ಲರೂ ಮಹಾರಥರೇ." (2–6)

ಟಿ ॥ ಪಾಂಡವರ ಸೇನೆಯು ವಜ್ರಾಕೃತಿಯಲ್ಲಿ ಒಡ್ಡಿತ್ತು. ಯುಯುಧಾನ – ಸಾತ್ಯಕಿ ; ಧೃಷ್ಟಕೇತು – ಶಿಶುಪಾಲನ ಮಗ ; ಕುಂತಿಭೋಜ – ಕುಂತಿಯ ತಂದೆ ; ಶೈಬ್ಯ – ಶಿಬಿವಂಶದ ಅರಸು ; ಉತ್ತಮೌಜಸ್ಸು –ಪಾಂಚಾಲದ ಅರಸು ; ಸುಭದ್ರೆಯ ಮಗ – ಅಭಿಮನ್ಯು ; ದ್ರೌಪದಿಯ ಮಕ್ಕಳು – ಪ್ರತಿವಿಂಧ್ಯ, ಶ್ರುತಸೇನ, ಶ್ರುತಕೀರ್ತಿ, ಶತಾನೀಕ, ಶ್ರುತವರ್ಮ – ಎಂಬ ಐವರು. ಮಹಾರಥನೆಂದರೆ ಹತ್ತುಸಾವಿರ ಬಿಲ್ಲಾಳುಗಳೊಡನೆ ಕದನಮಾಡಬಲ್ಲ ಶಸ್ತ್ರಶಾಸ್ತ್ರನಿಪುಣನು.

**ಅಸ್ಮಾಕಂ ತು ವಿಶಿಷ್ಟಾ ಯೇ । ತಾನ್ನಿಬೋಧ ದ್ವಿಜೋತ್ತಮ ।**
**ನಾಯಕಾ ಮಮ ಸೈನ್ಯಸ್ಯ । ಸಂಜ್ಞಾರ್ಥಂ ತಾನ್ ಬ್ರವೀಮಿ ತೇ ॥ 7 ॥**

"ಎಲೈ ಬ್ರಾಹ್ಮಣೋತ್ತಮನೆ, ಇನ್ನು ನಮ್ಮ ಕಡೆಯಲ್ಲಿ ಮುಖ್ಯರಾಗಿ ನಮ್ಮ ಸೇನೆಯಲ್ಲಿ ನಾಯಕರಾಗಿ ಯಾರುಯಾರಿರುವರೋ ಅವರನ್ನು ನನ್ನಿಂದ ತಿಳಿದುಕೊಂಡಿರು. ಅವರನ್ನು ನಿನ್ನ ನೆನಪಿಗಾಗಿ ತಿಳಿಸುತ್ತೇನೆ." (7)

**ಭವಾನ್ ಭೀಷ್ಮಶ್ಚ ಕರ್ಣಶ್ಚ । ಕೃಪಶ್ಚ ಸಮಿತಿಂಜಯಃ ।**
**ಅಶ್ವತ್ಥಾಮಾ ವಿಕರ್ಣಶ್ಚ । ಸೌಮದತ್ತಿರ್ಜಯದ್ರಥಃ ॥ 8 ॥**

ಅನ್ಯೇ ಚ ಬಹವಃ ಶೂರಾ – ಮದರ್ಥೇ ತ್ಯಕ್ತಜೀವಿತಾಃ।
ನಾನಾಶಸ್ತ್ರಪ್ರಹರಣಾಃ। ಸರ್ವೇ ಯುದ್ಧವಿಶಾರದಾಃ ॥ 9 ॥

"ನೀನು, ಭೀಷ್ಮನು, ಕರ್ಣನು, ಯುದ್ಧದಲ್ಲಿ ಜಯಶಾಲಿಯಾದ ಕೃಪನು, ಅಶ್ವತ್ಥಾಮನು, ವಿಕರ್ಣನು, ಸೋಮದತ್ತನ ಮಗನು, ಜಯದ್ರಥನು, ನನಗೋಸ್ಕರ ಪ್ರಾಣದಾಸೆಯನ್ನು ತೊರೆದು ಬಗೆಬಗೆಯ ಶಸ್ತ್ರಗಳನ್ನೂ ಆಯುಧಗಳನ್ನೂ ಹಿಡಿದಿರುವ ಇನ್ನೂ ಎಷ್ಟೋಮಂದಿ ಶೂರರಿರುವರು. ಅವರೆಲ್ಲರೂ ಕಾಳಗದಲ್ಲಿ ನುರಿತವರು." (8–9)

ಟಿ॥ ವಿಕರ್ಣನು ದುರ್ಯೋಧನನ ಸಹೋದರನು. ಸೋಮದತ್ತನ ಮಗನು ಎಂದರೆ ಭೂರಿಶ್ರವಸ್ಸೆಂಬಾತನು.

ಅಪರ್ಯಾಪ್ತಂ ತದಸ್ಮಾಕಂ। ಬಲಂ ಭೀಷ್ಮಾಭಿರಕ್ಷಿತಮ್।
ಪರ್ಯಾಪ್ತಂ ತ್ವಿದಮೇತೇಷಾಂ। ಬಲಂ ಭೀಮಾಭಿರಕ್ಷಿತಮ್ ॥ 10 ॥
ಅಯನೇಷು ಚ ಸರ್ವೇಷು। ಯಥಾಭಾಗಮವಸ್ಥಿತಾಃ।
ಭೀಷ್ಮಮೇವಾಭಿರಕ್ಷನ್ತು। ಭವನ್ತಃ ಸರ್ವ ಏವ ಹಿ ॥ 11 ॥

"ಭೀಷ್ಮನಿಂದ ರಕ್ಷಿತವಾಗಿರುವ ಈ ನಮ್ಮ ಸೇನೆಯ ಬಲವು ಕಡಿಮೆಯಲ್ಲ. ಭೀಮನಿಂದ ರಕ್ಷಿತವಾಗಿರುವ ಇವರ ಬಲವೇನೋ ಮಿತವಾಗಿರುವದು. ಆದರೂ ನೀವೆಲ್ಲರೂ ನಿಮ್ಮನಿಮ್ಮ ಸ್ಥಳಗಳಲ್ಲಿದ್ದುಕೊಂಡು ಎಲ್ಲಾ ಕಡೆಯಿಂದಲೂ ಭೀಷ್ಮನನ್ನೇ ಕಾಪಾಡಿಕೊಳ್ಳಿ." (10–11)

ಟಿ॥ ಇಲ್ಲಿ ಹತ್ತನೆಯ ಶ್ಲೋಕದಲ್ಲಿರುವ "ಅಪರ್ಯಾಪ್ತಂ", "ಪರ್ಯಾಪ್ತಂ"– ಎಂಬ ಮಾತುಗಳಿಗೆ ವ್ಯಾಖ್ಯಾನಕಾರರು ಬೇರೆಬೇರೆಯ ಅರ್ಥವನ್ನು ಮಾಡಿರುತ್ತಾರೆ ; "ಪರ್ಯಾಪ್ತಂ" ಎಂದರೆ ಸಾಕಾಗಿರುತ್ತದೆ, ಸಮರ್ಥವಾಗಿರುತ್ತದೆ – ಎಂದು ಅರ್ಥಮಾಡಿದರೆ ಸಂದರ್ಭಕ್ಕೆ ಹೊಂದುವದಿಲ್ಲ. ಏಕೆಂದರೆ ಕೌರವನ ಕಡೆ ಹನ್ನೊಂದು ಅಕ್ಷೌಹಿಣಿಯ ಬಲವಿತ್ತು. ಭೀಷ್ಮಾದಿವೀರರೂ ಇದ್ದರು ; ಆದ್ದರಿಂದ ಅವನ ಸೇನೆಯೇ ಸಾಕಾದಷ್ಟು ಬಲವಾಗಿದ್ದಿತು. ಸೇನೆಯು ಬಲವಾಗಿದೆಯೆಂಬ ಕಾರಣದಿಂದ ನಾಯಕರು ಅಲಕ್ಷ್ಯರಾಗಿರಬಾರದೆಂದು ದುರ್ಯೋಧನನ ಅಭಿಪ್ರಾಯವಿದ್ದರೂ ಇರಬಹುದು.

ತಸ್ಯ ಸಞ್ಜನಯನ್ ಹರ್ಷಂ। ಕುರುವೃದ್ಧಃ ಪಿತಾಮಹಃ।
ಸಿಂಹನಾದಂ ವಿನದ್ಯೋಚ್ಚೈಃ। ಶಙ್ಖಂ ದಧ್ಮೌ ಪ್ರತಾಪವಾನ್ ॥ 12 ॥

ತತಃ ಶಙ್ಖಾಶ್ಚ ಭೇರ್ಯಶ್ಚ। ಪಣವಾನಕಗೋಮುಖಾಃ।
ಸಹಸೈವಾಭ್ಯಹನ್ಯನ್ತ। ಸ ಶಬ್ದಸ್ತುಮುಲೋಽಭವತ್ ॥ 13 ॥

ಆಗ ಈತನಿಗೆ ಹರ್ಷವನ್ನುಂಟುಮಾಡಬೇಕೆಂದು ಕುರುಕುಲಕ್ಕೆ ಹಿರಿಯನೂ ಪ್ರತಾಪಿಯೂ ಆದ ಪಿತಾಮಹ(ಭೀಷ್ಮ)ನು ಗಟ್ಟಿಯಾಗಿ ಸಿಂಹನಾದವನ್ನು ಮಾಡಿ ಶಂಖವನ್ನೂದಿದನು. ಆಮೇಲೆ ಶಂಖಗಳು, ಭೇರಿಗಳು, ತಮಟೆಗಳು, ನಗಾರಿಗಳು, ದುಮುದುಮಿಗಳು – ಒಮ್ಮೆಗೇ ಭೋರ್ಗರೆದವು. ಆ ಶಬ್ದವು ದೊಡ್ಡ ಗದ್ದಲವಾಯಿತು. (12–13)

ತತಃ ಶ್ವೇತೈರ್ಹಯೈರ್ಯುಕ್ತೇ। ಮಹತಿ ಸ್ಯನ್ದನೇ ಸ್ಥಿತೌ।
ಮಾಧವಃ ಪಾಂಡವಶ್ಚೈವ। ದಿವ್ಯೌ ಶಙ್ಖೌ ಪ್ರದಧ್ಮತುಃ ॥ 14 ॥
ಪಾಞ್ಚಜನ್ಯಂ ಹೃಷೀಕೇಶೋ। ದೇವದತ್ತಂ ಧನಞ್ಜಯಃ।
ಪೌಣ್ಡ್ರಂ ದಧ್ಮೌ ಮಹಾಶಙ್ಖಂ। ಭೀಮಕರ್ಮಾ ವೃಕೋದರಃ ॥ 15 ॥
ಅನನ್ತವಿಜಯಂ ರಾಜಾ। ಕುನ್ತೀಪುತ್ರೋ ಯುಧಿಷ್ಠಿರಃ।
ನಕುಲಃ ಸಹದೇವಶ್ಚ। ಸುಘೋಷಮಣಿಪುಷ್ಪಕೌ ॥ 16 ॥

ಕಾಶ್ಯಶ್ಚ ಪರಮೇಷ್ವಾಸಃ। ಶಿಖಣ್ಡೀ ಚ ಮಹಾರಥಃ।
ಧೃಷ್ಟದ್ಯುಮ್ನೋ ವಿರಾಟಶ್ಚ। ಸಾತ್ಯಕಿಶ್ಚಾಪರಾಜಿತಃ ॥ 17 ॥
ದ್ರುಪದೋ ದ್ರೌಪದೇಯಾಶ್ಚ। ಸರ್ವಶಃ ಪೃಥಿವೀಪತೇ।
ಸೌಭದ್ರಶ್ಚ ಮಹಾಬಾಹುಃ। ಶಙ್ಖಾನ್ ದಧ್ಮುಃ ಪೃಥಕ್ಪೃಥಕ್ ॥ 18 ॥
ಸ ಘೋಷೋ ಧಾರ್ತರಾಷ್ಟ್ರಾಣಾಂ। ಹೃದಯಾನಿ ವ್ಯದಾರಯತ್।
ನಭಶ್ಚ ಪೃಥಿವೀಂ ಚೈವ। ತುಮುಲೋ ವ್ಯನುನಾದಯನ್ ॥ 19 ॥

ಬಳಿಕ ಬಿಳಿಯ ಕುದುರೆಗಳನ್ನು ಹೂಡಿದ ದೊಡ್ಡ ರಥದಲ್ಲಿ ಕುಳಿತಿದ್ದ ಶ್ರೀಕೃಷ್ಣನೂ ಅರ್ಜುನನೂ ತಮ್ಮ ದಿವ್ಯಶಂಖಗಳನ್ನು ಊದಿದರು. ಶ್ರೀಕೃಷ್ಣನು ಪಾಂಚಜನ್ಯವನ್ನೂ ಧನಂಜಯನು ದೇವದತ್ತವನ್ನೂ ಭಯಂಕರವಾದ ಯುದ್ಧ ಕರ್ಮವನ್ನು ಮಾಡಬಲ್ಲ ವೃಕೋದರನು ಪೌಂಡ್ರವೆಂಬ ಮಹಾಶಂಖವನ್ನೂ ಊದಿದರು. ಕುಂತೀಪುತ್ರನಾದ ಯುಧಿಷ್ಠಿರನು ಅನಂತವಿಜಯವನ್ನೂದಿದನು. ನಕುಲನೂ ಸಹದೇವನೂ ಸುಘೋಷ, ಮಣಿಪುಷ್ಪಕ – ಎಂಬ ಶಂಖಗಳನ್ನು

ಊದಿದರು. ಒಳ್ಳೆಯ ಬಿಲ್ಲುಗಾರನಾದ ಕಾಶಿರಾಜನು, ಮಹಾರಥನಾದ ಶಿಖಂಡಿಯು, ಧೃಷ್ಟದ್ಯುಮ್ನನು, ವಿರಾಟನು, ಯಾರಿಗೂ ಸೋಲದ ಸಾತ್ಯಕಿಯು, ದ್ರುಪದನು, ದ್ರೌಪದಿಯ ಕುವರರು, ಮಹಾಬಾಹುವಾದ ಸುಭದ್ರಾಪುತ್ರನು, ಎಲೈ ಧೃತರಾಷ್ಟ್ರರಾಯನೆ, ಈ ಎಲ್ಲರೂ ಬೇರೆಬೇರೆಯಾಗಿ ತಮ್ಮತಮ್ಮ ಶಂಖಗಳನ್ನು ಊದಿದರು. ಭೂಮಿಯನ್ನೂ ಆಕಾಶವನ್ನೂ ಮಾರ್ದನಿಗೈಯುವಂತೆ ಮಾಡುತ್ತಿದ್ದ ಆ ಧ್ವನಿಯು ಕೌರವರ ಹೃದಯಗಳನ್ನು ಸೀಳುತ್ತಿತ್ತು. (14–19)

**ಅಥ ವ್ಯವಸ್ಥಿತಾನ್ ದೃಷ್ಟ್ವಾ । ಧಾರ್ತರಾಷ್ಟ್ರಾನ್ ಕಪಿಧ್ವಜಃ ।**
**ಪ್ರವೃತ್ತೇ ಶಸ್ತ್ರಸಂಪಾತೇ । ಧನುರುದ್ಯಮ್ಯ ಪಾಣ್ಡವಃ ॥ 20 ॥**
**ಹೃಷೀಕೇಶಂ ತದಾ ವಾಕ್ಯ–ಮಿದಮಾಹ ಮಹೀಪತೇ ।**

ಭೂಪತಿಯೆ, ಆಮೇಲೆ ಕಪಿಧ್ವಜನಾದ ಅರ್ಜುನನು ಸಜ್ಜುಗೊಂಡಿರುವ ಕೌರವರನ್ನು ಕಂಡು ಬಾಣವನ್ನು ಪ್ರಯೋಗಿಸುವ ಹೊತ್ತು ಒದಗಿದ್ದರಿಂದ ಬಿಲ್ಲನ್ನು ಎತ್ತಿಹಿಡಿದುಕೊಂಡು ಹೃಷಿಕೇಶ (ಶ್ರೀಕೃಷ್ಣ)ನನ್ನು ಕುರಿತು ಈ ಮಾತನ್ನು ಹೇಳಿದನು : (20–21)

ಟಿ॥ ಅರ್ಜುನನ ರಥಕ್ಕೆ ಹನುಮಂತನ ಧ್ವಜವಿತ್ತು, ಆದ್ದರಿಂದ ಅವನಿಗೆ ಕಪಿಧ್ವಜನೆಂಬ ವಿಶೇಷಣವನ್ನು ಕೊಟ್ಟಿದೆ. ಶ್ರೀಕೃಷ್ಣನಿಗೆ ಕೊಟ್ಟಿರುವ ಹೃಷೀಕೇಶನೆಂಬ ವಿಶೇಷಣಕ್ಕೆ ಇಂದ್ರಿಯಗಳನ್ನು ವಶಗೊಳಿಸಿಕೊಂಡಿರುವವನೆಂದು ಅರ್ಥ.

ಅರ್ಜುನ ಉವಾಚ –

ಸೇನಯೋರುಭಯೋರ್ಮಧ್ಯೇ । ರಥಂ ಸ್ಥಾಪಯ ಮೇಽಚ್ಯುತ ॥ 21 ॥
ಯಾವದೇತಾನ್ನಿರೀಕ್ಷೇಽಹಂ । ಯೋದ್ಧುಕಾಮಾನವಸ್ಥಿತಾನ್ ।
ಕೈರ್ಮಯಾ ಸಹ ಯೋದ್ಧವ್ಯ–ಮಸ್ಮಿನ್ ರಣಸಮುದ್ಯಮೇ ॥ 22 ॥
ಯೋತ್ಸ್ಯಮಾನಾನವೇಕ್ಷೇಽಹಂ । ಯ ಏತೇಽತ್ರ ಸಮಾಗತಾಃ ।
ಧಾರ್ತರಾಷ್ಟ್ರಸ್ಯ ದುರ್ಬುದ್ಧೇ–ರ್ಯುದ್ಧೇ ಪ್ರಿಯಚಿಕೀರ್ಷವಃ ॥ 23 ॥

ಅರ್ಜುನನು ಹೇಳಿದ್ದು:

ಅಚ್ಯುತನೆ, ಎರಡು ಸೇನೆಗಳ ನಡುವೆ ನನ್ನ ರಥವನ್ನು ನಿಲ್ಲಿಸು ; ಕಾದಾಡಬೇಕೆಂಬ ಬಯಕೆಯಿಂದ ನಿಂತಿರುವ ಇವರನ್ನು ನಾನು ನೋಡಬೇಕು.

ಈ ರಣೋದ್ಯೋಗದಲ್ಲಿ ನಾನು ಯಾರೊಂದಿಗೆ ಯುದ್ಧಮಾಡಬೇಕೆಂಬುದನ್ನು ನೋಡಿ ತಿಳಿದುಕೊಳ್ಳಬೇಕು. ಬುದ್ಧಿಯಿಲ್ಲದ ದುರ್ಯೋಧನನಿಗೆ ಯುದ್ಧದಲ್ಲಿ ಪ್ರಿಯವನ್ನುಂಟುಮಾಡಲೆಳಸಿ ಇಲ್ಲಿ ಯುದ್ಧಮಾಡುವೆವೆಂದು ಒಟ್ಟುಗೂಡಿರುವವರನ್ನು ನಾನು ನೋಡುವೆನು. (21–23)

ಸಞ್ಜಯ ಉವಾಚ –

ಏವಮುಕ್ತೋ ಹೃಷೀಕೇಶೋ । ಗುಡಾಕೇಶೇನ ಭಾರತ ।
ಸೇನಯೋರುಭಯೋರ್ಮಧ್ಯೇ । ಸ್ಥಾಪಯಿತ್ವಾ ರಥೋತ್ತಮಮ್ ॥ 24 ॥
ಭೀಷ್ಮದ್ರೋಣಪ್ರಮುಖತಃ । ಸರ್ವೇಷಾಂ ಚ ಮಹೀಕ್ಷಿತಾಮ್ ।
ಉವಾಚ ಪಾರ್ಥ ಪಶ್ಯೈತಾನ್ । ಸಮವೇತಾನ್ ಕುರೂನಿತಿ ॥ 25 ॥

ಸಂಜಯನು ನುಡಿದದ್ದು :

ಎಲೈ ಭರತವಂಶೋತ್ಪನ್ನನಾದ (ಧೃತರಾಷ್ಟ್ರನೆ), ಗುಡಾಕೇಶ (ಅರ್ಜುನ)ನು ಹೀಗೆನ್ನಲು ಹೃಷೀಕೇಶನು ಆ ಉತ್ತಮರಥವನ್ನು ಎರಡೂ ಸೈನ್ಯಗಳ ನಡುವೆ

ಯಲ್ಲಿ ಭೀಷ್ಮದ್ರೋಣರ ಮತ್ತು ಎಲ್ಲಾ ರಾಜರ ಎದುರಿಗೆ ನಿಲ್ಲಿಸಿ ''ಪಾರ್ಥನೆ, ಇಗೋ, ಇಲ್ಲಿ ನೆರೆದಿರುವ ಕೌರವರನ್ನು ನೋಡು!'' ಎಂದನು. (24–25)

**ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ। ಪಿತೄನಥ ಪಿತಾಮಹಾನ್।**
**ಆಚಾರ್ಯಾನ್ಮಾತುಲಾನ್ಭ್ರಾತೄನ್–ಪುತ್ರಾನ್ಪೌತ್ರಾನ್ಸಖೀಂಸ್ತಥಾ ॥ 26 ॥**
**ಶ್ವಶುರಾನ್ ಸುಹೃದಶ್ಚೈವ। ಸೇನಯೋರುಭಯೋರಪಿ।**
**ತಾನ್ ಸಮೀಕ್ಷ್ಯ ಸ ಕೌನ್ತೇಯಃ। ಸರ್ವಾನ್ ಬನ್ಧೂನವಸ್ಥಿತಾನ್ ॥ 27 ॥**
**ಕೃಪಯಾ ಪರಯಾವಿಷ್ಟೋ। ವಿಷೀದನ್ನಿದಮಬ್ರವೀತ್ ॥**

ಪಾರ್ಥನು ಅಲ್ಲಿ ಎರಡು ಸೇನೆಗಳಲ್ಲಿಯೂ ಇದ್ದ ತಂದೆಗಳನ್ನೂ ಅಜ್ಜಂದಿರನ್ನೂ ಆಚಾರ್ಯರನ್ನೂ ಸೋದರಮಾವಂದಿರನ್ನೂ ಅಣ್ಣತಮ್ಮಂದಿ–ರನ್ನೂ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಜೊತೆಗಾರರನ್ನೂ ಮಾವಂದಿರನ್ನೂ ಉಪಕಾರಿಗಳನ್ನೂ ಕಂಡನು. ಹೀಗೆ ನಿಂತಿರುವ ನೆಂಟರೆಲ್ಲರನ್ನೂ ನೋಡಿ ಹೆಚ್ಚಿನ ಕನಿಕರದಿಂದ ತುಂಬಿ ವಿಷಾದದಿಂದ ಇಂತೆಂದನು : (26–27)

ಟಿ|| ಭೂರಿಶ್ರವನೇ ಮೊದಲಾದವರು ತಂದೆಯ ವರಸೆಯವರು ; ಭೀಷ್ಮ ಸೋಮದತ್ತ – ಮೊದಲಾದವರು ಅಜ್ಜಂದಿರು ; ದ್ರೋಣ, ಕೃಪ – ಮುಂತಾದವರು ಆಚಾರ್ಯರು ; ಶಲ್ಯ, ಶಕುನಿ– ಮೊದಲಾದವರು ಸೋದರಮಾವಂದಿರು ; ದುರ್ಯೋಧನನೇ ಮೊದಲಾದವರು ಅಣ್ಣತಮ್ಮಂದಿರು ; ಲಕ್ಷ್ಮಣನೇ ಮುಂತಾದವರು ಪುತ್ರರು, ಅವರ ಮಕ್ಕಳು ಪೌತ್ರರು ; ಪಾಂಡ್ಯನೇ ಮೊದಲಾದವರು ಮಾವಂದಿರು ; ಕೃತವರ್ಮ, ಭಗದತ್ತನೇ ಮುಂತಾದವರು ಉಪಕಾರಿಗಳು. ಶತ್ರುಸೈನ್ಯದಲ್ಲಿ ಮಾತ್ರವೇ ಅಲ್ಲದೆ ತನ್ನ ಕಡೆಯಲ್ಲಿಯೂ ಬೇರೆಬೇರೆಯ ಸಂಬಂಧದವರಿದ್ದರು.

ಅರ್ಜುನ ಉವಾಚ –

ದೃಷ್ಟ್ವೇಮಂ ಸ್ವಜನಂ ಕೃಷ್ಣ। ಯುಯುತ್ಸುಂ ಸಮುಪಸ್ಥಿತಮ್ ॥ 28 ॥
ಸೀದನ್ತಿ ಮಮ ಗಾತ್ರಾಣಿ। ಮುಖಂ ಚ ಪರಿಶುಷ್ಯತಿ।
ವೇಪಥುಶ್ಚ ಶರೀರೇ ಮೇ। ರೋಮಹರ್ಷಶ್ಚ ಜಾಯತೇ ॥ 29 ॥

ಗಾಣ್ಡೀವಂ ಸ್ರಂಸತೇ ಹಸ್ತಾ–ತ್ತ್ವಕ್ಚೈವ ಪರಿದಹ್ಯತೇ।
ನ ಚ ಶಕ್ನೋಮ್ಯವಸ್ಥಾತುಂ। ಭ್ರಮತೀವ ಚ ಮೇ ಮನಃ ॥ 30 ॥

ನಿಮಿತ್ತಾನಿ ಚ ಪಶ್ಯಾಮಿ। ವಿಪರೀತಾನಿ ಕೇಶವ।
ನ ಚ ಶ್ರೇಯೋಽನುಪಶ್ಯಾಮಿ। ಹತ್ವಾ ಸ್ವಜನಮಾಹವೇ ॥ 31 ॥

ಅರ್ಜುನನು ನುಡಿದದ್ದು:

ಕೃಷ್ಣನೆ, ಯುದ್ಧಮಾಡಬೇಕೆಂದು ಎದುರಿಗೆ ಬಂದು ನಿಂತಿರುವ ಈ ಸ್ವಜನವನ್ನು ಕಂಡು ನನ್ನ ಕೈಕಾಲುಗಳು ಕುಸಿಯುತ್ತಿವೆ ; ಬಾಯಿ ಒಣಗುತ್ತಿದೆ ; ಮೈಯಲ್ಲಿ ನಡುಕವೂ ಹೋಂಪುಳಿಯೂ (ರೋಮಾಂಚನವೂ) ಆಗುತ್ತಿದೆ ; ಕೈಯಿಂದ ಗಾಂಡೀವಧನುಸ್ಸು ಜಗುಳಿಬೀಳುತ್ತಿದೆ ; ಮೈಚರ್ಮವೆಲ್ಲ ಸುಡುತ್ತಿದೆ ; ನಿಂತು ಕೊಳ್ಳುವದಕ್ಕೇ ಆಗುವಂತಿಲ್ಲ ; ಮನಸ್ಸಿಗೆ ಭ್ರಮಣೆಯಾಗಿರುವಂತಿದೆ. ಕೇಶವನೆ, ಕಾಣಬಾರದ ಅಪಶಕುನಗಳೂ ನನಗೆ ಕಾಣುತ್ತಿವೆ. ಯುದ್ಧದಲ್ಲಿ ಸ್ವಜನರನ್ನು ಕೊಂದದ್ದರಿಂದ ಆಗಲಿರುವ ಒಳ್ಳೆಯದನ್ನೂ ಕಾಣೆನು. (28–31)

ನ ಕಾಙ್ಕ್ಷೇ ವಿಜಯಂ ಕೃಷ್ಣ । ನ ಚ ರಾಜ್ಯಂ ಸುಖಾನಿ ಚ ।
ಕಿಂ ನೋ ರಾಜ್ಯೇನ ಗೋವಿನ್ದ । ಕಿಂ ಭೋಗೈರ್ಜೀವಿತೇನ ವಾ ॥ 32 ॥
ಯೇಷಾಮರ್ಥೇ ಕಾಙ್ಕ್ಷಿತಂ ನೋ । ರಾಜ್ಯಂ ಭೋಗಾಸ್ಸುಖಾನಿ ಚ ।
ತ ಇಮೇಽವಸ್ಥಿತಾ ಯುದ್ಧೇ । ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ ॥ 33 ॥
ಆಚಾರ್ಯಾಃ ಪಿತರಃ ಪುತ್ರಾ – ಸ್ತಥೈವ ಚ ಪಿತಾಮಹಾಃ ।
ಮಾತುಲಾಃ ಶ್ವಶುರಾಃ ಪೌತ್ರಾಃ । ಶ್ಯಾಲಾಃ ಸಂಬನ್ಧಿನಸ್ತಥಾ ॥ 34 ॥
ಏತಾನ್ನ ಹನ್ತುಮಿಚ್ಛಾಮಿ । ಘ್ನತೋಽಪಿ ಮಧುಸೂದನ ।
ಅಪಿ ತ್ರೈಲೋಕ್ಯರಾಜ್ಯಸ್ಯ । ಹೇತೋಃ ಕಿಂ ನು ಮಹೀಕೃತೇ ॥ 35 ॥

ಕೃಷ್ಣನೆ, ನನಗೆ ಗೆಲವೂ ಬೇಕಿಲ್ಲ, ರಾಜ್ಯವೂ ಬೇಕಿಲ್ಲ, ಸುಖಗಳೂ ಬೇಕಿಲ್ಲ, ಗೋವಿಂದನೆ, ರಾಜ್ಯದಿಂದ ನಮಗೇನಾಗಬೇಕು ? ಭೋಗಗಳಿಂದಾ–ಗಲಿ ಬದುಕಿರುವವರಿಂದಾಗಲಿ ಏನಾಗಬೇಕು ? ರಾಜ್ಯ, ಭೋಗಗಳು, ಸುಖಗಳು – ಯಾರಿಗಾಗಿ ಇವು ನಮಗೆ ಬೇಕೋ ಅವರೇ – ಆ ಆಚಾರ್ಯರು, ತಂದೆಗಳು,

ಮಕ್ಕಳು, ಹಾಗೂ ಅಜ್ಜಂದಿರು, ಸೋದರಮಾವಂದಿರು, ಮಾವಂದಿರು, ಮೊಮ್ಮಕ್ಕಳು, ಭಾವಮೈದುನರು ಮತ್ತು ಸಂಬಂಧಿಗಳು, ಇವರೇ– ತಮ್ಮ ಜೀವದಾಸೆಯನ್ನೂ ಹಣಕಾಸಿನಾಸೆಯನ್ನೂ ತೊರೆದು ಯುದ್ಧಕ್ಕೆ ನಿಂತಿರುವರು, ಮಧುಸೂದನನೆ, ಇವರಿಂದ ಹೊಡೆಯಿಸಿಕೊಂಡರೂ, ಮೂರು ಲೋಕದ ಒಡೆತನಕ್ಕಾಗ್ಗಿಕೂಡ, ಇವರನ್ನು ಕೊಲ್ಲಲು ಮನಸ್ಸುಮಾಡೆನು. ಹೀಗಿರು ವಲ್ಲಿ ಬರಿಯ ಈ ಭೂಮಿಗಾಗಿ ಮಾಡೆನೆಂಬುದನ್ನು ಹೇಳುವದೇನಿದೆ ? (32–35)

ನಿಹತ್ಯ ಧಾರ್ತರಾಷ್ಟ್ರಾನ್ನಃ। ಕಾ ಪ್ರೀತಿಃ ಸ್ಯಾಜ್ಜನಾರ್ದನ।
ಪಾಪಮೇವಾಶ್ರಯೇದಸ್ಮಾನ್ । ಹತ್ವೈತಾನಾತತಾಯಿನಃ ॥ 36 ॥

ತಸ್ಮಾನ್ನಾರ್ಹಾ ವಯಂ ಹನ್ತುಂ। ಧಾರ್ತರಾಷ್ಟ್ರಾನ್ ಸ್ವಬಾನ್ಧವಾನ್।
ಸ್ವಜನಂ ಹಿ ಕಥಂ ಹತ್ವಾ। ಸುಖಿನಃ ಸ್ಯಾಮ ಮಾಧವ ॥ 37 ॥

ಜನಾರ್ದನ(ಕೃಷ್ಣ)ನೆ; ಧೃತರಾಷ್ಟ್ರನ ಮಕ್ಕಳನ್ನು ಕೊಂದರೆ ನಮಗಾಗುವ ಸಂತೋಷವು ಯಾವದು ? ಆ ಆತತಾಯಿಗಳನ್ನು ಕೊಂದರೆ ನಮಗೆ ಪಾಪವೇ

ಗಂಟುಬಿದ್ದೀತು. ಆದ್ದರಿಂದ ನಮ್ಮ ನೆಂಟರಾದ ಕೌರವರನ್ನು ನಾವು ಕೊಲ್ಲಬಾರದು. ಎಲೈ ಮಾಧವ(ಕೃಷ್ಣ)ನೆ, ಸ್ವಜನರನ್ನು ಕೊಂದು ನಾವು ಹೇಗೆ ಸುಖದಿಂದಿದ್ದೇವು ? (36–37)

ಟಿ|| ಮನೆಗೆ ಬೆಂಕಿಹಾಕಿದವನು, ವಿಷವನ್ನಿಕ್ಕಿದವನು, ಕಾರಣವಿಲ್ಲದೆ ಶಸ್ತ್ರವನ್ನು ಹಿಡಿದು ಯುದ್ಧಕ್ಕೆ ಬಂದವನು, ಧನವನ್ನಪಹರಿಸಿದವನು, ಹೊಲಗದ್ದೆಯನ್ನ–ಪಹರಿಸಿದವನು, ಹೆಂಡತಿಯನ್ನು ಕದ್ದವನು– ಇವರು ಆತತಾಯಿಗಳೆಂದು ಶಾಸ್ತ್ರದಲ್ಲಿದೆ. ಆತತಾಯಿಗಳನ್ನು ಕೊಂದರೆ ದೋಷವಿಲ್ಲವೆಂದು ಶಾಸ್ತ್ರದಲ್ಲಿದೆಯಾದರೂ ಸ್ವಜನರನ್ನು ಕೊಲ್ಲುವದು ದೋಷವೇ ; ಅರ್ಥಶಾಸ್ತ್ರದೃಷ್ಟಿಯಿಂದ ಆತತಾಯಿಗಳನ್ನು ಕೊಲ್ಲಬಹುದಾದರೂ ಧರ್ಮಶಾಸ್ತ್ರದೃಷ್ಟಿಯಿಂದ ಅವರ ಕೊಲೆಯೂ ಪಾಪವೇ – ಎಂದು ಅರ್ಜುನನ ಅಭಿಪ್ರಾಯ.

ಯದ್ಯಪ್ಯೇತೇ ನ ಪಶ್ಯನ್ತಿ। ಲೋಭೋಪಹತಚೇತಸಃ।
ಕುಲಕ್ಷಯಕೃತಂ ದೋಷಂ। ಮಿತ್ರದ್ರೋಹೇ ಚ ಪಾತಕಮ್ ॥ 38 ॥
ಕಥಂ ನ ಜ್ಞೇಯಮಸ್ಮಾಭಿಃ। ಪಾಪಾದಸ್ಮಾನ್ನಿವರ್ತಿತುಮ್।
ಕುಲಕ್ಷಯಕೃತಂ ದೋಷಂ। ಪ್ರಪಶ್ಯದ್ಭಿರ್ಜನಾರ್ದನ ॥ 39 ॥

ದುರಾಶೆಯಿಂದ ಬುದ್ಧಿಗೆಟ್ಟಿರುವ ಇವರೇನೋ ಕುಲಕ್ಷಯದಿಂದಾಗುವ ಕೇಡನ್ನೂ ಮಿತ್ರರಿಗೆ ಎರಡೆಣಿಸುವದರಿಂದಾಗುವ ಪಾಪವನ್ನೂ ಅರಿಯದೆ ಇರುವರು ; ಆದರೆ ಎಲೈ, ಜನಾರ್ದನನೆ, ಕುಲಕ್ಷಯದಿಂದಾಗುವ ಕೇಡನ್ನು ಚೆನ್ನಾಗಿ ಬಲ್ಲ ನಾವು ಈ ಪಾಪವನ್ನು ಮಾಡದೆ ಹಿಮ್ಮೆಟ್ಟಬೇಕೆಂಬುದನ್ನು ತಿಳಿಯದೆ ಇರುವದು ಹೇಗೆ ? (38–39)

ಕುಲಕ್ಷಯೇ ಪ್ರಣಶ್ಯನ್ತಿ। ಕುಲಧರ್ಮಾಃ ಸನಾತನಾಃ।
ಧರ್ಮೇ ನಷ್ಟೇ ಕುಲಂ ಕೃತ್ಸ್ನ–ಮಧರ್ಮೋಽಭಿಭವತ್ಯುತ ॥ 40 ॥
ಅಧರ್ಮಾಭಿಭವಾತ್ ಕೃಷ್ಣ। ಪ್ರದುಷ್ಯನ್ತಿ ಕುಲಸ್ತ್ರಿಯಃ।
ಸ್ತ್ರೀಷು ದುಷ್ಟಾಸು ವಾರ್ಷ್ಣೇಯ। ಜಾಯತೇ ವರ್ಣಸಙ್ಕರಃ ॥ 41 ॥
ಸಙ್ಕರೋ ನರಕಾಯೈವ। ಕುಲಘ್ನಾನಾಂ ಕುಲಸ್ಯ ಚ।
ಪತನ್ತಿ ಪಿತರೋ ಹ್ಯೇಷಾಂ। ಲುಪ್ತಪಿಣ್ಡೋದಕಕ್ರಿಯಾಃ ॥ 42 ॥
ದೋಷೈರೇತೈಃ ಕುಲಘ್ನಾನಾಂ। ವರ್ಣಸಙ್ಕರಕಾರಕೈಃ।
ಉತ್ಸಾದ್ಯನ್ತೇ ಜಾತಿಧರ್ಮಾಃ। ಕುಲಧರ್ಮಾಶ್ಚ ಶಾಶ್ವತಾಃ ॥ 43 ॥

ಉತ್ಸನ್ನಕುಲಧರ್ಮಾಣಾಂ। ಮನುಷ್ಯಾಣಾಂ ಜನಾರ್ದನ।
ನರಕೇ ನಿಯತಂ ವಾಸೋ। ಭವತೀತ್ಯನುಶುಶ್ರುಮ ॥ 44 ॥

ಕುಲವು ಕ್ಷಯವಾಗಹತ್ತಿದರೆ ಬಹುಕಾಲದಿಂದ ನಡೆದುಕೊಂಡು ಬಂದಿರುವ ಕುಲಧರ್ಮಗಳು ನಾಶವಾಗುವವು. ಧರ್ಮವು ನಷ್ಟವಾದರೆ ಕುಲದವರನ್ನೆಲ್ಲ ಅಧರ್ಮವು ಬೆನ್ನಂಟಿಕೊಳ್ಳುವದು. ಎಲೈ ಕೃಷ್ಣನೆ, ಅಧರ್ಮವು ಮುಸುಕಿಕೊಳ್ಳುವದರಿಂದ ಕುಲದಲ್ಲಿರುವ ಹೆಂಗಸರು ಕೆಡುವರು; ವೃಷ್ಣಿವಂಶೋದ್ಭವ(ಕೃಷ್ಣ)ನೆ, ಹೆಂಗಸರು ಕೆಟ್ಟರೆ ವರ್ಣಗಳು ಬೆರಕೆಯಾಗಿ ಹೋಗುವವು. ವರ್ಣಗಳು ಬೆರೆತುಹೋಗುವದೆಂಬುದು ಕುಲವನ್ನು ಹಾಳು ಮಾಡಿದವರಿಗೂ ಕುಲದವರಿಗೂ ನರಕಕ್ಕೇ ಕಾರಣವಾಗುವದು ; ಏಕೆಂದರೆ ಇವರ ಪಿತೃಗಳು ತಮಗೆ ಪಿಂಡಪ್ರದಾನವೂ ಜಲತರ್ಪಣವೂ ಇಲ್ಲದಂತಾಗಿ ತಮ್ಮ ಲೋಕದಿಂದ ಅಧೋಗತಿಗೆ ಬೀಳುವರು. ಕುಲವನ್ನು ನಾಶಪಡಿಸು-ವವರು ವರ್ಣಸಂಕರವಾಗುವಂತೆ ಮಾಡಿದ ಈ ತಪ್ಪಿತಗಳಿಂದ, ಶಾಶ್ವತವಾದ ಜಾತಿಧರ್ಮಗಳೂ ಕುಲಧರ್ಮಗಳೂ ನಾಶವಾಗುವವು. ಎಲೈ ಜನಾರ್ದನನೆ,

ಯಾರ ಕುಲಧರ್ಮಗಳು ನಾಶವಾಗಿರುವವೋ ಅಂಥ ಮನುಷ್ಯರಿಗೆ ನರಕವಾಸವು ತಪ್ಪದೆ ಆಗುವದೆಂದು ದೊಡ್ಡವರಿಂದ ಕೇಳಿದ್ದೇವೆ. (40–44)

**ಅಹೋ ಬತ ಮಹತ್ಪಾಪಂ। ಕರ್ತುಂ ವ್ಯವಸಿತಾ ವಯಮ್।**
**ಯದ್ರಾಜ್ಯಸುಖಲೋಭೇನ। ಹನ್ತುಂ ಸ್ವಜನಮುದ್ಯತಾಃ ॥ 45 ॥**
**ಯದಿ ಮಾಮಪ್ರತೀಕಾರ–ಮಶಸ್ತ್ರಂ ಶಸ್ತ್ರಪಾಣಯಃ।**
**ಧಾರ್ತರಾಷ್ಟ್ರಾ ರಣೇ ಹನ್ಯು–ಸ್ತನ್ಮೇ ಕ್ಷೇಮತರಂ ಭವೇತ್ ॥ 46 ॥**

ಅಯ್ಯೋ, ನಾವು ರಾಜ್ಯಸುಖದ ಅತ್ಯಾಶೆಯಿಂದ ಸ್ವಜನವನ್ನು ಕೊಲ್ಲುವದಕ್ಕೆ ಹೊರಟಿರುವೆವಲ್ಲ ! ಇದು ಮಹಾಪಾಪವನ್ನೇ ಮಾಡುವದಕ್ಕೆ ನಿಶ್ಚಯಿಸಿದಂತಾಗಿರುತ್ತದೆ. ಯಾವ ಪ್ರತೀಕಾರವನ್ನೂ ಮಾಡದೆ ಆಯುಧವನ್ನೇ ಹಿಡಿಯದೆ ನಿಂತಿರುವ ನನ್ನನ್ನು ಈ ಧೃತರಾಷ್ಟ್ರನ ಮಕ್ಕಳು ಕೈಯಲ್ಲಿ ಶಸ್ತ್ರವನ್ನು ಹಿಡಿದೆತ್ತಿ ಕೊಂದುಹಾಕಿದರೆ ಅದೇ ನನಗೆ ಹೆಚ್ಚು ಕ್ಷೇಮವಾದೀತು. (45–46)

ಸಞ್ಜಯ ಉವಾಚ –

ಏವಮುಕ್ತ್ವಾರ್ಜುನಃ ಸಂಖ್ಯೇ । ರಥೋಪಸ್ಥ ಉಪಾವಿಶತ್ ।
ವಿಸೃಜ್ಯ ಸಶರಂ ಚಾಪಂ । ಶೋಕಸಂವಿಗ್ನಮಾನಸಃ ॥ 47 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಅರ್ಜುನವಿಷಾದಯೋಗೋ ನಾಮ ಪ್ರಥಮೋಽಧ್ಯಾಯಃ

ಸಂಜಯನು ಹೇಳಿದ್ದು:

ಹೀಗೆ ನುಡಿದು ಅರ್ಜುನನು ಶೋಕದಿಂದ ಕುದಿಯುವ ಮನಸ್ಸಿನಿಂದ ಯುದ್ಧದಲ್ಲಿ ಬಿಲ್ಲುಬಾಣಗಳನ್ನು ಬಿಸುಟು ರಥದ ಮುಂಗಡೆಯಲ್ಲಿ ಕುಳಿತನು. (47)

ಇಂತು ಬ್ರಹ್ಮವಿದ್ಯೆಯನ್ನೂ ಯೋಗಶಾಸ್ತ್ರವನ್ನೂ ತಿಳಿಸುವ ಶ್ರೀಕೃಷ್ಣಾರ್ಜುನ ಸಂವಾದರೂಪವಾದ ಶ್ರೀಮದ್ಭಗವದ್ಗೀತೆಗಳೆಂಬ ಉಪನಿಷತ್ತುಗಳಲ್ಲಿ ಅರ್ಜುನವಿಷಾದ ಯೋಗವೆಂಬ ಒಂದನೆಯ ಅಧ್ಯಾಯವು ಮುಗಿಯಿತು.

ಟಿ॥ ಮೇಲೆ ಕೊಟ್ಟಿರುವ ಸಮಾಪ್ತಿವಾಕ್ಯವು ಮೂಲಕ್ಕೆ ಸೇರಿಲ್ಲ. ಇದರ ಒಕ್ಕಣೆಯು ಒಂದೊಂದು ಗೀತಾಸಂಸ್ಕರಣದಲ್ಲಿ ಒಂದೊಂದು ಬಗೆಯಾಗಿರುತ್ತದೆ. ಮಾದರಿಗಾಗಿ ಇದನ್ನು ಇಲ್ಲಿ ಕನ್ನಡಿಸಿದೆ. ಮುಂದಿನ ಅಧ್ಯಾಯಗಳಲ್ಲಿ ಇದನ್ನು ಕನ್ನಡಿಸಿರುವದಿಲ್ಲ.

------

## ಅಥ ದ್ವಿತೀಯೋಽಧ್ಯಾಯಃ

ಸಞ್ಜಯ ಉವಾಚ –

ತಂ ತಥಾ ಕೃಪಯಾವಿಷ್ಟ–ಮಶ್ರುಪೂರ್ಣಾಕುಲೇಕ್ಷಣಮ್ ।
ವಿಷೀದನ್ತಮಿದಂ ವಾಕ್ಯ–ಮುವಾಚ ಮಧುಸೂದನಃ ॥ 1 ॥

## ಎರಡನೆಯ ಅಧ್ಯಾಯ

ಸಂಜಯನು ಹೇಳಿದ್ದು :

ಇಂತು ಮರುಕಕ್ಕೊಳಗಾಗಿ ಕಣ್ಣೀರುತುಂಬಿ ಮುಂಗಾಣದ ಕಂಗಳುಳ್ಳವನಾಗಿ ಕಳವಳಿಸುತ್ತಿದ್ದ ಅರ್ಜುನನನ್ನು ನೋಡಿ ಮಧುಸೂದನನಿಂತೆಂದನು : (1)

ಶ್ರೀಭಗವಾನುವಾಚ –

ಕುತಸ್ತ್ವಾ ಕಶ್ಮಲಮಿದಂ । ವಿಷಮೇ ಸಮುಪಸ್ಥಿತಮ್ ।
ಅನಾರ್ಯಜುಷ್ಟಮಸ್ವರ್ಗ್ಯ–ಮಕೀರ್ತಿಕರಮರ್ಜುನ ॥ 2 ॥

ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ । ನೈತತ್ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ । ತ್ಯಕ್ತ್ವೋತ್ತಿಷ್ಠ ಪರನ್ತಪ ॥ 3 ॥

ಭಗವಂತನು ಹೇಳಿದ್ದು:

ಎಲೈ ಅರ್ಜುನನೆ, ಈ ಬಿಕ್ಕಟ್ಟಿನ ಸಮಯದಲ್ಲಿ ತಿಳಿದ ಹಿರಿಯರಾರೂ ಅನುಸರಿಸದೆ ಇದ್ದ, ಸ್ವರ್ಗದ ಹಾದಿಯನ್ನು ತಪ್ಪಿಸುವ, ಕೆಟ್ಟಹೆಸರನ್ನೂ ತರುವ – ಈ ಹೊಲಸು ನಿನಗೆ ಎಲ್ಲಿಂದ ಬಂದು ಗಂಟುಬಿದ್ದಿತು ? ಎಲೈ ಪಾರ್ಥನೆ, ಎದೆಗೇಡಿಯಾಗಬೇಡ, ನಿನಗೆ ಇದು ತಕ್ಕದ್ದಲ್ಲ. ಎಲೈ ಹಗೆಗಳ ಸಂತಾಪಕನೆ, ಕೀಳುಬಗೆಯ ಈ ಎದೆಯಳುಕನ್ನು ಬಿಟ್ಟೇಳು. (2–3)

ಅರ್ಜುನ ಉವಾಚ –

ಕಥಂ ಭೀಷ್ಮಮಹಂ ಸಙ್ಖ್ಯೇ । ದ್ರೋಣಂ ಚ ಮಧುಸೂದನ ।
ಇಷುಭಿಃ ಪ್ರತಿಯೋತ್ಸ್ಯಾಮಿ । ಪೂಜಾರ್ಹಾವರಿಸೂದನ ॥ 4 ॥

ಗುರೂನಹತ್ವಾ ಹಿ ಮಹಾನುಭಾವಾನ್ ।
ಶ್ರೇಯೋ ಭೋಕ್ತುಂ ಭೈಕ್ಷ್ಯಮಪೀಹ ಲೋಕೇ ।
ಹತ್ವಾರ್ಥಕಾಮಾಂಸ್ತು ಗುರೂನಿಹೈವ ।
ಭುಞ್ಜೀಯ ಭೋಗಾನ್ ರುಧಿರಪ್ರದಿಗ್ಧಾನ್ ॥ 5 ॥

ಅರ್ಜುನನು ನುಡಿದದ್ದು :

ಎಲೈ ಮಧುಸೂದನನೆ, ಶತ್ರುಗಳನ್ನು ನಾಶಗೊಳಿಸುವವನೆ, ಪೂಜೆಗೆ ತಕ್ಕವರಾಗಿರುವ ಭೀಷ್ಮನನ್ನೂ ದ್ರೋಣನನ್ನೂ ಕದನದಲ್ಲಿ ಬಾಣಗಳಿಂದ ಹೇಗೆ ಹೊಡೆಯಲಿ ? ಗುರುಹಿರಿಯರನ್ನು ಕೊಂದು ಬಾಳುವದಕ್ಕಿಂತಲೂ ತಿರಿದು ತಂದ ಅನ್ನವನ್ನುಂಡು ಹೊಟ್ಟೆಹೊರೆಯುವದುಕೂಡ ಮೇಲಲ್ಲವೆ ? ಗುರುಗಳನ್ನು ಕೊಂದರೂ, ಅವರ ರಕ್ತವು ಬಳಿದಿರುವ ಅರ್ಥಕಾಮರೂಪವಾದ ಭೋಗಗಳನ್ನು ಈ ಲೋಕದಲ್ಲಿ ಮಾತ್ರ ಅನುಭವಿಸಿಯೇನು. (4–5)

ಟಿ|| 'ದುಡ್ಡಿನಾಸೆಯಿಂದ ಯುದ್ಧಕ್ಕೆ ನಿಂತಿರುವ ಗುರುಗಳನ್ನು ಕೊಂದರೆ ರಕ್ತ ಬಳಿದಿರುವ ಭೋಗಗಳನ್ನು ಇಲ್ಲಿಮಟ್ಟಿಗೆ ಅನುಭವಿಸಿಯೇನು' ಎಂದೂ ಅರ್ಥಮಾಡಬಹುದು.

ನ ಚೈತದ್ವಿದ್ಮಃ ಕತರನ್ನೋ ಗರೀಯೋ।
ಯದ್ವಾ ಜಯೇಮ ಯದಿ ವಾ ನೋ ಜಯೇಯುಃ।
ಯಾನೇವ ಹತ್ವಾ ನ ಜಿಜೀವಿಷಾಮ–
ಸ್ತೇಽವಸ್ಥಿತಾಃ ಪ್ರಮುಖೇ ಧಾರ್ತರಾಷ್ಟ್ರಾಃ ॥ 6 ॥

ಇದಲ್ಲದೆ ನಮಗೆ ಯಾವದು ಹೆಚ್ಚಿನದೋ, ನಾವು ಗೆದ್ದೇವೋ, ನಮ್ಮನ್ನೇ ಅವರು ಗೆದ್ದಾರೋ, ಅದನ್ನು ನಾವರಿಯೆವು. ಯಾರನ್ನು ಕೊಂದು ಬದುಕಿರುವದು ನಮಗೆ ಬೇಕೆನಿಸದೋ, ಆ ಧೃತರಾಷ್ಟ್ರನ ಮಕ್ಕಳೇ ನಮ್ಮೆದುರಿಗೆ ನಿಂತಿರುವರು.

ಕಾರ್ಪಣ್ಯದೋಷೋಪಹತಸ್ವಭಾವಃ।
ಪೃಚ್ಛಾಮಿ ತ್ವಾಂ ಧರ್ಮಸಂಮೂಢಚೇತಾಃ।

ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ।
ಶಿಷ್ಯಸ್ತೇऽಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್ ॥ 7 ॥

ಬುದ್ಧಿದೈನ್ಯದ ದೋಷವು ನನ್ನ ಸ್ವಭಾವವನ್ನು ಹೊಡೆದುಹಾಕಿರುತ್ತದೆ. ಯಾವದು ಧರ್ಮವೋ ಚಿತ್ತಕ್ಕೆ ತಿಳಿಯದೆ ನಿನ್ನನ್ನು ಕೇಳುತ್ತಲಿದೇನೆ. ಯಾವದು ಮೇಲಾದೀತೋ, ಅದನ್ನು ನೀನೇ ನಿಶ್ಚಯಿಸಿ ಹೇಳು. ನಾನು ನಿನ್ನ ಶಿಷ್ಯನು, ನಿನ್ನಲ್ಲಿಗೆ ಶರಣುಬಂದಿರುವ ನನಗೆ ತಿಳಿವಳಿಕೆಯನ್ನು ಹೇಳು. (7)

ನ ಹಿ ಪ್ರಪಶ್ಯಾಮಿ ಮಮಾಪನುದ್ಯಾ-
ದ್ಯಚ್ಛೋಕಮುಚ್ಛೋಷಣಮಿನ್ದ್ರಿಯಾಣಾಮ್ ।
ಅವಾಪ್ಯ ಭೂಮಾವಸಪತ್ನಮೃದ್ಧಂ।
ರಾಜ್ಯಂ ಸುರಾಣಾಮಪಿ ಚಾಧಿಪತ್ಯಮ್ ॥ 8 ॥

ಭೂಲೋಕದಲ್ಲಿ ಶತ್ರುಗಳೇ ಇಲ್ಲದ ಸಂಪದ್ಯುಕ್ತವಾದ ರಾಜ್ಯವನ್ನು ಪಡೆದುಕೊಂಡರೂ, ಕೊನೆಗೆ ದೇವತೆಗಳ ಒಡೆತನವನ್ನೇ ಪಡೆದುಕೊಂಡರೂ,

ಇಂದ್ರಿಯಗಳನ್ನು ಸೊರಗಿಸುತ್ತಿರುವ ಈ ನನ್ನ ಶೋಕವನ್ನು ಯಾವದು ಹೋಗಲಾಡಿಸೀತೆಂಬುದು ನನಗೆ ಕಾಣುವದಿಲ್ಲ. (8)

ಸಞ್ಜಯ ಉವಾಚ –

ಏವಮುಕ್ತ್ವಾ ಹೃಷೀಕೇಶಂ । ಗುಡಾಕೇಶಃ ಪರನ್ತಪಃ ।
ನ ಯೋತ್ಸ್ಯ ಇತಿ ಗೋವಿನ್ದ–ಮುಕ್ತ್ವಾ ತೂಷ್ಣೀಂ ಬಭೂವ ಹ ॥ 9 ॥

ಸಂಜಯನು ಹೇಳಿದ್ದು :

ಶತ್ರುತಾಪನನಾದ ಆ ಗುಡಾಕೇಶನು ಹೀಗೆಂದು ಹೃಷೀಕೇಶನಿಗೆ ಹೇಳಿ ಯುದ್ಧಮಾಡೆನೆಂದು ಆ ಗೋವಿಂದನಿಗೆ ತಿಳುಹಿ ಸುಮ್ಮನಾದನು. (9)

ತಮುವಾಚ ಹೃಷೀಕೇಶಃ । ಪ್ರಹಸನ್ನಿವ ಭಾರತ ।
ಸೇನಯೋರುಭಯೋರ್ಮಧ್ಯೇ । ವಿಷೀದನ್ತಮಿದಂ ವಚಃ ॥ 10 ॥

ಎಲೈ ಭರತವಂಶೋತ್ಪನ್ನನೆ, ಹೀಗೆ ಎರಡೂ ಪಡೆಗಳ ನಡುವೆಯಲ್ಲಿ ಬೇಗುದಿಗೊಳ್ಳುತ್ತಿದ್ದ ಅವನನ್ನು ಹಾಸ್ಯಮಾಡುವವನಂತೆ, ಹೃಷೀಕೇಶನಿಂತೆಂದನು (10)

ಶ್ರೀಭಗವಾನುವಾಚ –

ಅಶೋಚ್ಯಾನನ್ವಶೋಚಸ್ತ್ವಂ। ಪ್ರಜ್ಞಾವಾದಾಂಶ್ಚ ಭಾಷಸೇ।
ಗತಾಸೂನಗತಾಸೂಂಶ್ಚ। ನಾನುಶೋಚನ್ತಿ ಪಣ್ಡಿತಾಃ ॥ 11 ॥

ಭಗವಂತನು ನುಡಿದದ್ದು:

ಶೋಕಿಸುವದಕ್ಕೆ ತಕ್ಕವರಲ್ಲದವರಿಗಾಗಿ ನೀನು ಶೋಕಿಸುತ್ತಿರುವೆ ; ಪಂಡಿತರಾಡುವ ಮಾತುಗಳನ್ನೂ ಆಡುತ್ತಿರುವೆ. ಪಂಡಿತರು ಸತ್ತವರಿಗಾಗಲಿ ಬದುಕಿರುವವರಿಗಾಗಲಿ ಶೋಕಿಸುವದಿಲ್ಲ. (11)

ನ ತ್ವೇವಾಹಂ ಜಾತು ನಾಸಂ। ನ ತ್ವಂ ನೇಮೇ ಜನಾಧಿಪಾಃ।
ನ ಚೈವ ನ ಭವಿಷ್ಯಾಮಃ। ಸರ್ವೇ ವಯಮತಃ ಪರಮ್ ॥ 12 ॥

ದೇಹಿನೋಽಸ್ಮಿನ್ ಯಥಾ ದೇಹೇ। ಕೌಮಾರಂ ಯೌವನಂ ಜರಾ।
ತಥಾ ದೇಹಾನ್ತರಪ್ರಾಪ್ತಿ-ರ್ಧೀರಸ್ತತ್ರ ನ ಮುಹ್ಯತಿ ॥ 13 ॥

ನಾನು ಎಂದಿಗೂ ಇರಲಿಲ್ಲವೆಂಬುದಿಲ್ಲ; ನೀನೂ ಇರಲಿಲ್ಲವೆಂಬುದಿಲ್ಲ, ಈ ಅರಸರೂ ಇರಲಿಲ್ಲವೆಂಬುದಿಲ್ಲ; ಇನ್ನುಮೇಲೆ ನಾವುಗಳು ಯಾರೂ ಇರುವುದಿಲ್ಲವೆಂಬುದೂ ಇಲ್ಲ. ದೇಹಧಾರಿಯಾದವನಿಗೆ ಈ ದೇಹದಲ್ಲಿ ಹುಡುಗತನ, ಹರೆಯ, ಮುಪ್ಪು – ಇವು ಹೇಗೆ ಬರುವವೋ ಹಾಗೆಯೇ ಮತ್ತೊಂದು ದೇಹವೂ ಬರುವದು. ತಿಳಿದವನು ಈ ವಿಷಯದಲ್ಲಿ ಮೋಸ ಹೋಗುವದಿಲ್ಲ. (12–13)

**ಮಾತ್ರಾಸ್ಪರ್ಶಾಸ್ತು ಕೌನ್ತೇಯ । ಶೀತೋಷ್ಣಸುಖದುಃಖದಾಃ ।**
**ಆಗಮಾಪಾಯಿನೋಽನಿತ್ಯಾ–ಸ್ತಾಂಸ್ತಿತಿಕ್ಷಸ್ವ ಭಾರತ ॥ 14 ॥**

**ಯಂ ಹಿ ನ ವ್ಯಥಯನ್ತ್ಯೇತೇ । ಪುರುಷಂ ಪುರುಷರ್ಷಭ ।**
**ಸಮದುಃಖಸುಖಂ ಧೀರಂ । ಸೋಽಮೃತತ್ವಾಯ ಕಲ್ಪತೇ ॥ 15 ॥**

ಆದರೆ ಎಲೈ ಕೌಂತೇಯನೆ, ಇಂದ್ರಿಯಗಳ ಮತ್ತು ವಿಷಯಗಳ ಸೋಂಕುಗಳು ಶೀತ–ಉಷ್ಣ , ಸುಖ–ದುಃಖ – ಇವುಗಳನ್ನು ಕೊಡುತ್ತಿರುವವು. ಅವು ಬರುತ್ತಲೂ ಹೋಗುತ್ತಲೂ ಇರುವವು, ನಿತ್ಯವಾಗಿರುವದಿಲ್ಲ. ಭರತ

ವಂಶೋತ್ಪನ್ನನೆ, ಅವುಗಳನ್ನು ತಡೆದುಕೊ. ಎಲೈ ಪುರುಷಶ್ರೇಷ್ಠನೆ, ಯಾವ ಪುರುಷನನ್ನು ಇವು ವ್ಯಥೆಗೊಳಿಸುವದಿಲ್ಲವೋ ಸುಖದಲ್ಲಿಯೂ ದುಃಖದಲ್ಲಿಯೂ ಸಮವಾಗಿರುವ ಆ ಜಾಣನು ಮೋಕ್ಷಕ್ಕೆ ತಕ್ಕವನಾಗಿರುವನು. (14–15)

**ನಾಸತೋ ವಿದ್ಯತೇ ಭಾವೋ। ನಾಭಾವೋ ವಿದ್ಯತೇ ಸತಃ।**
**ಉಭಯೋರಪಿ ದೃಷ್ಟೋಽನ್ತ–ಸ್ತ್ವನಯೋಸ್ತತ್ತ್ವದರ್ಶಿಭಿಃ ॥ 16 ॥**

**ಅವಿನಾಶಿ ತು ತದ್ವಿದ್ಧಿ। ಯೇನ ಸರ್ವಮಿದಂ ತತಮ್।**
**ವಿನಾಶಮವ್ಯಯಸ್ಯಾಸ್ಯ। ನ ಕಶ್ಚಿತ್ಕರ್ತುಮರ್ಹತಿ ॥ 17 ॥**

**ಅನ್ತವನ್ತ ಇಮೇ ದೇಹಾ–ನಿತ್ಯಸ್ಯೋಕ್ತಾಃ ಶರೀರಿಣಃ।**
**ಅನಾಶಿನೋಽಪ್ರಮೇಯಸ್ಯ। ತಸ್ಮಾದ್ಯುಧ್ಯಸ್ವ ಭಾರತ ॥ 18 ॥**

ಅಸತ್ಪದಾರ್ಥಕ್ಕೆ ಇರುವಿಕೆಯಿಲ್ಲ, ಸತ್ಪದಾರ್ಥಕ್ಕೆ ಇಲ್ಲದಿರುವಿಕೆಯಿಲ್ಲ. ತತ್ತ್ವವನ್ನು ಮನಗಂಡವರು ಈ ಎರಡೂ ವಿಷಯಗಳ ನಿಜವನ್ನು ಕಂಡಿರುವರು. ಯಾವದರಿಂದ ಈ ಜಗತ್ತೆಲ್ಲವೂ ವ್ಯಾಪ್ತವಾಗಿರುವದೋ ಅದನ್ನೇ ವಿನಾಶ

ವಾಗದ್ದೆಂದು ತಿಳಿ ; ಎಂದಿಗೂ ಸವೆಯದ ಅದನ್ನು ಇಲ್ಲವಾಗಿಸುವದಕ್ಕೆ ಯಾವ-ನಿಂದಲೂ ಆಗಲಾರದು. ನಿತ್ಯನೂ ನಾಶರಹಿತನೂ ಯಾವ ಪ್ರಮಾಣಗಳಿಗೂ ನಿಲುಕದವನೂ ಆಗಿರುವ ದೇಹಿಯ ಈ ದೇಹಗಳು ಕೊನೆಗಾಣುವಂಥವು – ಎಂದು ಬಲ್ಲವರು ಹೇಳುತ್ತಾರೆ. ಎಲೈ ಭರತವಂಶೋತ್ಪನ್ನನೆ, ಆದ್ದರಿಂದ ಯುದ್ಧವನ್ನು ಮಾಡು. (16–18)

ಟಿ॥ ನಿಜವಾಗಿರದಿದ್ದರೂ ತೋರುವದು ಅಸತ್ಪದಾರ್ಥ, ತೋರಿಕೊಳ್ಳದಿದ್ದರೂ ನಿಜವಾಗಿರುವದು ಸತ್ಪದಾರ್ಥ. ಸದ್ರೂಪನಾದ ಆತ್ಮನು ಇಲ್ಲವೆಂದು ಜನರು ಹೇಳಬಹುದು ; ಅಸತ್ತಾಗಿರುವ ದೇಹಾದಿಗಳನ್ನು ಇವೆಯೆಂದೂ ಹೇಳಿಕೊಳ್ಳಬಹುದು. ಆದರೆ ಅಷ್ಟುಮಾತ್ರದಿಂದ ಇದ್ದದ್ದು ಹೋಗುವದಿಲ್ಲ, ಇಲ್ಲದ್ದು ಉಂಟಾಗುವದಿಲ್ಲ. ಎಲ್ಲಾ ದೇಹಗಳಲ್ಲಿಯೂ ನಿತ್ಯನಾದ ನಾಶರಹಿತನಾದ ಒಬ್ಬನೇ ಆತ್ಮನಿರುವನೆಂದೂ ಅವನು ಪ್ರಮಾಣಗಳಿಗೆ ನಿಲುಕದಿದ್ದರೂ ನಿಜವಾಗಿರುವನೆಂದೂ ಅವನಿಗಿಂತ ಬೇರೆಯಾಗಿ ಹುಟ್ಟುಸಾವುಗಳುಳ್ಳ ಜೀವರೆಂಬ ಆತ್ಮರುಗಳು ಇಲ್ಲವೇ ಇಲ್ಲವೆಂದೂ ಇಲ್ಲಿ ಹೇಳಿರುತ್ತದೆ. ಇದೇ ಸಾಂಖ್ಯಯೋಗದ ತಿರುಳು. ಇದನ್ನು ಇನ್ನು ಮುಂದೆ ವಿವರಿಸಲಾಗುತ್ತದೆ.

ಯ ಏನಂ ವೇತ್ತಿ ಹನ್ತಾರಂ। ಯಶ್ಚೈನಂ ಮನ್ಯತೇ ಹತಮ್।
ಉಭೌ ತೌ ನ ವಿಜಾನೀತೋ। ನಾಯಂ ಹನ್ತಿ ನ ಹನ್ಯತೇ ॥ 19 ॥
ನ ಜಾಯತೇ ಮ್ರಿಯತೇ ವಾ ಕದಾಚಿ–
ನ್ನಾಯಂ ಭೂತ್ವಾ ಭವಿತಾ ವಾ ನ ಭೂಯಃ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ।
ನ ಹನ್ಯತೇ ಹನ್ಯಮಾನೇ ಶರೀರೇ ॥ 20 ॥

ಈ ಆತ್ಮನು ಕೊಲ್ಲುವವನೆಂದು ಯಾವನು ಎಣಿಸುವನೋ ಮತ್ತು ಇವನು ಹತನಾಗುವವನೆಂದು ಯಾವನು ಎಣಿಸುವನೋ ಅವರಿಬ್ಬರೂ ನಿಜವನ್ನರಿಯರು. ಈತನು ಕೊಲ್ಲುವದೂ ಇಲ್ಲ, ಹತನಾಗುವದೂ ಇಲ್ಲ. ಇವನು ಹುಟ್ಟುವದಿಲ್ಲ, ಸಾಯುವದೂ ಇಲ್ಲ; ಇವನು ಒಮ್ಮೆ ಇದ್ದು ಇನ್ನೊಮ್ಮೆ ಇರುವದಿಲ್ಲವೆಂಬುದೂ ಇಲ್ಲ. ಇವನು ಹುಟ್ಟಿಲ್ಲದವನು, ನಿತ್ಯನು (ಸಾವಿಲ್ಲದವನು), ಎಂದೆಂದಿಗೂ ಇರುವ ಪುರಾತನನು. ಶರೀರವು ಹತವಾದರೂ ಹತನಾಗುವದಿಲ್ಲ. (19–20)

ವೇದಾವಿನಾಶಿನಂ ನಿತ್ಯಂ । ಯ ಏನಮಜಮವ್ಯಯಮ್ ।
ಕಥಂ ಸ ಪುರುಷಃ ಪಾರ್ಥ । ಕಂ ಘಾತಯತಿ ಹನ್ತಿ ಕಮ್ ॥ 21 ॥
ವಾಸಾಂಸಿ ಜೀರ್ಣಾನಿ ಯಥಾ ವಿಹಾಯ । ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾ–ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥
ನೈನಂ ಛಿನ್ದನ್ತಿ ಶಸ್ತ್ರಾಣಿ । ನೈನಂ ದಹತಿ ಪಾವಕಃ ।
ನ ಚೈನಂ ಕ್ಲೇದಯನ್ತ್ಯಾಪೋ । ನ ಶೋಷಯತಿ ಮಾರುತಃ ॥ 23 ॥
ಅಚ್ಛೇದ್ಯೋಽಯಮದಾಹ್ಯೋಽಯ–ಮಕ್ಲೇದ್ಯೋಽಶೋಷ್ಯ ಏವ ಚ
ನಿತ್ಯಃ ಸರ್ವಗತಃ ಸ್ಥಾಣು–ರಚಲೋಽಯಂ ಸನಾತನಃ ॥ 24 ॥
ಅವ್ಯಕ್ತೋಽಯಮಚಿನ್ತ್ಯೋಽಯ–ಮವಿಕಾರ್ಯೋಽಯಮುಚ್ಯತೇ ।
ತಸ್ಮಾದೇವಂ ವಿದಿತ್ವೈನಂ । ನಾನುಶೋಚಿತುಮರ್ಹಸಿ ॥ 25 ॥

ಈತನು ವಿನಾಶವಿಲ್ಲದವನು, ನಿತ್ಯನು, ಹುಟ್ಟಿಲ್ಲದವನು, ಸವೆಯದವನು– ಎಂದು ಯಾವಾತನು ಅರಿತುಕೊಳ್ಳುವನೋ ಆ ಪುರುಷನು, ಎಲ್ಲೈ

ಪಾರ್ಥನೆ, ಯಾರನ್ನು ಹೇಗೆ ಕೊಲ್ಲುವನು ? ಯಾರನ್ನು ಹೇಗೆ ಕೊಲ್ಲಿಸುವನು ? ಹೇಗೆ ಮನುಷ್ಯನು ಹರಿದ ಹಳೆಯ ಬಟ್ಟೆಗಳನ್ನು ಬಿಟ್ಟು ಹೊಸವುಗಳನ್ನು ತೆಗೆದುಕೊಳ್ಳುವನೋ ಅದರಂತೆಯೇ ಈ ದೇಹಿಯು ಮುದಿಯಾದ ಶರೀರ ಗಳನ್ನು ಬಿಟ್ಟು ಬೇರೆ ಹೊಸಶರೀರಗಳನ್ನು ಹೊಂದುತ್ತಾನೆ. ಇವನನ್ನು ಶಸ್ತ್ರಗಳು ಕಡಿದು ತುಂಡರಿಸಲಾರವು, ಇವನನ್ನು ಬೆಂಕಿಯು ಸುಡಲಾರದು, ಮತ್ತು ಇವನನ್ನು ನೀರು ನೆನೆಸಲೂ ಆರದು, ಗಾಳಿಯು ಒಣಗಿಸಲೂ ಆರದು. ಇವನು ತುಂಡರಿಸು ವದಕ್ಕೆ ಆಗದವನು, ಇವನು ಸುಡುವದಕ್ಕಾಗದವನು, ತೋಯಿಸುವದಕ್ಕಾಗ ದವನು, ಒಣಗಿಸುವದಕ್ಕೂ ಆಗದವನು ; ಇವನು ನಿತ್ಯನು, ಎಲ್ಲೆಲ್ಲಿಯೂ ಇರುವವನು. ಸ್ಥಿರವಾಗಿರುವವನು, ಅಲುಗಾಡದವನು, ಎಂದಿನಿಂದಲೂ ಹೀಗೆಯೇ ಇದ್ದುಕೊಂಡಿರುವನು ; ಇವನು ಇಂದ್ರಿಯಗಳಿಗೆ ತೋರದವನು, ಮನಸ್ಸಿನಿಂದ ಯೋಚಿಸಿಕೊಳ್ಳುವದಕ್ಕಾಗದವನು, ಮಾರ್ಪಡಿಸಲಿಕ್ಕಾಗದವನು– ಎನಿಸಿಕೊಂಡಿರುವನು. ಈತನು ಹೀಗಿರುವನೆಂಬುದನ್ನು ಮನದಂದುಕೊಂಡು ಶೋಕಿಸದಿರು. (21–25)

ಅಥ ಚೈನಂ ನಿತ್ಯಜಾತಂ। ನಿತ್ಯಂ ವಾ ಮನ್ಯಸೇ ಮೃತಮ್।
ತಥಾಪಿ ತ್ವಂ ಮಹಾಬಾಹೋ। ನೈವಂ ಶೋಚಿತುಮರ್ಹಸಿ ॥26॥
ಜಾತಸ್ಯ ಹಿ ಧ್ರುವೋ ಮೃತ್ಯು – ರ್ಧ್ರುವಂ ಜನ್ಮ ಮೃತಸ್ಯ ಚ।
ತಸ್ಮಾದಪರಿಹಾರ್ಯೇಽರ್ಥೇ। ನ ತ್ವಂ ಶೋಚಿತುಮರ್ಹಸಿ ॥27॥
ಅವ್ಯಕ್ತಾದೀನಿ ಭೂತಾನಿ। ವ್ಯಕ್ತಮಧ್ಯಾನಿ ಭಾರತ।
ಅವ್ಯಕ್ತನಿಧನಾನ್ಯೇವ। ತತ್ರ ಕಾ ಪರಿದೇವನಾ ॥ 28 ॥

ಹೀಗಿದ್ದರೂ 'ಇವನು ನಿತ್ಯವೂ ಹುಟ್ಟುತ್ತಲಿರುವನು, ನಿತ್ಯವೂ ಸಾಯುತ್ತಿರುವನು' – ಎಂದುಕೊಂಡಿರುವೆಯಾದರೆ, ಆಗಲೂ, ಎಲೈ ಮಹಾಬಾಹುವೆ, ಹೀಗೆ ಶೋಕಿಸತಕ್ಕದ್ದಲ್ಲ. ಏಕೆಂದರೆ ಹುಟ್ಟಿದವನಿಗೆ ಸಾವು ತಪ್ಪದೆ ಆಗುವದು, ಸತ್ತವನಿಗೆ ಹುಟ್ಟೂ ತಪ್ಪದೆ ಆಗುವದು ; ಹೀಗಿರುವದರಿಂದ ತಪ್ಪಿಸಲಾಗದ ಈ ವಿಷಯವನ್ನು ಕುರಿತು ನೀನು ಶೋಕಿಸಬಾರದು. ಪ್ರಾಣಿಗಳು ಮೊದಲು ಕಾಣದೆ ಇದ್ದುಕೊಂಡಿರುವವು, ನಡುವೆ ಕೆಲಕಾಲ ತೋರಿ, ಕೊನೆಗೆ ಕಾಣದಂತೆಯೇ ಸತ್ತುಹೋಗುವವು ; ಇದಕ್ಕಾಗಿ ಚಿಂತಿಸುವದೇಕೇ ? (26–28)

**ಆಶ್ಚರ್ಯವತ್ಪಶ್ಯತಿ ಕಶ್ಚಿದೇನ–ಮಾಶ್ಚರ್ಯವದ್ವದತಿ ತಥೈವ ಚಾನ್ಯಃ।**
**ಆಶ್ಚರ್ಯವಚ್ಚೈನಮನ್ಯಃಶೃಣೋತಿ। ಶ್ರುತ್ವಾಪ್ಯೇನಂ ವೇದ ನ ಚೈವ ಕಶ್ಚಿತ್॥**

ಈ ಆತ್ಮನನ್ನು ಒಬ್ಬನು ಯಾವದೋ ಒಂದು ಅದ್ಭುತವನ್ನು ಕಂಡಂತೆ ಕಾಣುವನು ; ಇದರಂತೆ ಮತ್ತೊಬ್ಬನು ಅದ್ಭುತವನ್ನು ತಿಳಿಸುವಂತೆ ಮಿಕ್ಕವರಿಗೆ ತಿಳಿಯಹೇಳುವನು ; ಇನ್ನೊಬ್ಬನು ಅದ್ಭುತವನ್ನು ಕೇಳುವಂತೆ ಇವನ ವಿಷಯ ವನ್ನು ಕೇಳುತ್ತಿರುವನು. ಹೀಗೆ ಕೇಳಿದಮೇಲೂ ಯಾರೂ ಇವನನ್ನು ಅರಿಯದೆ ಇರುವರು ! (29)

ಟಿ॥ ಆತ್ಮನನ್ನು ತಾನು ಎಂದೂ ಕಾಣದೆ ಇದ್ದ ಅದ್ಭುತವಸ್ತುವೆಂದು ಭಾವಿಸುವದೂ, ಯಾರೂ ಕಾಣದ ಅದ್ಭುತವನ್ನು ತಿಳಿಸುವಂತೆ ಆತ್ಮವಿಚಾರವನ್ನು ಜನರಿಗೆ ಹೇಳಹೋಗುವದೂ, ಎಂದೂ ಕೇಳದ ಅದ್ಭುತವನ್ನು ಕೇಳುವವನಂತೆ ಬೆರಗಾಗಿ ಕೇಳುತ್ತಿರುವದೂ–ಅಜ್ಞಾನದ ಗುರುತುಗಳು ; ಏಕೆಂದರೆ ಆತ್ಮನು ನಿತ್ಯಸಿದ್ಧನಾಗಿರುತ್ತಾನೆ, ನಮ್ಮೆಲ್ಲರ ಸ್ವರೂಪವೇ ಆಗಿರುತ್ತಾನೆ.

[ಆತ್ಮನನ್ನು ಸರಿಯಾಗಿ ತಿಳಿದುಕೊಳ್ಳುವವರೂ ಹೇಳುವವರೂ ಕೇಳುವವರೂ ಜಗತ್ತಿನ ಆಶ್ಚರ್ಯವಸ್ತುಗಳಂತೆ ; ಏಕೆಂದರೆ ಸರಿಯಾದ ತಿಳಿವಳಿಕೆಯುಳ್ಳವರು ಬಹಳ ಕಡಿಮೆ – ಎಂದೂ ಈ ಶ್ಲೋಕಕ್ಕೆ ಅಭಿಪ್ರಾಯವನ್ನು ತೆಗೆಯಬಹುದು.]

**ದೇಹೀ ನಿತ್ಯಮವಧ್ಯೋಽಯಂ। ದೇಹೇ ಸರ್ವಸ್ಯ ಭಾರತ।**
**ತಸ್ಮಾತ್ಸರ್ವಾಣಿ ಭೂತಾನಿ। ನ ತ್ವಂ ಶೋಚಿತುಮರ್ಹಸಿ ॥ 30 ॥**

ಎಲೈ ಭರತವಂಶೋತ್ಪನ್ನನೆ, ಎಲ್ಲರ ದೇಹದಲ್ಲಿಯೂ ಇರುವ ಈ ದೇಹಿಯು ಎಂದಿಗೂ ವಧ್ಯನಲ್ಲ. ಆದ್ದರಿಂದ ನೀನು ಯಾವ ಪ್ರಾಣಿಗಳ ವಿಷಯದಲ್ಲಿಯೂ ಶೋಕಿಸಬಾರದು. (30)

ಟಿ॥ ತತ್ತ್ವವಿಚಾರದ ದೃಷ್ಟಿಯಿಂದ ಮಾಡಿದ ಉಪದೇಶವು ಇಲ್ಲಿಗೆ ಮುಗಿಯಿತು.

**ಸ್ವಧರ್ಮಮಪಿ ಚಾವೇಕ್ಷ್ಯ। ನ ವಿಕಂಪಿತುಮರ್ಹಸಿ।**
**ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್। ಕ್ಷತ್ರಿಯಸ್ಯ ನ ವಿದ್ಯತೇ ॥ 31 ॥**

ಯದೃಚ್ಛಯಾ ಚೋಪಪನ್ನಂ। ಸ್ವರ್ಗದ್ವಾರಮಪಾವೃತಮ್।
ಸುಖಿನಃ ಕ್ಷತ್ರಿಯಾಃ ಪಾರ್ಥ। ಲಭನ್ತೇ ಯುದ್ಧಮೀದೃಶಮ್ ॥ 32 ॥
ಅಥ ಚೇತ್ ತ್ವಮಿಮಂ ಧರ್ಮ್ಯಂ। ಸಂಗ್ರಾಮಂ ನ ಕರಿಷ್ಯಸಿ।
ತತಃ ಸ್ವಧರ್ಮಂ ಕೀರ್ತಿಂ ಚ। ಹಿತ್ವಾ ಪಾಪಮವಾಪ್ಸ್ಯಸಿ ॥ 33 ॥
ಅಕೀರ್ತಿಂ ಚಾಪಿ ಭೂತಾನಿ। ಕಥಯಿಷ್ಯನ್ತಿ ತೇಽವ್ಯಯಾಮ್।
ಸಮ್ಭಾವಿತಸ್ಯ ಚಾಕೀರ್ತಿ–ರ್ಮರಣಾದತಿರಿಚ್ಯತೇ ॥ 34 ॥
ಭಯಾದ್ರಣಾದುಪರತಂ। ಮಂಸ್ಯನ್ತೇ ತ್ವಾಂ ಮಹಾರಥಾಃ।
ಯೇಷಾಂ ಚ ತ್ವಂ ಬಹುಮತೋ। ಭೂತ್ವಾ ಯಾಸ್ಯಸಿ ಲಾಘವಮ್ ॥ 35 ॥
ಅವಾಚ್ಯವಾದಾಂಶ್ಚ ಬಹೂನ್। ವದಿಷ್ಯನ್ತಿ ತವಾಹಿತಾಃ।
ನಿನ್ದನ್ತಸ್ತವ ಸಾಮರ್ಥ್ಯಂ। ತತೋ ದುಃಖತರಂ ನು ಕಿಮ್ ॥ 36 ॥
ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ। ಜಿತ್ವಾ ವಾ ಭೋಕ್ಷ್ಯಸೇ ಮಹೀಮ್।
ತಸ್ಮಾದುತ್ತಿಷ್ಠ ಕೌನ್ತೇಯ। ಯುದ್ಧಾಯ ಕೃತನಿಶ್ಚಯಃ ॥ 37 ॥

**ಸುಖದುಃಖೇ ಸಮೇ ಕೃತ್ವಾ । ಲಾಭಾಲಾಭೌ ಜಯಾಜಯೌ ।**
**ತತೋ ಯುದ್ಧಾಯ ಯುಜ್ಯಸ್ವ । ನೈವಂ ಪಾಪಮವಾಪ್ಸ್ಯಸಿ ॥ 38 ॥**

ನೀನು ಎದೆಗುಂದಿ ಧರ್ಮವನ್ನು ಬಿಟ್ಟು ಅತ್ತ ಸರಿಯುವದು ಸ್ವಧರ್ಮದ ದೃಷ್ಟಿಯಿಂದಲೂ ಯುಕ್ತವಲ್ಲ ; ಏಕೆಂದರೆ ಕ್ಷತ್ರಿಯನಿಗೆ ಧರ್ಮವನ್ನು ಮೀರದ ಯುದ್ಧಕ್ಕಿಂತ ಹೆಚ್ಚಿನ ಶ್ರೇಯಸ್ಸೇ ಇರುವದಿಲ್ಲ. ತನಗೆತಾನೇ ಬಂದೊದಗಿ ತೆರೆದಿರುವ ಸ್ವರ್ಗದ ಬಾಗಿಲಿನಂತಿರುವ ಇಂಥ ಯುದ್ಧವು ಭಾಗ್ಯಶಾಲಿಗಳಾದ ಕ್ಷತ್ರಿಯರಿಗೆ ದೊರಕುವದು. ಹಾಗಿಲ್ಲದೆ ನೀನು ಈ ಧರ್ಮಯುದ್ಧವನ್ನು ಮಾಡದಿದ್ದರೆ ಅದರಿಂದ ಸ್ವಧರ್ಮವನ್ನೂ ಒಳ್ಳೆಯ ಹೆಸರನ್ನೂ ಕೆಡಿಸಿಕೊಂಡು ಪಾಪವನ್ನು ಪಡೆಯುತ್ತೀಯೆ. ಜನರು ನಿನ್ನ ಅಪಯಶಸ್ಸನ್ನು ಎಂದೆಂದಿಗೂ ಆಡಿಕೊಳ್ಳುತ್ತಿರುವರು ; ಗೌರವವನ್ನು ಪಡೆವವನಿಗೆ ಕೆಟ್ಟಹೆಸರೆಂದರೆ ಸಾವಿಗಿಂತಲೂ ಹೆಚ್ಚಿನದು. ನೀನು ಅಂಜಿಕೆಯಿಂದ ಕಾಳಗವನ್ನು ಕೈಬಿಟ್ಟೆಯೆಂದು ಮಹಾರಥಿಕರು ಎಣಿಸುವರು ; ಅವರಿಗೆಲ್ಲ ಬಹುಮಾನ್ಯನಾಗಿರುವ ನೀನು ಮುಂದೆ ಅವರ ಕಣ್ಣಿನಲ್ಲಿ ಹಗುರವಾಗಿಬಿಡುತ್ತೀಯೆ. ನಿನ್ನನ್ನು ಕಂಡರೆ ಆಗದವರು ಎಷ್ಟೋ ಆಡಬಾರದ

ಮಾತುಗಳನ್ನಾಡುತ್ತಾ ನಿನ್ನ ಸಾಮರ್ಥ್ಯವನ್ನು ಹಳಿಯುವರು. ಅದಕ್ಕಿಂತಲೂ ಹೆಚ್ಚಿನ ದುಃಖವು ಯಾವದು ? ಸತ್ತರೆ ಸ್ವರ್ಗವು ಸಿಕ್ಕುವದು, ಅಥವಾ ಗೆದ್ದರೆ ಭೂಮಿಯನ್ನಾದರೂ ಭೋಗಿಸುತ್ತೀಯೆ. ಆದ್ದರಿಂದ ಎಲೈ ಕುಂತೀಕುಮಾರನೆ, ಯುದ್ಧವನ್ನು ಮಾಡುವೆನೆಂದೇ ನಿಶ್ಚಯಿಸಿ ಎದ್ದುನಿಲ್ಲು ! ಸುಖದುಃಖಗಳು, ಲಾಭನಷ್ಟಗಳು, ಸೋಲುಗೆಲುವುಗಳು – ಇವುಗಳನ್ನು ಸಮನಾಗಿ ಮಾಡಿಕೊಂಡು ಯುದ್ಧಕ್ಕೆ ಅನುವಾಗು ; ಹಾಗಾದರೆ ನಿನಗೆ ಪಾಪವು ಬರುವದಿಲ್ಲ.

(31–38)

ಟಿ ॥ ಹೀಗೆ ಪರಮಾರ್ಥಜ್ಞಾನದೃಷ್ಟಿಯಿಂದ ಅಥವಾ ಅದಕ್ಕನುಗುಣವಾದ ಸ್ವಧರ್ಮದೃಷ್ಟಿಯಿಂದ, ನೋಡಿದರೆ, ತಾನೇ ಪ್ರಾಪ್ತವಾಗಿರುವ ಯುದ್ಧವನ್ನು ಮಾಡಬೇಕೇ ಹೊರತು ಶೋಕಿಸುತ್ತಾ ಕೂಡಬಾರದೆಂದು ಸಿದ್ಧವಾಯಿತು.

ಏಷಾ ತೇಽಭಿಹಿತಾ ಸಾಙ್ಖ್ಯೇ । ಬುದ್ಧಿರ್ಯೋಗೇ ತ್ವಿಮಾಂ ಶೃಣು ।
ಬುದ್ಧ್ಯಾ ಯುಕ್ತೋ ಯಯಾ ಪಾರ್ಥ । ಕರ್ಮಬನ್ಧಂ ಪ್ರಹಾಸ್ಯಸಿ ॥ 39 ॥

ನೇಹಾಭಿಕ್ರಮನಾಶೋಽಸ್ತಿ। ಪ್ರತ್ಯವಾಯೋ ನ ವಿದ್ಯತೇ।
ಸ್ವಲ್ಪಮಪ್ಯಸ್ಯ ಧರ್ಮಸ್ಯ। ತ್ರಾಯತೇ ಮಹತೋ ಭಯಾತ್ ॥ 40 ॥
ವ್ಯವಸಾಯಾತ್ಮಿಕಾ ಬುದ್ಧಿ-ರೇಕೇಹ ಕುರುನನ್ದನ।
ಬಹುಶಾಖಾ ಹ್ಯನನ್ತಾಶ್ಚ। ಬುದ್ಧಯೋಽವ್ಯವಸಾಯಿನಾಮ್ ॥ 41 ॥

ನಿನಗೆ ಹೇಳಿದ ಇದು ಸಾಂಖ್ಯಬುದ್ಧಿಯು ; ಈಗ ಯೋಗಬುದ್ಧಿಯನ್ನು ಹೇಳುವೆನು, ಕೇಳು. ಈ ಬುದ್ಧಿಯಿಂದ ಕೂಡಿದ್ದರೆ, ಎಲೈ ಪಾರ್ಥನೆ, ನೀನು ಕರ್ಮದ ಕಟ್ಟನ್ನು ಕಳಚಿಕೊಳ್ಳಬಹುದು. ಇಲ್ಲಿ ಯಾವದನ್ನು ಉಪಕ್ರಮಿಸುವೆವೋ ಅದಕ್ಕೆ ನಾಶವಿಲ್ಲ, ಇದರಲ್ಲಿ ಯಾವ ದೋಷವೂ ಇಲ್ಲ ; ಇದನ್ನು ಸ್ವಲ್ಪಮಾಡಿದರೂ ಮಹಾಭಯದಿಂದ ರಕ್ಷಣೆಮಾಡುವದು. ಎಲೈ ಕುರುವಂಶೋತ್ಪನ್ನನೆ, ಇದರಲ್ಲಿ ನಿಶ್ಚಯರೂಪವಾದ ಒಂದೇ ಒಂದು ಬುದ್ಧಿಯಿರುವದು ; ಯಾರಿಗೆ ಈ ನಿಶ್ಚಯರೂಪವಾದ ಬುದ್ಧಿಯು ಇರುವದಿಲ್ಲವೋ ಅವರ ಬುದ್ಧಿಗಳಿಗೆ ಎಷ್ಟೋ ಕವಲುಗಳಿರುವವು, ಅವುಗಳು ಇಷ್ಟೇ ಎಂಬ ಲೆಕ್ಕವಿಲ್ಲ. (39–41)

ಟಿ|| ಕರ್ಮಯೋಗಿಯ ಗುರಿಯು ಒಂದೇ ; ಮಿಕ್ಕವರದು ಆಸೆ ಎತ್ತ ಎಳೆದರೆ ಅತ್ತಕಡೆಗೆ.

ಯಾಮಿಮಾಂ ಪುಷ್ಪಿತಾಂ ವಾಚಂ । ಪ್ರವದನ್ತ್ಯವಿಪಶ್ಚಿತಃ ।
ವೇದವಾದರತಾಃ ಪಾರ್ಥ । ನಾನ್ಯದಸ್ತೀತಿ ವಾದಿನಃ || 42 ||

ಕಾಮಾತ್ಮಾನಃ ಸ್ವರ್ಗಪರಾ । ಜನ್ಮಕರ್ಮಫಲಪ್ರದಾಮ್ ।
ಕ್ರಿಯಾವಿಶೇಷಬಹುಲಾಂ । ಭೋಗೈಶ್ವರ್ಯಗತಿಂ ಪ್ರತಿ || 43 ||

ಭೋಗೈಶ್ವರ್ಯಪ್ರಸಕ್ತಾನಾಂ । ತಯಾಪಹೃತಚೇತಸಾಮ್ ।
ವ್ಯವಸಾಯಾತ್ಮಿಕಾ ಬುದ್ಧಿಃ । ಸಮಾಧೌ ನ ವಿಧೀಯತೇ || 44 ||

ತಿಳಿಯದ ಜನರು ವೇದದಲ್ಲಿರುವ ಅರ್ಥವಾದಗಳಲ್ಲಿಯೇ ಆಸಕ್ತರಾಗಿ ಸ್ವರ್ಗಫಲವನ್ನು ಕೊಡುವ ಕರ್ಮಕ್ಕಿಂತ ಹೆಚ್ಚಿನದೇನೂ ಇಲ್ಲವೆಂದು ವಾದಿಸುತ್ತಿರುವರು. ಅವರು ಕಾಮಾತ್ಮರಾಗಿ ಸ್ವರ್ಗವೇ ಎಲ್ಲಕ್ಕೂ ಮಿಗಿಲಾದ

ಗತಿಯೆಂದು ಭಾವಿಸುತ್ತಿರುವರು ; ಆದ್ದರಿಂದ ವಾಸನೆಯಿಲ್ಲದ ಹೂವನ್ನು ಬಿಟ್ಟಿರುವ ಮರದಂತೆ ನೋಡುವದಕ್ಕೆ ಮಾತ್ರ ಸೊಗಸಾಗಿರುವ ಬಣ್ಣನೆಯ ಮಾತನ್ನೇ ಆಡುತ್ತಿರುವರು. ಆ ಮಾತು ಪುನರ್ಜನ್ಮವೆಂಬ ಕರ್ಮಫಲವನ್ನು ಕೊಡುವಂಥದ್ದು, ಪರಲೋಕದಲ್ಲಿ ಆಗುವ ಭೋಗಭಾಗ್ಯಗಳನ್ನು ಪಡೆಯುವದಕ್ಕೆ ಬೇಕಾದ ಬಗೆಬಗೆಯ ಕರ್ಮಗಳನ್ನೇ ಹೆಚ್ಚಾಗಿ ಹೊಗಳುವಂಥದ್ದು. ಭೋಗಭಾಗ್ಯಗಳಲ್ಲಿಯೇ ಆಸಕ್ತರಾಗಿ ಆ ಮಾತಿಗೇ ಬೆರಗಾಗಿ ಮನಸೋತಿರುವಂಥವರಿಗೆ ಅಂತಃಕರಣದಲ್ಲಿ ಈ ನಿಶ್ಚಯಾತ್ಮಕವಾದ ಬುದ್ಧಿಯು ಉಂಟಾಗಲಾರದು.

(42–44)

ಟಿ॥ ಕಾಮ್ಯಕರ್ಮಗಳನ್ನು ಬಿಟ್ಟವರಿಗೇ ಕರ್ಮಯೋಗವು ದಕ್ಕುವದು.

ತ್ರೈಗುಣ್ಯವಿಷಯಾ ವೇದಾ–ನಿಸ್ತ್ರೈಗುಣ್ಯೋ ಭವಾರ್ಜುನ ।
ನಿರ್ದ್ವನ್ದ್ವೋ ನಿತ್ಯಸತ್ತ್ವಸ್ಥೋ । ನಿರ್ಯೋಗಕ್ಷೇಮ ಆತ್ಮವಾನ್ ॥ 45 ॥
ಯಾವಾನರ್ಥ ಉದಪಾನೇ । ಸರ್ವತಃ ಸಂಪ್ಲುತೋದಕೇ ।
ತಾವಾನ್ಸರ್ವೇಷು ವೇದೇಷು । ಬ್ರಾಹ್ಮಣಸ್ಯ ವಿಜಾನತಃ ॥ 46 ॥

ಎಲೈ ಅರ್ಜುನನೆ, ಕರ್ಮಕಾಂಡರೂಪವಾದ ವೇದಗಳು ಸತ್ತ್ವರಜ-ಸ್ತಮಸ್ಸುಗಳೆಂಬ ಮೂರು ಗುಣಗಳ ಸಂಸಾರವನ್ನೇ ವಿವರಿಸುವವು. ನೀನು ಈ ಮೂರು ಗುಣಗಳನ್ನೂ ಮೀರುವವನಾಗು. ಸುಖದುಃಖ-ಮುಂತಾದ ದ್ವಂದ್ವ-ಗಳನ್ನು ಗೆಲ್ಲುವವನಾಗು ; ಯಾವಾಗಲೂ ಶುದ್ಧಸತ್ತ್ವದಲ್ಲಿಯೇ ಇರು. ಏನನ್ನಾದರೂ ಪಡೆದುಕೊಂಡು ಕಾಪಾಡಿಕೊಳ್ಳಬೇಕೆಂಬ ಹಂಬಲಿಗೆ ಸಿಕ್ಕಿಕೊಳ್ಳ-ದಿರು, ಎಚ್ಚರಿಕೆಯಿಂದಿರು. ಸಣ್ಣಸಣ್ಣ ನೀರ್ದಾಣದಲ್ಲಿ ಆಗುವ ಪ್ರಯೋಜನ ವೆಲ್ಲವೂ ಎಲ್ಲೆಲ್ಲಿಯೂ ನೀರಿರುವ ಮಹಾಸರೋವರದಲ್ಲಿ ಅಡಕವಾಗಿರುವ-ದಲ್ಲವೆ ? ಇದರಂತೆ ವೇದಗಳಲ್ಲಿರುವ ಕರ್ಮಫಲವೆಲ್ಲವೂ ತತ್ತ್ವವನ್ನರಿತಿರುವ ಬ್ರಹ್ಮಜ್ಞಾನಿಗೆ ಆಗುವದು. (45–46)

ಟಿ॥ ಫಲವನ್ನು ಬಿಟ್ಟು ಬರಿಯ ಕರ್ಮಗಳನ್ನು ಮಾಡುವದಾದರೂ ಏಕೆ?- ಎಂದು ಶಂಕಿಸಬಾರದು. ಏಕೆಂದರೆ ನಿಷ್ಕಾಮಕರ್ಮದಿಂದ ಚಿತ್ತಶುದ್ಧಿಯಾಗಿ ತತ್ತ್ವವನ್ನು ಅರಿತುಕೊಂಡವನಿಗೆ ಕರ್ಮಗಳ ಫಲವೆಲ್ಲವನ್ನೂ ತನ್ನಲ್ಲಿಯೇ ಅಡಗಿಸಿಕೊಂಡಿರುವ ಉತ್ತಮಫಲವೇ ದೊರಕುವದು.

ಕರ್ಮಣ್ಯೇವಾಧಿಕಾರಸ್ತೇ। ಮಾ ಫಲೇಷು ಕದಾಚನ।
ಮಾ ಕರ್ಮಫಲಹೇತುರ್ಭೂರ್–ಮಾ ತೇ ಸಙ್ಗೋಽಸ್ತ್ವಕರ್ಮಣಿ ॥ 47 ॥

ನಿನಗೆ ಕರ್ಮದಲ್ಲಿಯೇ ಅಧಿಕಾರವು, ಕರ್ಮಫಲಗಳಲ್ಲಿ ಅಧಿಕಾರವು ಬೇಡ ; ಕರ್ಮದ ಫಲವು ಹುಟ್ಟುವದಕ್ಕೆ ಕಾರಣನಾಗಬೇಡ, ಕರ್ಮವನ್ನು ಮಾಡದೆ ಇರುವದರಲ್ಲಿಯೂ ನಿನಗೆ ಆಸಕ್ತಿಯುಂಟಾಗದೆ ಇರಲಿ ! (47)

ಟಿ॥ ಕರ್ಮಯೋಗದ ಗುಟ್ಟೆಲ್ಲವೂ ಈ ಶ್ಲೋಕದಲ್ಲಿರುವದು. ಕರ್ಮವನ್ನೇ ಮಾಡಬೇಕು; ಫಲವನ್ನು ಅಂಟಿಸಿಕೊಳ್ಳಬಾರದು ; ಕರ್ಮದ ಕ್ಷುದ್ರಫಲವು ಮೊಳೆಯ ದಂತೆ ನೋಡಿಕೊಳ್ಳಬೇಕು; ಕರ್ಮವನ್ನೇ ಬಿಟ್ಟುಬಿಡುವೆನೆಂಬ ಪಟ್ಟನ್ನೂ ಹಿಡಿಯಬಾರದು.

ಯೋಗಸ್ಥಃ ಕುರು ಕರ್ಮಾಣಿ। ಸಙ್ಗಂ ತ್ಯಕ್ತ್ವಾ ಧನಞ್ಜಯ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ। ಸಮತ್ವಂ ಯೋಗ ಉಚ್ಯತೇ ॥ 48 ॥

ದೂರೇಣ ಹ್ಯವರಂ ಕರ್ಮ। ಬುದ್ಧಿಯೋಗಾದ್ಧನಞ್ಜಯ।
ಬುದ್ಧೌ ಶರಣಮನ್ವಿಚ್ಛ। ಕೃಪಣಾಃ ಫಲಹೇತವಃ ॥ 49 ॥

ಬುದ್ಧಿಯುಕ್ತೋ ಜಹಾತೀಹ। ಉಭೇ ಸುಕೃತದುಷ್ಕೃತೇ।
ತಸ್ಮಾದ್ಯೋಗಾಯ ಯುಜ್ಯಸ್ವ। ಯೋಗಃ ಕರ್ಮಸು ಕೌಶಲಮ್ ॥ 50 ॥

ಕರ್ಮಜಂ ಬುದ್ಧಿಯುಕ್ತಾಹಿ। ಫಲಂ ತ್ಯಕ್ತ್ವಾ ಮನೀಷಿಣಃ।
ಜನ್ಮಬನ್ಧವಿನಿರ್ಮುಕ್ತಾಃ। ಪದಂ ಗಚ್ಛನ್ತ್ಯನಾಮಯಮ್ ॥ 51 ॥

ಎಲೈ ಧನಂಜಯನೆ, ಯೋಗದಲ್ಲಿದ್ದುಕೊಂಡು ಸಂಗವನ್ನು ತೊರೆದು ಸಿದ್ಧಿಯಾಗಲಿ, ಆಗದಿರಲಿ, ಎರಡರಲ್ಲಿಯೂ ಸಮನಾಗಿದ್ದುಕೊಂಡು ಕರ್ಮಗಳನ್ನು ಮಾಡು ; ಸಮತೆಯೇ ಯೋಗವೆನಿಸುವದು. ಎಲೈ ಧನಂಜಯನೆ, ಬುದ್ಧಿಯೊಡಗೂಡಿದ ಕರ್ಮಕ್ಕಿಂತಲೂ ಬರಿಯ ಕರ್ಮವು ಎಷ್ಟೋ ಕೀಳಾದದ್ದು. ಬುದ್ಧಿಯಲ್ಲಿಯೇ ನೆಲೆಯನ್ನು ಹುಡುಕಿಕೊ, ಫಲಕ್ಕೆಂದು ಕರ್ಮವನ್ನು ಮಾಡು-ಪವರು ಕೀಳುಮಟ್ಟದವರು. ಈ ಲೋಕದಲ್ಲಿ ಬುದ್ಧಿಯಿಂದೊಡಗೂಡಿದವನು ಪುಣ್ಯಪಾಪಗಳೆರಡನ್ನೂ ಬಿಡಿಸಿಕೊಳ್ಳುತ್ತಾನೆ. ಆದ್ದರಿಂದ ಯೋಗಕ್ಕೆ ಸನ್ನದ್ಧನಾಗು. ಯೋಗವೇ ಕರ್ಮಗಳಲ್ಲಿರುವ ಜಾಣತನವು. ಏಕೆಂದರೆ ಬುದ್ಧಿಯಿಂದೊಡ

ಗೂಡಿದ ಜ್ಞಾಣರು ಕರ್ಮದಿಂದುಂಟಾಗುವ ಫಲವನ್ನು ಬಿಟ್ಟು ಹುಟ್ಟಿನ ಕಟ್ಟಿನಿಂದ ಬಿಡುಗಡೆಯನ್ನು ಹೊಂದಿ ಯಾವ ದೋಷವೂ ಇಲ್ಲದ ಸ್ಥಾನವನ್ನು ಪಡೆದುಕೊಳ್ಳುವರು. (48–51)

**ಯದಾ ತೇ ಮೋಹಕಲಿಲಂ । ಬುದ್ಧಿರ್ವ್ಯತಿತರಿಷ್ಯತಿ ।**
**ತದಾ ಗನ್ತಾಸಿ ನಿರ್ವೇದಂ । ಶ್ರೋತವ್ಯಸ್ಯ ಶ್ರುತಸ್ಯ ಚ ॥ 52 ॥**
**ಶ್ರುತಿವಿಪ್ರತಿಪನ್ನಾ ತೇ । ಯದಾ ಸ್ಥಾಸ್ಯತಿ ನಿಶ್ಚಲಾ ।**
**ಸಮಾಧಾವಚಲಾ ಬುದ್ಧಿ–ಸ್ತದಾ ಯೋಗಮವಾಪ್ಸ್ಯಸಿ ॥ 53 ॥**

ಯಾವಾಗ ನಿನ್ನ ಬುದ್ಧಿಯು ಮೋಹದ ಕಲ್ಮಷವನ್ನು ಮೀರುವದೋ ಆಗ ಮುಂದೆ ಕೇಳಬೇಕೆಂಬುದರಲ್ಲಿಯೂ ಹಿಂದೆ ಕೇಳಿದ್ದರಲ್ಲಿಯೂ ಆದರವಿಲ್ಲದವನಾಗುತ್ತೀಯೆ. ಶ್ರುತಿಗಳನ್ನು ಕೇಳಿ ಹೊಯ್ದಾಡುತ್ತಿರುವ ನಿನ್ನ ಬುದ್ಧಿಯು ಯಾವಾಗ ಆತ್ಮನಲ್ಲಿಯೇ ಅಲುಗಾಡದೆ ನೆಲೆನಿಂತುಕೊಳ್ಳುವದೋ ಆಗ ನೀನು ಯೋಗವನ್ನು ಪಡೆದಂತಾಗುವದು. (52–53)

ಅರ್ಜುನ ಉವಾಚ –

ಸ್ಥಿತಪ್ರಜ್ಞಸ್ಯ ಕಾ ಭಾಷಾ । ಸಮಾಧಿಸ್ಥಸ್ಯ ಕೇಶವ ।
ಸ್ಥಿತಧೀಃ ಕಿಂ ಪ್ರಭಾಷೇತ । ಕಿಮಾಸೀತ ವ್ರಜೇತ ಕಿಮ್ ॥ 54 ॥

ಅರ್ಜುನನು ಕೇಳಿದ್ದು:

ಎಲೈ ಕೇಶವನೆ, ಆತ್ಮನಲ್ಲಿ ನೆಲೆನಿಂತ ಸ್ಥಿತಪ್ರಜ್ಞನ ವಿಷಯದಲ್ಲಿ ಇತರರು ಏನೆಂದು ನುಡಿವರು ? ಆ ಸ್ಥಿತಪ್ರಜ್ಞನು ಹೇಗೆ ನುಡಿಯುವನು ? ಹೇಗೆ ಕುಳ್ಳಿರುವನು? ಹೇಗೆ ನಡೆಯುವನು ? (54)

ಶ್ರೀಭಗವಾನುವಾಚ –

ಪ್ರಜಹಾತಿ ಯದಾ ಕಾಮಾನ್ । ಸರ್ವಾನ್ ಪಾರ್ಥ ಮನೋಗತಾನ್ ।
ಆತ್ಮನ್ಯೇವಾತ್ಮನಾ ತುಷ್ಟಃ । ಸ್ಥಿತಪ್ರಜ್ಞಸ್ತದೋಚ್ಯತೇ ॥ 55 ॥
ದುಃಖೇಷ್ವನುದ್ವಿಗ್ನಮನಾಃ । ಸುಖೇಷು ವಿಗತಸ್ಪೃಹಃ ।
ವೀತರಾಗಭಯಕ್ರೋಧಃ । ಸ್ಥಿತಧೀರ್ಮುನಿರುಚ್ಯತೇ ॥ 56 ॥

ಯಃ ಸರ್ವತ್ರಾನಭಿಸ್ನೇಹ–ಸ್ತತ್ತತ್ಪ್ರಾಪ್ಯ ಶುಭಾಶುಭಮ್ ।
ನಾಭಿನನ್ದತಿ ನ ದ್ವೇಷ್ಟಿ । ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ 57 ॥
ಯದಾ ಸಂಹರತೇ ಚಾಯಂ । ಕೂರ್ಮೋಽಙ್ಗಾನೀವ ಸರ್ವಶಃ ।
ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯ–ಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ 58 ॥
ವಿಷಯಾ ವಿನಿವರ್ತನ್ತೇ । ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ । ಪರಂ ದೃಷ್ಟ್ವಾ ನಿವರ್ತತೇ ॥ 59 ॥
ಯತತೋ ಹ್ಯಪಿ ಕೌನ್ತೇಯ । ಪುರುಷಸ್ಯ ವಿಪಶ್ಚಿತಃ ।
ಇನ್ದ್ರಿಯಾಣಿ ಪ್ರಮಾಥೀನಿ । ಹರನ್ತಿ ಪ್ರಸಭಂ ಮನಃ ॥ 60 ॥
ತಾನಿ ಸರ್ವಾಣಿ ಸಂಯಮ್ಯ । ಯುಕ್ತ ಆಸೀತ ಮತ್ಪರಃ ।
ವಶೇ ಹಿ ಯಸ್ಯೇನ್ದ್ರಿಯಾಣಿ । ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ 61 ॥

ಶ್ರೀಭಗವಂತನು ಹೇಳಿದ್ದು:

ಎಲೈ ಪಾರ್ಥನೆ, ಮನಸ್ಸಿನಲ್ಲಿರುವ ಕಾಮಗಳನ್ನೆಲ್ಲ ತೊರೆದು ತನ್ನಲ್ಲಿಯೇ

ತನ್ನಿಂದಲೇ ಯಾವಾಗ ತೃಪ್ತನಾಗಿರುವನೋ ಆಗ ಸ್ಥಿತಪ್ರಜ್ಞನೆನಿಸು ವನು. ದುಃಖಗಳಿಂದ ಮನಸ್ಸಿನಲ್ಲಿ ತಳಮಳಗೊಳ್ಳದೆ, ಸುಖಗಳಲ್ಲಿ ಹಂಬಲಿಕೆ ಯಿಲ್ಲದೆ, ಬಯಕೆ, ಹೆದರಿಕೆ, ಸಿಟ್ಟು – ಎಂಬಿವಿಲ್ಲದೆ ಇರುವ ಮುನಿಯು ಸ್ಥಿತಪ್ರಜ್ಞ ನೆನಿಸಿರುವನು. ಯಾವಾತನು ಯಾವದೊಂದರಲ್ಲಿಯೂ ಮನಸ್ಸನ್ನಂಟಿಸಿಕೊಳ್ಳದೆ ಒಳ್ಳೆಯದಾಗಲಿ ಕೆಟ್ಟದ್ದಾಗಲಿ ಆಯಾ ಕಾಲಕ್ಕೆ ಬಂದದ್ದನ್ನು ಮೆಚ್ಚದೆಯೂ ಹಗೆ ಮಾಡದೆಯೂ ಇರುವನೋ ಅವನ ಪ್ರಜ್ಞೆಯು ನೆಲೆನಿಂತಿರುವದು. ಆಮೆಯು ಎಲ್ಲಾ ಕಡೆಗಳಿಂದಲೂ ತನ್ನ ಅವಯವಗಳನ್ನು ಒಳಕ್ಕೆಳೆದುಕೊಳ್ಳುವಂತೆ ಯಾವಾಗ ಇವನು ಇಂದ್ರಿಯಗಳನ್ನು ಇಂದ್ರಿಯಗಳ ವಿಷಯಗಳಿಂದ ಹಿಂಜಗ್ಗ ಬಲ್ಲವನಾಗಿರುವನೋ, ಆಗ ಅವನ ಪ್ರಜ್ಞೆಯು ನೆಲೆನಿಂತಿರುವದು. ವಿಷಯ ಗಳನ್ನು ಸೇವಿಸದ ಪ್ರಾಣಿಗೆ ವಿಷಯಗಳೇನೊ ಹಿಮ್ಮೆಟ್ಟುತ್ತವೆ ; ಆದರೆ ಅವುಗಳಲ್ಲಿ ರುವ ಇಚ್ಛೆಯ ವಾಸನೆಯುಮಾತ್ರ ಹೋಗಿರುವದಿಲ್ಲ; ಆ ಇಚ್ಛೆಯ ವಾಸನೆಯೂ ಪರಮಾತ್ಮನನ್ನು ಕಾಣುಕೊಂಡಮೇಲೆ ಹೋಗಿಬಿಡುವದು. ಎಲೈ ಕೌಂತೇಯನೆ, ವಿವೇಕಿಯಾದ ಪುರುಷನು ಇಂದ್ರಿಯಗಳನ್ನು ಬಿಗಿಹಿಡಿಯುವದಕ್ಕೆ ಯತ್ನವನ್ನು

ಮಾಡುತ್ತಿದ್ದರೂ ಇಂದ್ರಿಯಗಳು ಮನಸ್ಸನ್ನು ಕಡೆದುಹಾಕಿ ಬಲಾತ್ಕಾರದಿಂದ ಹೊರಕ್ಕೆ ಹಾರಿಸಿಕೊಂಡು ಹೋಗುತ್ತವೆ ; ಅವುಗಳನ್ನೆಲ್ಲ ಹಿಡಿತದಲ್ಲಿಟ್ಟುಕೊಂಡು ಯೋಗಬಲದಿಂದ ನನ್ನಲ್ಲಿಯೇ ತತ್ಪರನಾಗಿರಬೇಕು : ಹೀಗೆ ಯಾವನಿಗೆ ಇಂದ್ರಿಯಗಳು ಹಿಡಿತದಲ್ಲಿದ್ದುಕೊಂಡಿರುವವೋ ಆತನ ಪ್ರಜ್ಞೆಯೇ ನೆಲೆನಿಂತಿರುವದು. (55–61)

ಧ್ಯಾಯತೋ ವಿಷಯಾನ್ಪುಂಸಃ। ಸಙ್ಗಸ್ತೇಷೂಪಜಾಯತೇ।
ಸಙ್ಗಾತ್ ಸಞ್ಜಾಯತೇ ಕಾಮಃ। ಕಾಮಾತ್ ಕ್ರೋಧೋಽಭಿಜಾಯತೇ॥ 62 ॥

ಕ್ರೋಧಾದ್ಭವತಿ ಸಂಮೋಹಃ। ಸಮ್ಮೋಹಾತ್ ಸ್ಮೃತಿವಿಭ್ರಮಃ।
ಸ್ಮೃತಿಭ್ರಂಶಾದ್ಬುದ್ಧಿನಾಶೋ। ಬುದ್ಧಿನಾಶಾತ್ಪ್ರಣಶ್ಯತಿ ॥ 63 ॥

ರಾಗದ್ವೇಷವಿಯುಕ್ತೈಸ್ತು। ವಿಷಯಾನಿನ್ದ್ರಿಯೈಶ್ಚರನ್।
ಆತ್ಮವಶ್ಯೈರ್ವಿಧೇಯಾತ್ಮಾ। ಪ್ರಸಾದಮಧಿಗಚ್ಛತಿ ॥ 64 ॥

ಪ್ರಸಾದೇ ಸರ್ವದುಃಖಾನಾಂ। ಹಾನಿರಸ್ಯೋಽಪಜಾಯತೇ।
ಪ್ರಸನ್ನಚೇತಸೋ ಹ್ಯಾಶು। ಬುದ್ಧಿಃ ಪರ್ಯವತಿಷ್ಠತೇ ॥ 65 ॥

ವಿಷಯಗಳನ್ನು ಕುರಿತು ಯೋಚಿಸುತ್ತಿರುವ ಪುರುಷನಿಗೆ ಅವುಗಳಲ್ಲಿ ಸಂಗವುಂಟಾಗುತ್ತದೆ, ಆ ಆಸಕ್ತಿಯಿಂದ ಬಯಕೆಯುಂಟಾಗುತ್ತದೆ, ಆ ಬಯಕೆಯಿಂದ ಸಿಟ್ಟು ಉಂಟಾಗುತ್ತದೆ, ಸಿಟ್ಟಿನಿಂದ ಏನೂ ತೋಚದ ಮೋಹವು ಉಂಟಾಗುತ್ತದೆ, ಮೋಹದಿಂದ ನೆನಪು ತಪ್ಪುತ್ತದೆ, ನೆನಪು ತಪ್ಪಿದರೆ ಬುದ್ಧಿಯು ಹಾಳಾಗುತ್ತದೆ, ಬುದ್ಧಿಯು ಹಾಳಾದರೆ ತಾನೇ ಹಾಳಾಗುವನು. ಆದರೆ ರಾಗದ್ವೇಷಗಳಿಲ್ಲದೆ ತನ್ನ ಹಿಡಿತದಲ್ಲಿರುವ ಇಂದ್ರಿಯಗಳಿಂದ ವಿಷಯಗಳನ್ನು ಉಪಭೋಗಿಸುತ್ತಾ ಮನಸ್ಸನ್ನು ಹೇಳಿದಂತೆ ನಡೆಯುವ ಹಾಗೆ ಮಾಡಿಕೊಂಡಿರುವಾತನು ಪ್ರಸನ್ನತೆಯನ್ನು ಹೊಂದುವನು. ಪ್ರಸನ್ನತೆಯುಂಟಾಗಲು ಅವನಿಗೆ ದುಃಖಗಳೆಲ್ಲವೂ ನಾಶವಾಗುವವು ; ಏಕೆಂದರೆ ಚಿತ್ತವು ಪ್ರಸನ್ನವಾದವನಿಗೆ ಬುದ್ಧಿಯು ಬೇಗನೆ ನಿಲುಗಡೆಗೆ ಬರುವದು. (62–65)

ನಾಸ್ತಿಬುದ್ಧಿರಯುಕ್ತಸ್ಯ । ನ ಚಾಯುಕ್ತಸ್ಯ ಭಾವನಾ ।
ನ ಚಾಭಾವಯತಃ ಶಾನ್ತಿ–ರಶಾನ್ತಸ್ಯ ಕುತಃ ಸುಖಮ್ ॥ 66 ॥

ಯೋಗವಿಲ್ಲದವನಿಗೆ ನಿಲುಗಡೆಗೆ ನಿಂತ ಬುದ್ಧಿಯಿರುವದಿಲ್ಲ; ಯೋಗವಿಲ್ಲದವನಿಗೆ ಆತ್ಮಭಾವನೆಯೂ ಇರುವದಿಲ್ಲ ; ಭಾವನೆಯನ್ನು ಮಾಡದವನಿಗೆ ಶಾಂತಿಯಿರುವದಿಲ್ಲ. ಶಾಂತಿಯಿಲ್ಲದವನಿಗೆ ಸುಖವೆಲ್ಲಿ ಬಂತು ? (66)

ಇನ್ದ್ರಿಯಾಣಾಂ ಹಿ ಚರತಾಂ । ಯನ್ಮನೋಽನು ವಿಧೀಯತೇ ।
ತದಸ್ಯ ಹರತಿ ಪ್ರಜ್ಞಾಂ । ವಾಯುರ್ನಾವಮಿವಾಮ್ಭಸಿ ॥ 67 ॥
ತಸ್ಮಾದ್ಯಸ್ಯ ಮಹಾಬಾಹೋ । ನಿಗೃಹೀತಾನಿ ಸರ್ವಶಃ ।
ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯ–ಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ 68 ॥

ಹರಿದಾಡುತ್ತಿರುವ ಇಂದ್ರಿಯಗಳ ಹಿಂದೆ ಮನಸ್ಸನ್ನು ಬಿಡುತ್ತಾನಲ್ಲ ಅದೇ, ಗಾಳಿಯು ನೀರಿನ ಮೇಲಿರುವ ದೋಣಿಯನ್ನು ಹೊಡೆದುಕೊಂಡು ಹೋಗುವಂತೆ, ಈತನ ಪ್ರಜ್ಞೆಯನ್ನು ಹಾರಿಸಿಕೊಂಡು ಹೋಗುವದು. ಆದ್ದರಿಂದ,

ಎಲೈ ಮಹಾಬಾಹುವೆ, ಯಾವಾತನ ಇಂದ್ರಿಯಗಳು ಯಾವ ವಿಷಯಗಳ ಕಡೆಗೂ ಹೋಗದಂತೆ ಬಿಗಿಹಿಡಿಯಲ್ಪಟ್ಟಿರುವವೋ ಆತನ ಪ್ರಜ್ಞೆಯೇ ನೆಲೆಗೆ ನಿಂತಿರುವದು. (67–68)

**ಯಾ ನಿಶಾ ಸರ್ವಭೂತಾನಾಂ। ತಸ್ಯಾಂ ಜಾಗರ್ತಿ ಸಂಯಮೀ।**
**ಯಸ್ಯಾಂ ಜಾಗ್ರತಿ ಭೂತಾನಿ। ಸಾ ನಿಶಾ ಪಶ್ಯತೋ ಮುನೇಃ ॥ 69 ॥**

ಎಲ್ಲಾ ಪ್ರಾಣಿಗಳಿಗೂ ಯಾವದು ರಾತ್ರಿಯೋ ಅದರಲ್ಲಿ ಸಂಯಮಿಯಾದವನು ಎಚ್ಚರದಿಂದಿರುವನು. ಉಳಿದ ಪ್ರಾಣಿಗಳು ಯಾವದರಲ್ಲಿ ಎಚ್ಚರವಾಗಿರುವವೋ ತತ್ತ್ವವನ್ನರಿತ ಮುನಿಗೆ ಅದೇ ರಾತ್ರಿಯು. (69)

ಟಿ॥ ಪ್ರಪಂಚದ ತೊಳಲೇ ಜೀವರಿಗೆ ಎಚ್ಚರ, ಪರಮಾರ್ಥವೆಂಬುದು ಅವರ ನಿದ್ರೆಗೆ ತಕ್ಕ ರಾತ್ರೆ. ಸ್ಥಿತಪ್ರಜ್ಞನಿಗೆ ಹಾಗಲ್ಲ ; ಅವನಿಗೆ ವ್ಯವಹಾರವೇ ರಾತ್ರೆ. ಪರಮಾರ್ಥವೇ ಎಚ್ಚರಕ್ಕೆ ತಕ್ಕದ್ದು. 'ಎಚ್ಚರ' 'ರಾತ್ರೆ' – ಎಂಬ ಮಾತುಗಳನ್ನು ಇಲ್ಲಿ ಅರಿವು, ಮರವೆ – ಎಂಬರ್ಥದಲ್ಲಿ ಉಪಯೋಗಿಸಿದೆ.

ಆಪೂರ್ಯಮಾಣಮಚಲಪ್ರತಿಷ್ಠಂ। ಸಮುದ್ರಮಾಪಃ ಪ್ರವಿಶನ್ತಿ ಯದ್ವತ್।
ತದ್ವತ್ಕಾಮಾ ಯಂ ಪ್ರವಿಶನ್ತಿ ಸರ್ವೇ। ಸ ಶಾನ್ತಿಮಾಪ್ನೋತಿ ನ ಕಾಮಕಾಮೀ ॥

ವಿಹಾಯ ಕಾಮಾನ್ಯಃ ಸರ್ವಾನ್। ಪುಮಾಂಶ್ಚರತಿ ನಿಃಸ್ಪೃಹಃ।
ನಿರ್ಮಮೋ ನಿರಹಙ್ಕಾರಃ। ಸ ಶಾನ್ತಿಮಧಿಗಚ್ಛತಿ ॥ 71 ॥

ಎಲ್ಲಾ ಕಡೆಗಳಿಂದಲೂ ನೀರು ಬಂದು ತುಂಬುತ್ತಿದ್ದರೂ ಅಲ್ಲಾಡದೆ ಇದ್ದಂತಿರುವ ಕಡಲನ್ನು , ಅದನ್ನು ಮೀರೆದಪ್ಪಿಸಲಾರದೆ ಹೇಗೆ ಹೊಳೆಗಳು ಅದರಲ್ಲಿಯೇ ಬಂದು ಸೇರಿಕೊಳ್ಳುತ್ತಿರುವವೋ ಅದರಂತೆ ಎಲ್ಲಾ ಭೋಗಗಳೂ ಮನಸ್ಸನ್ನು ಕದಡಿಸದೆ ಯಾವನಲ್ಲಿಯೇ ಬಂದು ಸೇರಿಕೊಳ್ಳುವವೋ ಅವನೇ ಶಾಂತಿಯನ್ನು ಹೊಂದುವನಲ್ಲದೆ ಭೋಗಗಳಿಗಾಗಿ ಹಂಬಲಿಸುತ್ತಿರುವವನು (ಶಾಂತಿಯನ್ನು) ಹೊಂದಲಾರನು. ಯಾವನು ಎಲ್ಲಾ ಬಯಕೆಗಳನ್ನೂ ಬಿಟ್ಟು ಯಾವದೊಂದರಲ್ಲಿಯೂ ಹಾತುವರಿಯದೆ ನಾನುನನ್ನದೆಂಬುದಿಲ್ಲದೆ ನಡೆದುಕೊಳ್ಳುತ್ತಿರುವನೋ ಅವನು ಶಾಂತಿಯನ್ನು ಹೊಂದುವನು. (70–71)

ಟಿ॥ ಸ್ಥಿತಪ್ರಜ್ಞನೆಂದರೆ ಮನಸ್ಸು ಹೊಯ್ದಾಡದೆ ನೆಲೆಗೆ ನಿಂತ ಧೀರನು. ಆತನ ಲಕ್ಷಣವನ್ನು 54 ರಿಂದ 68ರವರೆಗಿನ ಶ್ಲೋಕಗಳಲ್ಲಿ ಹೇಳಿ ಮುಂದಿನ ಶ್ಲೋಕಗಳಲ್ಲಿ ಅವನ ಮನಃಸ್ಥಿತಿಯನ್ನು ಹೊಗಳಿರುತ್ತದೆ. ವಿಷಯಗಳ ತೊಳಲಿಕೆಗೆ ಇಂದ್ರಿಯಗಳ ನ್ನಾಗಲಿ ಮನಸ್ಸನ್ನಾಗಲಿ ಬಿಡದೆ ಮನಸ್ಸನ್ನು ಏಕಾಗ್ರವಾಗಿಸಿ ಪರಮಾತ್ಮನ ಧ್ಯಾನದಲ್ಲಿಡ ಬಲ್ಲವನಿಗೆ ಮಾತ್ರ ಅದು ನೆಲೆಗೆ ನಿಂತಿರುವದೆಂಬುದು ಒಟ್ಟರ್ಥ.

ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ। ನೈನಾಂ ಪ್ರಾಪ್ಯ ವಿಮುಹ್ಯತಿ।
ಸ್ಥಿತ್ವಾಸ್ಯಾಮನ್ತಕಾಲೇಽಪಿ। ಬ್ರಹ್ಮನಿರ್ವಾಣಮೃಚ್ಛತಿ ॥ 72 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಸಾಂಖ್ಯಯೋಗೋ ನಾಮ ದ್ವಿತೀಯೋಽಧ್ಯಾಯಃ

ಪಾರ್ಥನೆ, ಇದು ಬ್ರಹ್ಮಸ್ಥಿತಿಯು ; ಇದನ್ನು ಪಡೆದುಕೊಂಡವನಿಗೆ ಮೋಹವುಂಟಾಗುವದಿಲ್ಲ, ಕಡೆಯ ವಯಸ್ಸಿನಲ್ಲಿ ಈ ಸ್ಥಿತಿಯಲ್ಲಿದ್ದರೂ ಸಾಕು, ಬ್ರಹ್ಮನಿರ್ವಾಣವನ್ನು ಪಡೆಯುವನು. (72)

**ಹೀಗೆ ಸಾಂಖ್ಯಯೋಗವೆಂಬ ಎರಡನೆಯ ಅಧ್ಯಾಯವು ಮುಗಿಯಿತು.**

---------

## ಅಥ ತೃತೀಯೋಽಧ್ಯಾಯಃ

ಅರ್ಜುನ ಉವಾಚ –

ಜ್ಯಾಯಸೀ ಚೇತ್ಕರ್ಮಣಸ್ತೇ । ಮತಾ ಬುದ್ಧಿರ್ಜನಾರ್ದನ ।
ತತ್ಕಿಂ ಕರ್ಮಣಿ ಘೋರೇ ಮಾಂ । ನಿಯೋಜಯಸಿ ಕೇಶವ ॥ 1 ॥

ವ್ಯಾಮಿಶ್ರೇಣೇವ ವಾಕ್ಯೇನ । ಬುದ್ಧಿಂ ಮೋಹಯಸೀವ ಮೇ ।
ತದೇಕಂ ವದ ನಿಶ್ಚಿತ್ಯ । ಯೇನ ಶ್ರೇಯೋಽಹಮಾಪ್ನುಯಾಮ್ ॥ 2 ॥

## ಮೂರನೆಯ ಅಧ್ಯಾಯ

ಅರ್ಜುನನು ಕೇಳಿದ್ದು :

ಎಲೈ ಜನಾರ್ದನನೆ, ಕರ್ಮಕ್ಕಿಂತ ಬುದ್ಧಿಯೇ ಹೆಚ್ಚಿನದೆಂದು ನಿನ್ನ ಅಭಿಪ್ರಾಯವಾದರೆ, ನನ್ನನ್ನು ಘೋರವಾದ ಈ ಯುದ್ಧಕರ್ಮಕ್ಕೆ ಏತಕ್ಕೆ ಹಚ್ಚುತ್ತಿದ್ದೀಯೆ ? ಒಂದರಲ್ಲೊಂದು ಸೇರಿಕೊಂಡಿರುವಂತಿರುವ ವಿಷಯಗಳುಳ್ಳ

ವಾಕ್ಯದಿಂದ ನೀನು ನನ್ನ ಬುದ್ಧಿಯನ್ನು ಮೋಹಗೊಳಿಸುವಂತೆ ಇದೆ. ಆದ್ದರಿಂದ ನನಗೆ ಯಾವದೊಂದರಿಂದ ಒಳ್ಳೆಯದಾದೀತೋ ಅದನ್ನು ಗೊತ್ತಾಗಿ ಹೇಳಿಬಿಡು.

(1–2)

ಟಿ॥ ಸಾಂಖ್ಯಬುದ್ಧಿಯನ್ನೇ ಶ್ರೀಕೃಷ್ಣನು ಹೊಗಳಿದಂತೆ ಅರ್ಜುನನಿಗೆ ತೋರಿದೆ; ಏಕೆಂದರೆ ಕರ್ಮಯೋಗದಿಂದ ಇಂಥ ಕಲ್ಯಾಣಫಲವಾಗುವದೆಂದು ಭಗವಂತನು ಬಾಯಿಬಿಟ್ಟು ಹೇಳಿರುವದಿಲ್ಲ. ಕರ್ಮಯೋಗವು ಜ್ಞಾನಯೋಗಕ್ಕೆ ಸಾಧನವೆಂದೇ ಭಗವಂತನು ಹೇಳಿದ್ದಾನಾದರೂ ಅದು ಅಷ್ಟು ಚೆನ್ನಾಗಿ ಅರ್ಜುನನ ಮನಸ್ಸಿಗೆ ಹಿಡಿದಿಲ್ಲ.

ಶ್ರೀಭಗವಾನುವಾಚ –

ಲೋಕೇಽಸ್ಮಿನ್ದ್ವಿವಿಧಾ ನಿಷ್ಠಾ । ಪುರಾ ಪ್ರೋಕ್ತಾ ಮಯಾನಘ ।
ಜ್ಞಾನಯೋಗೇನ ಸಾಙ್ಖ್ಯಾನಾಂ ।ಕರ್ಮಯೋಗೇನ ಯೋಗಿನಾಮ್॥ 3 ॥
ನ ಕರ್ಮಣಾಮನಾರಮ್ಭಾ–ನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।
ನ ಚ ಸಂನ್ಯಸನಾದೇವ । ಸಿದ್ಧಿಂ ಸಮಧಿಗಚ್ಛತಿ ॥ 4 ॥

ಶ್ರೀಭಗವಂತನು ಹೇಳಿದ್ದು:

ಎಲೈ ಪಾಪರಹಿತನೆ, ಜ್ಞಾನಯೋಗದಿಂದ ಸಾಂಖ್ಯರಿಗೆ, ಕರ್ಮಯೋಗದಿಂದ ಯೋಗಿಗಳಿಗೆ – ಹೀಗೆ ಈ ಲೋಕದಲ್ಲಿ ಎರಡು ನಿಷ್ಠೆಗಳನ್ನು ನಾನು ಪೂರ್ವದಲ್ಲಿ ಹೇಳಿದೆನು. ಕರ್ಮಗಳನ್ನು ಮಾಡುವದಕ್ಕೆ ತೊಡಗದೆ ಇರುವದರಿಂದ ಮನುಷ್ಯನಿಗೆ ನೈಷ್ಕರ್ಮ್ಯವು ದೊರಕುವದಿಲ್ಲ, ಬರಿಯ ಸಂನ್ಯಾಸದಿಂದ ಸಿದ್ಧಿಯು ಆಗುವದೂ ಇಲ್ಲ. (3–4)

ಟಿ॥ ನೈಷ್ಕರ್ಮ್ಯವೆಂದರೆ ಜ್ಞಾನನಿಷ್ಠೆ (18–49 ನೋಡಿರಿ)

ನ ಹಿ ಕಶ್ಚಿತ್ಕ್ಷಣಮಪಿ । ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ । ಸರ್ವಃ ಪ್ರಕೃತಿಜೈರ್ಗುಣೈಃ ॥ 5 ॥

ಕರ್ಮೇನ್ದ್ರಿಯಾಣಿ ಸಂಯಮ್ಯ । ಯ ಆಸ್ತೇ ಮನಸಾ ಸ್ಮರನ್ ।
ಇನ್ದ್ರಿಯಾರ್ಥಾನ್ವಿಮೂಢಾತ್ಮಾ । ಮಿಥ್ಯಾಚಾರಃ ಸ ಉಚ್ಯತೇ ॥ 6 ॥

**ಯಸ್ತ್ವಿನ್ದ್ರಿಯಾಣಿ ಮನಸಾ । ನಿಯಮ್ಯಾರಭತೇಽರ್ಜುನ ।**
**ಕರ್ಮೇನ್ದ್ರಿಯೈಃ ಕರ್ಮಯೋಗ–ಮಸಕ್ತಃ ಸ ವಿಶಿಷ್ಯತೇ ॥ 7 ॥**

ಯಾವನೊಬ್ಬನೂ ಒಂದು ಕ್ಷಣವೂ ಕರ್ಮವನ್ನು ಮಾಡದೆ ಎಂದೂ ಇರುವದಿಲ್ಲ ; ತಾನು ಒಲ್ಲೆನೆಂದರೂ ಪ್ರಕೃತಿಯಿಂದಾಗಿರುವ ಗುಣಗಳು ಪ್ರತಿಯೊಬ್ಬನಿಂದಲೂ ಕರ್ಮವನ್ನು ಮಾಡಿಸಿಯೇತೀರುತ್ತದೆ. ಕರ್ಮೇಂದ್ರಿಯ ಗಳನ್ನು ಬಿಗಿಹಿಡಿದು ಯಾವನು ಮನಸ್ಸಿನಲ್ಲಿ ಇಂದ್ರಿಯಾರ್ಥಗಳನ್ನು ಚಿಂತಿಸುತ್ತಿರುವನೋ ಆ ಮೂಢನು ಮಿಥ್ಯಾಚಾರಿಯೆನಿಸುವನು. ಆದರೆ ಎಲೈ ಅರ್ಜುನನೆ, ಯಾವಾತನು ಮನಸ್ಸಿನಿಂದ ಇಂದ್ರಿಯಗಳನ್ನು ತಡೆದುಕೊಂಡು ಕರ್ಮೇಂದ್ರಿಯಗಳಿಂದ ಕರ್ಮಯೋಗವನ್ನು ಸಂಗವಿಲ್ಲದೆ ಮಾಡುತ್ತಿರುವನೋ ಅವನೇ ಹೆಚ್ಚಿನವನು. (5–7)

ಟಿ॥ ಕರ್ಮವನ್ನು ಮಾಡಿಯೇತೀರಬೇಕಾದ್ದರಿಂದ ಇಂದ್ರಿಯಗಳನ್ನು ಹಿಡಿತದಲ್ಲಿ ಇಟ್ಟುಕೊಂಡು ಕರ್ಮವನ್ನು ಮಾಡುವದೇ ಸುಮ್ಮನೆ ಕೂರುವದಕ್ಕಿಂತ ಮೇಲು.

ನಿಯತಂ ಕುರು ಕರ್ಮ ತ್ವಂ। ಕರ್ಮ ಜ್ಯಾಯೋ ಹ್ಯಕರ್ಮಣಃ।
ಶರೀರಯಾತ್ರಾಪಿ ಚ ತೇ। ನ ಪ್ರಸಿದ್ಧ್ಯೇದಕರ್ಮಣಃ ॥ 8 ॥

ನೀನು ತಪ್ಪದೆ ಕರ್ಮವನ್ನು ಮಾಡು, ಏಕೆಂದರೆ ಕರ್ಮವನ್ನು ಮಾಡುವದು ಬಿಡುವದಕ್ಕಿಂತ ಮೇಲು. ಕರ್ಮಗಳನ್ನು ಮಾಡದಿದ್ದರೆ ನಿನಗೆ ದೇಹರಕ್ಷಣೆಯು ಕೂಡ ಸಾಗಲಾರದು. (8)

ಯಜ್ಞಾರ್ಥಾತ್ಕರ್ಮಣೋಽನ್ಯತ್ರ। ಲೋಕೋಽಯಂ ಕರ್ಮಬನ್ಧನಃ।
ತದರ್ಥಂ ಕರ್ಮ ಕೌನ್ತೇಯ । ಮುಕ್ತಸಙ್ಗಃ ಸಮಾಚರ ॥ 9 ॥

ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ। ಪುರೋವಾಚ ಪ್ರಜಾಪತಿಃ।
ಅನೇನ ಪ್ರಸವಿಷ್ಯಧ್ವ–ಮೇಷ ವೋಽಸ್ತ್ವಿಷ್ಟಕಾಮಧುಕ್ ॥ 10 ॥
ದೇವಾನ್ ಭಾವಯತಾನೇನ। ತೇ ದೇವಾ ಭಾವಯನ್ತು ವಃ।
ಪರಸ್ಪರಂ ಭಾವಯನ್ತಃ। ಶ್ರೇಯಃ ಪರಮವಾಪ್ಸ್ಯಥ ॥ 11 ॥

ಇಷ್ಟಾನ್ ಭೋಗಾನ್ ಹಿ ವೋ ದೇವಾ–ದಾಸ್ಯನ್ತೇ ಯಜ್ಞಭಾವಿತಾಃ।
ತೈರ್ದತ್ತಾನಪ್ರದಾಯೈಭ್ಯೋ। ಯೋ ಭುಙ್ಕ್ತೇ ಸ್ತೇನ ಏವ ಸಃ ॥ 12 ॥

ಯಜ್ಞಶಿಷ್ಟಾಶಿನಃ ಸಂತೋ। ಮುಚ್ಯನ್ತೇ ಸರ್ವಕಿಲ್ಬಿಷ್ಯೈಃ।
ಭುಞ್ಜತೇ ತೇ ತ್ವಘಂ ಪಾಪಾ–ಯೇ ಪಚನ್ತ್ಯಾತ್ಮಕಾರಣಾತ್ ॥ 13 ॥

ಯಜ್ಞಕ್ಕಾಗಿ ಮಾಡುವ ಕರ್ಮವನ್ನು ಬಿಟ್ಟು ಉಳಿದ ಕರ್ಮಗಳಿಂದ ಜನರು ಕಟ್ಟುವಡೆಯುತ್ತಾರೆ. ಆದ್ದರಿಂದ ಕೌಂತೇಯನೆ, ನೀನು ಸಂಗವಿಲ್ಲದೆ ಅದಕ್ಕಾಗಿ ಕರ್ಮವನ್ನು ಮಾಡು. ಪೂರ್ವದಲ್ಲಿ ಬ್ರಹ್ಮನು ಯಜ್ಞಸಹಿತರಾಗಿ ಪ್ರಜೆಗಳನ್ನು ಸೃಷ್ಟಿಸಿ ಹೇಳಿದ್ದೇನೆಂದರೆ : ಇದರಿಂದ ನೀವು ಅಭಿವೃದ್ಧಿಯನ್ನು ಹೊಂದಿರಿ, ಇದು ನಿಮಗೆ ಬೇಡಿದ ಕಾಮಗಳನ್ನು ಕೊಡುವದಾಗಲಿ ! ಇದರಿಂದ ನೀವು ದೇವತೆಗಳನ್ನು ಪೋಷಿಸಿರಿ ; ಆ ದೇವತೆಗಳು ನಿಮ್ಮನ್ನು ಪೋಷಿಸಲಿ. ಹೀಗೆ ಒಬ್ಬರನ್ನೊಬ್ಬರು ಪೋಷಿಸುತ್ತಾ ಇದ್ದರೆ ಹೆಚ್ಚಿನ ಶ್ರೇಯಸ್ಸನ್ನು ಪಡೆಯುವಿರಿ. ಯಜ್ಞದಿಂದ ಪೋಷಿತರಾದ ದೇವತೆಗಳು ನಿಮಗೆ ಬೇಕಾದ ಭೋಗಗಳನ್ನು

ಕೊಡುವರಷ್ಟೆ ? ಅವರು ಕೊಟ್ಟಿರುವ ವಸ್ತುಗಳನ್ನು ಅವರಿಗೆ ಕೊಡದೆ ಯಾವನು ಭೋಗಿಸುವನೋ ಅವನು ಕಳ್ಳನೇ ಸರಿ. ಯಜ್ಞವನ್ನು ಮಾಡಿ ಉಳಿದದ್ದನ್ನು ತಿನ್ನುವ ಸತ್ಪುರುಷರು ಎಲ್ಲಾ – ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾರೆ ; ಆದರೆ ಯಾರು ತಮತಮಗಾಗಿಯೇ ಅಡಿಗೆಮಾಡಿಕೊಳ್ಳುವರೋ ಅವರು ಪಾಪವನ್ನೇ ಭೋಗಿಸುವರು. (9–13)

ಟಿ॥ ಯಜ್ಞವೆಂದರೆ ದೇವತೆಗಳಿಗೋಸ್ಕರವೆಂದು ತನ್ನ ಸ್ವತ್ತನ್ನು ಅರ್ಪಣೆ ಮಾಡುವದು. ದೇವತೆಗಳಲ್ಲೆಲ್ಲ ವಿಷ್ಣುವು ಪರಮದೇವತೆ. ಪರಮಾತ್ಮಪ್ರೀತಿಗೆಂದು ಮಾಡಿದ ಕರ್ಮವು ಬಂಧಕವಾಗುವದಿಲ್ಲ; ಏಕೆಂದರೆ ಅದರಲ್ಲಿ ಅಭಿಮಾನವಿರುವದಿಲ್ಲ. ಶಾಸ್ತ್ರೀಯರೀತಿಯಿಂದ ಯಜ್ಞವನ್ನು ಮಾಡುವದು ಮೇಲಿನ ಮೂರು ವರ್ಣದವರಿಗೆ ಮಾತ್ರವೇ ಹೇಳಿದೆಯಾದರೂ ತಮ್ಮತಮ್ಮ ಕರ್ಮವನ್ನು ಭಗವತ್ಪ್ರೀತಿಗೆಂದು ಮಾಡುವದು ಎಲ್ಲರಿಗೂ ಬಂಧವಿಮೋಚನೆಗೆ ಉಪಾಯವು (9–28, 18–46 ಇವನ್ನು ನೋಡಿರಿ).

ಯಜ್ಞದಲ್ಲಿ ಪಶುವಧೆಯಾಗುವದರಿಂದ ಅದು ಪಾಪಕರವಾದ ಹಿಂಸೆಯೆಂದು ಆಕ್ಷೇಪಣೆಯನ್ನು ತೆಗೆದು ಕೆಲವರು ಇಲ್ಲಿ ಸಮಾಧಾನವನ್ನು ಹೇಳುವರು.

ಅದು ಅವಶ್ಯವಿಲ್ಲ, ಏಕೆಂದರೆ ಹಿಂಸೆಯು ಪಾಪವಾಗುವದಕ್ಕೆ ಮನಸ್ಸಿನ ಕೆಟ್ಟ ಉದ್ದೇಶವೇ ಕಾರಣವಾಗಿರುತ್ತದೆ. ವಿಧಿಬದ್ಧವಾಗಿ ಮಾಡುವದೂ ಅಂಥ ಹಿಂಸೆಯೆನ್ನು–ವವರ ಪಕ್ಷದಲ್ಲಿ ಹಿಂಸೆಯಿಲ್ಲದ ಕೆಲಸವೇ ಲೋಕದಲ್ಲಿರುವದಿಲ್ಲವೆಂದು ಆಗುವದಾದ್ದ–ರಿಂದ ಪಾಪದಿಂದ ತಪ್ಪಿಸಿಕೊಳ್ಳುವದಕ್ಕೆ ಉಪಾಯವೇ ಇಲ್ಲದಂತಾಗುವದು.

ಅನ್ನಾದ್ಭವನ್ತಿ ಭೂತಾನಿ। ಪರ್ಜನ್ಯಾದನ್ನಸಮ್ಭವಃ।
ಯಜ್ಞಾದ್ಭವತಿ ಪರ್ಜನ್ಯೋ। ಯಜ್ಞಃ ಕರ್ಮಸಮುದ್ಭವಃ ॥ 14 ॥

ಕರ್ಮ ಬ್ರಹ್ಮೋದ್ಭವಂ ವಿದ್ಧಿ। ಬ್ರಹ್ಮಾಕ್ಷರಸಮುದ್ಭವಮ್।
ತಸ್ಮಾತ್ಸರ್ವಗತಂ ಬ್ರಹ್ಮ। ನಿತ್ಯಂ ಯಜ್ಞೇ ಪ್ರತಿಷ್ಠಿತಮ್ ॥ 15 ॥

ಏವಂ ಪ್ರವರ್ತಿತಂ ಚಕ್ರಂ। ನಾನುವರ್ತಯತೀಹ ಯಃ।
ಅಘಾಯುರಿನ್ದ್ರಿಯಾರಾಮೋ। ಮೋಘಂ ಪಾರ್ಥ ಸ ಜೀವತಿ ॥ 16 ॥

ಪ್ರಾಣಿಗಳು ಅನ್ನದಿಂದ ಹುಟ್ಟುತ್ತವೆ ; ಅನ್ನವು ಮಳೆಯಿಂದ ಉಂಟಾಗುವದು ; ಯಜ್ಞದಿಂದ ಮಳೆಯಾಗುವದು ; ಯಜ್ಞವು ಕರ್ಮದಿಂದುಂಟಾಗು–

ವದು ; ಕರ್ಮವು ವೇದದಿಂದಾದದ್ದೆಂದು ತಿಳಿ ; ವೇದವು ನಾಶರಹಿತವಾದ ಬ್ರಹ್ಮದಿಂದ ಆದದ್ದು. ಹೀಗಿರುವದರಿಂದ ಎಲ್ಲವನ್ನೂ ಬೆಳಗುತ್ತಿರುವ ವೇದವು ಯಾವಾಗಲೂ ಯಜ್ಞದಲ್ಲಿಯೇ ನಿಂತಿರುವದು. ಹೀಗೆ ಸುತ್ತುಬಿಟ್ಟಿರುವ ಚಕ್ರವನ್ನು ಯಾವನು ಅನುಸರಿಸದೆ ಇರುವನೋ ಅವನ ಜೀವನವು ಪಾಪಮಯವಾಗಿರುವದು ; ಇಂದ್ರಿಯಗಳ ಆಟದಲ್ಲಿಯೇ ಕಾಲವನ್ನು ಕಳೆಯುತ್ತಿರುವ ಆತನ ಬಾಳು ವ್ಯರ್ಥವು. (14–16)

ಟಿ ॥ ವೇದೋಕ್ತವಾದ ಕರ್ಮವನ್ನು ಮಾಡುವದರಿಂದ ಒಂದು ಅದೃಷ್ಟ ವಿಶೇಷವು ಹುಟ್ಟಿ ಮಳೆಯಾಗಿ ಸುಭಿಕ್ಷವಾಗಿ ಸತ್ಸಂತತಿಯು ಬೆಳೆಯುವದು. ಕರ್ಮವನ್ನು ಯಜ್ಞರೂಪವಾಗಿ, ಎಂದರೆ ಪರಮೇಶ್ವರಪ್ರೀತ್ಯರ್ಥವಾಗಿ, ಮಾಡಿದರೆಮಾತ್ರ ಈ ಅದೃಷ್ಟವು ಹುಟ್ಟುವದೆಂಬುದನ್ನು ತಿಳಿಸುವದಕ್ಕಾಗಿ ಅದೃಷ್ಟವನ್ನು ಯಜ್ಞವೆಂದೇ ಇಲ್ಲಿ ಕರೆದಿರುತ್ತದೆ. ಮನುಷ್ಯನು ಹುಟ್ಟಿದ್ದಕ್ಕೆ ಸತ್ಸಂತತಿಯು ಬೆಳೆಯುವಂತೆ ಮಾಡಿದರೇ ಸಾರ್ಥಕತೆಯುಂಟಾಗುವದು.

ಯಸ್ತ್ವಾತ್ಮರತಿರೇವ ಸ್ಯಾ–ದಾತ್ಮತೃಪ್ತಶ್ಚ ಮಾನವಃ ।
ಆತ್ಮನ್ಯೇವ ಚ ಸನ್ತುಷ್ಟ–ಸ್ತಸ್ಯ ಕಾರ್ಯಂ ನ ವಿದ್ಯತೇ ॥ 17 ॥

ನೈವ ತಸ್ಯ ಕೃತೇನಾರ್ಥೋ। ನಾಕೃತೇನೇಹ ಕಶ್ಚ ನ।
ನ ಚಾಸ್ಯ ಸರ್ವಭೂತೇಷು। ಕಶ್ಚಿದರ್ಥವ್ಯಪಾಶ್ರಯಃ ॥ 18 ॥

ಆದರೆ ಯಾವ ಮಾನವನು ಆತ್ಮರತನಾಗಿ ಆತ್ಮನಿಂದಲೇ ತೃಪ್ತನಾಗಿ ಇರುವನೋ ಆತ್ಮನಲ್ಲಿಯೇ ಸಂತೋಷವನ್ನೂ ಹೊಂದಿರುವನೋ ಅಂಥವನಿಗೆ ಮಾಡಬೇಕಾದ ಕರ್ಮವು ಯಾವದೂ ಇರುವದಿಲ್ಲ. ಆತನಿಗೆ ಮಾಡಿದ್ದರಿಂದ ಆಗಬೇಕಾದದ್ದೇನೂ ಇರುವದಿಲ್ಲ, ಬಿಟ್ಟದ್ದರಿಂದಲೂ ಏನೂ ಆಗಬೇಕಾದದ್ದಿರುವದಿಲ್ಲ. ಆತನು ಯಾವ ಪ್ರಾಣಿಯನ್ನೂ ಯಾವ ಪ್ರಯೋಜನಕ್ಕೂ ಆಶ್ರಯಿಸಬೇಕಾದದ್ದೂ ಇರುವದಿಲ್ಲ. (17–18)

ಟಿ॥ ಕರ್ತವ್ಯವೆಂಬುದು ಇದನ್ನು ಮಾಡಿ ಇದನ್ನು ಪಡೆಯಬೇಕೆಂಬ ಬುದ್ಧಿಯುಳ್ಳವನಿಗೇ ಹೊರತು ನಾನು ಕರ್ತನಲ್ಲ, ಭೋಕ್ತನಲ್ಲ– ಎಂಬ ಜ್ಞಾನಿಗಲ್ಲ.

ತಸ್ಮಾದಸಕ್ತಃ ಸತತಂ। ಕಾರ್ಯಂ ಕರ್ಮ ಸಮಾಚರ।
ಅಸಕ್ತೋ ಹ್ಯಾಚರನ್ಕರ್ಮ। ಪರಮಾಪ್ನೋತಿ ಪೂರುಷಃ ॥ 19 ॥

ಆದ್ದರಿಂದ ಮಾಡತಕ್ಕ ಕರ್ಮವನ್ನು ಯಾವಾಗಲೂ ಆಸಕ್ತಿಯಿಲ್ಲದೆ ಮಾಡುತ್ತಿರು ; ಏಕೆಂದರೆ ಆಸಕ್ತಿಯಿಲ್ಲದೆ ಕರ್ಮವನ್ನು ಮಾಡುವ ಪುರುಷನು ಹೆಚ್ಚಿನ ಮುಕ್ತಿಯನ್ನೈದುವನು. (19)

ಟಿ॥ ''ಆದ್ದರಿಂದ'' ಎಂದರೆ ಆತ್ಮಜ್ಞಾನವಾಗುವವರೆಗೂ ಕರ್ಮವನ್ನು ಮಾಡುವದೇ ಶ್ರೇಯಸ್ಕರವಾಗುವ ಕಾರಣದಿಂದ.

ಕರ್ಮಣೈವ ಹಿ ಸಂಸಿದ್ಧಿ–ಮಾಸ್ಥಿತಾ ಜನಕಾದಯಃ।
ಲೋಕಸಙ್ಗ್ರಹಮೇವಾಪಿ । ಸಂಪಶ್ಯನ್ಕರ್ತುಮರ್ಹಸಿ ॥ 20 ॥
ಯದ್ಯದಾಚರತಿ ಶ್ರೇಷ್ಠ–ಸ್ತತ್ತದೇವೇತರೋ ಜನಃ।
ಸ ಯತ್ಪ್ರಮಾಣಂ ಕುರುತೇ । ಲೋಕಸ್ತದನುವರ್ತತೇ ॥ 21 ॥
ನ ಮೇ ಪಾರ್ಥಾಸ್ತಿ ಕರ್ತವ್ಯಂ। ತ್ರಿಷು ಲೋಕೇಷು ಕಿಂಚನ।
ನಾನವಾಪ್ತಮವಾಪ್ತವ್ಯಂ। ವರ್ತ ಏವ ಚ ಕರ್ಮಣಿ ॥ 22 ॥
ಯದಿ ಹ್ಯಹಂ ನ ವರ್ತೇಯಂ। ಜಾತು ಕರ್ಮಣ್ಯತನ್ದ್ರಿತಃ।
ಮಮ ವರ್ತ್ಮಾನುವರ್ತನ್ತೇ। ಮನುಷ್ಯಾಃ ಪಾರ್ಥ ಸರ್ವಶಃ ॥ 23 ॥

**ಉತ್ಸೀದೇಯುರಿಮೇ ಲೋಕಾ– ನ ಕುರ್ಯಾಂ ಕರ್ಮ ಚೇದಹಮ್ ।**
**ಸಙ್ಕರಸ್ಯ ಚ ಕರ್ತಾ ಸ್ಯಾ–ಮುಪಹನ್ಯಾಮಿಮಾಃ ಪ್ರಜಾಃ ॥ 24 ॥**

ಕರ್ಮದಿಂದಲೇ ಜನಕಾದಿಗಳು ಸಿದ್ಧಿಯನ್ನು ಪಡೆದರಲ್ಲವೆ ? ಲೋಕ ಸಂಗ್ರಹವಾಗುವದೆಂಬುದನ್ನು ಕಂಡಾದರೂ ನೀನು ಕರ್ಮವನ್ನು ಮಾಡುವದು ಒಳ್ಳೆಯದು. ಶ್ರೇಷ್ಠನಾದವನು ಏನೇನು ಮಾಡುವನೋ ಉಳಿದ ಜನವು ಅದನ್ನೇ ಮಾಡುವದು ; ಆತನು ಯಾವದನ್ನು ಪ್ರಮಾಣವೆನ್ನುವನೋ ಮಿಕ್ಕ ಜನವೂ ಅದನ್ನೇ ಅನುಸರಿಸುವದು. ಪಾರ್ಥನೆ, ನನಗೆ ಮೂರುಲೋಕಗಳಲ್ಲಿಯೂ ಕರ್ತವ್ಯವೆಂಬುದು ಯಾವದೂ ಇರುವದಿಲ್ಲ ; ನಾನು ಇದುವರೆಗೆ ಪಡೆಯದೆ ಮುಂದೆ ಪಡೆಯತಕ್ಕದ್ದು ಯಾವದೂ ಇರುವದಿಲ್ಲ; ಆದರೂ ನಾನು ಕರ್ಮದಲ್ಲಿ ತೊಡಗಿಯೇ ಇರುವೆನು. ಏಕೆಂದರೆ, ಎಲೈ ಪಾರ್ಥನೆ, ನಾನು ನಿರಾಲಸ್ಯನಾಗಿ ಕರ್ಮದಲ್ಲಿ ತೊಡಗುವದನ್ನು ಯಾವಾಗಲಾದರೂ ಬಿಟ್ಟುಬಿಟ್ಟರೆ, ಎಲ್ಲಾ ಜನರೂ ನನ್ನ ದಾರಿಯನ್ನೇ ಹಿಂಬಾಲಿಸುವರು. ನಾನು ಕರ್ಮವನ್ನು ಮಾಡದಿದ್ದರೆ ಈ

ಲೋಕಗಳು ಹಾಳಾದಾವು, ವರ್ಣಸಂಕರಕ್ಕೂ ಕಾರಣನಾದೇನು, ಈ ಜನರನ್ನೆಲ್ಲ ನಾನೇ ಹಾಳುಮಾಡಿದವನಾದೇನು ! (20–24)

ಟಿ॥ ಜನಕನೇ ಮೊದಲಾದವರು ತತ್ತ್ವಜ್ಞಾನದಿಂದ ಮುಕ್ತರಾದಮೇಲೂ ತಮಗಾಗಿ ಮಾಡಿಕೊಳ್ಳಬೇಕಾದ ಕರ್ಮಗಳೇನೂ ಇಲ್ಲದಿದ್ದರೂ ಕರ್ಮವನ್ನು ಮಾಡುತ್ತಲೇ ಇದ್ದು ಕೊನೆಗೆ ವಿದೇಹಕೈವಲ್ಯವನ್ನು ಹೊಂದಿದರು. ನಿತ್ಯಜ್ಞಾನಿಯೂ ನಿತ್ಯ ಮುಕ್ತನೂ ಆದ ಪರಮೇಶ್ವರನಿಗೆ ಯಾವದೊಂದರ ಕೊರತೆಯೂ ಇಲ್ಲದಿದ್ದರೂ ಒಂದೇ ನಿಯಮದಿಂದ ಕರ್ಮವನ್ನು ಮಾಡುತ್ತ ಜನರನ್ನು ಕರ್ಮದಲ್ಲಿ ತೊಡಗಿಸುತ್ತಿರುವನು. ಇದೇ ಜ್ಞಾನಿಯು ಅನುಸರಿಸಬೇಕಾದ ಲೋಕಸಂಗ್ರಹಮಾರ್ಗವು.

ಸಕ್ತಾಃ ಕರ್ಮಣ್ಯವಿದ್ವಾಂಸೋ । ಯಥಾ ಕುರ್ವನ್ತಿ ಭಾರತ ।
ಕುರ್ಯಾದ್ವಿದ್ವಾಂಸ್ತಥಾಸಕ್ತ–ಶ್ಚಿಕೀರ್ಷುರ್ಲೋಕಸಙ್ಗ್ರಹಮ್ ॥ 25 ॥
ನ ಬುದ್ಧಿಭೇದಂ ಜನಯೇ–ದಜ್ಞಾನಾಂ ಕರ್ಮಸಙ್ಗಿನಾಮ್ ।
ಜೋಷಯೇತ್ಸರ್ವಕರ್ಮಾಣಿ । ವಿದ್ವಾನ್ಯುಕ್ತಃ ಸಮಾಚರನ್ ॥26 ॥

ಪ್ರಕೃತೇಃ ಕ್ರಿಯಮಾಣಾನಿ। ಗುಣೈಃ ಕರ್ಮಾಣಿ ಸರ್ವಶಃ।
ಅಹಙ್ಕಾರವಿಮೂಢಾತ್ಮಾ। ಕರ್ತಾಹಮಿತಿ ಮನ್ಯತೇ ॥ 27 ॥

ತತ್ತ್ವವಿತ್ತು ಮಹಾಬಾಹೋ। ಗುಣಕರ್ಮವಿಭಾಗಯೋಃ।
ಗುಣಾ ಗುಣೇಷು ವರ್ತನ್ತ। ಇತಿ ಮತ್ವಾ ನ ಸಜ್ಜತೇ ॥ 28 ॥

ಪ್ರಕೃತೇರ್ಗುಣಸಮ್ಮೂಢಾಃ। ಸಜ್ಜನ್ತೇ ಗುಣಕರ್ಮಸು।
ತಾನಕೃತ್ಸ್ನವಿದೋ ಮಂದಾನ್। ಕೃತ್ಸ್ನವಿನ್ನ ವಿಚಾಲಯೇತ್ ॥ 29 ॥

ಎಲೈ ಭರತವಂಶೋತ್ಪನ್ನನೆ, ಅಜ್ಞರು ಆಸಕ್ತಿಯಿಂದ ಕರ್ಮವನ್ನು ಮಾಡುವಂತೆಯೇ ಜ್ಞಾನಿಯಾದವನು ಲೋಕಸಂಗ್ರಹವನ್ನು ಮಾಡುವದಕ್ಕಾಗಿ ಆಸಕ್ತಿಯಿಲ್ಲದೆ ಕರ್ಮವನ್ನು ಮಾಡುತ್ತಿರಬೇಕು. ಕರ್ಮದಲ್ಲಿ ಸಂಗವುಳ್ಳ ಮೂಢರ ಬುದ್ಧಿಯನ್ನು ಕದಲಿಸಬಾರದು ; ಕುಶಲನಾದ ಜ್ಞಾನಿಯು ತಾನೂ ಕರ್ಮಗಳನ್ನು ಮಾಡುತ್ತ ಅವರನ್ನು ಎಲ್ಲಾ ಕರ್ಮಗಳಲ್ಲಿಯೂ ತೊಡಗಿಸಬೇಕು. ಪ್ರಕೃತಿಯ ಗುಣಗಳಿಂದ ಬಗೆಬಗೆಯ ಕರ್ಮಗಳು ಆಗುತ್ತಿರುವವು ; ಅಹಂಕಾರದಿಂದ

ಮೂಢವಾದ ಮನಸ್ಸುಳ್ಳವನು ತಾನೇ ಅವುಗಳನ್ನು ಮಾಡುವವನೆಂದು ತಿಳಿದು ಕೊಳ್ಳುತ್ತಾನೆ. ಆದರೆ, ಎಲೈ ಮಹಾಬಾಹುವೆ, ಗುಣಕರ್ಮಗಳ ವಿಂಗಡಗಳ ತತ್ತ್ವವನ್ನು ಬಲ್ಲವನು ಗುಣಗಳು ಗುಣಗಳಲ್ಲಿ ತೊಡಗುತ್ತಿರುವವೆಂಬುದನ್ನರಿತು ಆಸಕ್ತನಾಗದೆ ಇರುತ್ತಾನೆ. ಪ್ರಕೃತಿಯ ಗುಣಗಳಿಂದ ಮೋಹಿತರಾದವರು ಗುಣ ಗಳ ಕರ್ಮಗಳಲ್ಲಿ ಸಂಗವನ್ನಿಟ್ಟುಕೊಳ್ಳುತ್ತಾರೆ ; ಎಲ್ಲವನ್ನೂ ಬಲ್ಲ ಜ್ಞಾನಿಯು ಅಲ್ಪಮತಿಗಳಾದ ಆ ಜನರನ್ನು ಚಂಚಲರನ್ನಾಗಿ ಮಾಡಬಾರದು. (25–29)

ಟಿ॥ ಜ್ಞಾನಿಯ ಕರ್ಮಕ್ಕೂ ಅಜ್ಞಾನಿಯ ಕರ್ಮಕ್ಕೂ ಭೇದವನ್ನು ತಿಳಿಸುವ ಹೊರಗುರುತೇನೂ ಇರುವದಿಲ್ಲ. ಅಜ್ಞನು ಅಭಿಮಾನದಿಂದ ಫಲಾಸಕ್ತನಾಗಿರುತ್ತಾನೆ. ಜ್ಞಾನಿಯು ತತ್ತ್ವವನ್ನರಿತು ನಿರಭಿಮಾನದಿಂದ ಕೆಲಸವನ್ನು ಮಾಡುತ್ತಾನೆ. ಜ್ಞಾನಿಯು ಮಾಡುವ ಕರ್ಮದಿಂದ ಲೋಕಕಲ್ಯಾಣವಾಗುವದು, ಮಿಕ್ಕ ಜನರೂ ತಮ್ಮತಮ್ಮ ಕರ್ತವ್ಯದಲ್ಲಿ ತೊಡಗುವಂತೆ ಆಗುವದು.

ಮಯಿ ಸರ್ವಾಣಿ ಕರ್ಮಾಣಿ। ಸಂನ್ಯಸ್ಯಾಧ್ಯಾತ್ಮಚೇತಸಾ।
ನಿರಾಶೀರ್ನಿರ್ಮಮೋ ಭೂತ್ವಾ। ಯುಧ್ಯಸ್ವ ವಿಗತಜ್ವರಃ ॥ 30 ॥

ಯೇ ಮೇ ಮತಮಿದಂ ನಿತ್ಯ–ಮನುತಿಷ್ಠನ್ತಿ ಮಾನವಾಃ।
ಶ್ರದ್ಧಾವನ್ತೋಽನಸೂಯನ್ತೋ। ಮುಚ್ಯನ್ತೇ ತೇಽಪಿ ಕರ್ಮಭಿಃ ॥ 31 ॥

ಯೇ ತ್ವೇತದಭ್ಯಸೂಯನ್ತೋ। ನಾನುತಿಷ್ಠನ್ತಿ ಮೇ ಮತಮ್।
ಸರ್ವಜ್ಞಾನವಿಮೂಢಾಂಸ್ತಾನ್। ವಿದ್ಧಿ ನಷ್ಟಾನಚೇತಸಃ ॥ 32 ॥

ಕರ್ಮಗಳೆಲ್ಲವನ್ನೂ ಪರಮಾತ್ಮಬುದ್ಧಿಯಿಂದ ನನ್ನಲ್ಲಿ ಅರ್ಪಿಸಿ, ಯಾವದೊಂದು ಆಸೆಯಾಗಲಿ ಮಮಕಾರವಾಗಲಿ ಇಲ್ಲದೆ, ನಿಶ್ಚಿಂತನಾಗಿ ಯುದ್ಧವನ್ನುಮಾಡು. ಯಾವ ಜನರು ಅಸೂಯೆಯಿಲ್ಲದೆ ಶ್ರದ್ಧೆಯಿಂದ ಈ ನನ್ನ ಮತದಂತೆ ಯಾವಾಗಲೂ ನಡೆದುಕೊಳ್ಳುವರೋ ಅವರು ಕರ್ಮದಿಂದ ಬಿಡುಗಡೆಯಾಗುವರು ; ಆದರೆ ಯಾರು ಅಸೂಯೆಯಿಂದ ಈ ನನ್ನ ಮತದಂತೆ ನಡೆಯದೆ ಇರುವರೋ ಅವರು ಯಾವ ಜ್ಞಾನವೂ ಇಲ್ಲದ ಮೂಢರು. ಆ ಅವಿವೇಕಿಗಳು ಹಾಳಾದರೆಂದೇ ತಿಳಿದುಕೊ. (30–32)

ಟಿ॥ ಪರಮಾತ್ಮನಲ್ಲಿ ಶ್ರದ್ಧೆಯಿಟ್ಟು ಮಾಡುವ ನಿಷ್ಕಾಮಕರ್ಮವೇ ಬಂಧಮೋಚನೆಗೆ ಕಾರಣವಾಗುವದು.

ಸದೃಶಂ ಚೇಷ್ಟತೇ ಸ್ವಸ್ಯಾಃ। ಪ್ರಕೃತೇರ್ಜ್ಞಾನವಾನಪಿ।
ಪ್ರಕೃತಿಂ ಯಾನ್ತಿ ಭೂತಾನಿ। ನಿಗ್ರಹಃ ಕಿಂ ಕರಿಷ್ಯತಿ ॥ 33 ॥

ಇನ್ದ್ರಿಯಸ್ಯೇನ್ದ್ರಿಯಸ್ಯಾರ್ಥೇ। ರಾಗದ್ವೇಷೌ ವ್ಯವಸ್ಥಿತೌ।
ತಯೋರ್ನ ವಶಮಾಗಚ್ಛೇತ್। ತೌ ಹ್ಯಸ್ಯ ಪರಿಪನ್ಥಿನೌ ॥ 34 ॥

ಶ್ರೇಯಾನ್ಸ್ವಧರ್ಮೋ ವಿಗುಣಃ। ಪರಧರ್ಮಾತ್ಸ್ವನುಷ್ಠಿತಾತ್।
ಸ್ವಧರ್ಮೇ ನಿಧನಂ ಶ್ರೇಯಃ। ಪರಧರ್ಮೋ ಭಯಾವಹಃ ॥ 35 ॥

ವಿವೇಕಿಯುಕೂಡ ತನ್ನ ಪ್ರಕೃತಿಗನುಗುಣವಾಗಿ ನಡೆಯುತ್ತಾನೆ, ಪ್ರಾಣಿಗಳೆಲ್ಲವೂ ತಮ್ಮ ತಮ್ಮ ಪ್ರಕೃತಿಗನುಸಾರವಾಗಿಯೇ ನಡೆಯುವವು. ಹೀಗೆ ಇರುವಲ್ಲಿ ಮತ್ತೊಬ್ಬರ ಒತ್ತಾಯವೇನು ಮಾಡೀತು? ಒಂದೊಂದು ಇಂದ್ರಿಯಕ್ಕೂ ತನ್ನತನ್ನ ವಿಷಯದಲ್ಲಿ ರಾಗದ್ವೇಷಗಳು ಗೊತ್ತಾಗಿರುವವು ; ಇವೆರಡಕ್ಕೂ ವಶನಾಗದೆ ಇರಬೇಕು. ಇವೇ ತನಗೆ ಶತ್ರುಗಳು, ಮತ್ತೊಬ್ಬರ ಧರ್ಮವನ್ನು ಚೆನ್ನಾಗಿ ಮಾಡುವದಕ್ಕಿಂತ ತನ್ನ ಧರ್ಮವನ್ನು ವಿಗುಣವಾಗಿ (ತಕ್ಕಮಟ್ಟಿಗೆ) ಮಾಡುವದು

ಮೇಲು ; ತನ್ನ ಧರ್ಮದಲ್ಲಿ ಸಾವೂ ಮೇಲು, ಮತ್ತೊಬ್ಬರ ಧರ್ಮವು ಭಯಕ್ಕೆ ಕಾರಣವಾಗಿರುವದು. (33–35)

ಟಿ॥ ಸ್ವಭಾವಾನುಗುಣವಾಗಿ ತಪ್ಪುದಾರಿಯಲ್ಲಿ ಹೋಗುವವರು ಮತ್ತೊಬ್ಬರ ತಡೆಯನ್ನು ಲೆಕ್ಕಿಸುವದಿಲ್ಲ, ಜ್ಞಾನಿಯಾದವನು ಇಂದ್ರಿಯನಿಗ್ರಹವನ್ನು ಮಾಡಿಕೊಂಡು ಸ್ವಧರ್ಮವನ್ನೇ ಮಾಡುವದಕ್ಕೆ ಯತ್ನಿಸಬೇಕು.

ಅರ್ಜುನ ಉವಾಚ –

ಅಥ ಕೇನ ಪ್ರಯುಕ್ತೋಽಯಂ। ಪಾಪಂ ಚರತಿ ಪೂರುಷಃ।
ಅನಿಚ್ಛನ್ನಪಿ ವಾರ್ಷ್ಣೇಯ। ಬಲಾದಿವ ನಿಯೋಜಿತಃ ॥ 36 ॥

ಅರ್ಜುನ ಕೇಳಿದ್ದು:

ಹಾಗಾದರೆ ವಾರ್ಷ್ಣೇಯನೆ, ಮನುಷ್ಯನು ತನಗೆ ಬೇಕಿಲ್ಲದಿದ್ದರೂ ಬಲಾತ್ಕಾರದಿಂದ ಮಾಡುವವನಂತೆ ಪಾಪವನ್ನು ಮಾಡುವನಲ್ಲ! ಇದು ಏತರ ಪ್ರೇರಣೆಯಿಂದ? (36)

ಶ್ರೀಭಗವಾನುವಾಚ –

ಕಾಮ ಏಷ ಕ್ರೋಧ ಏಷ – ರಜೋಗುಣಸಮುದ್ಭವಃ।
ಮಹಾಶನೋ ಮಹಾಪಾಪ್ಮಾ। ವಿದ್ಧ್ಯೇನಮಿಹ ವೈರಿಣಮ್ ॥ 37 ॥
ಧೂಮೇನಾವ್ರಿಯತೇ ವಹ್ನಿ–ರ್ಯಥಾದರ್ಶೋ ಮಲೇನ ಚ।
ಯಥೋಲ್ಬೇನಾವೃತೋ ಗರ್ಭ–ಸ್ತಥಾ ತೇನೇದಮಾವೃತಮ್ ॥ 38 ॥
ಆವೃತಂ ಜ್ಞಾನಮೇತೇನ। ಜ್ಞಾನಿನೋ ನಿತ್ಯವೈರಿಣಾ।
ಕಾಮರೂಪೇಣ ಕೌನ್ತೇಯ। ದುಷ್ಪೂರೇಣಾನಲೇನ ಚ ॥ 39 ॥
ಇನ್ದ್ರಿಯಾಣಿ ಮನೋಬುದ್ಧಿ–ರಸ್ಯಾಧಿಷ್ಠಾನಮುಚ್ಯತೇ।
ಏತೈರ್ವಿಮೋಹಯತ್ಯೇಷ–ಜ್ಞಾನಮಾವೃತ್ಯ ದೇಹಿನಮ್ ॥ 40 ॥
ತಸ್ಮಾತ್ ತ್ವಮಿನ್ದ್ರಿಯಾಣ್ಯಾದೌ। ನಿಯಮ್ಯ ಭರತರ್ಷಭ।
ಪಾಪ್ಮಾನಂ ಪ್ರಜಹಿ ಹ್ಯೇನಂ। ಜ್ಞಾನವಿಜ್ಞಾನನಾಶನಮ್ ॥ 41 ॥

**ಶ್ರೀಭಗವಂತನ ಉತ್ತರ :**

ಇದೇ ಕಾಮವು, ಇದೇ ಕ್ರೋಧವು ; ಇದು ರಜೋಗುಣದಿಂದ ಹುಟ್ಟಿದ್ದು, ಎಷ್ಟಾದರೂ ತಿನ್ನುವದು, ಮಹಾಪಾಪಿಯು, ಈ ಸಂದರ್ಭದಲ್ಲಿ ಇದೇ ವೈರಿಯೆಂದು ತಿಳಿ. ಬೆಂಕಿಯು ಹೊಗೆಯಿಂದ ಮುಚ್ಚಿಹೋಗಿರುವಂತೆಯೂ ಕನ್ನಡಿಯು ಮಲದಿಂದ ಮುಚ್ಚಿಹೋಗಿರುವಂತೆಯೂ ಗರ್ಭವು ಮೇಲುಪೊರೆ ಚೀಲದ ಮುಚ್ಚಿಹೋಗಿರುವಂತೆಯೂ ಇದು ಅದರಿಂದ ಮುಚ್ಚಿಹೋಗಿರುವದು. ಎಲೈ ಕೌಂತೇಯನೆ, ಜ್ಞಾನಿಗೆ ನಿತ್ಯವೈರಿಯಾದ ಕಾಮವೆಂಬ ಎಷ್ಟು ಹಾಕಿದರೂ ಸಾಕೆನ್ನದ, ಇದರಿಂದ ಜ್ಞಾನವು ಮುಚ್ಚಿಹೋಗಿರುವದು. ಇಂದ್ರಿಯಗಳು, ಮನಸ್ಸು, ಬುದ್ಧಿ–ಇವುಗಳು ಇದಕ್ಕೆ ಆಶ್ರಯವೆನಿಸಿರುವವು ; ಇವುಗಳಿಂದ ಇದು ಜ್ಞಾನವನ್ನು ಮುಸುಕಿಕೊಂಡು ದೇಹಿಯಾದವನನ್ನು ಮರುಳುಗೊಳಿಸುತ್ತಿರುವದು, ಆದ್ದರಿಂದ ಎಲೈ ಭರತಶ್ರೇಷ್ಠನೆ, ನೀನು ಮೊದಲು ಇಂದ್ರಿಯಗಳನ್ನು ಬಿಗಿಹಿಡಿದು ಜ್ಞಾನವನ್ನೂ ವಿಜ್ಞಾನವನ್ನೂ ನಾಶಗೊಳಿಸುವ ಈ ಪಾಪಿಯನ್ನು ಕೊಂದುಹಾಕು.

(37–41)

ಟಿ|| ಇಂದ್ರಿಯಗಳು ವಿಷಯದ ಚಿತ್ರವನ್ನು ಕೊಟ್ಟಮೇಲೆಯೇ ಮನೋಬುದ್ಧಿಗಳ ಕೆಲಸವಾಗುವದಾದ್ದರಿಂದ ಕಾಮವನ್ನು ಗೆಲ್ಲುವದಕ್ಕೆ ಇಂದ್ರಿಯ ನಿಗ್ರಹವೇ ಮೊದಲಾಗಬೇಕು.

ಇನ್ದ್ರಿಯಾಣಿ ಪರಣ್ಯಾಹು-ರಿನ್ದ್ರಿಯೇಭ್ಯಃ ಪರಂ ಮನಃ |
ಮನಸಸ್ತು ಪರಾ ಬುದ್ಧಿ-ರ್ಯೋ ಬುದ್ಧೇಃ ಪರತಸ್ತು ಸಃ || 42 ||

ಏವಂ ಬುದ್ಧೇಃ ಪರಂ ಬುದ್ಧ್ವಾ | ಸಂಸ್ತಭ್ಯಾತ್ಮಾನಮಾತ್ಮನಾ |
ಜಹಿ ಶತ್ರುಂ ಮಹಾಬಾಹೋ | ಕಾಮರೂಪಂ ದುರಾಸದಮ್ || 43 ||

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಕರ್ಮಯೋಗೋ ನಾಮ ತೃತೀಯೋಽಧ್ಯಾಯಃ

ಇಂದ್ರಿಯಗಳು ಹೆಚ್ಚಿನವೆನ್ನುವರು ; ಇಂದ್ರಿಯಗಳಿಗಿಂತ ಮನಸ್ಸು ಹೆಚ್ಚಿನದು ; ಮನಸ್ಸಿಗಿಂತ ಬುದ್ಧಿಯು ಹೆಚ್ಚಿನದು ; ಬುದ್ಧಿಗಿಂತ ಹೆಚ್ಚಿನವನು ಆ

ಆತ್ಮನೇ. ಎಲೈ ಮಹಾಬಾಹುವೆ, ಹೀಗೆ ಬುದ್ಧಿಗಿಂತಲೂ ಹೆಚ್ಚಿನವನಾದ ಆತ್ಮನನ್ನು ಅರಿತುಕೊಂಡು ಮನಸ್ಸಿನಿಂದ ಮನಸ್ಸನ್ನು ಬಿಗಿಹಿಡಿದುಕೊಂಡು ಕೈಗೆ ಸಿಕ್ಕಿದ ಕಾಮನೆಂಬ ಈ ಶತ್ರುವನ್ನು ಕೊಂದುಹಾಕು. (42–43)

ಟಿ॥ ಹೆಚ್ಚು ಸೂಕ್ಷ್ಮವಾಗಿಯೂ ಇನ್ನೂ ಒಳಗಡೆಯದಾಗಿಯೂ ಇನ್ನೂ ವ್ಯಾಪಕವಾಗಿಯೂ ಇರುವವದನ್ನು ಇಲ್ಲಿ ಹೆಚ್ಚಿನದೆಂದು ಕರೆದಿದೆ. ಹೆಚ್ಚಿನದರಲ್ಲಿ ಮನಸ್ಸು ಇಟ್ಟಂತೆಲ್ಲ ಕಡಿಮೆಯದು ವಶವಾಗುವದು.

ಕರ್ಮಯೋಗವೆಂಬ ಮೂರನೆಯ ಅಧ್ಯಾಯವು ಮುಗಿಯಿತು.

––––––

# ಅಥ ಚತುರ್ಥೋಽಧ್ಯಾಯಃ

ಶ್ರೀಭಗವಾನುವಾಚ –

ಇಮಂ ವಿವಸ್ವತೇ ಯೋಗಂ। ಪ್ರೋಕ್ತವಾನಹಮವ್ಯಯಮ್ ।
ವಿವಸ್ವಾನ್ಮನವೇ ಪ್ರಾಹ । ಮನುರಿಕ್ಷ್ವಾಕವೇಽಬ್ರವೀತ್ ॥ 1 ॥

ಏವಂ ಪರಂಪರಾಪ್ರಾಪ್ತ–ಮಿಮಂ ರಾಜರ್ಷಯೋ ವಿದುಃ ।
ಸ ಕಾಲೇನೇಹ ಮಹತಾ । ಯೋಗೋ ನಷ್ಟಃ ಪರನ್ತಪ ॥ 2 ॥

ಸ ಏವಾಯಂ ಮಯಾ ತೇಽದ್ಯ । ಯೋಗಃ ಪ್ರೋಕ್ತಃ ಪುರಾತನಃ ।
ಭಕ್ತೋಽಸಿ ಮೇ ಸಖಾ ಚೇತಿ । ರಹಸ್ಯಂ ಹ್ಯೇತದುತ್ತಮಮ್ ॥ 3 ॥

## ನಾಲ್ಕನೆಯ ಅಧ್ಯಾಯ

ಶ್ರೀಭಗವಂತನು ಹೇಳಿದ್ದು:

ನಾನು ಈ ಅವ್ಯಯವಾದ ಯೋಗವನ್ನು ಮೊದಲು ಸೂರ್ಯನಿಗೆ

ಹೇಳಿದೆನು. ಸೂರ್ಯನು ಮನುವಿಗೆ ಹೇಳಿದನು. ಮನುವು ಇಕ್ಷ್ವಾಕುವಿಗೆ ಹೇಳಿದನು. ಹೀಗೆ ಒಬ್ಬರಿಂದೊಬ್ಬರಿಗೆ ಬಂದ ಈ ಯೋಗವನ್ನು ರಾಜರ್ಷಿಗಳು ತಿಳಿದುಕೊಂಡಿದ್ದರು. ಶತ್ರುತಾಪನನಾದ ಅರ್ಜುನನೆ, ಆ ಯೋಗವು ಬಹಳ ಕಾಲವಾದಮೇಲೆ ನಷ್ಟವಾಯಿತು. ಆ ಪುರಾತನಯೋಗವನ್ನೇ, ನೀನು ನನಗೆ ಭಕ್ತನಾಗಿದ್ದೀಯೆ, ಗೆಳೆಯನೂ ಆಗಿದ್ದೀಯೆ – ಎಂಬ ಕಾರಣದಿಂದ ನಾನು ಇಂದು ನಿನಗೆ ಹೇಳಿರುತ್ತೇನೆ. ಏಕೆಂದರೆ ಇದೇ ಎಲ್ಲಕ್ಕೂ ಹೆಚ್ಚಿನ ರಹಸ್ಯವು. (1–3)

ಟಿ॥ ಈ ಪರಂಪರೆಯನ್ನು ಮೋಕ್ಷಧರ್ಮದ ನಾರಾಯಣೀಯದಲ್ಲಿ ಹೇಳಿದೆ. ಯೋಗಬಲದಿಂದ ಕೂಡಿದ ಕ್ಷತ್ರಿಯರು ಬ್ರಾಹ್ಮಣರನ್ನು ಕಾಪಾಡಬಲ್ಲರೆಂಬ ಕಾರಣದಿಂದ ಭಗವಂತನು ಇದನ್ನು ರಾಜರ್ಷಿಗಳಿಗೆ ಹೇಳಿದ್ದನು. ಈ ಯೋಗವು ಭಕ್ತರಿಗೆ ಮಾತ್ರ ಹೇಳತಕ್ಕ ರಹಸ್ಯವು. ಏಕೆಂದರೆ ಅವರಿಗೊಬ್ಬರಿಗೇ ಇದು ತಿಳಿಯುವದು, ಮತ್ತು ಅವರು ಮಾತ್ರವೇ ಇದನ್ನು ಲೋಕಕಲ್ಯಾಣವಾಗುವಂತೆ ಉಪಯೋಗಿಸಬಲ್ಲರು.

ಅರ್ಜುನ ಉವಾಚ –

ಅಪರಂ ಭವತೋ ಜನ್ಮ। ಪರಂ ಜನ್ಮ ವಿವಸ್ವತಃ।
ಕಥಮೇತದ್ವಿಜಾನೀಯಾಂ। ತ್ವಮಾದೌ ಪ್ರೋಕ್ತವಾನಿತಿ ॥ 4 ॥

ಅರ್ಜುನನು ಕೇಳಿದ್ದು :

ನಿನ್ನ ಜನ್ಮವು ಈಚೆಗೆ, ವಿವಸ್ವತ(ಸೂರ್ಯ)ನ ಜನ್ಮವು ಹಿಂದೆ. ಹೀಗಿರುವಲ್ಲಿ ನೀನು ಮೊದಲು ಇದನ್ನು ಅವನಿಗೆ ಹೇಳಿದೆಯೆಂದು ನಾನು ಹೇಗೆ ಗೊತ್ತುಮಾಡಿಕೊಳ್ಳಲಿ ? (4)

ಶ್ರೀಭಗವಾನುವಾಚ –

ಬಹೂನಿ ಮೇ ವ್ಯತೀತಾನಿ। ಜನ್ಮಾನಿ ತವ ಚಾರ್ಜುನ।
ತಾನ್ಯಹಂ ವೇದ ಸರ್ವಾಣಿ। ನ ತ್ವಂ ವೇತ್ಥ ಪರನ್ತಪ ॥ 5 ॥

ಅಜೋಽಪಿ ಸನ್ನವ್ಯಯಾತ್ಮಾ। ಭೂತಾನಾಮೀಶ್ವರೋಽಪಿ ಸನ್।
ಪ್ರಕೃತಿಂ ಸ್ವಾಮಧಿಷ್ಠಾಯ। ಸಮ್ಭವಾಮ್ಯಾತ್ಮಮಾಯಯಾ ॥ 6 ॥

**ಯದಾ ಯದಾ ಹಿ ಧರ್ಮಸ್ಯ । ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ । ತದಾತ್ಮಾನಂ ಸೃಜಾಮ್ಯಹಮ್ ॥ 7 ॥**
**ಪರಿತ್ರಾಣಾಯ ಸಾಧೂನಾಂ । ವಿನಾಶಾಯ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ । ಸಮ್ಭವಾಮಿ ಯುಗೇ ಯುಗೇ ॥ 8 ॥**

**ಶ್ರೀಭಗವಂತನ ಉತ್ತರ :**

ಅರ್ಜುನನೆ, ನನಗೂ ನಿನಗೂ ಬಹಳ ಜನ್ಮಗಳು ಆಗಿಹೋಗಿವೆ ; ಆದರೆ ಎಲೈ ಪರಂತಪನೆ, ನಾನು ಅವುಗಳನ್ನೆಲ್ಲ ಬಲ್ಲೆನು, ನೀನು ಅರಿಯೆ. ನಾನು ಜನ್ಮರಹಿತನಾದರೂ ನಾಶರಹಿತಸ್ವರೂಪನಾದರೂ ಪ್ರಾಣಿಗಳ ಒಡೆಯನಾದರೂ ನನ್ನ ಪ್ರಕೃತಿಯನ್ನು ವಶದಲ್ಲಿಟ್ಟುಕೊಂಡು ನನ್ನ ಮಾಯೆಯಿಂದ ಜನ್ಮವನ್ನು ತಾಳುತ್ತಿರುವೆನು. ಎಲೈ ಭರತಕುಲೋತ್ಪನ್ನನೆ, ಯಾವಯಾವಾಗ ಧರ್ಮಕ್ಕೆ ಕುಂದುಂಟಾಗುವದೋ, ಅಧರ್ಮಕ್ಕೆ ಏಳಿಗೆಯಾಗುವದೋ, ಆಗಾಗ ನಾನು ನನ್ನನ್ನು ಹೊರತೋರಿಸಿಕೊಳ್ಳುವೆನು, ಒಳ್ಳೆಯವರನ್ನು ಕಾಪಾಡುವದಕ್ಕೂ

ಕೆಟ್ಟವರನ್ನು ನಾಶಗೊಳಿಸುವದಕ್ಕೂ ಧರ್ಮವನ್ನು ನೆಲೆಗೊಳಿಸುವದಕ್ಕೂ ಯುಗಯುಗದಲ್ಲಿಯೂ ನಾನು ಜನ್ಮವನ್ನು ತಳೆಯುತ್ತಿರುವೆನು. (5–8)

**ಜನ್ಮ ಕರ್ಮ ಚ ಮೇ ದಿವ್ಯ–ಮೇವಂ ಯೋ ವೇತ್ತಿ ತತ್ತ್ವತಃ।**
**ತ್ಯಕ್ತ್ವಾ ದೇಹಂ ಪುನರ್ಜನ್ಮ। ನೈತಿ ಮಾಮೇತಿ ಸೋಽರ್ಜುನ ॥ 9 ॥**

ಅರ್ಜುನನೆ, ನನ್ನ ದಿವ್ಯವಾದ ಜನ್ಮವನ್ನೂ ಕರ್ಮವನ್ನೂ ಹೀಗೆ ಯಾವಾತನು ಸರಿಯಾಗಿ ತಿಳಿದುಕೊಳ್ಳುವನೋ, ಆತನು ದೇಹವನ್ನು ಬಿಟ್ಟ ಮೇಲೆ ಮತ್ತೆ ಜನ್ಮವನ್ನು ಹೊಂದುವದಿಲ್ಲ. ನನ್ನನ್ನೇ ಸೇರುವನು. (9)

ಟಿ॥ ಪರಮೇಶ್ವರನು ತಾನು ಇದ್ದಂತೆ ಇದ್ದುಕೊಂಡು ತನ್ನ ಮಾಯೆಯಿಂದ ಅವತರಿಸಿ ಧರ್ಮಿಷ್ಠರನ್ನು ಕಾಪಾಡುವನೆಂದು ನಂಬಿದಾತನು ಧರ್ಮವನ್ನೇ ಅನುಸರಿಸಿ ಮುಕ್ತನಾಗುವನು.

**ವೀತರಾಗಭಯಕ್ರೋಧಾ–ಮನ್ಮಯಾ ಮಾಮುಪಾಶ್ರಿತಾಃ।**
**ಬಹವೋ ಜ್ಞಾನತಪಸಾ। ಪೂತಾ ಮದ್ಭಾವಮಾಗತಾಃ ॥ 10 ॥**

ರಾಗಭಯಕ್ರೋಧಗಳನ್ನು ಹೋಗಲಾಡಿಸಿಕೊಂಡು ನನ್ನ ಸ್ವರೂಪವನ್ನೇ ಚಿಂತಿಸುವವರಾಗಿ ನನ್ನನ್ನೇ ನಂಬಿ ಬಹುಜನರು ಜ್ಞಾನವೆಂಬ ತಪಸ್ಸಿನಿಂದ ಶುದ್ಧರಾಗಿ ನನ್ನ ಸ್ವರೂಪವನ್ನು ಹೊಂದಿರುವರು. (10)

**ಯೇ ಯಥಾ ಮಾಂ ಪ್ರಪದ್ಯನ್ತೇ । ತಾಂಸ್ತಥೈವ ಭಜಾಮ್ಯಹಮ್ ।**
**ಮಮ ವರ್ತ್ಮಾನುವರ್ತನ್ತೇ । ಮನುಷ್ಯಾಃ ಪಾರ್ಥ ಸರ್ವಶಃ ॥ 11 ॥**

ಯಾರು ನನ್ನನ್ನು ಹೇಗೆ ಶರಣುಹೋಗುವರೋ ಅವರಿಗೆ ನಾನು ಹಾಗೆಯೇ ಒಲಿಯುವೆನು. ಪಾರ್ಥನೆ, ಯಾವ ಬಗೆಯಿಂದಲೇ ಆಗಲಿ, ಮನುಷ್ಯರು ನನ್ನ ಮಾರ್ಗವನ್ನೇ ಅನುಸರಿಸುತ್ತಿರುವರು. (11)

ಟಿ॥ ಜನರ ಮನಸ್ಸಿನ ಸ್ಥಿತಿಯನ್ನನುಸರಿಸಿ ಭಗವಂತನು ಅವರವರಿಗೆ ತಕ್ಕಂತೆ ಅನುಗ್ರಹವನ್ನು ಮಾಡುವನು ; ಎಲ್ಲಾ ಫಲಗಳೂ ಅವನಿಂದಲೇ ಉಂಟಾಗುವವು.

**ಕಾಙ್ಕ್ಷನ್ತಃ ಕರ್ಮಣಾಂ ಸಿದ್ಧಿಂ । ಯಜನ್ತ ಇಹ ದೇವತಾಃ ।**
**ಕ್ಷಿಪ್ರಂ ಹಿ ಮಾನುಷೇ ಲೋಕೇ । ಸಿದ್ಧಿರ್ಭವತಿ ಕರ್ಮಜಾ ॥ 12 ॥**

ಕರ್ಮಗಳ ಸಿದ್ಧಿಯನ್ನು ಬಯಸಿ ಜನರು ಇಲ್ಲಿ ದೇವತೆಗಳನ್ನು ಪೂಜಿಸುತ್ತಾರೆ ; ಏಕೆಂದರೆ ಮನುಷ್ಯಲೋಕದಲ್ಲಿ ಕರ್ಮದಿಂದಾಗುವ ಸಿದ್ಧಿಯು ಬೇಗನೆ ಉಂಟಾಗುತ್ತದೆ. (12)

ಚಾತುರ್ವರ್ಣ್ಯಂ ಮಯಾ ಸೃಷ್ಟಂ। ಗುಣಕರ್ಮವಿಭಾಗಶಃ।
ತಸ್ಯ ಕರ್ತಾರಮಪಿ ಮಾಂ। ವಿದ್ಧ್ಯಕರ್ತಾರಮವ್ಯಯಮ್ ॥ 13 ॥

ನ ಮಾಂ ಕರ್ಮಾಣಿ ಲಿಮ್ಪನ್ತಿ। ನ ಮೇ ಕರ್ಮಫಲೇ ಸ್ಪೃಹಾ।
ಇತಿ ಮಾಂ ಯೋಽಭಿಜಾನಾತಿ। ಕರ್ಮಭಿರ್ನ ಸ ಬಧ್ಯತೇ ॥ 14 ॥

ಏವಂ ಜ್ಞಾತ್ವಾ ಕೃತಂ ಕರ್ಮ। ಪೂರ್ವೈರಪಿ ಮುಮುಕ್ಷುಭಿಃ।
ಕುರು ಕರ್ಮೈವ ತಸ್ಮಾತ್ತ್ವಂ। ಪೂರ್ವೈಃ ಪೂರ್ವತರಂ ಕೃತಮ್ ॥ 15 ॥

ಬ್ರಹ್ಮಕ್ಷತ್ರಿಯವೈಶ್ಯಶೂದ್ರರೆಂಬ ನಾಲ್ಕು ವರ್ಣಗಳ ಗುಂಪು ಗುಣ-ಕರ್ಮಗಳ ವಿಂಗಡಕ್ಕೆ ತಕ್ಕಂತೆ ನನ್ನಿಂದಲೇ ಸೃಷ್ಟಿಯಾಗಿರುತ್ತದೆ. ನಾನು ಅದನ್ನು

ಮಾಡುವವನಾದರೂ ಕರ್ತೃವಲ್ಲವೆಂದೂ ನಾಶರಹಿತನೆಂದೂ ತಿಳಿ. ನನಗೆ ಕರ್ಮಗಳು ಅಂಟುವದಿಲ್ಲ. ನನಗೆ ಕರ್ಮದ ಫಲದಲ್ಲಿ ಆಸೆಯಿಲ್ಲ – ಎಂದು ನನ್ನನ್ನು ಯಾವನು ತಿಳಿದುಕೊಳ್ಳುವನೋ ಅವನು ಕರ್ಮಗಳಿಂದ ಕಟ್ಟುವಡೆಯುವದಿಲ್ಲ. ಹಿಂದಿನ ಮುಮುಕ್ಷುಗಳುಕೂಡ ಹೀಗೆಂದು ತಿಳಿದು ಕರ್ಮವನ್ನು ಮಾಡುತ್ತಿದ್ದರು ; ಆದ್ದರಿಂದ ನೀನು ಹಿಂದಿನವರು ಮಾಡಿರುವ ಬಲು ಹಿಂದಿನದಾದ ಕರ್ಮವನ್ನೇ ಮಾಡು. (13–15)

ಟಿ|| ಪರಮಾತ್ಮನ ಅವತಾರವೂ ಧರ್ಮರಕ್ಷಣೆಯೂ ಹೇಗೆ ಅವನ ಸ್ವಾತಂತ್ರ್ಯಕ್ಕೇ ಕುಂದನ್ನು ತರುವದಿಲ್ಲವೋ ಹಾಗೆಯೇ, ಆತನ ಸೃಷ್ಟಿಯೂ ಅವನ ಅಕರ್ತೃತ್ವಕ್ಕೆ ಹಾನಿಯನ್ನು ತರುವದಿಲ್ಲ. ಚಾತುರ್ವರ್ಣ್ಯದವರು ಮಾಡುವ ಕರ್ಮವು ಆತನ ಮಾಯೆಗೆ ಕಟ್ಟುಬಿದ್ದಿರುವದರಿಂದ ಅವನ ಒಡೆತನಕ್ಕೆ ಒಳಪಟ್ಟೇ ಫಲವನ್ನು ಕೊಡುವದು.

ಕಿಂ ಕರ್ಮ ಕಿಮಕರ್ಮೇತಿ । ಕವಯೋಽಪ್ಯತ್ರ ಮೋಹಿತಾಃ ।
ತತ್ತೇ ಕರ್ಮ ಪ್ರವಕ್ಷ್ಯಾಮಿ । ಯಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥ 16 ॥

**ಕರ್ಮಣೋ ಹ್ಯಪಿ ಬೋದ್ಧವ್ಯಂ। ಬೋದ್ಧವ್ಯಂ ಚ ವಿಕರ್ಮಣಃ।**
**ಅಕರ್ಮಣಶ್ಚ ಬೋದ್ಧವ್ಯಂ। ಗಹನಾ ಕರ್ಮಣೋ ಗತಿಃ ॥ 17 ॥**

**ಕರ್ಮಣ್ಯಕರ್ಮ ಯಃ ಪಶ್ಯೇ–ದಕರ್ಮಣಿ ಚ ಕರ್ಮ ಯಃ।**
**ಸ ಬುದ್ಧಿಮಾನ್ಮನುಷ್ಯೇಷು। ಸ ಯುಕ್ತಃ ಕೃತ್ಸ್ನಕರ್ಮಕೃತ್ ॥ 18 ॥**

ಕರ್ಮವು ಯಾವದು, ಅಕರ್ಮವು ಯಾವದು ?– ಎಂಬ ಈ ವಿಷಯದಲ್ಲಿ ಜಾಣರು ಕೂಡ ಭ್ರಾಂತರಾಗಿರುವರು. ಆದ್ದರಿಂದ ನಿನಗೆ ಕರ್ಮದ ಸ್ವರೂಪವನ್ನು ತಿಳಿಸಿಕೊಡುವೆನು, ಅದನ್ನು ಅರಿತುಕೊಂಡರೆ ಈ ಕೆಟ್ಟ ಸಂಸಾರದಿಂದ ಬಿಡುಗಡೆಯನ್ನು ಹೊಂದುವೆ. ಕರ್ಮದ ವಿಷಯದಲ್ಲಿಯೂ ತಿಳಿದುಕೊಳ್ಳತಕ್ಕದ್ದಿದೆ, ವಿಕರ್ಮದ (ನಿಷಿದ್ಧವಾದ ಕರ್ಮದ) ವಿಷಯದಲ್ಲಿಯೂ ತಿಳಿದುಕೊಳ್ಳತಕ್ಕದ್ದಿದೆ, ಅಕರ್ಮದ (ಕರ್ಮವಲ್ಲದಿರುವದರ) ವಿಷಯದಲ್ಲಿಯೂ ತಿಳಿದುಕೊಳ್ಳತಕ್ಕದ್ದಿದೆ ; ಕರ್ಮದ ಗತಿಯನ್ನು ತಿಳಿದುಕೊಳ್ಳುವದು ಕಷ್ಟವು. ಕರ್ಮದಲ್ಲಿ ಅಕರ್ಮವನ್ನು ಯಾವನು ಕಾಣುವನೋ ಮತ್ತು ಅಕರ್ಮದಲ್ಲಿ

ಕರ್ಮವನ್ನು ಯಾವನು ಕಾಣುವನೋ ಅವನು ಜನರಲ್ಲಿ ಬುದ್ಧಿವಂತನು, ಅವನೇ ಯೋಗಿಯು, ಎಲ್ಲಾ ಕರ್ಮಗಳನ್ನೂ ಮಾಡಿದವನು. (16–18)

ಟಿ॥ ಆತ್ಮನಲ್ಲಿ ಕರ್ಮವಿಲ್ಲ ; ಆದ್ದರಿಂದ ಅವನಲ್ಲಿ ಅಕರ್ಮವೂ ಇಲ್ಲ, ವಿಕರ್ಮವೂ ಇಲ್ಲ. ದೇಹೇಂದ್ರಿಯಗಳಲ್ಲಿರುವ ಕರ್ಮವ್ಯಾಪಾರವನ್ನೂ, ಆ ಕರ್ಮದ ಅಭಾವವನ್ನೂ ಅಜ್ಞರು ಆತ್ಮನದೇ ಎಂದು ಹುಟ್ಟುಗಟ್ಟಿಕೊಳ್ಳುತ್ತಾರೆ. ಆದ್ದರಿಂದ ಆತ್ಮನಲ್ಲಿ ತೋರುವ ಕರ್ಮವು ಕರ್ಮವಲ್ಲವೆಂಬುದೇ ಪರಮಾರ್ಥವಾದ ತಿಳಿವಳಿಕೆ.

ಯಸ್ಯ ಸರ್ವೇ ಸಮಾರಮ್ಭಾಃ । ಕಾಮಸಙ್ಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ । ತಮಾಹುಃ ಪಣ್ಡಿತಂ ಬುಧಾಃ ॥ 19 ॥

ತ್ಯಕ್ತ್ವಾ ಕರ್ಮಫಲಾಸಙ್ಗಂ । ನಿತ್ಯತೃಪ್ತೋ ನಿರಾಶ್ರಯಃ ।
ಕರ್ಮಣ್ಯಭಿಪ್ರವೃತ್ತೋಽಪಿ । ನೈವ ಕಿಂಚಿತ್ಕರೋತಿ ಸಃ ॥ 20 ॥

ಯಾವನು ಮಾಡುವ ಕರ್ಮಗಳೆಲ್ಲವೂ ಕಾಮಸಂಕಲ್ಪಗಳಿಲ್ಲದವಾಗಿರುವವೋ ಜ್ಞಾನವೆಂಬ ಅಗ್ನಿಯಿಂದ ಕರ್ಮಗಳನ್ನು ಸುಟ್ಟುಹಾಕಿರುವ ಅವನನ್ನು

ತಿಳಿದವರು ಪಂಡಿತನೆನ್ನುವರು. ಕರ್ಮದಲ್ಲಿಯೂ ಫಲದಲ್ಲಿಯೂ ಸಂಗವನ್ನು ಬಿಟ್ಟು ನಿತ್ಯತೃಪ್ತನಾಗಿ ಕರ್ಮದ ಫಲಕ್ಕಾಗಿ ಯಾವದೊಂದನ್ನೂ ಅವಲಂಬಿಸದೆ ಇರುವ ಆತನು ಕರ್ಮದಲ್ಲಿ ತೊಡಗಿದ್ದರೂ ನಿಜವಾಗಿ ಏನನ್ನೂ ಮಾಡುತ್ತಿರುವದೇ ಇಲ್ಲ. (19–20)

ಟಿ॥ ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುವ ಜ್ಞಾನಿಯು ಪರಮಾರ್ಥ ದೃಷ್ಟಿಯಿಂದ ಅಕರ್ತೃವಾಗಿರುವನು.

**ನಿರಾಶೀರ್ಯತಚಿತ್ತಾತ್ಮಾ। ತ್ಯಕ್ತಸರ್ವಪರಿಗ್ರಹಃ।**
**ಶಾರೀರಂ ಕೇವಲಂ ಕರ್ಮ। ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥ 21 ॥**

**ಯದೃಚ್ಛಾಲಾಭಸನ್ತುಷ್ಟೋ। ದ್ವಂದ್ವಾತೀತೋ ವಿಮತ್ಸರಃ।**
**ಸಮಃ ಸಿದ್ಧಾವಸಿದ್ಧೌ ಚ। ಕೃತ್ವಾಪಿ ನ ನಿಬಧ್ಯತೇ ॥ 22 ॥**

ಯಾವನು ಆಶೆಯಿಲ್ಲದವನೋ, ಚಿತ್ತವನ್ನೂ ದೇಹೇಂದ್ರಿಯಗಳನ್ನೂ ಬಿಗಿಹಿಡಿದುಕೊಂಡಿರುವನೋ, ತನ್ನದೆಂಬುದನ್ನೆಲ್ಲ ಬಿಟ್ಟು ಶರೀರಯಾತ್ರೆಗೆ

ಬೇಕಾದಷ್ಟು ಕರ್ಮಗಳನ್ನು ಮಾತ್ರ ಮಾಡುತ್ತಿರುವನೋ, ಅವನಿಗೆ ಯಾವ ಕೆಡುಕೂ ಆಗುವದಿಲ್ಲ. ತಾನೇ ಬಂದೊದಗಿದಷ್ಟಕ್ಕೆ ತೃಪ್ತನಾಗಿ, ದ್ವಂದ್ವಗಳನ್ನು ಮೀರಿ ಒಬ್ಬರಲ್ಲಿಯೂ ಹೊಟ್ಟೆಕಿಚ್ಚಿಲ್ಲದೆ, ಸಿದ್ಧಿಯಾದರೂ ಆಗದಿದ್ದರೂ ಒಂದೇ ಸಮನಾಗಿರುವಾತನು ಕರ್ಮವನ್ನು ಮಾಡಿದರೂ ಅದಕ್ಕೆ ಕಟ್ಟು ಬೀಳುವದಿಲ್ಲ. (21–22)

ಟಿ: ಇದು ಸರ್ವಕರ್ಮಸಂನ್ಯಾಸವನ್ನು ಮಾಡಿದ ಯತಿಯ ವಿಷಯ.

ಗತಸಙ್ಗಸ್ಯ ಮುಕ್ತಸ್ಯ। ಜ್ಞಾನಾವಸ್ಥಿತಚೇತಸಃ।
ಯಜ್ಞಾಯಾಚರತಃ ಕರ್ಮ। ಸಮಗ್ರಂ ಪ್ರವಿಲೀಯತೇ ॥ 23 ॥

ಬ್ರಹ್ಮಾರ್ಪಣಂ ಬ್ರಹ್ಮ ಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್।
ಬ್ರಹ್ಮೈವ ತೇನ ಗನ್ತವ್ಯಂ। ಬ್ರಹ್ಮಕರ್ಮಸಮಾಧಿನಾ ॥ 24 ॥

ಸಂಗವಿಲ್ಲದೆ ಧರ್ಮಾಧರ್ಮಗಳಿಂದ ಮುಕ್ತನಾಗಿ ಜ್ಞಾನದಲ್ಲಿಯೇ ನಿಂತಿರುವ ಮನಸ್ಸಿನವನಾಗಿ ಇದೊಂದು ಯಜ್ಞವಾಗಲೆಂದು ಕರ್ಮವನ್ನು

ಮಾಡುತ್ತಿರುವಾತನ ಕರ್ಮವು ಪೂರ ಕರಗಿಹೋಗುವದು. ಜ್ಞಾನಿಯು ಮಾಡುವ ಅರ್ಪಣವು ಬ್ರಹ್ಮವೇ, ಹವಿಸ್ಸೂ ಬ್ರಹ್ಮವೇ, ಬ್ರಹ್ಮವೆಂಬ ಅಗ್ನಿಯಲ್ಲಿ ಬ್ರಹ್ಮದಿಂದಲೇ ಹೋಮಮಾಡಲ್ಪಡುತ್ತದೆ ; ಬ್ರಹ್ಮಕರ್ಮದ ಸಮಾಧಿಯಿಂದ ಅವನು ಸೇರಬೇಕಾದದ್ದೂ ಬ್ರಹ್ಮವೇ. (23–24)

ಟಿ॥ ಜ್ಞಾನಿಯು ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡಿದರೂ ಅವನ ದೃಷ್ಟಿಯಲ್ಲಿ ಕ್ರಿಯಾಕಾರಕಫಲಗಳೆಲ್ಲವೂ ಬ್ರಹ್ಮವೇ ಆಗಿರುವವು.

ದೈವಮೇವಾಪರೇ ಯಜ್ಞಂ। ಯೋಗಿನಃ ಪರ್ಯುಪಾಸತೇ।
ಬ್ರಹ್ಮಾಗ್ನಾವಪರೇ ಯಜ್ಞಂ। ಯಜ್ಞೇನೈವೋಪಜುಹ್ವತಿ ॥ 25 ॥

ಶ್ರೋತ್ರಾದೀನೀನ್ದ್ರಿಯಾಣ್ಯನ್ಯೇ। ಸಂಯಮಾಗ್ನಿಷು ಜುಹ್ವತಿ।
ಶಬ್ದಾದೀನ್ವಿಷಯಾನನ್ಯೇ–ಇನ್ದ್ರಿಯಾಗ್ನಿಷು ಜುಹ್ವತಿ ॥ 26 ॥

ಸರ್ವಾಣೀನ್ದ್ರಿಯಕರ್ಮಾಣಿ। ಪ್ರಾಣಕರ್ಮಾಣಿ ಚಾಪರೇ।
ಆತ್ಮಸಂಯಮಯೋಗಾಗ್ನೌ। ಜುಹ್ವತಿ ಜ್ಞಾನದೀಪಿತೇ ॥ 27 ॥

**ದ್ರವ್ಯಯಜ್ಞಾಸ್ತಪೋಯಜ್ಞಾ– ಯೋಗಯಜ್ಞಾಸ್ತಥಾಪರೇ ।**
**ಸ್ವಾಧ್ಯಾಯಜ್ಞಾನಯಜ್ಞಾಶ್ಚ । ಯತಯಃ ಸಂಶಿತವ್ರತಾಃ ॥ 28 ॥**
**ಅಪಾನೇ ಜುಹ್ವತಿ ಪ್ರಾಣಂ । ಪ್ರಾಣೇಽಪಾನಂ ತಥಾಪರೇ ।**
**ಪ್ರಾಣಾಪಾನಗತೀ ರುದ್ಧ್ವಾ । ಪ್ರಾಣಾಯಾಮಪರಾಯಣಾಃ ॥ 29 ॥**
**ಅಪರೇ ನಿಯತಾಹಾರಾಃ । ಪ್ರಾಣಾನ್ಪ್ರಾಣೇಷು ಜುಹ್ವತಿ ।**
**ಸರ್ವೇಽಪ್ಯೇತೇ ಯಜ್ಞವಿದೋ । ಯಜ್ಞಕ್ಷಪಿತಕಲ್ಮಷಾಃ ॥ 30 ॥**

ಕೆಲವರು ದೇವತೆಗಳಿಗಾಗಿಯೇ ಯಜ್ಞವನ್ನು ಮಾಡುತ್ತಾರೆ : ಮತ್ತೆ ಕೆಲವರು, ಎಂದರೆ ಜ್ಞಾನಿಗಳು, ಬ್ರಹ್ಮವೆಂಬ ಅಗ್ನಿಯಲ್ಲಿ ಆತ್ಮನನ್ನೇ ಹೋಮ ಮಾಡುತ್ತಾರೆ, ಎಂದರೆ ಬ್ರಹ್ಮರೂಪದಿಂದ ಆತ್ಮನನ್ನು ಕಾಣುತ್ತಾರೆ. ಕೆಲವರು ಶ್ರೋತ್ರವೇ ಮುಂತಾದ ಇಂದ್ರಿಯಗಳನ್ನು ಬಿಗಿಹಿಡಿಯುವ ಸಂಯಮವೆಂಬ ಅಗ್ನಿಗಳಲ್ಲಿ ಹೋಮಮಾಡುತ್ತಾರೆ ; ಮತ್ತೆ ಕೆಲವರು ಶಬ್ದವೇ ಮುಂತಾದ ವಿಷಯಗಳನ್ನು ಇಂದ್ರಿಯಗಳೆಂಬ ಅಗ್ನಿಗಳಲ್ಲಿ ಹೋಮಮಾಡುತ್ತಾರೆ. ಇನ್ನೂ

ಕೆಲವರು ಇಂದ್ರಿಯವ್ಯಾಪಾರಗಳೆಲ್ಲವನ್ನೂ ಪ್ರಾಣವ್ಯಾಪಾರಗಳೆಲ್ಲವನ್ನೂ ವಿವೇಕದಿಂದ ಹತ್ತಿಕೊಂಡು ಉರಿಯುತ್ತಿರುವ ಆತ್ಮಸಂಯಮ – ಆತ್ಮನಲ್ಲಿ ಇಂದ್ರಿಯಗಳನ್ನು ನಿಲ್ಲಿಸುವದು – ಎಂಬ ಯೋಗಾಗ್ನಿಯಲ್ಲಿ ಹೋಮಮಾಡುವರು. ಕೆಲವರು ದ್ರವ್ಯಯಜ್ಞದವರು, ಕೆಲವರು ತಪೋಯಜ್ಞದವರು, ಕೆಲವರು ಯೋಗಯಜ್ಞದವರು, ಕೆಲವರು ವೇದಾಧ್ಯಯನಜ್ಞಾನಗಳೆಂಬ ಯಜ್ಞದವರು ; ಇವರೆಲ್ಲರೂ ಹರಿತವಾದ ವ್ರತವುಳ್ಳ ಯತಿಗಳು. ಕೆಲವರು ಪ್ರಾಣಾಪಾನಗಳ ಗತಿಯನ್ನು ತಡೆದುಕೊಂಡು ಪ್ರಾಣಾಯಾಮವನ್ನೇ ಹೆಚ್ಚೆಂದು ತಿಳಿದು ಪ್ರಾಣವನ್ನು ಅಪಾನದಲ್ಲಿ – ಒಳಗಿನಿಂದ ಹೊರಕ್ಕೆ ಬಿಡುವ ವಾಯುವಿನಲ್ಲಿ – ಹೋಮಮಾಡುವರು ; ಮತ್ತು ಅಪಾನವನ್ನು ಪ್ರಾಣದಲ್ಲಿ ಹೋಮಮಾಡುವರು. ಇನ್ನು ಕೆಲವರು ಆಹಾರದಲ್ಲಿ ನಿಯಮವುಳ್ಳವರಾಗಿ ಪ್ರಾಣಗಳನ್ನು ಪ್ರಾಣಗಳಲ್ಲಿಯೇ ಹೋಮಮಾಡುವರು. ಇವರೆಲ್ಲರೂ ಯಜ್ಞವನ್ನು ಬಲ್ಲವರು, ಯಜ್ಞದಿಂದ ಪಾಪವನ್ನು ಕಳೆದುಕೊಂಡಿರುವವರು. (25–30)

ಟೀ॥ ದೇವತೆಗಳಿಗಾಗಿ ಮಾಡುವ ಯಜ್ಞವೇ ಅಲ್ಲದೆ ಇಂದ್ರಿಯಗಳನ್ನು

ಬಿಗಿಹಿಡಿಯುವದು, ಯೋಗ್ಯವಿಷಯಸೇವನೆ, ಆತ್ಮನಲ್ಲಿ ಚಿತ್ತವನ್ನು ನಿಲ್ಲಿಸುವದು, ವೇದಾಧ್ಯಯನ, ವೇದಾರ್ಥವಿಚಾರ, ಪೂರಕರೇಚಕಕುಂಭಕರೂಪಪ್ರಾಣಾಯಾಮಗಳು, ಮಿತಾಹಾರ – ಇವೆಲ್ಲವೂ ಒಂದೊಂದು ಬಗೆಯ ಯಜ್ಞವೇ ; ಮುಖ್ಯಯಜ್ಞವಾದ ಜ್ಞಾನಯಜ್ಞವೂ ಇವುಗಳಲ್ಲಿ ಸೇರುತ್ತದೆ.

**ಯಜ್ಞಶಿಷ್ಟಾಮೃತಭುಜೋ । ಯಾನ್ತಿ ಬ್ರಹ್ಮ ಸನಾತನಮ್ ।**
**ನಾಯಂ ಲೋಕೋಽಸ್ತ್ಯಯಜ್ಞಸ್ಯ । ಕುತೋಽನ್ಯಃ ಕುರುಸತ್ತಮ ॥ 31 ॥**
**ಏವಂ ಬಹುವಿಧಾ ಯಜ್ಞಾ–ವಿತತಾ ಬ್ರಹ್ಮಣೋ ಮುಖೇ ।**
**ಕರ್ಮಜಾನ್ವಿದ್ಧಿ ತಾನ್ ಸರ್ವಾ–ನೇವಂ ಜ್ಞಾತ್ವಾ ವಿಮೋಕ್ಷ್ಯಸೇ ॥32॥**

ಯಜ್ಞದಲ್ಲಿ ಉಳಿದ ಅಮೃತವನ್ನು ಭೋಜನಮಾಡಿ ಇವರು ಸನಾತನವಾದ ಬ್ರಹ್ಮವನ್ನು ಸೇರುವರು. ಎಲೈ ಪುರುಷಶ್ರೇಷ್ಠನೆ, ಯಜ್ಞವಿಲ್ಲದವನಿಗೆ ಈ ಲೋಕವೇ ಇಲ್ಲ. ಇನ್ನು ಪರಲೋಕವೆಲ್ಲಿಯದು ? ಹೀಗೆ ಬಗೆಬಗೆಯ ಯಜ್ಞಗಳು ವೇದಮುಖದಿಂದ ಹರಡಿರುವವು, ಇದೆಲ್ಲವೂ ಕರ್ಮದಿಂದ ಆದವುಗಳೆಂದು ಅರಿತುಕೊ, ಹೀಗೆಂದು ತಿಳಿದುಕೊಂಡರೆ ಮುಕ್ತನಾಗುವೆ. (31–32)

ಶ್ರೇಯಾನ್ದ್ರವ್ಯಮಯಾದ್ಯಜ್ಞಾ–ಜ್ಜ್ಞಾನಯಜ್ಞಃ ಪರಂತಪ ।
ಸರ್ವಂ ಕರ್ಮಾಖಿಲಂ ಪಾರ್ಥ । ಜ್ಞಾನೇ ಪರಿಸಮಾಪ್ಯತೇ ॥ 33 ॥

ತದ್ವಿದ್ಧಿ ಪ್ರಣಿಪಾತೇನ । ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯನ್ತಿ ತೇ ಜ್ಞಾನಂ । ಜ್ಞಾನಿನಸ್ತತ್ತ್ವದರ್ಶಿನಃ ॥ 34 ॥

ಯಜ್ಜ್ಞಾತ್ವಾ ನ ಪುನರ್ಮೋಹ–ಮೇವಂ ಯಾಸ್ಯಸಿ ಪಾಣ್ಡವ ।
ಯೇನ ಭೂತಾನ್ಯಶೇಷೇಣ । ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ॥ 35 ॥

ಅಪಿ ಚೇದಸಿ ಪಾಪೇಭ್ಯಃ । ಸರ್ವೇಭ್ಯಃ ಪಾಪಕೃತ್ತಮಃ ।
ಸರ್ವಂ ಜ್ಞಾನಪ್ಲವೇನೈವ । ವೃಜಿನಂ ಸಂತರಿಷ್ಯಸಿ ॥ 36 ॥

ಯಥೈಧಾಂಸಿ ಸಮಿದ್ಧೋಽಗ್ನಿ–ರ್ಭಸ್ಮಸಾತ್ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ । ಭಸ್ಮಸಾತ್ಕುರುತೇ ತಥಾ ॥ 37 ॥

ನ ಹಿ ಜ್ಞಾನೇನ ಸದೃಶಂ । ಪವಿತ್ರಮಿಹ ವಿದ್ಯತೇ ।
ತತ್ಸ್ವಯಂ ಯೋಗಸಂಸಿದ್ಧಃ । ಕಾಲೇನಾತ್ಮನಿ ವಿನ್ದತಿ ॥ 38 ॥

ಎಲೈ ಶತ್ರುತಾಪನನೆ, ದ್ರವ್ಯಮಯವಾದ ಯಜ್ಞಕ್ಕಿಂತಲೂ ಜ್ಞಾನ ಯಜ್ಞವು ಮೇಲು : ಏಕೆಂದರೆ ಎಲೈ ಪಾರ್ಥನೆ, ಕರ್ಮವೆಲ್ಲವೂ ಪೂರ್ತಿಯಾಗಿ ಜ್ಞಾನದಲ್ಲಿ ಕೊನೆಗಾಣುತ್ತದೆ. ಅದನ್ನು ಸಾಧುಗಳಿಗೆ ನಮಸ್ಕಾರಮಾಡುವದ ರಿಂದಲೂ ಅವರನ್ನು ಸಮಯವರಿತು ಕೇಳುವದರಿಂದಲೂ ಅವರ ಶುಶ್ರೂಷೆ ಯಿಂದಲೂ ಅರಿತುಕೊ ; ತತ್ತ್ವವನ್ನು ಕಂಡುಕೊಂಡಿರುವ ಆ ಜ್ಞಾನಿಗಳು ನಿನಗೆ ಜ್ಞಾನವನ್ನು ಹೇಳಿಕೊಡುವರು. ಎಲೈ ಪಾಂಡವನೆ, ಅದನ್ನು ಅರಿತುಕೊಂಡರೆ ನೀನು ಮತ್ತೆ ಹೀಗೆ ಮೋಹವನ್ನು ಹೊಂದುವದಿಲ್ಲ ; ಆದರಿಂದ ಪ್ರಾಣಿಗಳೆಲ್ಲವನ್ನೂ ನಿನ್ನಲ್ಲಿಯೂ ನನ್ನಲ್ಲಿಯೂ ಕಂಡುಕೊಳ್ಳುವೆ. ನೀನು ಪಾಪಿಗಳಲ್ಲೆಲ್ಲ ಹೆಚ್ಚುಪಾಪಿಷ್ಠನಾಗಿದ್ದರೂ ಜ್ಞಾನವೆಂಬ ತೆಪ್ಪದಿದಂಲೇ ಆ ಪಾಪವೆಲ್ಲವನ್ನೂ ಪೂರ ದಾಟಬಹುದು. ಚೆನ್ನಾಗಿ ಹತ್ತಿಕೊಂಡ ಬೆಂಕಿಯು ಕಟ್ಟಿಗೆಗಳನ್ನು ಹೇಗೆ ಸುಟ್ಟು ಬೂದಿಮಾಡುವದೋ, ಜ್ಞಾನವೆಂಬ ಬೆಂಕಿಯೂ ಹಾಗೆಯೇ ಕರ್ಮಗಳೆಲ್ಲವನ್ನೂ ಸುಟ್ಟು ಬೂದಿಮಾಡುವದು. ಜ್ಞಾನಕ್ಕೆ ಸಮನಾದ ಪವಿತ್ರವಸ್ತುವೇ ಈ ಲೋಕದಲ್ಲಿಲ್ಲ. ಯೋಗದಲ್ಲಿ ಸಿದ್ಧಿಹೊಂದಿದಾತನು

ಕಾಲಕ್ರಮದಲ್ಲಿ ಅದನ್ನು ತನ್ನಲ್ಲಿ ತಾನೇ ಪಡೆದುಕೊಳ್ಳುವನು. (33–37)

ಟಿ॥ ಯಜ್ಞಗಳಲ್ಲೆಲ್ಲ ಜ್ಞಾನಯಜ್ಞವು ಹೆಚ್ಚಿನದು ; ಏಕೆಂದರೆ ಅದರಿಂದ ನಮ್ಮೆಲ್ಲರ ಆತ್ಮನೂ ಒಬ್ಬ ಪರಮಾತ್ಮನೇ ಎಂಬುದನ್ನು ಅರ್ಥಿತುಕೊಂಡು ಕರ್ಮದ ಕಟ್ಟನ್ನು ಕಳಚಿಕೊಂಡು ಪರಿಶುದ್ಧನಾಗಬಹುದು. ಆದ್ದರಿಂದ ಪವಿತ್ರತರವಾದ ಈ ಜ್ಞಾನವನ್ನು ಬಲ್ಲವರ ಮೂಲಕ ಸಂಪಾದಿಸಿಕೊಳ್ಳಬೇಕು.

ಶ್ರದ್ಧಾವಾಂಲ್ಲಭತೇ ಜ್ಞಾನಂ। ತತ್ಪರಃ ಸಂಯತೇನ್ದ್ರಿಯಃ।
ಜ್ಞಾನಂ ಲಬ್ಧ್ವಾ ಪರಾಂ ಶಾನ್ತಿ–ಮಚಿರೇಣಾಧಿಗಚ್ಛತಿ ॥ 39 ॥

ಅಜ್ಞಶ್ಚಾಶ್ರದ್ದಧಾನಶ್ಚ। ಸಂಶಯಾತ್ಮಾ ವಿನಶ್ಯತಿ।
ನಾಯಂ ಲೋಕೋಽಸ್ತಿ ನ ಪರೋ। ನ ಸುಖಂ ಸಂಶಯಾತ್ಮನಃ ॥ 40 ॥

ಯೋಗಸಂನ್ಯಸ್ತಕರ್ಮಾಣಂ। ಜ್ಞಾನಸಂಛಿನ್ನಸಂಶಯಮ್।
ಆತ್ಮವನ್ತಂ ನ ಕರ್ಮಾಣಿ। ನಿಬಧ್ನನ್ತಿ ಧನಞ್ಜಯ ॥ 41 ॥

ತಸ್ಮಾದಜ್ಞಾನಸಂಭೂತಂ। ಹೃತ್ಸ್ಥಂ ಜ್ಞಾನಾಸಿನಾತ್ಮನಃ।
ಛಿತ್ವೈನಂ ಸಂಶಯಂ ಯೋಗ–ಮಾತಿಷ್ಠೋತ್ತಿಷ್ಠ ಭಾರತ ॥ 42 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಜ್ಞಾನಯೋಗೋ ನಾಮ ಚತುರ್ಥೋಽಧ್ಯಾಯಃ

ಶ್ರದ್ಧಾವಂತನೂ ಅದನ್ನೇ ಹೆಚ್ಚೆಂದು ತಿಳಿದುಕೊಂಡಿರುವವನೂ ಇಂದ್ರಿಯಗಳನ್ನು ಬಿಗಿಹಿಡಿದುಕೊಂಡಿರುವವನೂ ಆಗಿರುವವನಿಗೆ ಜ್ಞಾನವು ದೊರಕುವದು. ಜ್ಞಾನವು ಸಿಕ್ಕಿದರೆ ಕೂಡಲೆ ಹೆಚ್ಚಿನ ಶಾಂತಿಯನ್ನು ಹೊಂದಬಹುದು. ತತ್ತ್ವವನ್ನು ಅರಿಯದವನೂ ಶ್ರದ್ಧೆಯಿಲ್ಲದವನೂ ಆದ, ಸಂಶಯಾತ್ಮನು ಕೆಟ್ಟು ಹೋಗುತ್ತಾನೆ. ಸಂಶಯಾತ್ಮನಾದವನಿಗೆ ಈ ಲೋಕವಿಲ್ಲ, ಪರಲೋಕವಿಲ್ಲ, ಸುಖವೂ ಇಲ್ಲ. ಯೋಗದಿಂದ ಕರ್ಮಗಳನ್ನು ಸಂನ್ಯಾಸಮಾಡಿ ಜ್ಞಾನದಿಂದ ಸಂಶಯಗಳನ್ನು ಕತ್ತರಿಸಿಕೊಂಡು ಎಚ್ಚರಿಕೆಯಿಂದಿರುವ ತನ್ನನ್ನು ಎಲ್ಲೈ

ಧನಂಜಯನೆ, ಕರ್ಮಗಳು ಕಟ್ಟಿಹಾಕಲಾರವು. ಆದ್ದರಿಂದ ಎಲೈ ಭರತ ವಂಶೋತ್ಪನ್ನನೆ, ಅಜ್ಞಾನದಿಂದುಂಟಾಗಿ ಹೃದಯದಲ್ಲಿದ್ದುಕೊಂಡಿರುವ ಆತ್ಮ ವಿಷಯಕವಾದ ಸಂಶಯವನ್ನು ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿಕೊಂಡು ಯೋಗವನ್ನು ಮಾಡೇಳು. (36–42)

ಟಿ॥ ಅಜ್ಞಾನದಿಂದುಂಟಾಗುವ ಅಶ್ರದ್ಧೆಯನ್ನೂ ಸಂಶಯವನ್ನೂ ಜ್ಞಾನದಿಂದ ಕಳೆದುಕೊಂಡು ಸುಲಭವಾಗಿ ಕರ್ಮಬಂಧದಿಂದ ಬಿಡುಗಡೆಯಾಗಬಹುದು.

ಜ್ಞಾನಯೋಗವೆಂಬ ನಾಲ್ಕನೆಯ ಅಧ್ಯಾಯವು ಮುಗಿಯಿತು.

--------

## ಅಥ ಪಂಚಮೋಽಧ್ಯಾಯಃ

ಅರ್ಜುನ ಉವಾಚ –

ಸಂನ್ಯಾಸಂ ಕರ್ಮಣಾಂ ಕೃಷ್ಣ। ಪುನರ್ಯೋಗಂ ಚ ಶಂಸಸಿ।
ಯಚ್ಛ್ರೇಯ ಏತಯೋರೇಕಂ। ತನ್ಮೇ ಬ್ರೂಹಿ ಸುನಿಶ್ಚಿತಮ್ ॥ 1 ॥

ಶ್ರೀಭಗವಾನುವಾಚ –

ಸಂನ್ಯಾಸಃ ಕರ್ಮಯೋಗಶ್ಚ। ನಿಃಶ್ರೇಯಸಕರಾವುಭೌ।
ತಯೋಸ್ತುಕರ್ಮಸಂನ್ಯಾಸಾತ್। ಕರ್ಮಯೋಗೋ ವಿಶಿಷ್ಯತೇ ॥ 2 ॥

ಜ್ಞೇಯಃ ಸ ನಿತ್ಯಸಂನ್ಯಾಸೀ। ಯೋ ನ ದ್ವೇಷ್ಟಿ ನ ಕಾಙ್ಕ್ಷತಿ।
ನಿರ್ದ್ವನ್ದ್ವೋ ಹಿ ಮಹಾಬಾಹೋ। ಸುಖಂ ಬನ್ಧಾತ್ಪ್ರಮುಚ್ಯತೇ ॥ 3 ॥

## ಐದನೆಯ ಅಧ್ಯಾಯ

ಅರ್ಜುನನು ಕೇಳಿದ್ದು:

ಎಲೈ ಕೃಷ್ಣನೆ, ಕರ್ಮಗಳನ್ನು ಬಿಡುವದನ್ನೂ ಹೊಗಳುತ್ತಿದ್ದೀಯೆ ಮತ್ತು

ಅವುಗಳನ್ನು ಮಾಡಬೇಕೆಂಬುದನ್ನೂ ಹೊಗಳುತ್ತಿದ್ದೀಯೆ, ಇವೆರಡರಲ್ಲಿ ಯಾವದು ಹೆಚ್ಚು ಒಳ್ಳೆಯದೋ ಅದೊಂದನ್ನೇ ಗೊತ್ತಾಗಿ ಹೇಳಿಬಿಡು.

ಶ್ರೀಭಗವಂತನು ಹೇಳಿದ್ದು:

ಸಂನ್ಯಾಸವೂ ಕರ್ಮಯೋಗವೂ ಎರಡೂ ಮುಕ್ತಿಯನ್ನು ಕೊಡುವವುಗಳೇ ; ಆದರೆ ಇವೆರಡರಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವೇ ಹೆಚ್ಚಿನದಾಗಿರುವದು. ಯಾವಾತನು ಯಾವದೊಂದನ್ನೂ ಬೇಡವೆನ್ನದೆಯೂ ಬೇಕೆನ್ನದೆಯೂ ಇರುವನೋ ಅವನು ನಿತ್ಯಸಂನ್ಯಾಸಿಯೆಂದು ತಿಳಿಯಬೇಕು ; ಏಕೆಂದರೆ, ಎಲೈ ಮಹಾಬಾಹುವೆ, ದ್ವಂದ್ವಗಳಿಲ್ಲದವನಾದ್ದರಿಂದ ಅವನು ಸುಲಭವಾಗಿ ಬಂಧದಿಂದ ಬಿಡುಗಡೆಯಾಗುತ್ತಾನೆ. (1–3)

ಟಿ॥ ಆತ್ಮನನ್ನರಿಯದವನಿಗೆ ಕರ್ಮಯೋಗವೇ ಹೆಚ್ಚಿನದು, ಏಕೆಂದರೆ ಅವನು ಅದರಿಂದ ಕರ್ಮಸಂನ್ಯಾಸದ ಹಾದಿಯನ್ನು ಸೇರಿದವನಾಗುತ್ತಾನೆ.

ಸಾಙ್ಖ್ಯಯೋಗೌ ಪೃಥಗ್ಬಾಲಾಃ। ಪ್ರವದನ್ತಿ ನ ಪಣ್ಡಿತಾಃ।
ಏಕಮಪ್ಯಾಸ್ಥಿತಃ ಸಮ್ಯ-ಗುಭಯೋರ್ವಿನ್ದತೇ ಫಲಮ್ ॥ 4 ॥

ಯತ್ಸಾಙ್ಖ್ಯೈಃ ಪ್ರಾಪ್ಯತೇ ಸ್ಥಾನಂ। ತದ್ಯೋಗೈರಪಿ ಗಮ್ಯತೇ।
ಏಕಂ ಸಾಙ್ಖ್ಯಂ ಚ ಯೋಗಂ ಚ। ಯಃ ಪಶ್ಯತಿ ಸ ಪಶ್ಯತಿ ॥ 5 ॥

ಸಂನ್ಯಾಸಸ್ತು ಮಹಾಬಾಹೋ। ದುಃಖಮಾಪ್ತುಮಯೋಗತಃ।
ಯೋಗಯುಕ್ತೋ ಮುನಿರ್ಬ್ರಹ್ಮ। ನ ಚಿರೇಣಾಧಿಗಚ್ಛತಿ ॥ 6 ॥

ಸಾಂಖ್ಯ-ಯೋಗಗಳೆರಡೂ ಬೇರೆಬೇರೆಯೆಂದು ಮೂಢರು ಹೇಳುವರೇ ಹೊರತು ಪಂಡಿತರು ಹೇಳರು ; ಏಕೆಂದರೆ ಇವುಗಳಲ್ಲಿ ಒಂದನ್ನು ಸರಿಯಾಗಿ ನಡೆಸಿದರೂ ಸಾಕು, ಎರಡರ ಫಲವನ್ನೂ ಪಡೆಯುತ್ತಾನೆ. ಸಾಂಖ್ಯರು ಯಾವ ಸ್ಥಾನವನ್ನು ಪಡೆಯುವರೋ ಅದನ್ನು ಯೋಗಿಗಳೂ ಹೊಂದಬಹುದು ; ಸಾಂಖ್ಯವೂ ಯೋಗವೂ ಒಂದೇ- ಎಂಬುದನ್ನು ಯಾವನು ಕಂಡುಕೊಂಡಿರುವನೋ ಅವನೇ ನಿಜವನ್ನುಕಂಡವನು. ಆದರೆ, ಎಲೈ ಮಹಾಬಾಹುವೆ,

ಸಂನ್ಯಾಸವು ಯೋಗವಿಲ್ಲದೆ ದೊರಕುವದು ಕಷ್ಟ ; ಯೋಗದಿಂದ ಕೂಡಿರುವ ಮುನಿಯು ಸಂನ್ಯಾಸವನ್ನು ತಡವಿಲ್ಲದೆ ಪಡೆಯುತ್ತಾನೆ. (4–6)

ಟಿ॥ ಕರ್ಮಕ್ಕೂ ಸಂನ್ಯಾಸಕ್ಕೂ ಒಂದೇ ಫಲ, ಏಕೆಂದರೆ ಕರ್ಮಯೋಗದಿಂದ ಬೇಗನೆ ಪರಮಾರ್ಥಸಂನ್ಯಾಸವನ್ನೇ ಪಡೆದು ಮುಕ್ತನಾಗಬಹುದಾಗಿದೆ. ಪರಮಾತ್ಮಜ್ಞಾನವು ಕರ್ಮಯೋಗವಿಲ್ಲದೆ ಲಭಿಸುವದು ಕಷ್ಟವಾದ್ದರಿಂದ ಕರ್ಮಯೋಗವೇ ಕರ್ಮಸಂನ್ಯಾಸಕ್ಕಿಂತ ಹೆಚ್ಚೆಂದು ಮೇಲೆ ಹೇಳಿದ್ದಾಗಿದೆ.

ಯೋಗಯುಕ್ತೋ ವಿಶುದ್ಧಾತ್ಮಾ। ವಿಜಿತಾತ್ಮಾ ಜಿತೇನ್ದ್ರಿಯಃ।
ಸರ್ವಭೂತಾತ್ಮಭೂತಾತ್ಮಾ। ಕುರ್ವನ್ನಪಿ ನ ಲಿಪ್ಯತೇ ॥ 7 ॥

ನೈವ ಕಿಂಚಿತ್ಕರೋಮೀತಿ। ಯುಕ್ತೋ ಮನ್ಯೇತ ತತ್ತ್ವವಿತ್।
ಪಶ್ಯಞ್ಶೃಣ್ವನ್ ಸ್ಪೃಶಞ್ಜಿಘ್ರ–ನ್ನಶ್ನನ್ ಗಚ್ಛನ್ ಸ್ವಪನ್ ಶ್ವಸನ್ ॥ 8 ॥
ಪ್ರಲಪನ್ ವಿಸೃಜನ್ ಗೃಹ್ಣ–ನ್ನುನ್ಮಿಷನ್ನಿಮಿಷನ್ನಪಿ।
ಇನ್ದ್ರಿಯಾಣೀನ್ದ್ರಿಯಾರ್ಥೇಷು। ವರ್ತನ್ತ ಇತಿ ಧಾರಯನ್ ॥ 9 ॥

ಯೋಗದಿಂದ ಕೂಡಿದವನು ಚಿತ್ತಶುದ್ಧಿಯನ್ನು ಹೊಂದಿ ದೇಹವನ್ನು ವಶದಲ್ಲಿಟ್ಟುಕೊಂಡು ಇಂದ್ರಿಯಗಳನ್ನೂ ಗೆದ್ದುಕೊಂಡು ಸಕಲಪ್ರಾಣಿಗಳಿಗೂ ಆತ್ಮನಾಗಿರುವವನನ್ನೇ ತನ್ನ ಆತ್ಮನಾಗಿ ಮಾಡಿಕೊಳ್ಳುತ್ತಾನೆ ; ಅವನು ಲೋಕ ಸಂಗ್ರಹಕ್ಕಾಗಿ ಕರ್ಮವನ್ನು ಮಾಡಿದರೂ ಅದು ಅವನಿಗೆ ಅಂಟುವದಿಲ್ಲ. ತತ್ತ್ವವನ್ನು ಬಲ್ಲಾತನು ತಾನು ನೋಡುವಾಗಲೂ ಕೇಳುವಾಗಲೂ ಮುಟ್ಟುವಾಗಲೂ ಮೂಸುವಾಗಲೂ ತಿನ್ನುವಾಗಲೂ ನಡೆಯುವಾಗಲೂ ನಿದ್ರಿಸುವಾಗಲೂ ಉಸಿರಾಡುತ್ತಿರುವಾಗಲೂ ಮಾತಾಡುವಾಗಲೂ ದೇಹಮಲವನ್ನುಬಿಡುವಾಗಲೂ ವಿಷಯವನ್ನುತೆಗೆದುಕೊಳ್ಳುವಾಗಲೂ ಕಣ್ಣುಬಿಡುವಾಗಲೂ ಕಣ್ಣುಮುಚ್ಚು ವಾಗಲೂ ಇಂದ್ರಿಯಗಳು ಇಂದ್ರಿಯಾರ್ಥಗಳಲ್ಲಿ ಎರಗುತ್ತಿವೆಯೆಂದುಕೊಂಡು ಯುಕ್ತನಾಗಿ 'ನಾನೇನೂ ಮಾಡುತ್ತಿರುವದಿಲ್ಲ' ಎಂದೆಣಿಸುವನು. (7–9)

ಟಿ॥ ಅನಾತ್ಮರೂಪವಾದ ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಲ್ಲಿ ಎರಗುವವೆಂದೂ ಆ ಕರ್ಮವು ಪರಮಾರ್ಥವಾಗಿ ತನಗೆ ಸೇರಿಲ್ಲವೇ ಇಲ್ಲ– ಎಂದೂ ಜ್ಞಾನಿಯು ಎಣಿಸಿರುವನು.

ಬ್ರಹ್ಮಣ್ಯಾಧಾಯ ಕರ್ಮಾಣಿ। ಸಙ್ಗಂ ತ್ಯಕ್ತ್ವಾ ಕರೋತಿ ಯಃ।
ಲಿಪ್ಯತೇ ನ ಸ ಪಾಪೇನ। ಪದ್ಮಪತ್ರಮಿವಾಮ್ಭಸಾ ॥ 10 ॥

ಕಾಯೇನ ಮನಸಾ ಬುದ್ಧ್ಯಾ। ಕೇವಲೈರಿನ್ದ್ರಿಯೈರಪಿ।
ಯೋಗಿನಃ ಕರ್ಮ ಕುರ್ವನ್ತಿ। ಸಙ್ಗಂ ತ್ಯಕ್ತ್ವಾತ್ಮಶುದ್ಧಯೇ ॥ 11 ॥

ಯುಕ್ತಃ ಕರ್ಮಫಲಂ ತ್ಯಕ್ತ್ವಾ। ಶಾನ್ತಿಮಾಪ್ನೋತಿ ನೈಷ್ಠಿಕೀಮ್।
ಅಯುಕ್ತಃ ಕಾಮಕಾರೇಣ। ಫಲೇ ಸಕ್ತೋ ನಿಬಧ್ಯತೇ ॥ 12 ॥

ಯಾವಾತನು ಈಶ್ವರನಿಗೆ ಕರ್ಮಗಳನ್ನು ಅರ್ಪಿಸಿ, ಸಂಗವನ್ನು ಬಿಟ್ಟು ಕರ್ಮವನ್ನು ಮಾಡುತ್ತಿರುವನೋ ಅವನು ತಾವರೆಯೆಲೆಯು ನೀರಿನಂಟಿಲ್ಲದಿರುವಂತೆ ಪಾಪದ ಅಂಟಿಲ್ಲದೆ ಇರುವನು. ಯೋಗಿಗಳು ಶರೀರದಿಂದಲೂ ಮನಸ್ಸಿನಿಂದಲೂ ಬುದ್ಧಿಯಿಂದಲೂ ಕೇವಲ ಇಂದ್ರಿಯಗಳಿಂದಲೂ ಸಂಗವನ್ನು ಬಿಟ್ಟು ಚಿತ್ತಶುದ್ಧಿಗಾಗಿ ಕರ್ಮವನ್ನು ಮಾಡುತ್ತಿರುವರು. ಯೋಗಿಯು ಕರ್ಮಫಲವನ್ನು

ಬಿಟ್ಟು, ತನ್ನ ನಿಷ್ಠೆಯಿಂದ ಶಾಂತಿಯನ್ನು ಹೊಂದುತ್ತಾನೆ, ಯೋಗಿಯಲ್ಲದವನು ಕಾಮವಶನಾಗಿ ಫಲದಲ್ಲಿಸಂಗವನ್ನಿಟ್ಟುಕೊಂಡು ಕಟ್ಟುಬೀಳುತ್ತಾನೆ. (10–12)

ಟಿ॥ ಸಂಗವು 'ನಾನು ಮಾಡುವೆನು, ನನಗೆ ಈ ಫಲವಾಗಬೇಕು'– ಎಂಬ ಎರಡು ಬಗೆಯಲ್ಲಿ ಉಂಟಾಗುತ್ತದೆ. ಕರ್ಮಯೋಗಿಗೆ ನಾನು ಮಾಡುವೆನೆಂಬ ಸಂಗವಿದ್ದರೂ ಈಶ್ವರನ ಪ್ರೀತ್ಯರ್ಥವಾಗಿ ಮಾಡುವೆನೆಂಬ ಬುದ್ಧಿಯಿರುವದರಿಂದ ಅವನಿಗೆ ಫಲಸಂಗದ ಕಟ್ಟು ಇರುವದಿಲ್ಲ.

ಸರ್ವಕರ್ಮಾಣಿ ಮನಸಾ । ಸಂನ್ಯಸ್ಯಾಸ್ತೇ ಸುಖಂ ವಶೀ ।
ನವದ್ವಾರೇ ಪುರೇ ದೇಹೀ । ನೈವ ಕುರ್ವನ್ ನ ಕಾರಯನ್ ॥ 13 ॥

ನ ಕರ್ತೃತ್ವಂ ನ ಕರ್ಮಾಣಿ । ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ । ಸ್ವಭಾವಸ್ತು ಪ್ರವರ್ತತೇ ॥ 14 ॥

ನಾದತ್ತೇ ಕಸ್ಯಚಿತ್ಪಾಪಂ । ನ ಚೈವ ಸುಕೃತಂ ವಿಭುಃ ।
ಅಜ್ಞಾನೇನಾವೃತಂ ಜ್ಞಾನಂ । ತೇನ ಮುಹ್ಯನ್ತಿ ಜನ್ತವಃ ॥ 15 ॥

**ಜ್ಞಾನೇನ ತು ತದಜ್ಞಾನಂ। ಯೇಷಾಂ ನಾಶಿತಮಾತ್ಮನಃ।**
**ತೇಷಾಮಾದಿತ್ಯವಜ್ಞ್ಞಾನಂ। ಪ್ರಕಾಶಯತಿ ತತ್ಪರಮ್ ॥ 16 ॥**

ಎಲ್ಲಾ ಕರ್ಮಗಳನ್ನೂ ಮನಸ್ಸಿನಿಂದ ಸಂನ್ಯಾಸಮಾಡಿ ಇಂದ್ರಿಯಗಳನ್ನೂ ವಶದಲ್ಲಿಟ್ಟುಕೊಂಡಿರುವಾತನು ಏನೂ ಮಾಡದೆ, ಏನನ್ನೂ ಮಾಡಿಸದೆ, ಒಂಬತ್ತು ದ್ವಾರಗಳ ದೇಹಪುರದಲ್ಲಿ ಸುಖವಾಗಿ ಇದ್ದುಕೊಂಡಿರುವನು. ಈಶ್ವರನು ಜನರಿಗೆ ಕರ್ತೃತ್ವವನ್ನು ಉಂಟುಮಾಡಿರುವದಿಲ್ಲ, ಬೇಕಾದ ಪದಾರ್ಥಗಳೆಂಬವನ್ನೂ ಉಂಟುಮಾಡಿರುವದಿಲ್ಲ. ಕರ್ಮಫಲಗಳ ಸಂಬಂಧವನ್ನೂ ಉಂಟುಮಾಡುವದಿಲ್ಲ, ಅವಿದ್ಯಾಸ್ವಭಾವವೇ ಕೆಲಸಮಾಡುತ್ತಿರುವದು. ಈಶ್ವರನು ಯಾರೊಬ್ಬರ ಪಾಪವನ್ನೂ ತೆಗೆದುಕೊಳ್ಳುವದಿಲ್ಲ, ಪುಣ್ಯವನ್ನೂ ತೆಗೆದುಕೊಳ್ಳುವದಿಲ್ಲ ; ಜ್ಞಾನವನ್ನು ಅಜ್ಞಾನವು ಮುಸುಕಿಕೊಂಡಿರುವದು, ಅದರಿಂದ ಪ್ರಾಣಿಗಳು ಮೋಹಗೊಳ್ಳುತ್ತಿರುವವು. ಆದರೆ ಯಾರಿಗೆ ಆ ಆತ್ಮವಿಷಯಕವಾದ ಅಜ್ಞಾನವು ಜ್ಞಾನದಿಂದ ನಾಶವಾಗಿರುವದೋ ಅವರಿಗೆ ಆ ಜ್ಞಾನವು ಸೂರ್ಯನಂತೆ ಪರಮಾತ್ಮನನ್ನು ಬೆಳಗಿಸಿ ತೋರಿಸುವದು. (13–16)

ಟಿ॥ ಜ್ಞಾನಿಗೆ ಯಾವ ಸಂಗವೂ ಇಲ್ಲ, ಅವನು ತಾನು ಯಾವಾಗಲೂ ನಿತ್ಯ ಮುಕ್ತನೆಂಬ ಅರಿವನ್ನು ಹೊಂದಿರುತ್ತಾನೆ. ಅಜ್ಞರಂತೆ ಅವನು ಆತ್ಮನಲ್ಲಿ ಕ್ರಿಯಾಕಾರಕ ಫಲಗಳನ್ನು ಕಲ್ಪಿಸಿಕೊಂಡು ಪಾಪಪುಣ್ಯಗಳಿಗೆ ಕಟ್ಟುಬೀಳುವದಿಲ್ಲ. ಜೀವೇಶ್ವರಭೇದ ವನ್ನು ಕಲ್ಪಿಸಿಕೊಂಡಿರುವದಿಲ್ಲ. ಆದ್ದರಿಂದ ಅವನು ನಿತ್ಯಾನಂದವನ್ನು ಅನುಭವಿಸುತ್ತಿರುವನು.

ತದ್ಬುದ್ಧಯಸ್ತದಾತ್ಮಾನ–ಸ್ತನ್ನಿಷ್ಠಾಸ್ತತ್ಪರಾಯಣಾಃ ।
ಗಚ್ಛನ್ತ್ಯಪುನರಾವೃತ್ತಿಂ । ಜ್ಞಾನನಿರ್ಧೂತಕಲ್ಮಷಾಃ ॥ 17 ॥

ವಿದ್ಯಾವಿನಯಸಂಪನ್ನೇ । ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ । ಪಂಡಿತಾಃ ಸಮದರ್ಶಿನಃ ॥ 18 ॥

ಇಹೈವ ತೈರ್ಜಿತಃ ಸರ್ಗೋ । ಯೇಷಾಂ ಸಾಮ್ಯೇ ಸ್ಥಿತಂ ಮನಃ ।
ನಿರ್ದೋಷಂ ಹಿ ಸಮಂ ಬ್ರಹ್ಮ । ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ ॥ 19 ॥

ನ ಪ್ರಹೃಷ್ಯೇತ್ಪ್ರಿಯಂ ಪ್ರಾಪ್ಯ । ನೋದ್ವಿಜೇತ್ಪ್ರಾಪ್ಯ ಚಾಪ್ರಿಯಮ್ ।
ಸ್ಥಿರಬುದ್ಧಿರಸಮ್ಮೂಢೋ । ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ ॥ 20 ॥

ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ। ವಿನ್ದತ್ಯಾತ್ಮನಿ ಯತ್ಸುಖಮ್ ।
ಸ ಬ್ರಹ್ಮಯೋಗಯುಕ್ತಾತ್ಮಾ। ಸುಖಮಕ್ಷಯ್ಯಮಶ್ನುತೇ ॥ 21 ॥
ಯೇ ಹಿ ಸಂಸ್ಪರ್ಶಜಾ ಭೋಗಾ–ದುಃಖಯೋನಯ ಏವ ತೇ।
ಆದ್ಯನ್ತವನ್ತಃ ಕೌನ್ತೇಯ। ನ ತೇಷು ರಮತೇ ಬುಧಃ ॥ 22 ॥
ಶಕ್ನೋತೀಹೈವ ಯಃ ಸೋಢುಂ। ಪ್ರಾಕ್ಶರೀರವಿಮೋಕ್ಷಣಾತ್ ।
ಕಾಮಕ್ರೋಧೋದ್ಭವಂ ವೇಗಂ। ಸ ಯುಕ್ತಃ ಸ ಸುಖೀ ನರಃ ॥ 23 ॥
ಯೋಽನ್ತಃ ಸುಖೋಽನ್ತರಾರಾಮ–ಸ್ತಥಾನ್ತರ್ಜ್ಯೋತಿರೇವ ಯಃ।
ಸ ಯೋಗೀ ಬ್ರಹ್ಮನಿರ್ವಾಣಂ। ಬ್ರಹ್ಮಭೂತೋಽಧಿಗಚ್ಛತಿ ॥ 24 ॥
ಲಭನ್ತೇ ಬ್ರಹ್ಮನಿರ್ವಾಣ–ಮೃಷಯಃ ಕ್ಷೀಣಕಲ್ಮಷಾಃ।
ಛಿನ್ನದ್ವೈಧಾ ಯತಾತ್ಮಾನಃ। ಸರ್ವಭೂತಹಿತೇ ರತಾಃ ॥ 25 ॥
ಕಾಮಕ್ರೋಧವಿಯುಕ್ತಾನಾಂ। ಯತೀನಾಂ ಯತಚೇತಸಾಮ್ ।
ಅಭಿತೋ ಬ್ರಹ್ಮನಿರ್ವಾಣಂ। ವರ್ತತೇ ವಿದಿತಾತ್ಮನಾಮ್ ॥ 26 ॥

ಆ ಪರಮಾತ್ಮನಲ್ಲಿಯೇ ಬುದ್ಧಿಯನ್ನಿಟ್ಟವರಾಗಿ, ಆತನೇ ತಮ್ಮ ಆತ್ಮನೆಂದು ಕಂಡುಕೊಂಡವರಾಗಿ, ಆತನಲ್ಲಿಯೇ ತಾತ್ಪರ್ಯದಿಂದ ನಿಲುಗಡೆಯನ್ನು ಹೊಂದಿ, ಆತನೇ ಪರಮಗತಿಯೆಂದು ನಿಶ್ಚಯಿಸಿದವರಾಗಿ ಅವರು ಜ್ಞಾನದಿಂದ ಕಲ್ಮಷವನ್ನೆಲ್ಲ ತೊಳೆದುಕೊಂಡು ಸಂಸಾರಕ್ಕೆ ಮರಳಿಬಾರದ ಮುಕ್ತಿಯನ್ನು ಹೊಂದುವರು. ಪಂಡಿತರಾದವರು ವಿದ್ಯಾವಿನಯಗಳಿಂದೊಡಗೂಡಿದ-ಬ್ರಾಹ್ಮಣನಲ್ಲಿಯೂ ಗೋವಿನಲ್ಲಿಯೂ ಆನೆಯಲ್ಲಿಯೂ ನಾಯಿಯಲ್ಲಿಯೂ ಚಂಡಾಲನಲ್ಲಿಯೂ ಸಮದರ್ಶಿಗಳಾಗಿರುವರು. ಯಾರ ಮನಸ್ಸು ಸಮವಾದ ಬ್ರಹ್ಮದಲ್ಲಿ ನಿಂತಿರುವದೋ ಅವರು ಇಲ್ಲಿ ಬದುಕಿರುವಾಗಲೇ ಜನ್ಮವನ್ನು ಜಯಿಸಿದಂತೆ, ಬ್ರಹ್ಮವು ನಿರ್ದೋಷವಾಗಿಯೂ ಒಂದೇ ಸಮನಾಗಿರುವದಾಗಿಯೂ ಇರುವದಲ್ಲವೆ ? ಆದ್ದರಿಂದ ಅವರು ಬ್ರಹ್ಮದಲ್ಲಿಯೇ ಇದ್ದುಕೊಂಡಿರುವರು. ಬ್ರಹ್ಮವನ್ನರಿತು ಬ್ರಹ್ಮದಲ್ಲಿಯೇ ನಿಂತಿರುವಾತನು ತನಗೆ ಪ್ರಿಯವಾದದ್ದು ಸಿಕ್ಕಿದರೆ ಹಿಗ್ಗನು, ಅಪ್ರಿಯವಾದದ್ದು ಬಂದೊದಗಿದರೆ ತಗ್ಗನು. ಅವನ ಬುದ್ಧಿಯು ನಿಲುಗಡೆಯನ್ನು ಹೊಂದಿರುವದು, ಅವನು ಯಾವ ಮೋಹವನ್ನೂ ಹೊಂದದೆ

ಇರುವನು. ಅವನು ಹೊರಗಿನ ವಿಷಯಗಳಲ್ಲಿ ಆಸಕ್ತವಾಗಿಲ್ಲದ ಮನಸ್ಸುಳ್ಳವ ನಾಗಿ, ಸುಖವೆಂಬುದನ್ನು ಆತ್ಮನಲ್ಲಿಯೇ ಪಡೆದುಕೊಳ್ಳುತ್ತಾನೆ ; ಬ್ರಹ್ಮಯೋಗ ದಿಂದ ಮನಸ್ಸು ಸಮಾಧಾನವನ್ನು ಹೊಂದಿ ನಾಶರಹಿತವಾದ ಸುಖವನ್ನು ಪಡೆಯುವನು. ವಿಷಯೇಂದ್ರಿಯಗಳು ಒಂದನ್ನೊಂದು ಸೋಂಕುವದರಿಂದ ಆಗುವ ಭೋಗಗಳು ದುಃಖಕ್ಕೆ ಕಾರಣವಾಗಿಯೇ ಇರುವವು ; ಎಲೈ ಕುಂತೀಕುಮಾರನೆ, ಅವುಗಳಿಗೆ ಮೊದಲೂ ಕೊನೆಯೂ ಉಂಟು. ಜ್ಞಾನನಾದ ವನು ಅವುಗಳಲ್ಲಿ ರತಿಯುಳ್ಳವನಾಗಿರುವದಿಲ್ಲ . ಯಾವನು ಈ ಜನ್ಮದಲ್ಲಿಯೇ ದೇಹವನ್ನು ಬಿಡುವವರೆಗೂ ಕಾಮಕ್ರೋಧಗಳ ವೇಗವನ್ನು ಮೊದಲೇ ತಡೆದುಕೊಳ್ಳುತ್ತಿರ ಬಲ್ಲವನಾಗಿರುವನೋ ಆ ಮನುಷ್ಯನೇ ಯೋಗಿಯು, ಅವನೇ ಸುಖಿಯು ! ಯಾವನು ತನ್ನೊಳಗೇ ಸುಖವನ್ನು ಹೊಂದುವವನಾಗಿ ತನ್ನೊಳಗೇ ಕ್ರೀಡಿಸುತ್ತಾ ತನ್ನೊಳಗಿನ ಬೆಳಕನ್ನೇ . ಉಪಯೋಗಿಸುತ್ತಿರುವನೋ ಆ ಯೋಗಿಯು ಬ್ರಹ್ಮವಾಗಿ ಬ್ರಹ್ಮನಿರ್ವಾಣವನ್ನು ಹೊಂದುತ್ತಾನೆ. ಪಾಪಗಳನ್ನೆಲ್ಲ ನಾಶಮಾಡಿಕೊಂಡು, ಸಂಶಯಗಳನ್ನೆಲ್ಲ ಕತ್ತರಿಸಿಕೊಂಡು ಜಿತೇಂದ್ರಿಯರಾಗಿ ಸರ್ವಪ್ರಾಣಿಗಳಿಗೂ

ಹಿತವನ್ನೆಸಗುವದರಲ್ಲಿಯೇ ನಿರತರಾಗಿರುವ ಋಷಿಗಳು ಬ್ರಹ್ಮನಿರ್ವಾಣವನ್ನು ಪಡೆಯುತ್ತಾರೆ. ಕಾಮಕ್ರೋಧಗಳಿಲ್ಲದೆ ಚಿತ್ತವನ್ನು ವಶಗೊಳಿಸಿಕೊಂಡು ಆತ್ಮಸ್ವರೂಪವನ್ನರಿತುಕೊಂಡಿರುವ ಯತಿಗಳಿಗೆ ಬ್ರಹ್ಮ ನಿರ್ವಾಣವು ಎಲ್ಲೆಲ್ಲಿಯೂ ಇದ್ದುಕೊಂಡಿರುವದು. (17–26)

ಟಿ॥ ಮೇಲಿನ ಹತ್ತು ಶ್ಲೋಕಗಳಲ್ಲಿ ವರ್ಣಿಸಿರುವದು ಜ್ಞಾನಿಗಳ ವ್ಯವಹಾರವು. ಜ್ಞಾನದಿಂದ ಮೋಕ್ಷವನ್ನು ಪಡೆದುಕೊಳ್ಳಬೇಕೆನ್ನುವವರು ಈ ಬಗೆಯ ವ್ಯವಹಾರವನ್ನು ಇಟ್ಟುಕೊಳ್ಳಬೇಕೆಂದು ಇದರಿಂದ ಸೂಚಿಸಿದಂತೆ ಆಯಿತು.

ಸ್ಪರ್ಶಾನ್ಕೃತ್ವಾ ಬಹಿರ್ಬಾಹ್ಯಾಂ–ಶ್ಚಕ್ಷುಶ್ಚೈವಾನ್ತರೇ ಭ್ರುವೋಃ ।
ಪ್ರಾಣಾಪಾನೌ ಸಮೌ ಕೃತ್ವಾ । ನಾಸಾಭ್ಯನ್ತರಚಾರಿಣೌ ॥ 27 ॥
ಯತೇನ್ದ್ರಿಯಮನೋಬುದ್ಧಿ–ರ್ಮುನಿರ್ಮೋಕ್ಷಪರಾಯಣಃ ।
ವಿಗತೇಚ್ಛಾಭಯಕ್ರೋಧೋ । ಯಃ ಸದಾ ಮುಕ್ತ ಏವ ಸಃ ॥ 28 ॥

ಯಾವನು ಹೊರಗಿನ ವಿಷಯಗಳನ್ನು ಹೊರಗೇ ಇಟ್ಟು, ಕಣ್ಣಿನ ನೋಟವನ್ನು ಹುಬ್ಬುಗಳ ನಡುವೆ ಇಟ್ಟು, ಮೂಗಿನೊಳಗೆ ಸರಿದಾಡುತ್ತಿರುವ

ಪ್ರಾಣಾಪಾನಗಳನ್ನು ಸಮಗೊಳಿಸಿಕೊಂಡು, ಇಂದ್ರಿಯಗಳನ್ನೂ ಮನಸ್ಸನ್ನೂ ಬುದ್ಧಿಯನ್ನೂ ವಶದಲ್ಲಿಟ್ಟುಕೊಂಡು ಮೋಕ್ಷವೇ ಹೆಚ್ಚಿನ ಗತಿಯೆಂದು ನಂಬಿ; ಇಚ್ಛೆ, ಭಯ, ಕ್ರೋಧ – ಇವುಗಳನ್ನು ನೀಗಿಕೊಂಡ ಮುನಿಯಾಗುವನೋ ಅವನು ಯಾವಾಗಲೂ ಮುಕ್ತನೇ.

ಟಿ॥ ಮುಕ್ತಿಸಾಧನವಾದ ಜ್ಞಾನಕ್ಕೆ ಕರ್ಮಯೋಗವು ಹೊರಗಿನ ಸಾಧನ. ಧ್ಯಾನಯೋಗವು ಒಳಗಿನ ಸಾಧನ. ಈ ಒಳಗಿನ ಸಾಧನವನ್ನು ಮುಂದಿನ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳಬೇಕಾಗಿರುವದರಿಂದ ಇಲ್ಲಿ ಅದಕ್ಕೆ ಸೂತ್ರರೂಪವಾಗಿ ಎರಡು ಶ್ಲೋಕಗಳನ್ನು ಕೊಟ್ಟಿರುತ್ತದೆ.

**ಭೋಕ್ತಾರಂ ಯಜ್ಞತಪಸಾಂ । ಸರ್ವಲೋಕಮಹೇಶ್ವರಮ್ ।**
**ಸುಹೃದಂ ಸರ್ವಭೂತಾನಾಂ । ಜ್ಞಾತ್ವಾ ಮಾಂ ಶಾನ್ತಿಮೃಚ್ಛತಿ ॥ 29 ॥**

**ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ**
**ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ**
**ಸಂನ್ಯಾಸಯೋಗೋ ನಾಮ ಪಂಚಮೋಽಧ್ಯಾಯಃ**

ಯಜ್ಞಗಳ ಮತ್ತು ತಪಸ್ಸುಗಳ ಭೋಕ್ತನೂ ಸರ್ವಲೋಕಗಳಿಗೂ ಮಹೇಶ್ವರನೂ ಸಕಲಪ್ರಾಣಿಗಳಿಗೂ ಪರೋಪಕಾರಿಯೂ ಆಗಿರುವ ನನ್ನನ್ನು ಅರಿತುಕೊಂಡರೆ ಶಾಂತಿಯನ್ನು ಹೊಂದುತ್ತಾನೆ. (29)

ಟಿ|| ಯಜ್ಞಗಳನ್ನು ಮಾಡಿ ಮುಂದೆ ಫಲವನ್ನನುಭವಿಸುವ ಯಜಮಾನನೂ ಪರಮಾತ್ಮನೇ. ಯಜ್ಞದ ಆಹುತಿಯನ್ನು ಭುಂಜಿಸುವ ದೇವತೆಯೂ ಪರಮಾತ್ಮನೇ, ಸರ್ವಸಾಕ್ಷಿಯೂ ಸರ್ವಕರ್ಮಗಳಿಗೂ ಫಲದಾತನೂ ಪರಮಾತ್ಮನೇ. ಈ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವದೇ ಧ್ಯಾನಯೋಗದ ಗುರಿ.

ಸಂನ್ಯಾಸಯೋಗವೆಂಬ ಐದನೆಯ ಅಧ್ಯಾಯವು ಮುಗಿಯಿತು.

----------

## ಅಥ ಷಷ್ಠೋಽಧ್ಯಾಯಃ

ಶ್ರೀಭಗವಾನುವಾಚ –

ಅನಾಶ್ರಿತಃ ಕರ್ಮಫಲಂ। ಕಾರ್ಯಂ ಕರ್ಮ ಕರೋತಿ ಯಃ।
ಸ ಸಂನ್ಯಾಸೀ ಚ ಯೋಗೀ ಚ।ನ ನಿರಗ್ನಿರ್ನ ಚಾಕ್ರಿಯಃ ॥ 1 ॥

ಯಂ ಸಂನ್ಯಾಸಮಿತಿ ಪ್ರಾಹು–ರ್ಯೋಗಂ ತಂ ವಿದ್ಧಿ ಪಾಣ್ಡವ।
ನ ಹ್ಯಸಂನ್ಯಸ್ತಸಙ್ಕಲ್ಪೋ। ಯೋಗೀ ಭವತಿ ಕಶ್ಚನ ॥ 2 ॥

ಆರುರುಕ್ಷೋರ್ಮುನೇರ್ಯೋಗಂ। ಕರ್ಮ ಕಾರಣಮುಚ್ಯತೇ।
ಯೋಗಾರೂಢಸ್ಯ ತಸ್ಯೈವ। ಶಮಃ ಕಾರಣಮುಚ್ಯತೇ ॥ 3 ॥

## ಆರನೆಯ ಅಧ್ಯಾಯ

ಶ್ರೀಭಗವಂತನು ಹೇಳಿದ್ದು:

ಯಾವನು ಕರ್ಮಫಲವನ್ನು ನೆಚ್ಚಿಕೊಂಡಿರದೆ ಮಾಡಬೇಕಾದ ಕರ್ಮವನ್ನು ಮಾಡುತ್ತಲೇ ಇರುವನೋ ಅವನೇ ಸಂನ್ಯಾಸಿಯು ಮತ್ತು

ಯೋಗಿಯು, ಅಗ್ನಿಯಿಲ್ಲದವನೂ – ಯಾವ ಕರ್ಮವೂ ಇಲ್ಲದವನೂ ಅಲ್ಲ. ಎಲೈ ಪಾಂಡವನೆ, ಸಂನ್ಯಾಸವೆಂದು ಕರೆಯುತ್ತಾರಲ್ಲ, ಅದು ಯೋಗವೇ ಎಂದು ತಿಳಿ ; ಏಕೆಂದರೆ ಸಂಕಲ್ಪವನ್ನು ಸಂನ್ಯಾಸಮಾಡದೆ ಯಾವನೂ ಯೋಗಿಯಾಗುವದಿಲ್ಲ-ವಷ್ಟೆ ? ಯೋಗವನ್ನು ಏರಬೇಕೆನ್ನುವ ಮುನಿಗೆ ಕರ್ಮವು ಕಾರಣವೆನಿಸುವದು ; ಯೋಗವನ್ನು ಏರಿದಮೇಲೆ ಅವನಿಗೇ ಶಮವು ಕಾರಣವಾಗುತ್ತದೆ. (1–3)

ಟಿ॥ ಜ್ಞಾನಯೋಗದ ಮೊದಲನೆಯ ಮೆಟ್ಟಿಲಾದ ಕರ್ಮಯೋಗವನ್ನು ಏರಿದಮೇಲೆಯೇ ಎರಡನೆಯ ಮೆಟ್ಟಿಲಾದ ಧ್ಯಾನಯೋಗವನ್ನು ಏರುವದಕ್ಕಾಗುತ್ತದೆ. ಆದ್ದರಿಂದ ಕರ್ಮಯೋಗವನ್ನೇ ಮೊದಲು ಸಾಧನಮಾಡಬೇಕು. ಕರ್ಮಯೋಗದಲ್ಲಿಯೂ ಫಲಸಂನ್ಯಾಸವಿರುವದರಿಂದ ಕರ್ಮಯೋಗಿಯೂ ಸಂನ್ಯಾಸಿಯೇ. ಫಲದಾಸೆಯಿಲ್ಲದವನ ಚಿತ್ತವು ಸಮಾಧಾನವಾಗಿರುವದರಿಂದ ಕರ್ಮಯೋಗಿಯೂ ಯೋಗಿಯೇ. ಆದ್ದರಿಂದ ಯೋಗವನ್ನು ಏರುವಮುಂಚೆ ನಿಷ್ಕಾಮಕರ್ಮವೇ ಸಂನ್ಯಾಸವು. ಏರಿದಮೇಲೆ ಕರ್ಮಗಳನ್ನು ತ್ಯಜಿಸುವದೇ ಸಂನ್ಯಾಸವು.

**ಯದಾ ಹಿ ನೇನ್ದ್ರಿಯಾರ್ಥೇಷು । ನ ಕರ್ಮಸ್ವನುಷಜ್ಜತೇ ।**
**ಸರ್ವಸಙ್ಕಲ್ಪಸಂನ್ಯಾಸೀ । ಯೋಗಾರೂಢಸ್ತದೋಚ್ಯತೇ ॥ 4 ॥**

ಉದ್ಧರೇದಾತ್ಮನಾತ್ಮಾನಂ। ನಾತ್ಮಾನಮವಸಾದಯೇತ್।
ಆತ್ಮೈವ ಹ್ಯಾತ್ಮನೋ ಬನ್ಧು–ರಾತ್ಮೈವ ರಿಪುರಾತ್ಮನಃ ॥ 5 ॥
ಬಂಧುರಾತ್ಮಾತ್ಮನಸ್ತಸ್ಯ। ಯೇನಾತ್ಮೈವಾತ್ಮನಾ ಜಿತಃ।
ಅನಾತ್ಮನಸ್ತು ಶತ್ರುತ್ವೇ। ವರ್ತೇತಾತ್ಮೈವ ಶತ್ರುವತ್ ॥ 6 ॥
ಜಿತಾತ್ಮನಃ ಪ್ರಶಾನ್ತಸ್ಯ। ಪರಮಾತ್ಮಾ ಸಮಾಹಿತಃ।
ಶೀತೋಷ್ಣಸುಖದುಃಖೇಷು। ತಥಾ ಮಾನಾಪಮಾನಯೋಃ ॥ 7 ॥
ಜ್ಞಾನವಿಜ್ಞಾನತೃಪ್ತಾತ್ಮಾ। ಕೂಟಸ್ಥೋ ವಿಜಿತೇನ್ದ್ರಿಯಃ।
ಯುಕ್ತ ಇತ್ಯುಚ್ಯತೇ ಯೋಗೀ। ಸಮಲೋಷ್ಟಾಶ್ಮಕಾಞ್ಚನಃ ॥ 8 ॥
ಸುಹೃನ್ಮಿತ್ರಾರ್ಯುದಾಸೀನ–ಮಧ್ಯಸ್ಥದ್ವೇಷ್ಯಬನ್ಧುಷು।
ಸಾಧುಷ್ವಪಿ ಚ ಪಾಪೇಷು। ಸಮಬುದ್ಧಿರ್ವಿಶಿಷ್ಯತೇ ॥ 9 ॥

ಯಾವಾಗ ಇಂದ್ರಿಯಾರ್ಥಗಳಲ್ಲಾಗಲಿ ಕರ್ಮಗಳಲ್ಲಾಗಲಿ ಆಸಕ್ತನಾಗದೆ ಇರುವನೋ ಯಾವಾಗ ಸರ್ವಸಂಕಲ್ಪಗಳನ್ನೂ ಕೈಬಿಡುವನೋ ಆಗ

ಯೋಗಾರೂಢನೆನಿಸುವನು. ತನ್ನನ್ನು ತಾನು ಉದ್ಧಾರಮಾಡಿಕೊಳ್ಳಬೇಕು. ತನ್ನನ್ನು ತಾನೇ ಕೆಳಕ್ಕೆ ತಳ್ಳಿಕೊಳ್ಳಬಾರದು; ಏಕೆಂದರೆ ತನಗೆ ತಾನೇ ಮಿತ್ರನು, ತನಗೆ ತಾನೇ ಶತ್ರುವು. ಯಾವಾತನು ತನ್ನನ್ನುತಾನೇ ಗೆದ್ದುಕೊಂಡಿರುವನೋ ಅವನು ತನಗೆತಾನೇ ಮಿತ್ರನು. ಯಾವನು ಅಜಿತಾತ್ಮನಾಗಿರುವನೋ ಅವನು ತನಗೆತಾನೇ ಶತ್ರುವಿನಂತಿರುವನು. ಜಿತಾತ್ಮನಾಗಿ ಪ್ರಶಾಂತನಾಗಿರುವವನಿಗೆ ಪರಮಾತ್ಮನು ನೇರಾಗಿಯೇ ಪ್ರತ್ಯಕ್ಷನಾಗಿರುವನು. ಶೀತೋಷ್ಣಗಳಲ್ಲಿಯೂ ಸುಖದುಃಖಗಳಲ್ಲಿಯೂ ಮಾನಾಪಮಾನಗಳಲ್ಲಿಯೂ ಜ್ಞಾನವಿಜ್ಞಾನಗಳಿಂದ ಮನಸ್ಸನ್ನು ತೃಪ್ತಿಗೊಳಿಸಿ ಕೊಂಡು ಸ್ವಲ್ಪವೂ ಚಲಿಸದೆ ಜಿತೇಂದ್ರಿಯನಾಗಿ ಮಣ್ಣಿನ ಹೆಂಟೆ, ಕಲ್ಲು, ಚಿನ್ನ – ಇವುಗಳನ್ನೆಲ್ಲ ಸಮವಾಗಿ ಕಾಣುವ ಯೋಗಿಯೇ ಯುಕ್ತನೆನಿಸುತ್ತಾನೆ. ಉಪಕಾರಿ, ಮಿತ್ರ, ಶತ್ರು, ಉದಾಸೀನ, ಮಧ್ಯಸ್ಥನು, ದ್ವೇಷ್ಯನು, ಬಂಧು–ಇವರುಗಳಲ್ಲಿಯೂ; ಸಾಧುಗಳು, ಪಾಪಿಗಳು – ಇವರಲ್ಲಿಯೂ ಸಮಬುದ್ಧಿಯಾಗಿರುವವನು ಹೆಚ್ಚಿನವನು. (4–9)

ಟೀ॥ ಇವೆಲ್ಲ ಯೋಗಾರೂಢನ ಲಕ್ಷಣಗಳು. ಆರುರುಕ್ಷುವು ಹೊರಗಿನ ಕರ್ಮವನ್ನು ವಶದಲ್ಲಿಟ್ಟುಕೊಂಡಿರುವಂತೆ ಆರೂಢನು ಮನಸ್ಸನ್ನು ವಶಗೊಳಿಸಿಕೊಂಡಿರುವನು. ಮನಸ್ಸೇ ಕರ್ಮಗಳಿಗೆ ಮೂಲವಾದ್ದರಿಂದ ಆರೂಢನು ಕರ್ಮಗಳನ್ನು ಮೀರಿ ಮನಸ್ಸನ್ನು ಬಿಗಿಹಿಡಿದುಕೊಳ್ಳುವದರಲ್ಲಿ ನಿರತನಾಗಿರುವನು.

ಯೋಗೀ ಯುಞ್ಜೀತ ಸತತ–ಮಾತ್ಮಾನಂ ರಹಸಿ ಸ್ಥಿತಃ।
ಏಕಾಕೀ ಯತಚಿತ್ತಾತ್ಮಾ। ನಿರಾಶೀರಪರಿಗ್ರಹಃ ॥ 10 ॥

ಶುಚೌ ದೇಶೇ ಪ್ರತಿಷ್ಠಾಪ್ಯ। ಸ್ಥಿರಮಾಸನಮಾತ್ಮನಃ।
ನಾತ್ಯುಚ್ಛ್ರಿತಂ ನಾತಿನೀಚಂ। ಚೈಲಾಜಿನಕುಶೋತ್ತರಮ್ ॥ 11 ॥

ತತ್ರೈಕಾಗ್ರಂ ಮನಃ ಕೃತ್ವಾ। ಯತಚಿತ್ತೇನ್ದ್ರಿಯಕ್ರಿಯಃ।
ಉಪವಿಶ್ಯಾಸನೇ ಯುಞ್ಜ್ಯಾ–ದ್ಯೋಗಮಾತ್ಮವಿಶುದ್ಧಯೇ ॥ 12 ॥

ಸಮಂ ಕಾಯಶಿರೋಗ್ರೀವಂ। ಧಾರಯನ್ನಚಲಂ ಸ್ಥಿರಃ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ। ದಿಶಶ್ಚಾನವಲೋಕಯನ್ ॥ 13 ॥

ಪ್ರಶಾನ್ತಾತ್ಮಾ ವಿಗತಭೀ–ರ್ಬ್ರಹ್ಮಚಾರಿವ್ರತೇ ಸ್ಥಿತಃ ।
ಮನಃ ಸಂಯಮ್ಯ ಮಚ್ಚಿತ್ತೋ । ಯುಕ್ತ ಆಸೀತ ಮತ್ಪರಃ ॥ 14 ॥
ಯುಞ್ಜನ್ನೇವಂ ಸದಾತ್ಮಾನಂ । ಯೋಗೀ ನಿಯತಮಾನಸಃ ।
ಶಾನ್ತಿಂ ನಿರ್ವಾಣಪರಮಾಂ । ಮತ್ಸಂಸ್ಥಾಮಧಿಗಚ್ಛತಿ ॥ 15 ॥

ಯೋಗಿಯು ಏಕಾಂತಸ್ಥಲವನ್ನಿದ್ದುಕೊಂಡು ಎಡೆಬಿಡದೆ ಮನಸ್ಸನ್ನು ನಿಲ್ಲಿಸಿಕೊಳ್ಳಬೇಕು ; ಒಂಟಿಗನಾಗಿರಬೇಕು ; ದೇಹವನ್ನೂ ಚಿತ್ತವನ್ನೂ ಬಿಗಿ ಹಿಡಿದುಕೊಂಡಿರಬೇಕು ; ಬಯಕೆಯಿಲ್ಲದಿರಬೇಕು ; ತನ್ನದೆಂಬುದೇ ಇಲ್ಲವಾದವ ನಾಗಿರಬೇಕು. ಶುಚಿಯಾದ ಸ್ಥಳದಲ್ಲಿ ಕುಶ, ಅಜಿನ, ಬಟ್ಟೆ – ಇವುಗಳನ್ನು ಒಂದರಮೇಲೊಂದು ಹಾಕಿ ಹೆಚ್ಚು ಎತ್ತರವೂ ಅಲ್ಲದ ಹೆಚ್ಚು ತಗ್ಗೂ ಅಲ್ಲದ ಸ್ಥಿರವಾದ ಆಸನವನ್ನು ತನಗಾಗಿ ಮಾಡಿಕೊಂಡು ಆ ಆಸನದ ಮೇಲೆ ಕುಳಿತು ಮನಸ್ಸನ್ನು ಏಕಾಗ್ರವಾಗಿ ಮಾಡಿಕೊಂಡು ಚಿತ್ತದ ಮತ್ತು ಇಂದ್ರಿಯಗಳ ವ್ಯಾಪಾರ ಗಳನ್ನೆಲ್ಲ ಹಿಡಿದಿಟ್ಟುಕೊಂಡು ಅಂತಃಕರಣಶುದ್ಧಿಗಾಗಿ ಯೋಗವನ್ನು ಮಾಡ ಬೇಕು. ಶರೀರ, ತಲೆ, ಕತ್ತು – ಇವು ಮೂರನ್ನೂ ನೆಟ್ಟಗೆ ಅಲುಗಾಡದಂತೆ

ನಿಲ್ಲಿಸಿಕೊಂಡು ಸ್ಥೈರ್ಯವುಳ್ಳವನಾಗಿ ತನ್ನ ಮೂಗಿನ ತುದಿಯನ್ನೇ ನೋಡುತ್ತಿರುವವನಂತೆ ಇದ್ದು ದಿಕ್ಕುಗಳನ್ನು ಯಾವವನ್ನೂ ನೋಡದೆ, ಅಂತಃಕರಣವನ್ನು ಶಾಂತವಾಗಿಟ್ಟುಕೊಂಡು, ಯಾವ ಅಂಜಿಕೆಯೂ ಇಲ್ಲದೆ ಬ್ರಹ್ಮಚಾರಿಯ ವ್ರತದಲ್ಲಿರುತ್ತಾ ಮನಸ್ಸನ್ನು ಬಿಗಿಹಿಡಿದುಕೊಂಡು, ನನ್ನಲ್ಲಿಯೇ ಚಿತ್ತವಿಟ್ಟು ಯುಕ್ತನಾಗಿ ನಾನೇ ಎಲ್ಲಕ್ಕಿಂತಲೂ ಹೆಚ್ಚೆಂದು ಭಾವಿಸಿರಬೇಕು. ಹೀಗೆ ಮನಸ್ಸನ್ನು ಬಿಗಿಹಿಡಿದುಕೊಂಡು ಯಾವಾಗಲೂ ಯೋಗದಲ್ಲಿಯೇ ತನ್ನನ್ನು ಇರಿಸಿಕೊಂಡಿರುವ ಯೋಗಿಯು ಮೋಕ್ಷದಲ್ಲಿ ಕೊನೆಗಾಣುವದಾಗಿಯೂ ನನ್ನ ಅಧೀನದಲ್ಲಿರುವದಾಗಿಯೂ ಇರುವ ಶಾಂತಿಯನ್ನು ಹೊಂದುವನು. (10–18)

ಟಿ|| ಯೋಗವನ್ನು ಏತಕ್ಕೆ ಹೇಗೆ ಮಾಡಬೇಕೆಂಬುದನ್ನು ಇಲ್ಲಿ ಹೇಳಿರುತ್ತದೆ. ಮನಸ್ಸು ಅನಾತ್ಮದ ಆಸಕ್ತಿಯನ್ನು ಬಿಟ್ಟು ಪರಮಾತ್ಮನ ಭಾವನೆಯಲ್ಲಿ ನಿಲ್ಲುವದೇ ಯೋಗದ ಗುರಿಯು.

**ನಾತ್ಯಶ್ನತಸ್ತು ಯೋಗೋಽಸ್ತಿ। ನ ಚೈಕಾನ್ತಮನಶ್ನತಃ।**
**ನ ಚಾತಿ ಸ್ವಪ್ನಶೀಲಸ್ಯ। ಜಾಗ್ರತೋ ನೈವ ಚಾರ್ಜುನ ॥ 16 ॥**

**ಯುಕ್ತಾಹಾರವಿಹಾರಸ್ಯ । ಯುಕ್ತಚೇಷ್ಟಸ್ಯ ಕರ್ಮಸು ।**
**ಯುಕ್ತಸ್ವಪ್ನಾವಬೋಧಸ್ಯ । ಯೋಗೋ ಭವತಿ ದುಃಖಹಾ ॥ 17 ॥**

ಅರ್ಜುನನೆ, ಅತಿಯಾಗಿ ತಿನ್ನುವವನಿಗೆ ಯೋಗವು ದಕ್ಕುವದಿಲ್ಲ ನಿಯಮದಿಂದ ಆಹಾರವನ್ನು ಬಿಟ್ಟೇ ಇರುವವನಿಗೂ ದಕ್ಕುವದಿಲ್ಲ, ಅತಿಯಾಗಿ ನಿದ್ರಿಸುವವನಿಗೂ ದಕ್ಕುವದಿಲ್ಲ, ಅತಿಯಾಗಿ ಎಚ್ಚರವಾಗಿಯೇ ಇರುವಾತನಿಗೂ ದಕ್ಕುವದಿಲ್ಲ. ಮಿತವಾದ ಆಹಾರವಿಹಾರಗಳು, ಕರ್ಮಗಳಲ್ಲಿ ಮಿತವಾದ ಪ್ರಯತ್ನ, ಮಿತವಾದ ಎಚ್ಚರನಿದ್ರೆಗಳು – ಹೀಗೆ ಮಿತವಾಗಿರುವವನಿಗೇ ಯೋಗವು ದುಃಖನಾಶಕವಾಗುವದು. (16–17)

**ಯದಾ ವಿನಿಯತಂ ಚಿತ್ತ–ಮಾತ್ಮನ್ಯೇವಾವತಿಷ್ಠತೇ ।**
**ನಿಃ ಸ್ಪೃಹಃ ಸರ್ವಕಾಮೇಭ್ಯೋ । ಯುಕ್ತ ಇತ್ಯುಚ್ಯತೇ ತದಾ ॥ 18 ॥**

**ಯಥಾ ದೀಪೋ ನಿವಾತಸ್ಥೋ । ನೇಙ್ಗತೇ ಸೋಪಮಾ ಸ್ಮೃತಾ ।**
**ಯೋಗಿನೋ ಯತಚಿತ್ತಸ್ಯ । ಯುಞ್ಜತೋ ಯೋಗಮಾತ್ಮನಃ ॥ 19 ॥**

ಬಿಗಿಹಿಡಿದ ಚಿತ್ತವು ಯಾವ ಭೋಗಗಳಲ್ಲಿಯೂ ಆಶೆಯಿಲ್ಲದೆ ಆತ್ಮನಲ್ಲಿಯೇ ಯಾವಾಗ ನಿಂತುಕೊಂಡುಬಿಡುವದೋ ಆಗ 'ಯುಕ್ತನು' ಎನಿಸಿಕೊಳ್ಳುತ್ತಾನೆ. ಚಿತ್ತವನ್ನು ಬಿಗಿಹಿಡಿದು ಆತ್ಮನ ಯೋಗವನ್ನು ಮಾಡುತ್ತಿರುವ ಯೋಗಿಯ ಚಿತ್ತಕ್ಕೆ ದೊಡ್ಡವರು ಗಾಳಿಯಿಲ್ಲದಿರುವೆಡೆಯಲ್ಲಿರುವ ಅಲುಗಾಡದ ದೀಪವನ್ನು ಉಪಮಾನವೆಂದು ಹೇಳಿರುತ್ತಾರೆ. (18–19)

ಯತ್ರೋಪರಮತೇ ಚಿತ್ತಂ। ನಿರುದ್ಧಂ ಯೋಗಸೇವಯಾ।
ಯತ್ರ ಚೈವಾತ್ಮನಾತ್ಮಾನಂ। ಪಶ್ಯನ್ನಾತ್ಮನಿ ತುಷ್ಯತಿ ॥ 20 ॥
ಸುಖಮಾತ್ಯನ್ತಿಕಂ ಯತ್ತ–ದ್ಬುದ್ಧಿಗ್ರಾಹ್ಯಮತೀನ್ದ್ರಿಯಮ್।
ವೇತ್ತಿ ಯತ್ರ ನ ಚೈವಾಯಂ। ಸ್ಥಿತಶ್ಚಲತಿ ತತ್ತ್ವತಃ ॥ 21 ॥
ಯಂ ಲಬ್ಧ್ವಾ ಚಾಪರಂ ಲಾಭಂ। ಮನ್ಯತೇ ನಾಧಿಕಂ ತತಃ।
ಯಸ್ಮಿನ್ಸ್ಥಿತೋ ನ ದುಃಖೇನ। ಗುರುಣಾಪಿ ವಿಚಾಲ್ಯತೇ ॥ 22 ॥
ತಂ ವಿದ್ಯಾದ್ದುಃಖಸಂಯೋಗ–ವಿಯೋಗಂ ಯೋಗಸಂಜ್ಞಿತಮ್।
ಸ ನಿಶ್ಚಯೇನ ಯೋಕ್ತವ್ಯೋ। ಯೋಗೋಽನಿರ್ವಿಣ್ಣಚೇತಸಾ ॥ 23 ॥

ಯೋಗದ ಅಭ್ಯಾಸದಿಂದ ತಡೆಗಟ್ಟಿದ ಚಿತ್ತವು ಯಾವಾಗ ಸುಮ್ಮನಾಗುವದೋ, ಯಾವಾಗ ಯೋಗಿಯು ಅಂತಃಕರಣದಿಂದ ತನ್ನ ಸ್ವರೂಪವನ್ನು ಕಂಡುಕೊಂಡು ಆ ಆತ್ಮಸ್ವರೂಪದಲ್ಲಿಯೇ ಸುಖಿಸುತ್ತಿರುವನೋ, ಯಾವಾಗ ಬುದ್ಧಿಗೆ ಮಾತ್ರ ನಿಲುಕುವದಾಗಿಯೂ ಇಂದ್ರಿಯಗಳನ್ನು ಮೀರಿರುವದಾಗಿಯೂ ಇರುವ ಆತ್ಯಂತಿಕಸುಖವನ್ನು ಅನುಭವಿಸುವನೋ, ಯಾವಾಗ ತತ್ತ್ವದಲ್ಲಿ ನಿಂತವನು ಅದರಿಂದ ಅತ್ತಿತ್ತ ಅಲುಗಾಡದೆ ಇರುವನೋ, ಯಾವದನ್ನು ಹೊಂದಿದ ಮೇಲೆ ಅದಕ್ಕಿಂತ ಬೇರೊಂದು ಹೆಚ್ಚಿನ ಲಾಭವಿರುವದೆಂದು ಎಣಿಸದೆ ಇರುವನೋ, ಯಾವದರಲ್ಲಿದ್ದುಕೊಂಡಿರುವದರಿಂದ ಬಲವಾದ ದುಃಖದಿಂದಲೂ ಅತ್ತಿತ್ತ ಚಲಿಸದೆ ಇರುವನೋ, ದುಃಖಸಂಯೋಗದ ವಿಯೋಗವಾದ ಇದಕ್ಕೇ ಯೋಗವೆಂಬ ಹೆಸರೆಂದು ತಿಳಿಯಬೇಕು. ಈ ಯೋಗವನ್ನು ಚಿತ್ತದಲ್ಲಿ ಬೇಸರಗೊಳ್ಳದೆ ಗಟ್ಟಿಮನಸ್ಸಿನಿಂದ ಮಾಡುತ್ತಿರಬೇಕು. (20–23)

ಟಿ॥ ಪರಮಾತ್ಮನಿಷ್ಠೆಯನ್ನು ಯೋಗವೆಂದು ಏತಕ್ಕೆ ಕರೆಯುವರೆಂದರೆ ಅದಕ್ಕಿಂತ ಮಿಗಿಲಾದ ಲಾಭವಿಲ್ಲ, ಆನಂದವಿಲ್ಲ, ಅದರಿಂದ ಚ್ಯುತಿಯಾಗುವ ಹಾಗಿಲ್ಲ, ಅದರಲ್ಲಿ ಯಾವ ದುಃಖದ ಸೋಂಕೂ ಇಲ್ಲ.

ಸಙ್ಕಲ್ಪಪ್ರಭವಾನ್ ಕಾಮಾಂ–ಸ್ತ್ಯಕ್ತ್ವಾ ಸರ್ವಾನಶೇಷತಃ ।
ಮನಸೈವೇನ್ದ್ರಿಯಗ್ರಾಮಂ । ವಿನಿಯಮ್ಯ ಸಮನ್ತತಃ ॥ 24 ॥
ಶನೈಃ ಶನೈರುಪರಮೇ–ದ್ಬುದ್ಧ್ಯಾ ಧೃತಿಗೃಹೀತಯಾ ।
ಆತ್ಮಸಂಸ್ಥಂ ಮನಃ ಕೃತ್ವಾ । ನ ಕಿಞ್ಚಿದಪಿ ಚಿನ್ತಯೇತ್ ॥ 25 ॥
ಯತೋ ಯತೋ ನಿಶ್ಚರತಿ । ಮನಶ್ಚಞ್ಚಲಮಸ್ಥಿರಮ್ ।
ತತಸ್ತತೋ ನಿಯಮ್ಯೈತ–ದಾತ್ಮನ್ಯೇವ ವಶಂ ನಯೇತ್ ॥ 26 ॥

ಸಂಕಲ್ಪದಿಂದುಂಟಾಗುವ ಕಾಮಗಳನ್ನು ನಿಶ್ಯೇಷವಾಗಿ ಎಲ್ಲವನ್ನೂ ಬಿಟ್ಟು, ಇಂದ್ರಿಯಗಳ ತಂಡವನ್ನು ಎಲ್ಲಾಕಡೆಯಿಂದಲೂ ಮನಸ್ಸಿನಿಂದಲೇ ಬಿಗಿಹಿಡಿದು ಧೈರ್ಯದಿಂದ ವಶಗೊಳಿಸಿಕೊಂಡ ಬುದ್ಧಿಯಿಂದ ಮೆಲ್ಲಮೆಲ್ಲಗೆ ಹಿಂದಿರುಗಬೇಕು. ಮನಸ್ಸನ್ನು ಆತ್ಮನಲ್ಲಿಯೇ ನಿಲ್ಲಿಸಿಕೊಂಡು ಮತ್ತೇನನ್ನೂ ಚಿಂತಿಸದಿರಬೇಕು. ಚಂಚಲವೂ ಅಸ್ಥಿರವೂ ಆದ ಮನಸ್ಸು ಯಾವಯಾವ ನಿಮಿತ್ತದಿಂದ ಹೊರಹೊಮ್ಮುವದೋ ಅದರಿಂದ ಹಿಂದಕ್ಕೆಳೆದು ಆತ್ಮನಲ್ಲಿಯೇ ನಿಲ್ಲಿಸಿಕೊಂಡು ವಶಗೊಳಿಸಿಕೊಳ್ಳಬೇಕು. (24–26)

ಟಿ॥ ಮನಸ್ಸಿನಲ್ಲಿ ಕಲ್ಮಷವೂ ಚಾಂಚಲ್ಯವೂ ಸ್ವಭಾವದಿಂದಲೇ ಇರುವದು, ಆದ್ದರಿಂದ ಅದನ್ನು ಆತ್ಮನಲ್ಲಿಯೇ ನಿಲ್ಲಿಸುವದಕ್ಕೆ ಬಹಳ ಪ್ರಯತ್ನವನ್ನು ಮಾಡಬೇಕಾಗುವದು.

ಪ್ರಶಾನ್ತಮನಸಂ ಹ್ಯೇನಂ। ಯೋಗಿನಂ ಸುಖಮುತ್ತಮಮ್ ।
ಉಪೈತಿ ಶಾನ್ತರಜಸಂ। ಬ್ರಹ್ಮಭೂತಮಕಲ್ಮಷಮ್ ॥ 27 ॥

ಯುಞ್ಜನ್ನೇವಂ ಸದಾತ್ಮಾನಂ। ಯೋಗೀ ವಿಗತಕಲ್ಮಷಃ।
ಸುಖೇನ ಬ್ರಹ್ಮಸಂಸ್ಪರ್ಶ–ಮತ್ಯನ್ತಂ ಸುಖಮಶ್ನುತೇ ॥ 28 ॥

ಸರ್ವಭೂತಸ್ಥಮಾತ್ಮಾನಂ। ಸರ್ವಭೂತಾನಿ ಚಾತ್ಮನಿ।
ಈಕ್ಷತೇಯೋಗಯುಕ್ತಾತ್ಮಾ। ಸರ್ವತ್ರ ಸಮದರ್ಶನಃ ॥ 29 ॥

ಯೋ ಮಾಂ ಪಶ್ಯತಿ ಸರ್ವತ್ರ। ಸರ್ವಂ ಚ ಮಯಿ ಪಶ್ಯತಿ।
ತಸ್ಯಾಹಂ ನ ಪ್ರಣಶ್ಯಾಮಿ। ಸ ಚ ಮೇ ನ ಪ್ರಣಶ್ಯತಿ ॥ 30 ॥

ಸರ್ವಭೂತಸ್ಥಿತಂ ಯೋ ಮಾಂ। ಭಜತ್ಯೇಕತ್ವಮಾಸ್ಥಿತಃ।
ಸರ್ವಥಾ ವರ್ತಮಾನೋಽಪಿ। ಸ ಯೋಗೀ ಮಯಿ ವರ್ತತೇ ॥ 31 ॥

**ಆತ್ಮೌಪಮ್ಯೇನ ಸರ್ವತ್ರ। ಸಮಂ ಪಶ್ಯತಿ ಯೋಽರ್ಜುನ।**
**ಸುಖಂ ವಾ ಯದಿ ವಾ ದುಃಖಂ। ಸ ಯೋಗೀ ಪರಮೋ ಮತಃ ॥ 32 ॥**

ಅತ್ಯಂತವಾಗಿ ಶಾಂತವಾದ ಮನಸ್ಸುಳ್ಳವನಾಗಿಯೂ ರಜೋಗುಣ ವನ್ನೆಲ್ಲ ತೊಲಗಿಸಿಕೊಂಡವನಾಗಿಯೂ ಬ್ರಹ್ಮವೇ ಆಗಿರುವ ನಿಷ್ಕಲ್ಮಷನಾಗಿರುವ ಈ ಯೋಗಿಗೆ ಉತ್ತಮವಾದ ಸುಖವು ದೊರಕುವದು. ಹೀಗೆ ಯಾವಾಗಲೂ ಮನಸ್ಸನ್ನು ಯೋಗದಲ್ಲಿಟ್ಟುಕೊಂಡಿರುವ ಯೋಗಿಯು ಕಲ್ಮಷವನ್ನು ನೀಗಿ ಕೊಂಡು ಬ್ರಹ್ಮಸಂಸ್ಪರ್ಶವೆಂಬ ಕೊನೆಗಾಣದ ಸುಖವನ್ನು ಸುಲಭವಾಗಿ ಹೊಂದು ತ್ತಾನೆ. ಯೋಗದಲ್ಲಿಯೇ ಮನಸ್ಸಿಟ್ಟಿರುವ ಈತನು ಎಲ್ಲೆಲ್ಲಿಯೂ ಸಮವಾಗಿರುವ ಬ್ರಹ್ಮವನ್ನೇ ಕಾಣುತ್ತಾ ತನ್ನ ಆತ್ಮನು ಸರ್ವಭೂತಗಳಲ್ಲಿಯೂ ಇರುವನೆಂಬು ವನ್ನೂ ಸರ್ವಭೂತಗಳೂ ಆ ಆತ್ಮನಲ್ಲಿಯೇ ಇದ್ದುಕೊಂಡಿರುವವೆಂಬುದನ್ನೂ ಕಂಡುಕೊಳ್ಳುವನು. ಯಾವನು ನನ್ನನ್ನು ಎಲ್ಲೆಲ್ಲಿಯೂ ಕಾಣುವನೋ ಮತ್ತು ನನ್ನಲ್ಲಿ ಎಲ್ಲವನ್ನೂ ಕಾಣುವನೋ ಅವನಿಗೆ ನಾನು ಕಾಣದೆ ಇರುವದಿಲ್ಲ. ಅವನೂ ನನಗೆ ಕಾಣದೆ ಇರುವದಿಲ್ಲ . ಯಾವನು ಸರ್ವಭೂತಗಳಲ್ಲಿಯೂ ಇರುವ ನಾನು

ಒಬ್ಬನೇ ಎಂದು ತಿಳಿದು ಭಜಿಸುತ್ತಿರುವನೋ ಆ ಯೋಗಿಯು ಹೇಗೇ ಇರಲಿ, ನನ್ನಲ್ಲಿಯೇ ಇರುತ್ತಿರುವನು. ಎಲೈ ಅರ್ಜುನನೆ, ಯಾವನು ಸುಖವನ್ನಾಗಲಿ ದುಃಖವನ್ನಾಗಲಿ ತನ್ನ ಹೋಲಿಕೆಯಿಂದಲೇ ಎಲ್ಲೆಲ್ಲಿಯೂ ಒಂದೇ ಸಮನಾಗಿ ಕಾಣುತ್ತಿರುವನೋ ಅವನೇ ಪರಮಯೋಗಿಯು. (27–32)

ಟಿ॥ ಯೋಗಿಗೆ ಬಾಹ್ಯವಿಷಯಸ್ಪರ್ಶವಿರುವದಿಲ್ಲ, ಬ್ರಹ್ಮಸ್ಪರ್ಶವೇ ಇರುವದು. ಬ್ರಹ್ಮವು ಸರ್ವರಲ್ಲಿಯೂ ಇರುವ ಆತ್ಮನೆಂದೇ ಅರಿತು ಅವನು ಎಲ್ಲರಿಗೂ ದುಃಖವು ಪರಿಹಾರವಾಗಲಿ, ಎಲ್ಲರಿಗೂ ಸುಖವೇ ಆಗಲಿ ! – ಎನ್ನುತ್ತಿರುವನು.

**ಅರ್ಜುನ ಉವಾಚ –**

**ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ । ಸಾಮ್ಯೇನ ಮಧುಸೂದನ ।**
**ಏತಸ್ಯಾಹಂ ನ ಪಶ್ಯಾಮಿ । ಚಞ್ಚಲತ್ವಾತ್ಸ್ಥಿತಿಂ ಸ್ಥಿರಾಮ್ ॥ 33 ॥**
**ಚಞ್ಚಲಂ ಹಿ ಮನಃ ಕೃಷ್ಣ । ಪ್ರಮಾಥಿ ಬಲವದ್ದೃಢಮ್ ।**
**ತಸ್ಯಾಹಂ ನಿಗ್ರಹಂ ಮನ್ಯೇ । ವಾಯೋರಿವ ಸುದುಷ್ಕರಮ್ ॥ 34 ॥**

ಅರ್ಜುನನು ಹೇಳಿದ್ದು:

ಎಲೈ ಮಧುಸೂದನನೆ, ಸಮತೆಯೆಂದು ನೀನು ನುಡಿದ ಯೋಗವಿದೆಯಲ್ಲ, ಇದು ಸ್ಥಿರವಾಗಿದ್ದೀತೆಂದು ನನಗೆ ತೋರುವದಿಲ್ಲ, ಏಕೆಂದರೆ ಮನಸ್ಸು ಚಂಚಲವಾಗಿರುತ್ತದೆ. ಎಲೈ ಕೃಷ್ಣನೆ. ಮನಸ್ಸು ಚಂಚಲವಾದದ್ದು ಕದಡುವಂಥದ್ದು, ಬಲವಾದದ್ದು, ಗಟ್ಟಿಯಾಗಿರುವದು– ಅಲ್ಲವೆ ? ಹೀಗಿರುವ ಅದನ್ನು ತಡೆಗಟ್ಟುವದೆಂಬುದು ಗಾಳಿಯನ್ನು ತಡೆಗಟ್ಟುವದು ಹೇಗೆ ಬಲು ಕಷ್ಟವೋ ಹಾಗೆಯೇ ಬಲುಕಷ್ಟವೆಂದು ನನಗೆ ತೋರುತ್ತದೆ. (33–34)

ಶ್ರೀಭಗವಾನುವಾಚ –

ಅಸಂಶಯಂ ಮಹಾಬಾಹೋ। ಮನೋ ದುರ್ನಿಗ್ರಹಂ ಚಲಮ್।
ಅಭ್ಯಾಸೇನ ತು ಕೌನ್ತೇಯ। ವೈರಾಗ್ಯೇಣ ಚ ಗೃಹ್ಯತೇ ॥ 35 ॥

ಅಸಂಯತಾತ್ಮನಾ ಯೋಗೋ। ದುಷ್ಪ್ರಾಪ ಇತಿ ಮೇ ಮತಿಃ।
ವಶ್ಯಾತ್ಮನಾ ತು ಯತತಾ। ಶಕ್ಯೋಽವಾಪ್ತುಮುಪಾಯತಃ ॥ 36 ॥

**ಶ್ರೀಭಗವಂತನು ಹೇಳಿದ್ದು:**

ಎಲೈ ಮಹಾಬಾಹುವೆ, ಮನಸ್ಸನ್ನು ಹಿಡಿದಿಡುವದು ಬಲುಕಷ್ಟವೆಂಬುದೂ ಅದು ಚಂಚಲವೆಂಬುದೂ ನಿಸ್ಸಂಶಯವು : ಆದರೆ ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಅದನ್ನು ಹಿಡಿದಿಡಬಹುದು. ಯಾವನು ಮನಸ್ಸನ್ನು ಬಿಗಿಹಿಡಿಯಲಾರನೋ ಅವನಿಗೆ ಯೋಗವು ದಕ್ಕಲಾರದೆಂದು ನನ್ನ ಮತವು. ಯಾವನಿಗೆ ಮನಸ್ಸು ವಶದಲ್ಲಿರುವದೋ ಆ ಸಾಧಕನಿಗೆ ಯಾವದಾದರೊಂದು ಸಾಧನದಿಂದ ಅದು ದಕ್ಕುವದು ಶಕ್ಯವು. (35–36)

ಟಿ।। ಮನಸ್ಸನ್ನು ಬಿಗಿಹಿಡಿದಲ್ಲದೆ ಯೋಗಾರೂಢನಾಗಲಾರನು. 9ನೆಯ ಶ್ಲೋಕದ ಟಿಪ್ಪಣಿಯನ್ನು ನೋಡಿ.

ಅರ್ಜುನ ಉವಾಚ –

ಅಯತಿಃ ಶ್ರದ್ಧಯೋಪೇತೋ। ಯೋಗಾಚ್ಚಲಿತಮಾನಸಃ।
ಅಪ್ರಾಪ್ಯ ಯೋಗಸಂಸಿದ್ಧಿಂ। ಕಾಂ ಗತಿಂ ಕೃಷ್ಣ ಗಚ್ಛತಿ ।। 37 ।।

ಕಚ್ಚಿನ್ನೋಭಯವಿಭ್ರಷ್ಟ–ಶ್ಛಿನ್ನಾಭ್ರಮಿವ ನಶ್ಯತಿ।
ಅಪ್ರತಿಷ್ಠೋ ಮಹಾಬಾಹೋ। ವಿಮೂಢೋ ಬ್ರಹ್ಮಣಃ ಪಥಿ ॥ 38 ॥

ಏತನ್ಮೇ ಸಂಶಯಂ ಕೃಷ್ಣ। ಛೇತ್ತುಮರ್ಹಸ್ಯಶೇಷತಃ।
ತ್ವದನ್ಯಃ ಸಂಶಯಸ್ಯಾಸ್ಯ। ಛೇತ್ತಾ ನ ಹ್ಯುಪಪದ್ಯತೇ ॥ 39 ॥

ಅರ್ಜುನನು ಕೇಳಿದ್ದು:

ಕೃಷ್ಣನೆ, ಮನಸ್ಸನ್ನು ಬಿಗಿಹಿಡಿಯುವ ಯತ್ನವನ್ನು ಚೆನ್ನಾಗಿ ಮಾಡದೆ ಇದ್ದದ್ದರಿಂದ ಯಾವನ ಮನಸ್ಸು ಯೋಗದಿಂದ ಚಲಿಸುವದೋ ಅವನಿಗೆ ಯೋಗಸಿದ್ಧಿಯುಂಟಾಗದಷ್ಟೆ ; ಅವನು ಶ್ರದ್ಧಾವಂತನಾಗಿದ್ದರೆ ಅವನಿಗೆ ಯಾವ ಗತಿಯುಂಟಾಗುವದು ? ಕರ್ಮಫಲ, ಯೋಗಫಲ– ಈ ಎರಡರಿಂದಲೂ ಭ್ರಷ್ಟನಾಗಿ ನಿಲುಗಡೆಯಿಲ್ಲದೆ ಬ್ರಹ್ಮಮಾರ್ಗದಲ್ಲಿ ಏನೂ ತೋಚದವನಾಗಿ ಎರಡೂ ಕಡೆ, ತಪ್ಪಿದ ಮೋಡದ ಮುರುಕಿನಂತೆ ಅವನು ಕೆಟ್ಟುಹೋಗುವದಿಲ್ಲ ವಷ್ಟೆ? ಎಲೈ ಕೃಷ್ಣನೆ, ಈ ನನ್ನ ಸಂಶಯವನ್ನು ನೀನು ಸಂಪೂರ್ಣವಾಗಿ ಬಗೆಹರಿಸ

ಬೇಕು ; ಏಕೆಂದರೆ ನೀನಲ್ಲದೆ ಈ ಸಂಶಯವನ್ನು ಬಗೆಹರಿಸಬಲ್ಲವನು ಮತ್ತಾವನೂ ಇರಲಾರನು. (37–39)

ಟಿ॥ ಕರ್ಮವನ್ನು ಕೈಬಿಟ್ಟನು, ಯೋಗದ ಫಲವಾದ ಜ್ಞಾನವನ್ನು ಪಡೆಯಲಿಲ್ಲ; ಇಂಥವನ ಗತಿಯೇನು ?– ಎಂಬುದೇ ಪ್ರಶ್ನೆ.

ಶ್ರೀಭಗವಾನುವಾಚ –

ಪಾರ್ಥ ನೈವೇಹ ನಾಮುತ್ರ। ವಿನಾಶಸ್ತಸ್ಯ ವಿದ್ಯತೇ।
ನ ಹಿ ಕಲ್ಯಾಣಕೃತ್ ಕಶ್ಚಿ–ದ್ದುರ್ಗತಿಂ ತಾತ ಗಚ್ಛತಿ ॥ 40 ॥

ಪ್ರಾಪ್ಯ ಪುಣ್ಯಕೃತಾಂ ಲೋಕಾ–ನುಷಿತ್ವಾ ಶಾಶ್ವತೀಃ ಸಮಾಃ।
ಶುಚೀನಾಂ ಶ್ರೀಮತಾಂ ಗೇಹೇ। ಯೋಗಭ್ರಷ್ಟೋಽಭಿಜಾಯತೇ ॥ 41 ॥

ಅಥವಾ ಯೋಗಿನಾಮೇವ। ಕುಲೇ ಭವತಿ ಧೀಮತಾಮ್।
ಏತದ್ಧಿ ದುರ್ಲಭತರಂ। ಲೋಕೇ ಜನ್ಮ ಯದೀದೃಶಮ್ ॥ 42 ॥

ತತ್ರ ತಂ ಬುದ್ಧಿಸಂಯೋಗಂ। ಲಭತೇ ಪೌರ್ವದೇಹಿಕಮ್ ।
ಯತತೇ ಚ ತತೋ ಭೂಯಃ। ಸಂಸಿದ್ಧೌ ಕುರುನನ್ದನ ॥ 43 ॥

ಪೂರ್ವಾಭ್ಯಾಸೇನ ತೇನೈವ। ಹ್ರಿಯತೇ ಹ್ಯವಶೋಽಪಿ ಸಃ।
ಜಿಜ್ಞಾಸುರಪಿ ಯೋಗಸ್ಯ । ಶಬ್ದಬ್ರಹ್ಮಾತಿವರ್ತತೇ ॥ 44 ॥

ಪ್ರಯತ್ನಾದ್ಯತಮಾನಸ್ತು। ಯೋಗೀ ಸಂಶುದ್ಧಕಿಲ್ಬಿಷಃ।
ಅನೇಕಜನ್ಮಸಂಸಿದ್ಧ–ಸ್ತತೋ ಯಾತಿ ಪರಾಂ ಗತಿಮ್ ॥ 45 ॥

ಶ್ರೀಭಗವಂತನ ಉತ್ತರ :

ಎಲೈ ಪಾರ್ಥನೆ, ಅಂಥವನಿಗೆ ಇಲ್ಲಿಯೂ ಕೇಡಿಲ್ಲ, ಪರದಲ್ಲಿಯೂ ಕೇಡಿಲ್ಲ ; ಏಕೆಂದರೆ ಕಲ್ಯಾಣಕಾರ್ಯವನ್ನು ಮಾಡಿದ ಯಾವನೊಬ್ಬನಿಗೂ ದುರ್ಗತಿಯುಂಟಾಗಲಾರದು. ನೀನು ಹೇಳಿದಂತೆ ಯೋಗಭ್ರಷ್ಟನಾದವನು ಪುಣ್ಯವಂತರ ಲೋಕಗಳನ್ನು ಸೇರಿ ಬಹುವರ್ಷಗಳವರೆಗೆ ಅಲ್ಲಿ ವಾಸವಾಗಿದ್ದು ಅನಂತರ ಪರಿಶುದ್ಧರೂ ಶ್ರೀಮಂತರೂ ಆದವರ ಮನೆಯಲ್ಲಿ ಜನಿಸುವನು ;

ಅಥವಾ ಜ್ಞಾನಿಗಳಾದ ಯೋಗಿಗಳ ಮನೆಯಲ್ಲಿಯೇ ಹುಟ್ಟುವನು ; ಲೋಕದಲ್ಲಿ ಇಂಥ ಜನ್ಮವನ್ನು ಪಡೆಯುವದೆಂಬುದು ಇನ್ನೂ ಕಷ್ಟವಲ್ಲವೆ ? ಎಲೈ ಕುರುನಂದನನೆ, ಅಲ್ಲಿ ಪೂರ್ವಜನ್ಮದ ಆ ಬುದ್ಧಿಯ ಸಂಬಂಧವನ್ನೇ ಹೊಂದುತ್ತಾನೆ. ಆಮೇಲೆ ಹೊಂದುವದಕ್ಕೆ ಮತ್ತೂ ಪ್ರಯತ್ನಮಾಡುತ್ತಾನೆ. ಅವನು ಒಲ್ಲೆನೆಂದರೂ ಹಿಂದಿನ ಅಭ್ಯಾಸವೇ ಅವನನ್ನು ಎಳೆದೊಯ್ಯುವದು ; ಯೋಗವನ್ನು ತಿಳಿಯಬೇಕೆಂದು ಹೊರಟವನು ಕೂಡ ಶಬ್ದಬ್ರಹ್ಮವನ್ನು ದಾಟುತ್ತಾನೆ, ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡುವ ಯೋಗಿಯಂತೂ ಪಾಪಗಳನ್ನೆಲ್ಲ ಕಳೆದುಕೊಂಡು ಶುದ್ಧನಾಗಿ ಅನೇಕ ಜನ್ಮಗಳ ಅನಂತರ ಸಿದ್ಧನಾಗಿ ಆಮೇಲೆ ಪರಗತಿಯನ್ನೇ ಹೊಂದುತ್ತಾನೆ. (40–45)

ಟಿ॥ ಯೋಗದ ಅಭ್ಯಾಸದಿಂದ ಪರದಲ್ಲಿ ಪುಣ್ಯಲೋಕವುಂಟು, ಈ ಲೋಕದಲ್ಲಿ ಉತ್ತಮಜನ್ಮವುಂಟು. ಅಭ್ಯಾಸವು ಬಲವಾದಂತೆ ಉತ್ತಮಯೋಗಿಗಳ ಕುಲದಲ್ಲಿ ಹುಟ್ಟಿ ಯೋಗಾರೂಢನಾಗಿ ಜ್ಞಾನಿಯೇ ಆಗಿಬಿಡುತ್ತಾನೆ ; ಆಗ ಮೋಕ್ಷವು ಸಿದ್ಧವು. ಕುತೂಹಲದಿಂದ ಯೋಗದಲ್ಲಿ ಹೊಕ್ಕರೂ ವೇದೋಕ್ತವಾದ ಕರ್ಮಫಲಕ್ಕಿಂತ

ಹೆಚ್ಚಿನ ಗತಿಯನ್ನು ಪಡೆಯುತ್ತಾನೆ. ಹೀಗಿರುವಲ್ಲಿ ತಿಳಿದೇ ಯೋಗವನ್ನಭ್ಯಾಸಮಾಡುವವನ ವಿಚಾರವನ್ನು ಹೇಳತಕ್ಕದ್ದೇನು ?

ತಪಸ್ವಿಭ್ಯೋಽಧಿಕೋ ಯೋಗೀ । ಜ್ಞಾನಿಭ್ಯೋಽಪಿ ಮತೋಽಧಿಕಃ ।
ಕರ್ಮಿಭ್ಯಶ್ಚಾಧಿಕೋ ಯೋಗೀ । ತಸ್ಮಾದ್ಯೋಗೀ ಭವಾರ್ಜುನ ॥ 46 ॥

ಯೋಗಿನಾಮಪಿ ಸರ್ವೇಷಾಂ । ಮದ್ಗತೇನಾನ್ತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ । ಸ ಮೇ ಯುಕ್ತತಮೋ ಮತಃ ॥ 47 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಧ್ಯಾನಯೋಗೋ ನಾಮ ಷಷ್ಠೋಽಧ್ಯಾಯಃ

ಯೋಗಿಯು ತಪಸ್ವಿಗಳಿಗಿಂತಲೂ ಹೆಚ್ಚು, ಶಾಸ್ತ್ರಜ್ಞಾನಿಗಳಿಗಿಂತಲೂ ಹೆಚ್ಚಿನವನೆನಿಸುವನು, ಯೋಗಿಯು ಕರ್ಮಿಗಳಿಗಿಂತಲೂ ಹೆಚ್ಚು. ಆದ್ದರಿಂದ

ಅರ್ಜುನನೆ, ನೀನು ಯೋಗಿಯಾಗು. ಯೋಗಿಗಳಲ್ಲೆಲ್ಲ ಯಾವನು ನನ್ನಲ್ಲಿಯೇ ಇಟ್ಟ ಮನಸ್ಸಿನಿಂದ ನನ್ನನ್ನು ಶ್ರದ್ಧೆಯಿಂದ ಭಜಿಸುತ್ತಿರುವನೋ ಅವನೇ ಪರಮಯೋಗಿಯೆಂದು ನನ್ನ ಮತವು. (46–47)

ಟಿ॥ ಹೊರಗಿನ ತಪಸ್ಸು, ಶಾಸ್ತ್ರಪಾಂಡಿತ್ಯ, ಅಗ್ನಿಹೋತ್ರಾದಿಕರ್ಮ–ಇವೆಲ್ಲಕ್ಕಿಂತಲೂ ಒಳಗಿನ ಸಾಧನವಾದ ಧ್ಯಾನಯೋಗವು ಹೆಚ್ಚಿನದು, ಆದರೆ ಪರಮಾತ್ಮನನ್ನೇ ಧ್ಯಾನಿಸುವದು ಮಿಕ್ಕ ಧ್ಯಾನಗಳೆಲ್ಲಕ್ಕಿಂತಲೂ ಹೆಚ್ಚಿನದು. ಅದರಲ್ಲಿಯೇ ಕರ್ಮಯೋಗವು ಪೂರ್ಣವಾಗಿ ಕಳೆಕಟ್ಟುವದು. ಗೀತೋಕ್ತ ಕರ್ಮಯೋಗದಲ್ಲಿ ಕರ್ಮ, ಧ್ಯಾನ, ಭಕ್ತಿ– ಈ ಮೂರೂ ಸೇರಿರುವವೆಂಬುವನ್ನು ನೆನಪಿನಲ್ಲಿಡಬೇಕು.

ಧ್ಯಾನಯೋಗವೆಂಬ ಆರನೆಯ ಅಧ್ಯಾಯವು ಮುಗಿಯಿತು.

--------

## ಅಥ ಸಪ್ತಮೋಽಧ್ಯಾಯಃ

ಶ್ರೀಭಗವಾನುವಾಚ –

ಮಯ್ಯಾಸಕ್ತಮನಾಃ ಪಾರ್ಥ । ಯೋಗಂ ಯುಞ್ಜನ್ಮದಾಶ್ರಯಃ ।
ಅಸಂಶಯಂ ಸಮಗ್ರಂ ಮಾಂ । ಯಥಾ ಜ್ಞಾಸ್ಯಸಿ ತಚ್ಛೃಣು ॥ 1 ॥

ಜ್ಞಾನಂ ತೇಽಹಂ ಸವಿಜ್ಞಾನ–ಮಿದಂ ವಕ್ಷ್ಯಾಮ್ಯಶೇಷತಃ ।
ಯಜ್ಜ್ಞಾತ್ವಾ ನೇಹ ಭೂಯೋಽನ್ಯ–ಜ್ಜ್ಞಾತವ್ಯಮವಶಿಷ್ಯತೇ ॥ 2 ॥

ಮನುಷ್ಯಾಣಾಂ ಸಹಸ್ರೇಷು । ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ । ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥ 3 ॥

## ಏಳನೆಯ ಅಧ್ಯಾಯ

ಶ್ರೀಭಗವಂತನು ನುಡಿದದ್ದು:

ಪಾರ್ಥನೆ, ನನ್ನಲ್ಲಿಯೇ ಅಂಟಿಕೊಂಡಿರುವ ಮನಸ್ಸಿನಿಂದ ನನ್ನನ್ನೇ ಆಶ್ರಯಿಸಿ ಯೋಗವನ್ನು ಮಾಡುತ್ತಾ ಇದ್ದರೆ ನನ್ನನ್ನು ಸಂಶಯವಿಲ್ಲದಂತೆ

ಸಂಪೂರ್ಣವಾಗಿ ಹೇಗೆ ನೀನು ಅರಿತುಕೊಳ್ಳಬಹುದೋ ಅದನ್ನು ಹೇಳುವೆನು, ಕೇಳು. ಇಗೊ, ನಿನಗೆ ಈ ಜ್ಞಾನವನ್ನೂ ವಿಜ್ಞಾನವನ್ನೂ ಸಂಪೂರ್ಣವಾಗಿ ಹೇಳಿ ಕೊಡುವೆನು : ಇದನ್ನು ಅರಿತುಕೊಂಡರೆ ಮತ್ತೇನೂ ತಿಳಿಯಬೇಕಾದದ್ದು ಇರುವದಿಲ್ಲ. ಸಾವಿರ ಜನರಲ್ಲಿ ಒಬ್ಬನು ಜ್ಞಾನಸಿದ್ಧಿಗಾಗಿ ಪ್ರಯತ್ನಮಾಡುತ್ತಾನೆ ; ಹಾಗೆ ಪ್ರಯತ್ನಮಾಡುವ ಸಿದ್ಧರಲ್ಲಿ ಕೂಡ ಯಾವನೋ ಒಬ್ಬನು ನನ್ನನ್ನು ಸರಿಯಾಗಿ ತಿಳಿದುಕೊಳ್ಳುವನು (1–3)

ಟಿ॥ ಎಲ್ಲಾ ಸಾಧನಗಳಿಗೂ ಭಗವಂತನೇ ಗುರಿ. ಯಾವ ಸಾಧನವಾದರೂ ಭಗವಂತನಿಂದಲೇ ಸಾಗಬೇಕು. ಆದ್ದರಿಂದ ಆತನನ್ನೇ ನಂಬಿ ಪ್ರಯತ್ನಮಾಡಬೇಕು. ಒಂದೊಂದು ಸಾಧನವು ಅಳವಟ್ಟರೂ ಒಂದೊಂದು ಸಿದ್ಧಿಯಾದಂತೆಯೇ ಸರಿ ; ಆದರೆ ಪರಮಾತ್ಮನ ತತ್ತ್ವದ ಸಾಕ್ಷಾತ್ಕಾರವಾದರೆ ಪರಮಸಿದ್ಧಿಯಾದಂತಾಯಿತು. ಇದಕ್ಕಾಗಿ ಪ್ರಯತ್ನಮಾಡಿ ಇದನ್ನು ಪಡೆದುಕೊಳ್ಳುವವರು ಮಾತ್ರ ಅತಿವಿರಳರಾಗಿರುವರು.

**ಭೂಮಿರಾಪೋಽನಲೋ ವಾಯುಃ। ಖಂ ಮನೋ ಬುದ್ಧಿರೇವ ಚ।**
**ಅಹಙ್ಕಾರ ಇತೀಯಂ ಮೇ। ಭಿನ್ನಾ ಪ್ರಕೃತಿರಷ್ಟಧಾ ॥ 4 ॥**

ಅಪರೇಯಮಿತಸ್ತ್ವನ್ಯಾಂ। ಪ್ರಕೃತಿಂ ವಿದ್ಧಿ ಮೇ ಪರಾಮ್।
ಜೀವಭೂತಾಂ ಮಹಾಬಾಹೋ। ಯಯೇದಂ ಧಾರ್ಯತೇ ಜಗತ್ ॥ 5 ॥

ಏತದ್ಯೋನೀನಿ ಭೂತಾನಿ। ಸರ್ವಾಣೀತ್ಯುಪಧಾರಯ।
ಅಹಂ ಕೃತ್ಸ್ನಸ್ಯ ಜಗತಃ। ಪ್ರಭವಃ ಪ್ರಲಯಸ್ತಥಾ ॥ 6 ॥

ಮತ್ತಃ ಪರತರಂ ನಾನ್ಯತ್ । ಕಿಞ್ಚಿದಸ್ತಿ ಧನಞ್ಜಯ।
ಮಯಿ ಸರ್ವಮಿದಂ ಪ್ರೋತಂ। ಸೂತ್ರೇ ಮಣಿಗಣಾ ಇವ ॥ 7 ॥

ಪೃಥ್ವಿ, ಅಪ್ಪು, ತೇಜಸ್ಸು , ವಾಯು, ಆಕಾಶ, ಮನಸ್ಸು , ಬುದ್ಧಿ , ಅಹಂಕಾರ – ಎಂಬ ನನ್ನ ಪ್ರಕೃತಿಯು ಎಂಟು ಬಗೆಯಾಗಿರುವದು, ಇದು ನನ್ನ ಕೀಳು ಪ್ರಕೃತಿಯು. ಇದಕ್ಕಿಂತ ಹೆಚ್ಚಿನ ನನ್ನ ಮತ್ತೊಂದು ಪ್ರಕೃತಿಯನ್ನು ಹೇಳುವೆನು– ಕೇಳು, ಅದು ಜೀವರೂಪವಾಗಿರುವದು, ಅದರಿಂದ ಈ ಜಗತ್ತೇ ಧರಿಸಲ್ಪಟ್ಟಿರುವದು. ಸರ್ವಭೂತಗಳಿಗೂ ಇವುಗಳೇ ಕಾರಣವೆಂದು ತಿಳಿ. ನಾನು ಇಡಿಯ ಜಗತ್ತಿನ ಹುಟ್ಟಿಗೂ ಹೊಂದಿಗೂ ಕಾರಣನಾಗಿರುವೆನು. ಎಲ್ಲೈ

ಧನಂಜಯನೆ, ನನಗಿಂತ ಹೆಚ್ಚಿನದಾಗಿ ಮತ್ತೊಂದು ಯಾವದೂ ಇರುವದಿಲ್ಲ; ದಾರದಲ್ಲಿ ರತ್ನಗಳ ಗುಂಪುಗಳು ಪೋಣಿಸಿಕೊಂಡಿರುವಂತೆ ಇದೆಲ್ಲವೂ ನನ್ನಲ್ಲಿಯೇ ಪೋಣಿಸಿಕೊಂಡಿರುತ್ತದೆ. (4–7)

ಟೀ॥ ಇಲ್ಲಿ ಭಗವಂತನ ತತ್ತ್ವವನ್ನು ಸಂಕ್ಷೇಪವಾಗಿ ತಿಳಿಸಿರುತ್ತದೆ. ಸಾಂಖ್ಯರು ಹೇಳುವ ಪೃಥ್ವಿ ಮುಂತಾದ ತನ್ಮಾತ್ರೆಗಳು ಐದು, ಅಹಂಕಾರ, ಮಹತ್ತು, ಅವ್ಯಕ್ತ– ಈ ಅಷ್ಟಪ್ರಕೃತಿಗಳು ಅಚೇತನತತ್ತ್ವ, ನಾನಾಜೀವರಾಗಿ ತೋರುವದು ಚೇತನತತ್ತ್ವ ; ಚೇತನಾಚೇತನಾತ್ಮಕವಾದ ಜಗತ್ತೆಲ್ಲವೂ ಪರಮಾತ್ಮನಲ್ಲಿ ತೋರಿ ಅಡಗುತ್ತಿರುವದು ; ಆತನಿಗಿಂತ ಹೆಚ್ಚಿನ ತತ್ತ್ವವಿಲ್ಲ, ಆತನನ್ನು ಬಿಟ್ಟು ಚೇತನಾಚೇತನಗಳು ಇರುವದೂ ಇಲ್ಲ.

ರಸೋಽಹಮಪ್ಸು ಕೌನ್ತೇಯ। ಪ್ರಭಾಸ್ಮಿ ಶಶಿಸೂರ್ಯಯೋಃ।
ಪ್ರಣವಃ ಸರ್ವವೇದೇಷು। ಶಬ್ದಃ ಖೇ ಪೌರುಷಂ ನೃಷು ॥ 8 ॥

ಪುಣ್ಯೋ ಗನ್ಧಃ ಪೃಥಿವ್ಯಾಂ ಚ। ತೇಜಶ್ಚಾಸ್ಮಿ ವಿಭಾವಸೌ।
ಜೀವನಂ ಸರ್ವಭೂತೇಷು। ತಪಶ್ಚಾಸ್ಮಿ ತಪಸ್ವಿಷು ॥ 9 ॥

**ಬೀಜಂ ಮಾಂ ಸರ್ವಭೂತಾನಾಂ। ವಿದ್ಧಿ ಪಾರ್ಥ ಸನಾತನಮ್।**
**ಬುದ್ಧಿರ್ಬುದ್ಧಿಮತಾಮಸ್ಮಿ। ತೇಜಸ್ತೇಜಸ್ವಿನಾಮಹಮ್ ॥10॥**

**ಬಲಂ ಬಲವತಾಂ ಚಾಹಂ। ಕಾಮರಾಗವಿವರ್ಜಿತಮ್।**
**ಧರ್ಮಾವಿರುದ್ಧೋ ಭೂತೇಷು। ಕಾಮೋಽಸ್ಮಿ ಭರತರ್ಷಭ ॥ 11 ॥**

ಎಲೈ ಕುಂತೀಕುಮಾರನೆ, ನಾನು ನೀರಿನಲ್ಲಿರುವ ಸವಿಯು, ಸೂರ್ಯ ಚಂದ್ರರಲ್ಲಿ ಬೆಳಕಾಗಿರುವೆನು, ವೇದಗಳಲ್ಲೆಲ್ಲ ಓಂಕಾರವಾಗಿರುವೆನು, ಆಕಾಶ ದಲ್ಲಿ ಶಬ್ದವಾಗಿರುವೆನು, ಪುರುಷರಲ್ಲಿ ಪೌರುಷವಾಗಿರುವೆನು, ಪೃಥಿವಿಯಲ್ಲಿ ಪುಣ್ಯಗಂಧವೂ ಮತ್ತು ಸೂರ್ಯನಲ್ಲಿ ತೇಜಸ್ಸೂ ಆಗಿರುವೆನು. ಸರ್ವಪ್ರಾಣಿ ಗಳಲ್ಲಿ ಜೀವನವೂ ತಪಸ್ವಿಗಳಲ್ಲಿ ತಪಸ್ಸೂ ಆಗಿರುವೆನು. ಪಾರ್ಥನೆ, ಸರ್ವ ಭೂತಗಳಿಗೂ ಶಾಶ್ವತವಾದ ಬೀಜವು ನಾನು, ಬುದ್ಧಿವಂತರ ಬುದ್ಧಿಯು ನಾನು, ಧೈರ್ಯವಂತರಲ್ಲಿ ಧೈರ್ಯವು ನಾನು. ಭರತಶ್ರೇಷ್ಠನೆ, ಬಲವಂತರಲ್ಲಿ ಕಾಮರಾಗರಹಿತವಾಗಿರುವ ಬಲವು ನಾನು, ಪ್ರಾಣಿಗಳಲ್ಲಿ ಧರ್ಮಕ್ಕೆ ವಿರುದ್ಧವಲ್ಲದ ಕಾಮವಾಗಿರುವೆನು. (8–11)

*ಟಿ॥ ಪ್ರಪಂಚದಲ್ಲಿ ಕಾಣುವ ಪ್ರತಿಯೊಂದು ವಸ್ತುವಿನ ತಿರುಳೂ ಪರಮಾತ್ಮನೇ. ವಸ್ತುಗಳಲ್ಲಿ ತೋರುವ ಗುಣಗಳು ಪರಮಾತ್ಮನು; ಅವುಗಳಲ್ಲಿ ತೋರುವ ದೋಷಗಳು ನಮ್ಮ ಅವಿದ್ಯೆ, ಅಧರ್ಮ- ಮುಂತಾದ ಕಾರಣಗಳಿಂದ ನಮಗೆ ಕಾಣಿಸಿಕೊಳ್ಳುವವು.*

ಯೇ ಚೈವ ಸಾತ್ತ್ವಿಕಾ ಭಾವಾ-ರಾಜಸಾಸ್ತಾಮಸಾಶ್ಚ ಯೇ ।
ಮತ್ತ ಏವೇತಿ ತಾನ್ವಿದ್ಧಿ। ನ ತ್ವಹಂ ತೇಷು ತೇ ಮಯಿ ॥ 12 ॥

ತ್ರಿಭಿರ್ಗುಣಮಯೈರ್ಭಾವೈ-ರೇಭಿಃ ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ । ಮಾಮೇಭ್ಯಃ ಪರಮವ್ಯಯಮ್ ॥ 13 ॥

ದೈವೀ ಹ್ಯೇಷಾ ಗುಣಮಯೀ । ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯನ್ತೇ । ಮಾಯಾಮೇತಾಂ ತರನ್ತಿ ತೇ ॥ 14 ॥

ನ ಮಾಂ ದುಷ್ಕೃತಿನೋ ಮೂಢಾಃ। ಪ್ರಪದ್ಯನ್ತೇ ನರಾಧಮಾಃ।
ಮಾಯಯಾಪಹೃತಜ್ಞಾನಾ-ಆಸುರಂ ಭಾವಮಾಶ್ರಿತಾಃ ॥ 15 ॥

ಯಾವ ಪದಾರ್ಥಗಳು ಸತ್ತ್ವಗುಣದಿಂದಾಗಿರುವವೋ, ಯಾವವು ರಜೋಗುಣದಿಂದಲೂ ತಮೋಗುಣದಿಂದಲೂ ಆಗಿರುವವೋ ಅವುಗಳು ನನ್ನಿಂದಲೇ ಆಗಿರುವವೆಂದು ತಿಳಿ; ನಾನು ಅವುಗಳಲಿಲ್ಲ, ಅವು ನನ್ನಲ್ಲಿರುವವು. ಈ ಮೂರು ಗುಣಗಳಿಂದಾಗಿರುವ ಪದಾರ್ಥಗಳಿಂದ ಈ ಜಗತ್ತೆಲ್ಲವೂ ಮರುಳಾಗಿ ಇವುಗಳಿಗಿಂತ ಬೇರೆಯಾಗಿ ಅವ್ಯಯನೆನಿಸಿರುವ ನನ್ನನ್ನು ಅರಿಯದೆ ಇರುವದು. ಈ ಗುಣಮಯವಾದ ನನ್ನ ದೈವಮಾಯೆಯು ದಾಟಲಶಕ್ಯವಾದದ್ದು; ನನ್ನನ್ನೇ ಯಾರು ಶರಣುಹೊಂದುವರೋ ಅವರು ಈ ಮಾಯೆಯನ್ನು ದಾಟುವರು. ಪಾಪಿಗಳೂ ಮೂಢರೂ ಆದ ನರಾಧಮರು ನನ್ನನ್ನು ಶರಣು ಹೊಂದುವದಿಲ್ಲ; ಅಸುರಸ್ವಭಾವವನ್ನು ಅವಲಂಬಿಸಿರುವ ಅವರ ಜ್ಞಾನವನ್ನು ಮಾಯೆಯು ಅಪಹರಿಸುವದು. (12–15)

ಟಿ॥ ಸಾಂಖ್ಯರು ಹೇಳುವಂತೆ ಜಗತ್ತೆಲ್ಲವೂ ಸತ್ತ್ವರಜಸ್ತಮೋಗುಣಗಳೆಂಬ ಪ್ರಕೃತಿಯಿಂದಾಗಿರುವದಾದರೂ ಅದು ಸ್ವತಂತ್ರವಾಗಿರುವದಿಲ್ಲ, ಪರಮಾರ್ಥವೂ ಅಲ್ಲ; ಅದು ಪರಮಾತ್ಮನಲ್ಲಿ ತೋರುವ ಮಾಯಾಮಾತ್ರವಾಗಿರುವದು. ಗುಣಮಯವಾಗಿ

ರುವ ಶರೀರದಲ್ಲಿ ಆತ್ಮನಿರುವನೆಂದು ಭಾವಿಸುವದು ತಪ್ಪು, ಏಕೆಂದರೆ ಜಗತ್ತೇ ಪರಮಾತ್ಮನ ಆಧಾರದಿಂದಿರುವ ಮಾಯೆಯ ಕಾರ್ಯವಾಗಿರುತ್ತದೆ. ಸ್ವಾರ್ಥಪರರಾದವರು ಈ ಮಾಯೆಗೆ ಸಿಕ್ಕಿ ನರಳುವರು, ಭಕ್ತರು ಮಾತ್ರ ಇದನ್ನು ಮೀರಿ ಪರಮಾತ್ಮನ ಸ್ವರೂಪವನ್ನು ಕಂಡುಕೊಂಡು ನಲಿದಾಡುವರು.

ಚತುರ್ವಿಧಾ ಭಜನ್ತೇ ಮಾಂ। ಜನಾಃ ಸುಕೃತಿನೋಽರ್ಜುನ।
ಆರ್ತೋ ಜಿಜ್ಞಾಸುರರ್ಥಾರ್ಥೀ। ಜ್ಞಾನೀ ಚ ಭರತರ್ಷಭ ॥ 16 ॥

ತೇಷಾಂ ಜ್ಞಾನೀ ನಿತ್ಯಯುಕ್ತ–ಏಕಭಕ್ತಿರ್ವಿಶಿಷ್ಯತೇ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥ–ಮಹಂ ಸ ಚ ಮಮ ಪ್ರಿಯಃ ॥ 17 ॥

ಉದಾರಾಃ ಸರ್ವ ಏವೈತೇ। ಜ್ಞಾನೀ ತ್ವಾತ್ಮೈವ ಮೇ ಮತಮ್।
ಆಸ್ಥಿತಃ ಸ ಹಿ ಯುಕ್ತಾತ್ಮಾ। ಮಾಮೇವಾನುತ್ತಮಾಂ ಗತಿಮ್ ॥ 18 ॥

ಬಹೂನಾಂ ಜನ್ಮನಾಮನ್ತೇ। ಜ್ಞಾನವಾನ್ಮಾಂ ಪ್ರಪದ್ಯತೇ।
ವಾಸುದೇವಃ ಸರ್ವಮಿತಿ। ಸ ಮಹಾತ್ಮಾ ಸುದುರ್ಲಭಃ ॥ 19 ॥

ಅರ್ಜುನನೆ. ನಾಲ್ಕು ಬಗೆಯ ಸುಕೃತಿಗಳಾವ ಜನರು ನನ್ನನ್ನು ಭಜಿಸುವರು ; ಭರತಶ್ರೇಷ್ಠನೆ, ಆರ್ತನು (ಸಂಕಟಕ್ಕೆ ಸಿಕ್ಕಿರುವವನು), ಜಿಜ್ಞಾಸು (ನನ್ನ ತತ್ತ್ವವನ್ನು ಅರಿತುಕೊಳ್ಳಲಿಚ್ಛಿಸುವವನು), ಅರ್ಥಾರ್ಥೀ (ಯಾವದಾದರೊಂದು ಪುರುಷಾರ್ಥವನ್ನು ಬಯಸುವವನು), ಜ್ಞಾನಿ– ಇವರೇ ಆ ನಾಲ್ಕು ಬಗೆಯವರು. ಇವರೊಳಗೆ ನಿತ್ಯಯುಕ್ತನಾಗಿ ಏಕಭಕ್ತಿಯಾಗಿರುವ ಜ್ಞಾನಿಯೇ ಹೆಚ್ಚಿನವನು; ಏಕೆಂದರೆ ಜ್ಞಾನಿಗೆ ನಾನು ಅತ್ಯಂತಪ್ರಿಯನಾಗಿರುವೆನು, ಅವನೂ ನನಗೆ ಪ್ರಿಯನಾಗಿರುವನು. ಇವರೆಲ್ಲರೂ ಮೇಲುಗೈಯಾದವರೇ ಸರಿ ; ಆದರೆ ಜ್ಞಾನಿಯು ನನ್ನ ಆತ್ಮನೇ ಆಗಿರುವನೆಂದು ನನ್ನ ಮತವು. ಏಕೆಂದರೆ ಅವನು ಚಿತ್ತವನ್ನು ನನ್ನಲ್ಲಿ ಸಮಾಧಾನಗೊಳಿಸಿಕೊಂಡು ನಾನೇ ಪರಮಗತಿಯೆಂದು ನಂಬಿಕೊಂಡಿರುತ್ತಾನೆ. ಬಹಳ ಜನ್ಮಗಳಾದಮೇಲೆ ವಾಸುದೇವನೇ ಸರ್ವವು– ಎಂದು ಜ್ಞಾನಿಯಾಗಿ ನನ್ನನ್ನು ಶರಣುಹೊಂದುತ್ತಾನೆ. ಇಂಥ ಮಹಾತ್ಮನು ಸಿಕ್ಕುವದು ಬಲುಕಷ್ಟ. (16–19)

ಟಿ॥ ಮತ್ತೊಂದನ್ನು ಬಯಸದೆ ಪರಮಾತ್ಮಭಕ್ತಿಯಲ್ಲಿಯೇ ನಿಂತಿರುವ

ಜ್ಞಾನಿಯೇ ಪರಮಭಕ್ತನು ; ಅವನಿಗೆ ದೊರಕಿರುವ ಪರಮಪುರುಷಾರ್ಥದ ಆನಂದವು ಮತ್ತೆ ಯಾರಿಗೂ ಇರುವದಿಲ್ಲ.

ಕಾಮೈಸ್ತೈಸ್ತೈರ್ಹೃತಜ್ಞಾನಾಃ। ಪ್ರಪದ್ಯನ್ತೇಽನ್ಯದೇವತಾಃ।
ತಂ ತಂ ನಿಯಮಮಾಸ್ಥಾಯ। ಪ್ರಕೃತ್ಯಾ ನಿಯತಾಃ ಸ್ವಯಾ ॥ 20 ॥

ಯೋ ಯೋ ಯಾಂ ಯಾಂ ತನುಂ ಭಕ್ತಃ। ಶ್ರದ್ಧಯಾರ್ಚಿತುಮಿಚ್ಛತಿ
ತಸ್ಯ ತಸ್ಯಾಚಲಾಂ ಶ್ರದ್ಧಾಂ। ತಾಮೇವ ವಿದಧಾಮ್ಯಹಮ್ ॥ 21 ॥

ಸ ತಯಾ ಶ್ರದ್ಧಯಾ ಯುಕ್ತ–ಸ್ತಸ್ಯಾರಾಧನಮೀಹತೇ।
ಲಭತೇ ಚ ತತಃ ಕಾಮಾನ್। ಮಯ್ಯೈವ ವಿಹಿತಾನ್ಹಿ ತಾನ್ ॥ 22 ॥

ಅನ್ತವತ್ತು ಫಲಂ ತೇಷಾಂ। ತದ್ಭವತ್ಯಲ್ಪಮೇಧಸಾಮ್।
ದೇವಾನ್ದೇವಯಜೋ ಯಾನ್ತಿ। ಮದ್ಭಕ್ತಾ ಯಾನ್ತಿ ಮಾಮಪಿ ॥ 23 ॥

ಅವ್ಯಕ್ತಂ ವ್ಯಕ್ತಿಮಾಪನ್ನಂ। ಮನ್ಯನ್ತೇ ಮಾಮಬುದ್ಧಯಃ।
ಪರಂ ಭಾವಮಜಾನನ್ತೋ। ಮಮಾವ್ಯಯಮನುತ್ತಮಮ್ ॥ 24 ॥

ನಾಹಂ ಪ್ರಕಾಶಃ ಸರ್ವಸ್ಯ। ಯೋಗಮಾಯಾಸಮಾವೃತಃ।
ಮೂಢೋಽಯಂ ನಾಭಿಜಾನಾತಿ। ಲೋಕೋ ಮಾಮಜಮವ್ಯಯಮ್ ॥ 25 ॥

ವೇದಾಹಂ ಸಮತೀತಾನಿ। ವರ್ತಮಾನಾನಿ ಚಾರ್ಜುನ।
ಭವಿಷ್ಯಾಣಿ ಚ ಭೂತಾನಿ। ಮಾಂ ತು ವೇದ ನ ಕಶ್ಚನ ॥ 26 ॥

ಇಚ್ಛಾದ್ವೇಷಸಮುತ್ಥೇನ। ದ್ವನ್ದ್ವಮೋಹೇನ ಭಾರತ।
ಸರ್ವಭೂತಾನಿ ಸಮ್ಮೋಹಂ। ಸರ್ಗೇ ಯಾನ್ತಿ ಪರನ್ತಪ ॥ 27 ॥

ಆಯಾ ಕಾಮಗಳಿಂದ ಜ್ಞಾನವನ್ನು ನೀಗಿಕೊಂಡವರು ತಮ್ಮತಮ್ಮ ಪ್ರಕೃತಿಗೆ ಕಟ್ಟುಬಿದ್ದು ಆಯಾ ನಿಯಮಗಳನ್ನವಲಂಬಿಸಿ ಬೇರೆಯ ದೇವತೆಗಳನ್ನು ಶರಣುಹೊಂದುವರು. ಯಾವಯಾವ ಭಕ್ತನು ಯಾವಯಾವ ಮೂರ್ತಿಯನ್ನು ಶ್ರದ್ಧೆಯಿಂದ ಪೂಜಿಸುವದಕ್ಕೆ ಇಚ್ಛಿಸುವನೋ, ಅವನವನಿಗೆ ಆಯಾ ಅಚಲಶ್ರದ್ಧೆಯನ್ನೇ ನಾನು ಸ್ಥಿರಗೊಳಿಸುವೆನು. ಅವನು ಆ ಶ್ರದ್ಧೆಯಿಂದೊಡ ಗೂಡಿ ಆ ಮೂರ್ತಿಯ ಪೂಜೆಯನ್ನು ಮಾಡುತ್ತಾನೆ ; ಮತ್ತು ನನ್ನಿಂದಲೇ

ವಿಹಿತವಾದ ಆ ಕಾಮಗಳನ್ನೂ ಪಡೆದುಕೊಳ್ಳುತ್ತಾನೆ. ಆದರೆ ಅವರಿಗೆ ಆಗುವ ಫಲವು ಕೊನೆಗಾಣತಕ್ಕದ್ದು. ಅದು ಅಲ್ಪಬುದ್ಧಿಯುಳ್ಳವರಿಗೆ ಉಂಟಾಗುತ್ತದೆ. ದೇವತೆಗಳನ್ನು ಪೂಜಿಸುವವರು ದೇವತೆಗಳನ್ನು ಸೇರುವರು, ನನ್ನ ಭಕ್ತರೊ ನನ್ನನ್ನೇ ಸೇರುವರು. ನಾನು ಅವ್ಯಕ್ತನಾಗಿ ಈಗ ವ್ಯಕ್ತವಾಗಿರುವವನೆಂದು ಬುದ್ಧಿಯಿಲ್ಲದವರು ಎಣಿಸುವರು. ಅವರು ಅವ್ಯಯವಾದ ನನ್ನ ಮಿಗಿಲಿಲ್ಲದ ಸ್ವರೂಪವನ್ನು ಅರಿಯರು. ಯೋಗಮಾಯೆಯಿಂದ ಮರೆಯಾಗಿರುವ ನಾನು ಎಲ್ಲರಿಗೂ ತೋರಿಕೊಳ್ಳುವವನಲ್ಲ; ಮೂಢರಾದ ಈ ಜನರು ಜನ್ಮರಹಿತನೂ ಅವ್ಯಯನೂ ಆದ ನನ್ನನ್ನು ಅರಿಯರು. ಅರ್ಜುನನೆ, ಹಿಂದೆ ಆಗಿಹೋಗಿರುವ, ಈಗ ಇರುವ ಮತ್ತು ಮುಂದೆ ಆಗುವ ಪ್ರಾಣಿಗಳನ್ನು ನಾನು ಬಲ್ಲೆನು ; ನನ್ನನ್ನು ಮಾತ್ರ ಯಾರೊಬ್ಬರೂ ಅರಿಯರು. ಎಲೈ ಭರತವಂಶೋತ್ಪನ್ನನೆ, ಶತ್ರುತಾಪನನೆ, ಇಚ್ಛಾದ್ವೇಷಗಳಿಂದ ಉಂಟಾಗಿರುವ ದ್ವಂದ್ವಮೋಹದಿಂದ ಪ್ರಾಣಿಗಳೆಲ್ಲವೂ ಹುಟ್ಟುವಾಗಲೇ ಸಮ್ಮೋಹವನ್ನು ಹೊಂದಿರುವವು.(20–27)

ಟಿ॥ ಕಾಮಿಗಳು ಕಾಮ್ಯಕರ್ಮವನ್ನು ಮಾಡುವಾಗ ಶಾಸ್ತ್ರೋಕ್ತ ವಿಧಿಯಿಂದ ಬೇರೆಬೇರೆ ದೇವತೆಗಳನ್ನು ಪೂಜಿಸುವರು ; ಇದಕ್ಕೆ ಅವರವರ ಮನೋವಾಸನೆಯೇ ಕಾರಣ. ನಿಜವಾಗಿ ಅವರಿಗೂ ಭಗವಂತನೇ ಫಲವನ್ನು ಕೊಡುವನಾದರೂ ಅವರಿಗೆ ಪರಮಾತ್ಮಜ್ಞಾನವು ದೊರಕದು. ಅಂಥ ಜನರು ಪರಮಾತ್ಮನ ಅಂಶ ಅಥವಾ ಅವತಾರವಾದ ಮೂರ್ತಿಯನ್ನೇ ಅವನ ನಿಜವಾದ ಸ್ವರೂಪವೆಂದು ಭಾವಿಸಿ ಮೋಸಹೋಗುವರು.

ಯೇಷಾಂ ತ್ವನ್ತಗತಂ ಪಾಪಂ। ಜನಾನಾಂ ಪುಣ್ಯಕರ್ಮಣಾಮ್ ।
ತೇ ದ್ವನ್ದ್ವಮೋಹನಿರ್ಮುಕ್ತಾ। ಭಜನ್ತೇ ಮಾಂ ದೃಢವ್ರತಾಃ ॥ 28 ॥

ಜರಾಮರಣಮೋಕ್ಷಾಯ। ಮಾಮಾಶ್ರಿತ್ಯ ಯತನ್ತಿ ಯೇ।
ತೇ ಬ್ರಹ್ಮ ತದ್ವಿದುಃ ಕೃತ್ಸ್ನ –ಮಧ್ಯಾತ್ಮಂ ಕರ್ಮ ಚಾಖಿಲಮ್ ॥ 29 ॥

ಸಾಧಿಭೂತಾಧಿದೈವಂ ಮಾಂ। ಸಾಧಿಯಜ್ಞಂ ಚ ಯೇ ವಿದುಃ।
ಪ್ರಯಾಣಕಾಲೇಽಪಿ ಚ ಮಾಂ। ತೇ ವಿದುರ್ಯುಕ್ತಚೇತಸಃ ॥ 30 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನಸಂವಾದೇ
ಜ್ಞಾನವಿಜ್ಞಾನಯೋಗೋ ನಾಮ ಸಪ್ತಮೋಽಧ್ಯಾಯಃ

ಆದರೆ ಯಾವ ಜನರಿಗೆ ತಾವು ಮಾಡಿರುವ ಪುಣ್ಯಕರ್ಮಗಳಿಂದ ಪಾಪವು ಕೊನೆಗೊಂಡಿರುವದೋ, ಅವರು ದ್ವಂದ್ವಮೋಹದಿಂದ ಬಿಡುಗಡೆಯನ್ನು ಹೊಂದಿ ದೃಢವ್ರತರಾಗಿ ನನ್ನನ್ನು ಭಜಿಸುವರು. ಮುಪ್ಪುಸಾವುಗಳಿಂದ ಬಿಡುಗಡೆಯನ್ನು ಹೊಂದುವದಕ್ಕಾಗಿ ನನ್ನನ್ನೇ ಆಶ್ರಯಿಸಿಕೊಂಡು ಯಾರು ಪ್ರಯತ್ನಮಾಡುತ್ತಿರುವರೋ ಅವರು ಸಂಪೂರ್ಣವಾಗಿ ಆ ಬ್ರಹ್ಮವನ್ನೂ ಅಧ್ಯಾತ್ಮವನ್ನೂ ಕರ್ಮವೆಲ್ಲವನ್ನೂ ಅರಿತುಕೊಳ್ಳುವರು. ಯಾರು ಅಧಿಭೂತ, ಅಧಿದೈವ – ಇವುಗಳಿಂದಲೂ ಅಧಿಯಜ್ಞದಿಂದಲೂ ಕೂಡಿರುವ ನನ್ನನ್ನು ತಿಳಿದುಕೊಳ್ಳುವರೋ ಅವರು ಸಾಯುವಕಾಲದಲ್ಲಿಯೂ ಸಮಾಧಾನಚಿತ್ತದಿಂದ ನನ್ನನ್ನು ತಿಳಿದುಕೊಳ್ಳುವರು. (28–30)

ಟಿ|| ಪುಣ್ಯಕರ್ಮದಿಂದ ಪಾಪವು ಸವೆದರೆ ರಾಗದ್ವೇಷಗಳು ಹೋಗಿ ಅವುಗಳಿಂದಾಗುವ ಸುಖದುಃಖಭ್ರಾಂತಿಯೂ ತೊಲಗುವದು. ಆಗ ತತ್ತ್ವಜ್ಞಾನಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಪರಮಾತ್ಮನ ಭಾವನೆಯು ಬಲವಾದರೆ ಸಾಯುವ ಕಾಲವಲ್ಲಿ ಕೂಡ ಅದು ಮರೆಯಾಗುವದಿಲ್ಲವಾದ್ದರಿಂದ ಅವಕ್ಕೆ ಫಲವು ಗಂಟುಕಟ್ಟಿ-ಟ್ಟಂತೆ ಸಿದ್ಧವಾಗಿರುವದು.

ಜ್ಞಾನವಿಜ್ಞಾನಯೋಗವೆಂಬ ಏಳನೆಯ ಅಧ್ಯಾಯವು ಮುಗಿಯಿತು.

---------

## ಅಥಾಷ್ಟಮೋಽಧ್ಯಾಯಃ

ಅರ್ಜುನ ಉವಾಚ –

ಕಿಂ ತದ್ಬ್ರಹ್ಮ ಕಿಮಧ್ಯಾತ್ಮಂ । ಕಿಂ ಕರ್ಮ ಪುರುಷೋತ್ತಮ ।
ಅಧಿಭೂತಂ ಚ ಕಿಂ ಪ್ರೋಕ್ತ–ಮಧಿದೈವಂ ಕಿಮುಚ್ಯತೇ ॥ 1 ॥
ಅಧಿಯಜ್ಞಃ ಕಥಂ ಕೋಽತ್ರ । ದೇಹೇಽಸ್ಮಿನ್ಮಧುಸೂದನ ।
ಪ್ರಯಾಣಕಾಲೇ ಚ ಕಥಂ । ಜ್ಞೇಯೋಽಸಿ ನಿಯತಾತ್ಮಭಿಃ ॥ 2 ॥

## ಎಂಟನೆಯ ಅಧ್ಯಾಯ

ಅರ್ಜುನನು ಕೇಳಿದ್ದು :

ಪುರುಷೋತ್ತಮನೆ, ಆ ಬ್ರಹ್ಮವೆಂಬುದು ಯಾವದು ? ಅಧ್ಯಾತ್ಮವು ಯಾವದು ? ಕರ್ಮವೆಂದರೆ ಯಾವದು ? ಅಧಿಭೂತವೆಂದು ಹೇಳಿದ್ದು ಯಾವದು ? ಅಧಿದೈವವೆನಿಸುವದು ಯಾವದು ? ಮದುಸೂಧನನೆ, ಈ ದೇಹದಲ್ಲಿ ಅಧಿಯಜ್ಞನೆಂದರೆ ಯಾರು, ಅವನು ಹೇಗೆ ಅಧಿಯಜ್ಞನು ?

ಮರಣಕಾಲದಲ್ಲಿ ಮನಸ್ಸನ್ನು ಬಿಗಿಹಿಡಿದುಕೊಂಡ ಜನರು ನಿನ್ನನ್ನು ಹೇಗೆ ಅರಿಯುವರು ? (1–2)

ಶ್ರೀಭಗವಾನುವಾಚ –

ಅಕ್ಷರಂ ಬ್ರಹ್ಮ ಪರಮಂ । ಸ್ವಭಾವೋಽಧ್ಯಾತ್ಮಮುಚ್ಯತೇ ।
ಭೂತಭಾವೋದ್ಭವಕರೋ । ವಿಸರ್ಗಃ ಕರ್ಮಸಂಜ್ಞಿತಃ ॥ 3 ॥

ಅಧಿಭೂತಂ ಕ್ಷರೋ ಭಾವಃ । ಪುರುಷಶ್ಚಾಧಿದೈವತಮ್ ।
ಅಧಿಯಜ್ಞೋಽಹಮೇವಾತ್ರ । ದೇಹೇ ದೇಹಭೃತಾಂ ವರ ॥ 4 ॥

ಅನ್ತಕಾಲೇ ಚ ಮಾಮೇವ । ಸ್ಮರನ್ಮುಕ್ತ್ವಾ ಕಲೇವರಮ್ ।
ಯಃ ಪ್ರಯಾತಿ ಸ ಮದ್ಭಾವಂ । ಯಾತಿ ನಾಸ್ತ್ಯತ್ರ ಸಂಶಯಃ ॥ 5 ॥

ಶ್ರೀಭಗವಂತನ ಉತ್ತರ :

ಎಲ್ಲಕ್ಕೂ ಹೆಚ್ಚಿನ ಅಕ್ಷರವೇ ಬ್ರಹ್ಮವು, ಅದರ ಆತ್ಮಸ್ವಭಾವವೇ ಅಧ್ಯಾತ್ಮವು ; ಪ್ರಾಣಿಗಳ ಉತ್ಪತ್ತಿಗೆ ಕಾರಣವಾದ ಹೋಮತ್ಯಾಗವೇ ಕರ್ಮ

ವೆನಿಸುವದು. ಹುಟ್ಟಿ ನಾಶವಾಗುತ್ತಿರುವ ವಸ್ತುವೇ ಅಧಿಭೂತವು. ಹಿರಣ್ಯಗರ್ಭ ಪುರುಷನೇ ಅಧಿದೈವತವು. ದೇಹಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನೆ, ಈ ದೇಹದಿಂದಾಗುವ ಯಜ್ಞಗಳಿಗೆ ಅಭಿಮಾನಿದೇವತೆಯಾದ ನಾನೇ ಅಧಿಯಜ್ಞವು. ಮರಣಕಾಲವಲ್ಲಿ ನನ್ನನ್ನೇ ಸ್ಮರಿಸುತ್ತಾ ಯಾವನು ದೇಹವನ್ನು ಬಿಟ್ಟು ತೆರಳು ವನೋ ಅವನು ನನ್ನ ಸ್ವರೂಪವನ್ನೇ ಹೊಂದುವನು, ಇದರಲ್ಲಿ ಸಂಶಯವಿಲ್ಲ. (3–5)

ಟಿ॥ ಇಲ್ಲಿ ಅಕ್ಷರವೆಂದರೆ ಪರಮಾತ್ಮನೇ. ಪರಮಾತ್ಮನಿಗೆಂದು ಮಾಡುವ ಯಜ್ಞದಿಂದ ಪ್ರಜಾಭಿವೃದ್ಧಿಯಾಗುತ್ತದೆ, ಅವನ ಧ್ಯಾನದಿಂದ ಮರಣವನ್ನು ಹೊಂದುವವನಿಗೆ ಪರಮಾತ್ಮಸಾಯುಜ್ಯವೇ ಆಗುವದು.

**ಯಂ ಯಂ ವಾಪಿ ಸ್ಮರನ್ಭಾವಂ । ತ್ಯಜತ್ಯನ್ತೇ ಕಲೇವರಮ್ ।**
**ತಂ ತಮೇವೈತಿ ಕೌನ್ತೇಯ । ಸದಾ ತದ್ಭಾವಭಾವಿತಃ ॥ 6 ॥**
**ತಸ್ಮಾತ್ಸರ್ವೇಷು ಕಾಲೇಷು । ಮಾಮನುಸ್ಮರ ಯುಧ್ಯ ಚ ।**
**ಮಯ್ಯರ್ಪಿತಮನೋಬುದ್ಧಿ–ರ್ಮಾಮೇವೈಷ್ಯಸ್ಯಸಂಶಯಃ ॥ 7 ॥**

**ಅಭ್ಯಾಸಯೋಗಯುಕ್ತೇನ। ಚೇತಸಾ ನಾನ್ಯಗಾಮಿನಾ।**
**ಪರಮಂ ಪುರುಷಂ ದಿವ್ಯಂ। ಯಾತಿ ಪಾರ್ಥಾನುಚಿನ್ತಯನ್ ॥ 8 ॥**

ಕೌಂತೇಯನೆ, ಮರಣಕಾಲದಲ್ಲಿ ಯಾವಯಾವ ದೇವತೆಯನ್ನು ನೆನೆಸಿಕೊಂಡು ದೇಹವನ್ನು ಬಿಡುವನೋ ಯಾವಾಗಲೂ ಅದೇ ಭಾವನೆಯಿಂದ ಕೂಡಿರುವದರಿಂದ ಮರಣಾನಂತರದಲ್ಲಿ ಅದನ್ನೇ ಹೊಂದುವನು. ಆದ್ದರಿಂದ ಎಲ್ಲಾ ಕಾಲಗಳಲ್ಲಿಯೂ ನನ್ನನ್ನು ಶಾಸ್ತ್ರಾನುಸಾರವಾಗಿ ಸ್ಮರಿಸುತ್ತಿರು ; ಈಗ ಯುದ್ಧಮಾಡು. ನನ್ನಲ್ಲಿಯೇ ಮನೋಬುದ್ಧಿಗಳನ್ನು ಅರ್ಪಿಸಿದರೆ ನನ್ನನ್ನೇ ಹೊಂದುವೆಯೆಂಬುದರಲ್ಲಿ ಸಂಶಯವಿಲ್ಲ . ಪಾರ್ಥನೆ, ಅಭ್ಯಾಸಯೋಗದಿಂದ ಕೂಡಿ ಚಿತ್ತವು ಮತ್ತೊಂದು ಕಡೆ ಹರಿಯದಂತೆ ಕ್ರಮವನ್ನನುಸರಿಸಿ ಚಿಂತನೆ ಮಾಡುವಾತನು ಸೂರ್ಯಮಂಡಲದಲ್ಲಿರುವ ಪರಮಪುರುಷನನ್ನೇ ಸೇರುವನು. (6–8)

ಟಿ॥ ಕರ್ಮಯೋಗವನ್ನು ಮಾಡುವಾಗಲೂ ಪರಮಾತ್ಮನನ್ನೇ ಚಿಂತಿಸುತ್ತಿದ್ದರೆ ಸಾಯುವಾಗಲೂ ಆತನ ಚಿಂತನೆಯೇ ಒದಗಿ ಆತನ ಸಾಯುಜ್ಯವು ದೊರಕುವದು,

ಪರಮಾತ್ಮನು ಸೂರ್ಯಮಂಡಲದಲ್ಲಿರುವನೆಂದು ಇಲ್ಲಿ ಹೇಳಿರುವದು ಆ ಉಪಾಧಿಯ ಉತ್ಕೃಷ್ಟತೆಯಿಂದ.

ಕವಿಂ ಪುರಾಣಮನುಶಾಸಿತಾರ–
ಮಣೋರಣೀಯಾಂಸಮನುಸ್ಮರೇದ್ಯಃ ।
ಸರ್ವಸ್ಯ ಧಾತಾರಮಚಿನ್ತ್ಯರೂಪ–
ಮಾದಿತ್ಯವರ್ಣಂ ತಮಸಃ ಪರಸ್ತಾತ್ ॥ 9 ॥

ಪ್ರಯಾಣಕಾಲೇ ಮನಸಾಚಲೇನ ।
ಭಕ್ತ್ಯಾ ಯುಕ್ತೋ ಯೋಗಬಲೇನ ಚೈವ ॥
ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್ ।
ಸ ತಂ ಪರಂ ಪುರುಷಮುಪೈತಿ ದಿವ್ಯಮ್ ॥ 10 ॥

ಸರ್ವಜ್ಞನೂ ಪುರಾಣಪುರುಷನೂ ಜಗತ್ತೆಲ್ಲವನ್ನು ಆಳುವವನೂ ಅಣುವಿಗಿಂತಲೂ ಅಣುವೂ ಕರ್ಮಫಲವನ್ನು ವಿಂಗಡಿಸಿಕೊಡುವವನೂ

ಧ್ಯಾನಕ್ಕೂ ಸಿಕ್ಕದ ಸ್ವರೂಪವುಳ್ಳವನೂ ಸೂರ್ಯನಂತೆ ಹೊಳೆಯುವ ಚೈತನ್ಯ ಸ್ವರೂಪನೂ ಅಜ್ಞಾನದಿಂದಾಚೆಗೆ ಇರುವವನೂ ಆಗಿರುವ ಪುರುಷನನ್ನು ಮರಣ ಸಮಯದಲ್ಲಿ ನಿಶ್ಚಲವಾದ ಮನಸ್ಸಿನಿಂದ ಭಕ್ತಿಯಿಂದಲೂ ಯೋಗಬಲ ದಿಂದಲೂ ಕೂಡಿ ಹುಬ್ಬುಗಳ ನಡುವೆ ಚೆನ್ನಾಗಿ ನಿಲ್ಲಿಸಿಕೊಂಡು ಯಾವನು ಚಿಂತಿ ಸುವನೋ ಅವನು ಆ ದಿವ್ಯನಾದ ಪರಮಪುರುಷನನ್ನು ಹೊಂದುವನು. (9–10)

ಟಿ॥ ಮನಸ್ಸನ್ನು ಹೃದಯದಿಂದ ಹಿಡಿದು ಮೇಲುಮೇಲಕ್ಕೆ ಸುಷುಮ್ನೆಯೆಂಬ ನಾಡಿಯ ದ್ವಾರದಿಂದ ಮೇಲಕ್ಕೆ ತಂದು ಹುಬ್ಬುಗಳ ನಡುವೆ ನಿಲ್ಲಿಸಿಕೊಂಡು ಧ್ಯಾನ ಮಾಡಬೇಕೆಂದು ಯೋಗಿಗಳು ಹೇಳುತ್ತಾರೆ. ಅದರ ವರ್ಣನೆಯಿದು.

**ಯದಕ್ಷರಂ ವೇದವಿದೋ ವದನ್ತಿ। ವಿಶನ್ತಿ ಯದ್ಯತಯೋ ವೀತರಾಗಾಃ।**
**ಯದಿಚ್ಛನ್ತೋ ಬ್ರಹ್ಮಚರ್ಯಂ ಚರನ್ತಿ। ತತ್ತೇ ಪದಂ ಸಙ್ಗ್ರಹೇಣ ಪ್ರವಕ್ಷ್ಯೇ॥**

**ಸರ್ವದ್ವಾರಾಣಿ ಸಂಯಮ್ಯ। ಮನೋ ಹೃದಿ ನಿರುಧ್ಯ ಚ।**
**ಮೂರ್ಧ್ನ್ಯಾಧಾಯಾತ್ಮನಃ ಪ್ರಾಣ–ಮಾಸ್ಥಿತೋ ಯೋಗಧಾರಣಾಮ್॥12॥**

**ಓಮಿತ್ಯೇಕಾಕ್ಷರಂ ಬ್ರಹ್ಮ। ವ್ಯಾಹರನ್ಮಾಮನುಸ್ಮರನ್।**
**ಯಃ ಪ್ರಯಾತಿ ತ್ಯಜನ್ದೇಹಂ। ಸ ಯಾತಿ ಪರಮಾಂ ಗತಿಮ್ ॥ 13 ॥**

ಯಾವ ಅಕ್ಷರವನ್ನು ವೇದವನ್ನು ಬಲ್ಲವರು ಹೇಳುವರೋ ಯಾವದನ್ನು ವಿರಕ್ತರಾದ ಯತಿಗಳು ಸೇರುವರೋ ಯಾವದರ ಬಯಕೆಯಿಂದ ಬ್ರಹ್ಮಚರ್ಯೆಯನ್ನು ಆಚರಿಸುವರೋ ಆ ಪರಮಾತ್ಮಸ್ಥಾನವನ್ನು ನಿನಗೆ ಸ್ವಲ್ಪದರಲ್ಲಿ ಹೇಳುವೆನು. ಇಂದ್ರಿಯ ದ್ವಾರಗಳನ್ನೆಲ್ಲ ಬಿಗಿಹಿಡಿದು ಮನಸ್ಸನ್ನು ಹೃದಯದಲ್ಲಿ ತಡೆದಿಟ್ಟುಕೊಂಡು ತನ್ನ ಪ್ರಾಣವನ್ನು ಮೂರ್ಧಪ್ರದೇಶದಲ್ಲಿಟ್ಟುಕೊಂಡು ಯೋಗಧಾರಣೆಯನ್ನು ಮಾಡಿದವನಾಗಿ ಓಂ ಎಂಬ ಏಕಾಕ್ಷರದ ಬ್ರಹ್ಮವನ್ನು ಉಚ್ಚರಿಸುತ್ತಾ, ನನ್ನನ್ನು ಸ್ಮರಿಸುತ್ತಾ, ಯಾವನು ದೇಹವನ್ನು ಬಿಟ್ಟು ತೆರಳುವನೋ, ಅವನು ಪರಮಗತಿಯನ್ನೈದುವನು. (11–13)

ಟಿ॥ ಯೋಗದಿಂದ ಮನಸ್ಸನ್ನು ಗೆದ್ದುಕೊಂಡು ಹೃದಯದಿಂದ ಸಹಸ್ರಾರದವರೆಗೂ ಅದನ್ನು ಮೆಲ್ಲಮೆಲ್ಲಗೆ ತಂದುಕೊಂಡು ಭಕ್ತಿಯಿಂದ ಓಂಕಾರವನ್ನು ಜಪಿಸುತ್ತಾ

ಆದರರ್ಥವಾದ ಪರಮಾತ್ಮನನ್ನು ಹಿಂದೆ ಹೇಳಿದ ಸ್ವರೂಪದಿಂದ ಚಿಂತಿಸುವವನು ಮರಣಾನಂತರದಲ್ಲಿ ಪರಮಾತ್ಮಸಾಯುಜ್ಯವನ್ನು ಸೇರುವನೆಂಬುದು ಅಭ್ಯಾಸಯೋಗದ ತಿರುಳು. ಇದು ಗುರುವಿನಿಂದ ತಿಳಿಯಬರತಕ್ಕದ್ದೂ ಕಷ್ಟಸಾಧ್ಯವೂ ಆಗಿರುವದೆಂಬುದು ಸ್ಪಷ್ಟವೇ.

**ಅನನ್ಯಚೇತಾಃ ಸತತಂ । ಯೋ ಮಾಂ ಸ್ಮರತಿ ನಿತ್ಯಶಃ ।**
**ತಸ್ಯಾಹಂ ಸುಲಭಃ ಪಾರ್ಥ । ನಿತ್ಯಯುಕ್ತಸ್ಯ ಯೋಗಿನಃ ॥ 14 ॥**
**ಮಾಮುಪೇತ್ಯ ಪುನರ್ಜನ್ಮ । ದುಃಖಾಲಯಮಶಾಶ್ವತಮ್ ।**
**ನಾಪ್ನುವನ್ತಿ ಮಹಾತ್ಮಾನಃ । ಸಂಸಿದ್ಧಿಂ ಪರಮಾಂ ಗತಾಃ ॥ 15 ॥**

ಪಾರ್ಥನೆ, ಯಾವನು ಮತ್ತೊಂದರಲ್ಲಿ ಚಿತ್ತವನ್ನಿಡದೆ ಯಾವಾಗಲೂ ಎಡೆಬಿಡದೆ ನನ್ನನ್ನೇ ಸ್ಮರಿಸುತ್ತಿರುವನೋ, ಅಂಥ ನಿತ್ಯಮುಕ್ತನಾದ ಯೋಗಿಗೆ ನಾನು ಸುಲಭವಾಗಿ ಸಿಕ್ಕುವೆನು. ನನ್ನನ್ನು ಸೇರಿ ಪರಮಸಿದ್ಧಿಯಾದ ಮೋಕ್ಷವನ್ನು ಪಡೆದ ಮಹಾತ್ಮರು ದುಃಖದಾಗರವೂ ಅನಿತ್ಯವೂ ಆಗಿರುವ ಪುನರ್ಜನ್ಮವನ್ನು ಪಡೆಯರು. (14–15)

ಆಬ್ರಹ್ಮಭುವನಾಲ್ಲೋಕಾಃ। ಪುನರಾವರ್ತಿನೋಽರ್ಜುನ।
ಮಾಮುಪೇತ್ಯ ತು ಕೌನ್ತೇಯ। ಪುನರ್ಜನ್ಮ ನ ವಿದ್ಯತೇ ॥ 16 ॥

ಸಹಸ್ರಯುಗಪರ್ಯನ್ತ–ಮಹರ್ಯದ್ಬ್ರಹ್ಮಣೋ ವಿದುಃ।
ರಾತ್ರಿಂ ಯುಗಸಹಸ್ರಾನ್ತಾಂ। ತೇಽಹೋರಾತ್ರವಿದೋ ಜನಾಃ ॥ 17 ॥

ಅವ್ಯಕ್ತಾದ್ವ್ಯಕ್ತಯಃ ಸರ್ವಾಃ। ಪ್ರಭವನ್ತ್ಯಹರಾಗಮೇ।
ರಾತ್ರ್ಯಾಗಮೇ ಪ್ರಲೀಯನ್ತೇ। ತತ್ರೈವಾವ್ಯಕ್ತಸಂಜ್ಞಕೇ ॥ 18 ॥

ಭೂತಗ್ರಾಮಃ ಸ ಏವಾಯಂ। ಭೂತ್ವಾ ಭೂತ್ವಾ ಪ್ರಲೀಯತೇ।
ರಾತ್ರ್ಯಾಗಮೇಽವಶಃ ಪಾರ್ಥ। ಪ್ರಭವತ್ಯಹರಾಗಮೇ ॥ 19 ॥

ಅರ್ಜುನನೆ, ಬ್ರಹ್ಮಲೋಕದವರೆಗಿನ ಎಲ್ಲಾ ಲೋಕಗಳೂ ಹಿಂತಿರುಗಿಸುವವೇ ; ಆದರೆ ಕೌಂತೇಯನೆ, ನನ್ನನ್ನು ಪಡೆದಬಳಿಕ ಪುನರ್ಜನ್ಮವಿರುವದಿಲ್ಲ. ಬ್ರಹ್ಮನ ಹಗಲು ಸಾವಿರಯುಗದವರೆಗೆ ಇರುವದೆಂಬುದನ್ನೂ ಆತನ ರಾತ್ರಿಯು

ಸಾವಿರಯುಗದವರೆಗೂ ಇರುವದೆಂಬುದನ್ನು ಬಲ್ಲವರೇ ಹಗಲು ರಾತ್ರಿಗಳ ತತ್ತ್ವವನ್ನು ಬಲ್ಲವರು. ಹಗಲು ಬರುತ್ತಲೂ ವ್ಯಕ್ತಿಗಳೆಲ್ಲವೂ ಅವ್ಯಕ್ತದಿಂದ ಹುಟ್ಟುತ್ತವೆ, ರಾತ್ರಿಯು ಬರುತ್ತಲೂ ಅದೇ ಅವ್ಯಕ್ತದಲ್ಲಿಯೇ ಪ್ರಲಯವಾಗುತ್ತವೆ. ಪಾರ್ಥನೆ, ಆ ಈ ಒಂದೇ ಪ್ರಾಣಿಗಳ ರಾಶಿಯು ಪರವಶವಾಗಿ ಹುಟ್ಟಿ ಹುಟ್ಟಿ ರಾತ್ರಿಯು ಬರುತ್ತಲೂ ಪ್ರಲಯವಾಗುತ್ತಿರುವದು, ಹಗಲು ಬರುತ್ತಲೂ ಹುಟ್ಟುತ್ತಿರುವದು. (16–19)

ಟಿ॥ ಹುಟ್ಟಿ ಸಾಯುತ್ತಿರುವದೇ ಪ್ರಾಣಿಗಳ ಸ್ವಭಾವವು, ಪ್ರಲಯವಾದರೂ ಈ ಹುಟ್ಟುಸಾವುಗಳು ತಪ್ಪುವಂತಿಲ್ಲ.

**ಪರಸ್ತಸ್ಮಾತ್ತು ಭಾವೋಽನ್ಯೋ–ಽವ್ಯಕ್ತೋಽವ್ಯಕ್ತಾತ್ಸನಾತನಃ।**
**ಯಃ ಸ ಸರ್ವೇಷು ಭೂತೇಷು। ನಶ್ಯತ್ಸು ನ ವಿನಶ್ಯತಿ ॥ 20 ॥**

**ಅವ್ಯಕ್ತೋಽಕ್ಷರ ಇತ್ಯುಕ್ತ–ಸ್ತಮಾಹುಃ ಪರಮಾಂ ಗತಿಮ್।**
**ಯಂ ಪ್ರಾಪ್ಯ ನ ನಿವರ್ತನ್ತೇ। ತದ್ಧಾಮ ಪರಮಂ ಮಮ ॥ 21 ॥**

ಆದರೆ ಆ ಅವ್ಯಕ್ತಕ್ಕಿಂತಲೂ ಅವ್ಯಕ್ತವಾಗಿರುವ ಮತ್ತೊಂದು ಹೆಚ್ಚಿನ ಸನಾತನಭಾವವು ಯಾವದುಂಟೋ ಅದು ಸಕಲಪ್ರಾಣಿಗಳೂ ನಾಶವಾದರೂ ತಾನು ನಾಶವಾಗದೆ ಅವ್ಯಕ್ತವೆಂದೂ ಅಕ್ಷರವೆಂದೂ ಎನಿಸಿಕೊಂಡಿರುವದು. ಅದನ್ನೇ ಪರಮಗತಿಯೆನ್ನುವರು. ಅದನ್ನು ಸೇರಿದರೆ ಹಿಂತಿರುಗುವದಿಲ್ಲ. ಅದೇ ನನ್ನ ಹೆಚ್ಚಿನ ಸ್ಥಾನವು. (20–21)

ಟಿ॥ ಅವ್ಯಕ್ತವೂ ಅಕ್ಷರವೂ ಆದ ಪರಮಾತ್ಮನೊಬ್ಬನನ್ನು ಬಿಟ್ಟರೆ ಮಿಕ್ಕದ್ದೆಲ್ಲವೂ ಕಾಲಕ್ಕೆ ಕಟ್ಟುಬಿದ್ದಿರುವದರಿಂದ ಅನಿತ್ಯವು.

**ಪುರುಷಃ ಸ ಪರಃ ಪಾರ್ಥ । ಭಕ್ತ್ಯಾ ಲಭ್ಯಸ್ತ್ವನನ್ಯಯಾ ।**
**ಯಸ್ಯಾನ್ತಸ್ಥಾನಿ ಭೂತಾನಿ । ಯೇನ ಸರ್ವಮಿದಂ ತತಮ್ ॥ 22 ॥**

ಪಾರ್ಥನೆ, ಆ ಪರಮಪುರುಷನು ಅನನ್ಯವಾದ ಭಕ್ತಿಯಿಂದ ದೊರಕುವನು. ಆತನಲ್ಲಿಯೇ ಸಕಲಭೂತಗಳೂ ಇರುತ್ತಿರುವವು, ಆತನಿಂದಲೇ ಇದೆಲ್ಲವೂ ವ್ಯಾಪ್ತವಾಗಿರುತ್ತದೆ. (22)

ಯತ್ರ ಕಾಲೇ ತ್ವನಾವೃತ್ತಿ–ಮಾವೃತ್ತಿಂ ಚೈವ ಯೋಗಿನಃ।
ಪ್ರಯಾತಾ ಯಾನ್ತಿ ತಂ ಕಾಲಂ। ವಕ್ಷ್ಯಾಮಿ ಭರತರ್ಷಭ ॥ 23 ॥

ಅಗ್ನಿರ್ಜ್ಯೋತಿರಹಃ ಶುಕ್ಲಃ। ಷಣ್ಮಾಸಾ ಉತ್ತರಾಯಣಮ್।
ತತ್ರ ಪ್ರಯಾತಾ ಗಚ್ಛನ್ತಿ। ಬ್ರಹ್ಮ ಬ್ರಹ್ಮವಿದೋ ಜನಾಃ ॥ 24 ॥

ಧೂಮೋ ರಾತ್ರಿಸ್ತಥಾ ಕೃಷ್ಣಃ। ಷಣ್ಮಾಸಾ ದಕ್ಷಿಣಾಯನಮ್।
ತತ್ರ ಚಾನ್ದ್ರಮಸಂ ಜ್ಯೋತಿ–ರ್ಯೋಗೀ ಪ್ರಾಪ್ಯ ನಿವರ್ತತೇ ॥ 25 ॥

ಶುಕ್ಲಕೃಷ್ಣೇ ಗತೀ ಹ್ಯೇತೇ। ಜಗತಃ ಶಾಶ್ವತೇ ಮತೇ।
ಏಕಯಾ ಯಾತ್ಯನಾವೃತ್ತಿ–ಮನ್ಯಯಾವರ್ತತೇ ಪುನಃ ॥ 26 ॥

ಭರತಶ್ರೇಷ್ಠನೆ, ಯಾವಯಾವ ಕಾಲದಲ್ಲಿ ಸಾಯುವ ಯೋಗಿಗಳು ಈ ಲೋಕಕ್ಕೆ ಹಿಂತಿರುಗದಿರುವಿಕೆಯನ್ನೂ ಹಿಂತಿರುಗುವಿಕೆಯನ್ನೂ ಪಡೆಯುವರೋ ಆ ಕಾಲವನ್ನು ಹೇಳುವೆನು. ಅಗ್ನಿ, ಜ್ಯೋತಿ. ಹಗಲು, ಶುಕ್ಲಪಕ್ಷ, ಉತ್ತರಾಯಣದ

ಆರು ತಿಂಗಳು– ಇದರಲ್ಲಿ ಮೃತರಾದ ಬ್ರಹ್ಮವೇತ್ತರಾದ ಜನರು ಬ್ರಹ್ಮವನ್ನೇ ಸೇರುತ್ತಾರೆ. ಹೊಗೆ, ರಾತ್ರೆ, ಕೃಷ್ಣಪಕ್ಷ, ದಕ್ಷಿಣಾಯನದ ಆರು ತಿಂಗಳು– ಇದರಲ್ಲಿ ಮೃತನಾದ ಕರ್ಮಯೋಗಿಯು ಚಂದ್ರನ ಜ್ಯೋತಿಯನ್ನು ಪಡೆದು ಮರಳಿಬರುತ್ತಾನೆ. ಶುಕ್ಲ, ಕೃಷ್ಣ – ಎಂಬ ಈ ಎರಡು ಗತಿಗಳೂ ಜಗತ್ತಿನಲ್ಲಿ ಶಾಶ್ವತವಾದವುಗಳೆನಿಸಿದವವು; ಇವುಗಳಲ್ಲಿ ಒಂದರಿಂದ ಹಿಂತಿರುಗದಿರುವಿಕೆಯನ್ನು ಪಡೆಯುತ್ತಾನೆ, ಮತ್ತೊಂದರಿಂದ ಮತ್ತೆ ಹಿಂತಿರುಗುವನು. (23–26)

ಟಿ॥ ಮೇಲೆ ಹೇಳಿರುವ ಅಗ್ನಿ ಮುಂತಾದವು ಮಾರ್ಗದಲ್ಲಿರುವ ದೇವತೆಗಳೆಂದು ಭಾಷ್ಯಕಾರರು ಬರೆದಿರುತ್ತಾರೆ. ಕರ್ಮಿಗಳಿಗೆ ಮಾತ್ರ ಈ ಲೋಕದಲ್ಲಿ ಜನ್ಮವಾಗುವದೆಂದೂ ಅಭ್ಯಾಸಯೋಗಿಗಳಿಗೆ ಪರಮಾತ್ಮಸಾಯುಜ್ಯವೇ ಆಗುವದೆಂದೂ ಇಲ್ಲಿ ಹೇಳಿದೆ.

ನೈತೇ ಸೃತೀ ಪಾರ್ಥ ಜಾನನ್ । ಯೋಗೀ ಮುಹ್ಯತಿ ಕಶ್ಚನ ।
ತಸ್ಮಾತ್ಸರ್ವೇಷು ಕಾಲೇಷು । ಯೋಗಯುಕ್ತೋ ಭವಾರ್ಜುನ ॥ 27 ॥

ವೇದೇಷು ಯಜ್ಞೇಷು ತಪಃಸು ಚೈವ ।
ದಾನೇಷು ಯತ್ಪುಣ್ಯಫಲಂ ಪ್ರದಿಷ್ಟಮ್ ।
ಅತ್ಯೇತಿ ತತ್ಸರ್ವಮಿದಂ ವಿದಿತ್ವಾ ।
ಯೋಗೀ ಪರಂ ಸ್ಥಾನಮುಪೈತಿ ಚಾದ್ಯಮ್ ॥ 28 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಅಭ್ಯಾಸಯೋಗೋ ನಾಮ ಅಷ್ಟಮೋಽಧ್ಯಾಯಃ

ಪಾರ್ಥನೆ, ಈ ಎರಡು ಮಾರ್ಗಗಳನ್ನು ಸರಿಯಾಗಿ ತಿಳಿದುಕೊಂಡಿರುವ ಯಾವ ಯೋಗಿಯೂ ಮೋಹಕ್ಕೆ ಒಳಗಾಗನು. ಆದಕಾರಣ ಅರ್ಜುನನೇ, ನೀನು ಎಲ್ಲಾ ಕಾಲಗಳಲ್ಲಿಯೂ ಯೋಗಯುಕ್ತನಾಗಿರು. ವೇದಗಳ ಅಧ್ಯಯನದಲ್ಲಿಯೂ ಯಜ್ಞಗಳಲ್ಲಿಯೂ ತಪಸ್ಸುಗಳಲ್ಲಿಯೂ ದಾನಗಳಲ್ಲಿಯೂ ಯಾವ ಪುಣ್ಯಫಲವು ಉಂಟಾಗುವದೆಂದು ಶಾಸ್ತ್ರದಲ್ಲಿ ಹೇಳಿದೆಯೋ

ಅದೆಲ್ಲವನ್ನೂ ಇದನ್ನರಿತ ಯೋಗಿಯು ಮೀರುವನು, ಮತ್ತು ಎಲ್ಲಕ್ಕೂ ಮೊದಲನೆಯದಾದ ಪರಮಸ್ಥಾನವನ್ನು ಹೊಂದುವನು. (27–28)

ಟಿ॥ ವೇದಾಧ್ಯಯನಾದಿಕರ್ಮಗಳಿಂದ ದೊರೆಯುವ ಫಲಕ್ಕಿಂತಲೂ ಇಲ್ಲಿ ಹೇಳಿರುವ ಅಭ್ಯಾಸಯೋಗದಿಂದಾಗಿರುವ ಕ್ರಮಮುಕ್ತಿಯು ಹೆಚ್ಚಿನದು. ಏಕೆಂದರೆ ಇದರಿಂದ ಬ್ರಹ್ಮಪ್ರಾಪ್ತಿಯೇ ಆಗುವದು.

ಅಭ್ಯಾಸಯೋಗವೆಂಬ ಎಂಟನೆಯ ಅಧ್ಯಾಯವು ಮುಗಿಯಿತು.

———————

# ಅಥ ನವಮೋಽಧ್ಯಾಯಃ

ಶ್ರೀಭಗವಾನುವಾಚ –

ಇದಂ ತು ತೇ ಗುಹ್ಯತಮಂ। ಪ್ರವಕ್ಷ್ಯಾಮ್ಯನಸೂಯವೇ।
ಜ್ಞಾನಂ ವಿಜ್ಞಾನಸಹಿತಂ। ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥ 1 ॥
ರಾಜವಿದ್ಯಾ ರಾಜಗುಹ್ಯಂ। ಪವಿತ್ರಮಿದಮುತ್ತಮಮ್।
ಪ್ರತ್ಯಕ್ಷಾವಗಮಂ ಧರ್ಮ್ಯಂ। ಸುಸುಖಂ ಕರ್ತುಮವ್ಯಯಮ್ ॥ 2 ॥
ಅಶ್ರದ್ದಧಾನಾಃ ಪುರುಷಾ–ಧರ್ಮಸ್ಯಾಸ್ಯ ಪರನ್ತಪ।
ಅಪ್ರಾಪ್ಯ ಮಾಂ ನಿವರ್ತನ್ತೇ। ಮೃತ್ಯುಸಂಸಾರವರ್ತ್ಮನಿ ॥ 3 ॥

## ಒಂಬತ್ತನೆಯ ಅಧ್ಯಾಯ

ಶ್ರೀಭಗವಂತನು ಹೇಳಿದ್ದು:

ಆದರೆ ಅತ್ಯಂತರಹಸ್ಯವಾದ ಈ ವಿಜ್ಞಾನದಿಂದೊಡಗೂಡಿದ ಜ್ಞಾನವನ್ನು ಅಸೂಯಾರಹಿತನಾದ ನಿನಗೆ ಹೇಳುವೆನು. ಇದನ್ನು ಅರಿತುಕೊಂಡರೆ

ಅಮಂಗಲವಾದ ಸಂಸಾರದಿಂದ ಮುಕ್ತನಾಗುವೆ. ಇದು ರಾಜವಿದ್ಯೆಯು (ವಿದ್ಯೆಗಳಲ್ಲೆಲ್ಲ ಹೆಚ್ಚಿನ ವಿದ್ಯೆಯು), ರಾಜಗುಹ್ಯವು (ಗುಟ್ಟುಗಳಲ್ಲೆಲ್ಲ ಹೆಚ್ಚಿನ ಗುಟ್ಟು), ಅತ್ಯಂತಪವಿತ್ರವಾದದ್ದು, ಉತ್ತಮವಾದದ್ದು, ಪ್ರತ್ಯಕ್ಷವಾಗಿ ಅರಿತುಕೊಳ್ಳ ಬಹುದಾದದ್ದು, ಧರ್ಮಕ್ಕೆ ಹೊಂದಿಕೆಯಾಗಿರತಕ್ಕದ್ದು , ತಿಳಿದುಕೊಳ್ಳುವದಕ್ಕೆ ಬಹಳ ಸುಲಭವಾದದ್ದು. ಎಂದಿಗೂ ಸವೆಯದ ಫಲವುಳ್ಳದ್ದು . ಶತ್ರುತಾಪನನೆ, ಈ ಜ್ಞಾನದಲ್ಲಿ ಶ್ರದ್ಧೆಯಿಲ್ಲದ ಜನರು ನನ್ನನ್ನು ಪಡೆಯದೆ ಮೃತ್ಯುವಿನಿಂದೊಡಗೂಡಿದ ಸಂಸಾರದ ಹಾದಿಯಲ್ಲಿ ತೊಳಲುತ್ತಿರುವರು. (1–3)

ಟಿ॥ ಜ್ಞಾನವು ಪರೋಕ್ಷ, ವಿಜ್ಞಾನವು ಅಪರೋಕ್ಷವಾದ ಅನುಭವವು. ಇದು ಸುಲಭವಾಗಿ ತಿಳಿಯುವಂಥದ್ದಾದರೂ ಸಾಮಾನ್ಯರಿಗೆ ಪರಮರಹಸ್ಯವಾಗಿರುವದು.

ಮಯಾ ತತಮಿದಂ ಸರ್ವಂ । ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ । ನ ಚಾಹಂ ತೇಷ್ವವಸ್ಥಿತಃ ॥ 4 ॥
ನ ಚ ಮತ್ಸ್ಥಾನಿ ಭೂತಾನಿ । ಪಶ್ಯ ಮೇ ಯೋಗಮೈಶ್ವರಮ್ ।
ಭೂತಭೃನ್ನ ಚ ಭೂತಸ್ಥೋ । ಮಮಾತ್ಮಾ ಭೂತಭಾವನಃ ॥ 5 ॥

**ಯಥಾಕಾಶಸ್ಥಿತೋ ನಿತ್ಯಂ। ವಾಯುಃ ಸರ್ವತ್ರಗೋ ಮಹಾನ್।**
**ತಥಾ ಸರ್ವಾಣಿ ಭೂತಾನಿ। ಮತ್ಸ್ಥಾನೀತ್ಯುಪಧಾರಯ ॥ 6 ॥**

ಈ ಜಗತ್ತೆಲ್ಲವೂ ಅವ್ಯಕ್ತಸ್ವರೂಪನಾದ ನನ್ನಿಂದಲೇ ವ್ಯಾಪ್ತವಾಗಿರುವದು. ನನ್ನಲ್ಲಿ ಸರ್ವಭೂತಗಳೂ ಇರುತ್ತಿರುವವು, ಆದರೆ ನಾನು ಅವುಗಳಲ್ಲಿರುವದಿಲ್ಲ. ಭೂತಗಳು ನನ್ನಲ್ಲಿ ಇವೆಯೆಂಬುದೂ ಸರಿಯಲ್ಲ, ನನ್ನ ಈಶ್ವರಯೋಗವನ್ನು ನೋಡಿದೆಯ ? ಭೂತಭಾವನವಾದ ನನ್ನ ಸ್ವರೂಪವು ಭೂತಗಳನ್ನು ಧರಿಸಿರುವದಾದರೂ ಭೂತಗಳಲ್ಲಿರುವದಿಲ್ಲ. ಎಲ್ಲೆಲ್ಲಿಯೂ ಸಂಚರಿಸುವ ಮಹಾವಾಯುವು ಯಾವಾಗಲೂ ಆಕಾಶದಲ್ಲಿ ಹೇಗೆ ಇರುವದೋ ಹಾಗೆ ಎಲ್ಲಾ ಭೂತಗಳೂ ನನ್ನಲ್ಲಿರುವವೆಂದು ತಿಳಿ. (4–6)

ಟಿ॥ ಬ್ರಹ್ಮಾದಿಸಕಲಪ್ರಾಣಿಗಳಿಗೂ ಪರಮಾತ್ಮನೇ ಆತ್ಮನು, ಆದ್ದರಿಂದ ಅವೆಲ್ಲ ಅವನಲ್ಲಿವೆ ; ಆದರೆ ಸರಿಯಾಗಿ ನೋಡಿದರೆ ಪರಮಾತ್ಮನಿಗಿಂತ ಬೇರೆಯಾಗಿ ಯಾವದೊಂದೂ ಇಲ್ಲವೇ ಇಲ್ಲವಾದ್ದರಿಂದ ಅವನಲ್ಲಿ ಯಾವ ಪ್ರಾಣಿಗಳೂ ಇಲ್ಲವೇ ಇಲ್ಲ.

ಸರ್ವಭೂತಾನಿ ಕೌನ್ತೇಯ। ಪ್ರಕೃತಿಂ ಯಾನ್ತಿಮಾಮಿಕಾಮ್ ।
ಕಲ್ಪಕ್ಷಯೇ ಪುನಸ್ತಾನಿ। ಕಲ್ಪಾದೌ ವಿಸೃಜಾಮ್ಯಹಮ್ ॥ 7 ॥

ಪ್ರಕೃತಿಂ ಸ್ವಾಮವಷ್ಟಭ್ಯ । ವಿಸೃಜಾಮಿ ಪುನಃ ಪುನಃ ।
ಭೂತಗ್ರಾಮಮಿಮಂ ಕೃತ್ಸ್ನ–ಮವಶಂ ಪ್ರಕೃತೇರ್ವಶಾತ್ ॥ 8 ॥

ನ ಚ ಮಾಂ ತಾನಿ ಕರ್ಮಾಣಿ। ನಿಬಧ್ನನ್ತಿ ಧನಞ್ಜಯ।
ಉದಾಸೀನವದಾಸೀನ–ಮಸಕ್ತಂ ತೇಷು ಕರ್ಮಸು ॥ 9 ॥

ಮಯಾಧ್ಯಕ್ಷೇಣ ಪ್ರಕೃತಿಃ । ಸೂಯತೇ ಸಚರಾಚರಮ್ ।
ಹೇತುನಾನೇನ ಕೌನ್ತೇಯ। ಜಗದ್ವಿಪರಿವರ್ತತೇ ॥ 10 ॥

ಕೌಂತೇಯನೆ, ಕಲ್ಪವು ಕ್ಷಯವಾಗಲು ಸರ್ವಪ್ರಾಣಿಗಳೂ ನನ್ನ ಪ್ರಕೃತಿಯಲ್ಲಡಗುವವು ; ಮತ್ತೊಂದು ಕಲ್ಪವು ಮೊದಲಾಗಲು ನಾನು ಅವುಗಳನ್ನು ಸೃಷ್ಟಿಸುವೆನು. ಸ್ವಭಾವಕ್ಕೆ ಅಧೀನವಾಗಿ ಅಸ್ವತಂತ್ರವಾಗಿರುವ ಈ ಪ್ರಾಣಿಗಳ ಗುಂಪೆಲ್ಲವನ್ನೂ ನಾನು ನನ್ನ ಪ್ರಕೃತಿಯನ್ನು ವಶಮಾಡಿಕೊಂಡು ಮತ್ತೆಮತ್ತೆ

ಸೃಷ್ಟಿಸುತ್ತಿರುವೆನು. ಆದರೆ ಧನಂಜಯನೆ, ಆ ಕರ್ಮಗಳು ನನ್ನನ್ನು ಕಟ್ಟಿ ಹಾಕುವದಿಲ್ಲ; ಏಕೆಂದರೆ ಆ ಕರ್ಮಗಳಲ್ಲಿ ನಾನು ಉದಾಸೀನನಂತೆ ಅಸಕ್ತನಾಗಿರುವೆನು. ಸಾಕ್ಷಿಯಾಗಿರುವ ನನ್ನಿಂದ ಪ್ರಕೃತಿಯು ಚರಾಚರಜಗತ್ತೆಲ್ಲವನ್ನೂ ಹಡೆಯುತ್ತಿರುವದು ; ಕುಂತೀಕುಮಾರನೆ, ಈ ಕಾರಣದಿಂದ ಜಗತ್ತು ಬೇರೆಬೇರೆ ಅವಸ್ಥೆಗಳನ್ನು ಪಡೆಯುತ್ತಿರುವದು. (7–10)

**ಅವಜಾನನ್ತಿ ಮಾಂ ಮೂಢಾ– ಮಾನುಷೀಂ ತನುಮಾಶ್ರಿತಮ್ ।**
**ಪರಂ ಭಾವಮಜಾನನ್ತೋ । ಮಮ ಭೂತಮಹೇಶ್ವರಮ್ ॥ 11 ॥**

**ಮೋಘಾಶಾ ಮೋಘಕರ್ಮಾಣೋ । ಮೋಘಜ್ಞಾನಾ ವಿಚೇತಸಃ ।**
**ರಾಕ್ಷಸೀಮಾಸುರೀಂ ಚೈವ । ಪ್ರಕೃತಿಂ ಮೋಹಿನೀಂ ಶ್ರಿತಾಃ ॥ 12 ॥**

**ಮಹಾತ್ಮಾನಸ್ತು ಮಾಂ ಪಾರ್ಥ । ದೈವೀಂ ಪ್ರಕೃತಿಮಾಶ್ರಿತಾಃ ।**
**ಭಜನ್ತ್ಯನನ್ಯಮನಸೋ । ಜ್ಞಾತ್ವಾ ಭೂತಾದಿಮವ್ಯಯಮ್ ॥ 13 ॥**

ಪ್ರಾಣಿಗಳ ಮಹೇಶ್ವರನಾಗಿರುವ ನನ್ನ ಹೆಚ್ಚಿನ ಸ್ವರೂಪವನ್ನರಿಯದ

ಮೂಢರು ಮನುಷ್ಯದೇಹವನ್ನು ಧರಿಸಿದ ನನ್ನನ್ನು ಅಸಡ್ಡೆಮಾಡುತ್ತಾರೆ. ವ್ಯರ್ಥವಾದ ಆಶೆಗಳಿಂದಲೂ ವ್ಯರ್ಥವಾದ ಕರ್ಮಗಳಿಂದಲೂ ವ್ಯರ್ಥವಾದ ತಿಳಿವಳಿಕೆಯಿಂದಲೂ ಕೂಡಿದ ಆ ಅವಿವೇಕಿಗಳು ರಾಕ್ಷಸರ ಮತ್ತು ಅಸುರರ ಮೋಹಕವಾದ ಪ್ರಕೃತಿಯನ್ನು ಅವಲಂಬಿಸಿರುತ್ತಾರೆ. ಆದರೆ ಪಾರ್ಥನೆ, ದೈವಪ್ರಕೃತಿಯನ್ನು ಅವಲಂಬಿಸಿರುವ ಮಹಾತ್ಮರು ಭೂತಗಳಿಗೆಲ್ಲ ಆದಿಯಾಗಿರುವ ಅವ್ಯಯನಾದ ನನ್ನನ್ನು ಅರಿತುಕೊಂಡು ಅನನ್ಯಮನಸ್ಸಿನಿಂದ ಭಜಿಸುವರು. (11–13)

ಟಿ।। ಪರಮಾತ್ಮನ ಭಕ್ತಿಯಿಂದ ಮಾಡುವ ಕರ್ಮಾದಿಗಳೇ ಸಫಲವಾಗುವವು. ಮಿಕ್ಕವುಗಳೆಲ್ಲ ವ್ಯರ್ಥ.

ಸತತಂ ಕೀರ್ತಯನ್ತೋ ಮಾಂ। ಯತನ್ತಶ್ಚ ದೃಢವ್ರತಾಃ।
ನಮಸ್ಯನ್ತಶ್ಚ ಮಾಂ ಭಕ್ತ್ಯಾ। ನಿತ್ಯಯುಕ್ತಾ ಉಪಾಸತೇ ॥ 14 ॥

ಜ್ಞಾನಯಜ್ಞೇನ ಚಾಪ್ಯನ್ಯೇ। ಯಜನ್ತೋ ಮಾಮುಪಾಸತೇ।
ಏಕತ್ವೇನ ಪೃಥಕ್ತ್ವೇನ। ಬಹುಧಾ ವಿಶ್ವತೋಮುಖಮ್ ॥ 15 ॥

ಅವರು ಯಾವಾಗಲೂ ನನ್ನನ್ನು ಕೀರ್ತನಮಾಡುತ್ತಲೂ ನಿಶ್ಚಲವಾದ ನಿಯಮದಿಂದ ಕೂಡಿ ಸಾಧನಗಳನ್ನು ಮಾಡುತ್ತಲೂ ನನ್ನನ್ನು ಭಕ್ತಿಯಿಂದ ನಮಸ್ಕರಿಸುತ್ತಲೂ ಯಾವಾಗಲೂ ನನ್ನಲ್ಲಿಯೇ ಇಟ್ಟ ಚಿತ್ತವುಳ್ಳವರಾಗಿ ಉಪಾಸನೆ ಮಾಡುತ್ತಿರುವರು. ಕೆಲವರು ಜ್ಞಾನಯಜ್ಞದಿಂದಲೇ ನನ್ನನ್ನು ಪೂಜಿಸುತ್ತಾ ಏಕನೆಂದರಿತು ಉಪಾಸನೆಮಾಡುತ್ತಾರೆ. ಮತ್ತೆ ಕೆಲವರು ಬೇರೆ ಬೇರೆಯಾಗಿಯೂ ಇನ್ನೂ ಕೆಲವರು ವಿಶ್ವತೋಮುಖನೆಂದೂ ಬಹುಪ್ರಕಾರವಾಗಿ ಉಪಾಸನೆ ಮಾಡುತ್ತಾರೆ. (14–15)

ಟಿ॥ ಪರಮಾತ್ಮಜ್ಞಾನವು ಎಲ್ಲಕ್ಕೂ ಹೆಚ್ಚಿನ ಉಪಾಸನೆ. ಅದು ದೊರಕದಿದ್ದವರು ಪರಮಾತ್ಮನನ್ನು ನಾನಾದೇವತೆಗಳ ರೂಪದಲ್ಲಿ ಉಪಾಸನೆಮಾಡುವರು ; ಕಾಣುವದೆಲ್ಲವೂ ಪರಮಾತ್ಮನ ರೂಪವೇ ಎಂದು ಮತ್ತೆ ಕೆಲವರು ಉಪಾಸನೆ ಮಾಡುವರು.

**ಅಹಂ ಕ್ರತುರಹಂ ಯಜ್ಞಃ। ಸ್ವಧಾಹಮಹಮೌಷಧಮ್ ।**
**ಮನ್ತ್ರೋಽಹಮಹಮೇವಾಜ್ಯ–ಮಹಮಗ್ನಿರಹಂ ಹುತಮ್ ॥ 16 ॥**

ನಾನೇ ಕ್ರತುವು, ನಾನೇ ಯಜ್ಞವು, ನಾನೇ ಸ್ವಧಾಕಾರವು, ನಾನೇ ಔಷಧವು. ನಾನೇ ಮಂತ್ರವು, ನಾನೇ ಆಜ್ಯವು, ನಾನೇ ಅಗ್ನಿಯು, ನಾನೇ ಹೋಮವು. (16)

ಟಿ॥ ಪರಮಾತ್ಮನೇ ಯಜ್ಞದ ಅಂಗಗಳೆಲ್ಲವೂ ಆಗಿರುವನೆಂದು ಮಾಡುವ ಉಪಾಸನೆಯಿದು.

**ಪಿತಾಹಮಸ್ಯ ಜಗತೋ । ಮಾತಾ ಧಾತಾ ಪಿತಾಮಹಃ ।**
**ವೇದ್ಯಂ ಪವಿತ್ರಮೋಂಕಾರ–ಋಕ್ಸಾಮ ಯಜುರೇವ ಚ ॥ 17 ॥**

ನಾನು ಈ ಜಗತ್ತಿಗೆ ತಂದೆಯು, ತಾಯಿಯು, ಧಾತನು, ಅಜ್ಜನು, ಅರಿಯಬೇಕಾದದ್ದು, ಪವಿತ್ರವಾದ ಕರ್ಮವು ; ಓಂಕಾರವು, ಋಕ್ಕು, ಸಾಮ ಮತ್ತು ಯಜಸ್ಸು. (17)

ಟಿ॥ ಸೃಷ್ಟಿಕರ್ತನೂ, ಸೃಷ್ಟಿತತ್ತ್ವವೂ, ಅವನ್ನರಿಯುವುದಕ್ಕೆ ಸಾಧನವಾಗಿರುವ ವೇದವೂ ಪರಮಾತ್ಮನೇ.

**ಗತಿರ್ಭರ್ತಾ ಪ್ರಭುಃ ಸಾಕ್ಷೀ । ನಿವಾಸಃ ಶರಣಂ ಸುಹೃತ್ ।**
**ಪ್ರಭವಃ ಪ್ರಲಯಃ ಸ್ಥಾನಂ । ನಿಧಾನಂ ಬೀಜಮವ್ಯಯಮ್ ॥ 18 ॥**

ಗತಿಯು, ಪೋಷಕನು, ಒಡೆಯನು, ಸಾಕ್ಷಿಯು, ಪ್ರಾಣಿಗಳ ವಾಸ ಸ್ಥಾನವು, ಕಷ್ಟಕ್ಕೊದಗುವವನು, ಉಪಕಾರಿಯು, ಉತ್ಪತ್ತಿಕಾರಣನು, ಪ್ರಲಯ ಕಾರಣನು, ಜಗತ್ತಿಗೆ ಆಸರೆಯು, ಮುಂದೆ ಅನುಭವಿಸಬೇಕಾದ ನಿಧಿಯಂತಿರುವ ಕರ್ಮಫಲವು, ನಾಶವಾಗದ ಸಂಸಾರದ ಬೀಜವು. (18)

ಟಿ॥ ಜಗತ್ತಿನ ಉತ್ಪತ್ತಿಸ್ಥಿತಿಲಯಗಳು, ಸ್ಥಿತಿಕಾಲದಲ್ಲಿ ಮಾಡುವ ಕರ್ಮ ಮತ್ತು ಅದರ ಫಲ– ಎಲ್ಲವೂ ಪರಮಾತ್ಮನ ರೂಪವೇ.

**ತಪಾಮ್ಯಹಮಹಂ ವರ್ಷಂ । ನಿಗೃಹ್ಣಾಮ್ಯುತ್ಸೃಜಾಮಿ ಚ ।**
**ಅಮೃತಂ ಚೈವ ಮೃತ್ಯುಶ್ಚ । ಸದಸಚ್ಚಾಹಮರ್ಜುನ ॥ 19 ॥**

ಅರ್ಜುನನೆ, ನಾನು ತಪಿಸುವೆನು, ಮಳೆಯನ್ನು ಹಿಂದಕ್ಕೆ ಸೆಳೆದುಕೊಳ್ಳುವೆನು, ಹೊರಕ್ಕೆ ಬಿಡುವೆನು, ನಾನು ಅಮೃತವು. ಮೃತ್ಯುವು, ಇರುವದು ಮತ್ತು ಇಲ್ಲದ್ದು. (19)

ಟಿ|| ಸೂರ್ಯನಾಗಿ ಬಿಸಿಲನ್ನೂ ಮಳೆಯನ್ನೂ ಕೊಡುವಾತನೂ ದೇವತೆಗಳಿಗೆ ದೀರ್ಘಾಯುಸ್ಸನ್ನೂ ಮನುಷ್ಯರಿಗೆ ಅಲ್ಪಾಯುಸ್ಸನ್ನೂ ಕೊಡುವಾತನೂ ಅವನೇ. ಕಾರ್ಯಕಾರಣಗಳೆರಡೂ ಅವನೇ.

ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾ–
ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯನ್ತೇ ||
ತೇ ಪುಣ್ಯಮಾಸಾದ್ಯ ಸುರೇನ್ದ್ರಲೋಕ–
ಮಶ್ನನ್ತಿ ದಿವ್ಯಾನ್ ದಿವಿ ದೇವಭೋಗಾನ್ || 20 ||

ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ |
ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ |
ಏವಂ ತ್ರಯೀಧರ್ಮಮನುಪ್ರಪನ್ನಾ–
ಗತಾಗತಂ ಕಾಮಕಾಮಾ ಲಭನ್ತೇ || 21 ||

ಅನನ್ಯಾಶ್ಚಿನ್ತಯನ್ತೋ ಮಾಂ | ಯೇ ಜನಾಃ ಪರ್ಯುಪಾಸತೇ |
ತೇಷಾಂ ನಿತ್ಯಾಭಿಯುಕ್ತಾನಾಂ | ಯೋಗಕ್ಷೇಮಂ ವಹಾಮ್ಯಹಮ್ || 22 ||

ಯೇಽಪ್ಯನ್ಯದೇವತಾಭಕ್ತಾ। ಯಜನ್ತೇ ಶ್ರದ್ಧಯಾನ್ವಿತಾಃ।
ತೇಽಪಿ ಮಾಮೇವ ಕೌನ್ತೇಯ। ಯಜನ್ತ್ಯವಿಧಿಪೂರ್ವಕಮ್ ॥ 23 ॥
ಅಹಂ ಹಿ ಸರ್ವಯಜ್ಞಾನಾಂ। ಭೋಕ್ತಾ ಚ ಪ್ರಭುರೇವ ಚ।
ನ ತು ಮಾಮಭಿಜಾನನ್ತಿ। ತತ್ತ್ವೇನಾತಶ್ಚ್ಯವನ್ತಿ ತೇ ॥ 24 ॥
ಯಾನ್ತಿದೇವವ್ರತಾ ದೇವಾನ್। ಪಿತೄನ್ಯಾನ್ತಿ ಪಿತೃವ್ರತಾಃ।
ಭೂತಾನಿ ಯಾನ್ತಿ ಭೂತೇಜ್ಯಾ। ಯಾನ್ತಿ ಮದ್ಯಾಜಿನೋಽಪಿ ಮಾಮ್ ॥

ಮೂರು ವೇದಗಳನ್ನು ಬಲ್ಲವರು ಸೋಮಪಾನದಿಂದ ಪಾಪವನ್ನು ನೀಗಿಕೊಂಡು ಶುದ್ಧರಾಗಿ ಯಜ್ಞಗಳಿಂದ ನನ್ನನ್ನು ಪೂಜಿಸಿ ಸ್ವರ್ಗವನ್ನು ಹೊಂದಬೇಕೆಂದು ಕೋರುವವರು. ಅವರು ಪುಣ್ಯಫಲವಾದ ದೇವೇಂದ್ರಲೋಕವನ್ನು ಹೊಂದಿ ಆ ಸ್ವರ್ಗದಲ್ಲಿ ದಿವ್ಯವಾದ ದೇವಭೋಗಗಳನ್ನು ಅನುಭವಿಸುತ್ತಾರೆ. ಅವರು ಆ ವಿಸ್ತಾರವಾದ ಸ್ವರ್ಗಭೋಗಗಳನ್ನು ಅನುಭವಿಸಿ ಪುಣ್ಯವು ಸವೆಯಲು ಮನುಷ್ಯಲೋಕವನ್ನು ಹೋಗುವರು. ಹೀಗೆ ವೈದಿಕಧರ್ಮವನ್ನು ಅನುಸರಿಸಿದ ಕಾಮಕಾಮಿಗಳು ಹೋಗೀಬಂದೂ ಮಾಡುವ ಗತಿಯನ್ನು ಪಡೆಯುತ್ತಾರೆ.

ಯಾವ ಜನರು ಅನನ್ಯರಾಗಿ ನನ್ನನ್ನೇ ಚಿಂತಿಸುತ್ತಾ ಉಪಾಸನೆಮಾಡುತ್ತಿರುವರೋ ನಿತ್ಯವೂ ನನ್ನನ್ನೇ ಹೊಂದಿಕೊಂಡಿರುವ ಅವರ ಯೋಗಕ್ಷೇಮವನ್ನು ನಾನು ವಹಿಸುವೆನು. ಕೌಂತೇಯನೆ, ಯಾರು ಮಿಕ್ಕ ದೇವತೆಗಳ ಭಕ್ತರಾಗಿ ಶ್ರದ್ಧೆಯಿಂದ ಪೂಜಿಸುತ್ತಿರುವರೋ ಅವರೂ ನನ್ನನ್ನೇ ಅಜ್ಞಾನದಿಂದ ಪೂಜಿಸುವರು. ಸರ್ವಯಜ್ಞಗಳಿಗೂ ಭೋಕ್ತನೂ ಪ್ರಭುವೂ ನಾನೇ ಅಲ್ಲವೆ ? ಆದರೆ ಅವರು ನನ್ನನ್ನು ಹಾಗೆಂದು ಗುರುತಿಸಿ ಅರಿಯದೆ ಇರುವರು, ಆದ್ದರಿಂದ ಅವರು ಜಾರಿಬೀಳುವರು. ನಿಯತವಾಗಿ ದೇವತೆಗಳ ಭಕ್ತರಾಗಿರುವವರು ದೇವತೆಗಳನ್ನು ಸೇರುವರು, ಪಿತೃಗಳ ಭಕ್ತರಾಗಿರುವವರು ಪಿತೃಗಳನ್ನು ಸೇರುವರು ; ಭೂತಗಳನ್ನು ಪೂಜಿಸುವವರು ಭೂತಗಳನ್ನು ಸೇರುವರು ; ನನ್ನನ್ನು ಪೂಜಿಸುವವರೊ ನನ್ನನ್ನೇ ಸೇರುವರು. (20–25)

ಟಿ|| ಪರಮಾತ್ಮನೇ ದೇವತೆಗಳು, ಪಿತೃಗಳು, ಭೂತಗಳು – ಮುಂತಾದ ರೂಪದಿಂದ ಫಲವನ್ನು ಕೊಡುವವನು. ಇದನ್ನರಿತು ನಿತ್ಯಫಲವನ್ನು ಕೊಡುವ ಆತನನ್ನೇ ನೇರಾಗಿ ಪೂಜಿಸುವದರಿಂದ ಇಹಪರಗಳೆರಡೂ ದಕ್ಕುವವು.

ಪತ್ರಂ ಪುಷ್ಪಂ ಫಲಂ ತೋಯಂ। ಯೋ ಮೇ ಭಕ್ತ್ಯಾ ಪ್ರಯಚ್ಛತಿ।
ತದಹಂ ಭಕ್ತ್ಯುಪಹೃತ–ಮಶ್ನಾಮಿ ಪ್ರಯತಾತ್ಮನಃ ॥ 26 ॥
ಯತ್ಕರೋಷಿ ಯದಶ್ನಾಸಿ। ಯಜ್ಜುಹೋಷಿ ದದಾಸಿ ಯತ್।
ಯತ್ತಪಸ್ಯಸಿ ಕೌನ್ತೇಯ। ತತ್ಕುರುಷ್ವ ಮದರ್ಪಣಮ್ ॥ 27 ॥
ಶುಭಾಶುಭಫಲೈರೇವಂ। ಮೋಕ್ಷ್ಯಸೇ ಕರ್ಮಬನ್ಧನೈಃ।
ಸಂನ್ಯಾಸಯೋಗಯುಕ್ತಾತ್ಮಾ। ವಿಮುಕ್ತೋ ಮಾಮುಪೈಷ್ಯಸಿ ॥ 28 ॥

ಯಾವನೇ ಆಗಲಿ ಒಂದು ಎಲೆಯ ದಳವನ್ನೋ ಒಂದು ಹೂವನ್ನೋ ಒಂದು ಹಣ್ಣನ್ನೋ ಒಂದಿಷ್ಟು ನೀರನ್ನೋ ಭಕ್ತಿಯಿಂದ ಕೊಟ್ಟರೆ, ಶುದ್ಧಾಂತಃ–ಕರಣವುಳ್ಳ ಆತನು ಭಕ್ತಿಯಿಂದ ಕೊಡುವ ಅದನ್ನೇ ನಾನು ಸೇವಿಸುವೆನು. ಕೌಂತೇಯನೆ, ನೀನು ಏನುಮಾಡುವೆಯೋ, ಯಾವದನ್ನು ತಿನ್ನುವೆಯೋ, ಯಾವದನ್ನು ಹೋಮಮಾಡುವೆಯೋ, ಯಾವದನ್ನು ದಾನಮಾಡುವೆಯೋ, ಯಾವ ತಪಸ್ಸನ್ನು ಮಾಡುವೆಯೋ, ಅದನ್ನು ನನಗೇ ಅರ್ಪಣೆಮಾಡು. ಹೀಗೆ

ಮಾಡುತ್ತಿದ್ದರೆ ಒಳ್ಳೆಯ ಅಥವಾ ಕೆಟ್ಟಫಲವನ್ನು ಕೊಡುವ ಕರ್ಮಗಳ ಕಟ್ಟಿನಿಂದ ನೀನು ಮುಕ್ತನಾಗುವೆ ; ಮನಸ್ಸಿನಲ್ಲಿ ಸಂನ್ಯಾಸಯೋಗದಿಂದೊಡಗೂಡಿ ಮುಕ್ತನಾಗಿ ನನ್ನನ್ನು ಬಂದು ಸೇರುವೆ. (26–28)

ಟಿ॥ ಪರಮಾತ್ಮನಿಗೆಂದು ಮೀಸಲಾಗಿರುವ ಕರ್ಮಗಳನ್ನೇ ಮಾಡುವದಾಗದಿದ್ದರೂ ಮಾಡಿದ ಕರ್ಮವನ್ನೇ ಅವನಿಗೆ ಅರ್ಪಣೆಮಾಡಿದರೂ ಆತನು ತೃಪ್ತನಾಗಿ ಕ್ರಮಮುಕ್ತಿಯನ್ನು ಕೊಡುವನು.

ಸಮೋಽಹಂ ಸರ್ವಭೂತೇಷು । ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜನ್ತಿ ತು ಮಾಂ ಭಕ್ತ್ಯಾ । ಮಯಿ ತೇ ತೇಷು ಚಾಪ್ಯಹಮ್ ॥ 29 ॥

ಅಪಿ ಚೇತ್ಸುದುರಾಚಾರೋ । ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮನ್ತವ್ಯಃ । ಸಮ್ಯಗ್ವ್ಯವಸಿತೋ ಹಿ ಸಃ ॥ 30 ॥

ಕ್ಷಿಪ್ರಂ ಭವತಿ ಧರ್ಮಾತ್ಮಾ । ಶಶ್ವಚ್ಛಾನ್ತಿಂ ನಿಗಚ್ಛತಿ ।
ಕೌನ್ತೇಯ ಪ್ರತಿಜಾನೀಹಿ । ನ ಮೇ ಭಕ್ತಃ ಪ್ರಣಶ್ಯತಿ ॥ 31 ॥

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ । ಯೇऽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾ–ಸ್ತೇऽಪಿ ಯಾನ್ತಿ ಪರಾಂ ಗತಿಮ್ ॥ 32 ॥

ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ । ಭಕ್ತಾ ರಾಜರ್ಷಯಸ್ತಥಾ ।
ಅನಿತ್ಯಮಸುಖಂ ಲೋಕ–ಮಿಮಂ ಪ್ರಾಪ್ಯ ಭಜಸ್ವ ಮಾಮ್ ॥ 33 ॥

ಮನ್ಮನಾ ಭವ ಮದ್ಭಕ್ತೋ । ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವ–ಮಾತ್ಮಾನಂ ಮತ್ಪರಾಯಣಃ ॥ 34 ।

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ರಾಜವಿದ್ಯಾರಾಜಗುಹ್ಯಯೋಗೋ ನಾಮ ನವಮೋऽಧ್ಯಾಯಃ

ನಾನು ಸರ್ವಪ್ರಾಣಿಗಳಲ್ಲಿಯೂ ಒಂದೇ ಸಮನಾಗಿರುವೆನು. ನನಗೆ

ಬೇಡದವರೂ ಇಲ್ಲ, ಬೇಕಾದವರೂ ಇಲ್ಲ; ಆದರೆ ಯಾರು ನನ್ನನ್ನು ಭಕ್ತಿಯಿಂದ ಭಜಿಸುವರೋ, ಅವರು ನನ್ನಲ್ಲಿರುವರು, ನಾನೂ ಅವರಲ್ಲಿರುವೆನು. ಅತ್ಯಂತ ದುರಾಚಾರಿಯಾದರೂ ನನ್ನನ್ನು ಅನನ್ಯಭಕ್ತಿಯಿಂದ ಭಜಿಸಿದರೆ ಆತನನ್ನು ಸಾಧುವೆಂದೇ ಎಣಿಸಬೇಕು. ಏಕೆಂದರೆ ಅವನು ಉತ್ತಮವಾದ ನಿಶ್ಚಯವನ್ನು ಮಾಡಿಕೊಂಡಿರುತ್ತಾನೆ. ಅವನು ಬೇಗನೆ ಧರ್ಮಾತ್ಮನಾಗುವನು ; ನಿತ್ಯಶಾಂತಿಯನ್ನು ಹೊಂದುವನು. ಕೌಂತೇಯನೆ, ಇದನ್ನು ಚೆನ್ನಾಗಿ ತಿಳಿದುಕೊ ; ನನ್ನ ಭಕ್ತನು ಎಂದಿಗೂ ನಾಶವಾಗುವದಿಲ್ಲ . ಪಾರ್ಥನೆ, ನನ್ನನ್ನು ಆಶ್ರಯಿಸಿದ ಪಾಪಯೋನಿಗಳಾದ ಸ್ತ್ರೀಯರು, ವೈಶ್ಯರು, ಶೂದ್ರರು ಕೂಡ ಪರಮಗತಿಯನ್ನು ಹೊಂದುವರು ; ಹೀಗಿರುವಲ್ಲಿ ಪುಣ್ಯವಂತರೂ ಭಕ್ತರೂ ಆದ ಬ್ರಾಹ್ಮಣರೂ ರಾಜರ್ಷಿಗಳೂ ಪರಮಗತಿಯನ್ನು ಹೊಂದುವರೆಂದು ಹೇಳುವದೇನಿದೆ ? ಅನಿತ್ಯವೂ ಅಸುಖವೂ ಆದ ಈ ಲೋಕವನ್ನು ಪಡೆದಿರುವ ನೀನು ನನ್ನನ್ನು ಭಜಿಸು. ನನ್ನಲ್ಲಿಯೇ ಮನಸ್ಸುಳ್ಳವನಾಗಿರು, ನನ್ನ ಭಕ್ತನಾಗಿರು, ನನ್ನನ್ನು ಕುರಿತ

ಯಾಗವನ್ನೇ ಮಾಡುತ್ತಿರು, ನನ್ನನ್ನೇ ನಮಸ್ಕರಿಸು. ಹೀಗೆ ಯೋಗವನ್ನು ಮಾಡುತ್ತಾ ನನ್ನನ್ನೇ ಪರಮಗತಿಯೆಂದು ನಂಬಿದ್ದರೆ ನನ್ನನ್ನೇ ಸೇರುವೆ.(29–34)

ಟಿ। ಭಕ್ತಿಯಿಂದಲೇ ನಮ್ಮ ನಿತ್ಯಾತ್ಮನಾದ ಪರಮಾತ್ಮನನ್ನು ಕಂಡುಕೊಳ್ಳಬಹುದಾದ್ದರಿಂದ ಯಾವ ಸಾಧನವನ್ನು ಮಾಡಿದರೂ ಭಗವಂತನನ್ನೇ ಲಕ್ಷ್ಯದಲ್ಲಿಟ್ಟುಕೊಂಡಿರಬೇಕು.

**ರಾಜವಿದ್ಯಾರಾಜಗುಹ್ಯಯೋಗವೆಂಬ ಒಂಬತ್ತನೆಯ ಅಧ್ಯಾಯವು ಮುಗಿಯಿತು.**

---

## ಅಥ ದಶಮೋಽಧ್ಯಾಯಃ

ಶ್ರೀಭಗವಾನುವಾಚ –

ಭೂಯ ಏವ ಮಹಾಬಾಹೋ । ಶೃಣು ಮೇ ಪರಮಂ ವಚಃ ।
ಯತ್ತೇಽಹಂ ಪ್ರೀಯಮಾಣಾಯ । ವಕ್ಷ್ಯಾಮಿ ಹಿತಕಾಮ್ಯಯಾ ॥ 1 ॥

ನ ಮೇ ವಿದುಃ ಸುರಗಣಾಃ । ಪ್ರಭವಂ ನ ಮಹರ್ಷಯಃ ।
ಅಹಮಾದಿರ್ಹಿ ದೇವಾನಾಂ । ಮಹರ್ಷೀಣಾಂ ಚ ಸರ್ವಶಃ ॥ 2 ॥

ಯೋ ಮಾಮಜಮನಾದಿಂ ಚ । ವೇತ್ತಿ ಲೋಕಮಹೇಶ್ವರಮ್ ।
ಅಸಮ್ಮೂಢಃ ಸ ಮರ್ತ್ಯೇಷು । ಸರ್ವಪಾಪೈಃ ಪ್ರಮುಚ್ಯತೇ ॥ 3 ॥

## ಹತ್ತನೆಯ ಅಧ್ಯಾಯ

ಶ್ರೀಭಗವಂತನು ಹೇಳಿದ್ದು:

ಮಹಾಬಾಹುವಾದ ಅರ್ಜುನನೆ, ಮತ್ತೊಂದು ಬಾರಿ ನನ್ನ ಉತ್ತಮ ವಚನವನ್ನು ಕೇಳು : ಇದನ್ನು ಪ್ರಿಯನಾದ ನಿನಗೆ ಹಿತವಾಗಲೆಂಬ ಬಯಕೆಯಿಂದ

ಹೇಳುವೆನು. ನನ್ನ ಉತ್ಪತ್ತಿಯನ್ನು ದೇವತೆಗಳ ಗುಂಪುಗಳಾಗಲಿ ಮಹರ್ಷಿಗಳಾಗಲಿ ಅರಿಯರು ; ಏಕೆಂದರೆ ಎಲ್ಲಾ ದೇವತೆಗಳಿಗೂ ಮಹರ್ಷಿಗಳಿಗೂ ನಾನೇ ಕಾರಣನು. ಜನ್ಮರಹಿತನು, ಕಾರಣರಹಿತನು, ಮತ್ತು ಲೋಕಕ್ಕೆಲ್ಲ ಮಹೇಶ್ವರನು– ಎಂದು ನನ್ನನ್ನು ಯಾವನು ಅರಿತುಕೊಳ್ಳುವನೋ ಮನುಷ್ಯರುಗಳಲ್ಲಿ ಅವನುಮಾತ್ರ ಮೋಹಕ್ಕೆ ವಶನಾಗದೆ ಇರುವನು, ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ. (1–3)

ಟಿ॥ ದೇವತೆಗಳಿಗೆ ಅಧ್ಯಯನವಿಲ್ಲದೆಯೇ ವೇದವು ಹೊಳೆಯುವದಂತೆ ; ಋಷಿಗಳು ಭೂತಭವಿಷ್ಯತ್ಕಾಲದ ಘಟನೆಗಳನ್ನು ಅರಿತುಕೊಳ್ಳಬಲ್ಲವರಾಗಿರುವರು ; ಆದರೂ ಅವರಿಗೆ ಅಷ್ಟುಮಾತ್ರದಿಂದ ಪರಮೇಶ್ವರನ ತತ್ತ್ವವು ತಿಳಿಯಲಾರದು.

ಬುದ್ಧಿರ್ಜ್ಞಾನಮಸಂಮೋಹಃ । ಕ್ಷಮಾ ಸತ್ಯಂ ದಮಃ ಶಮಃ ।
ಸುಖಂ ದುಃಖಂ ಭವೋಽಭಾವೋ । ಭಯಂ ಚಾಭಯಮೇವ ಚ ॥ 4 ॥
ಅಹಿಂಸಾ ಸಮತಾ ತುಷ್ಟಿ–ಸ್ತಪೋ ದಾನಂ ಯಶೋಽಯಶಃ ।
ಭವನ್ತಿ ಭಾವಾ ಭೂತಾನಾಂ । ಮತ್ತ ಏವ ಪೃಥಗ್ವಿಧಾಃ ॥ 5 ॥

ಮಹರ್ಷಯಃ ಸಪ್ತ ಪೂರ್ವೇ । ಚತ್ವಾರೋ ಮನವಸ್ತಥಾ ।
ಮದ್ಭಾವಾ ಮಾನಸಾ ಜಾತಾ । ಯೇಷಾಂ ಲೋಕ ಇಮಾಃ ಪ್ರಜಾಃ ॥ 6 ॥
ಏತಾಂ ವಿಭೂತಿಂ ಯೋಗಂ ಚ । ಮಮ ಯೋ ವೇತ್ತಿ ತತ್ತ್ವತಃ ।
ಸೋಽವಿಕಂಪೇನ ಯೋಗೇನ । ಯುಜ್ಯತೇ ನಾತ್ರ ಸಂಶಯಃ ॥ 7 ॥

ಜಾಣತನ, ಜ್ಞಾನ, ಮೋಹವಿಲ್ಲದಿರುವಿಕೆ, ತಾಳ್ಮೆ, ಸತ್ಯ, ದಮ, ಶಮ, ಸುಖ, ದುಃಖ, ಹುಟ್ಟು, ನಾಶ, ಅಂಜಿಕೆ, ಧೈರ್ಯ, ಅಹಿಂಸೆ, ಸಮತೆ, ತೃಪ್ತಿ ತಪಸ್ಸು, ದಾನ, ಒಳ್ಳೆಯ ಹೆಸರು, ಕೆಟ್ಟ ಹೆಸರು – ಈ ಬಗೆಬಗೆಯ ಪ್ರಕಾರದ ಭಾವಗಳು ಪ್ರಾಣಿಗಳಿಗೆ ನನ್ನಿಂದಲೇ ಆಗುತ್ತಿರುವವು. ಹಿಂದಿನ ಸಪ್ತಮಹರ್ಷಿಗಳು, ಮತ್ತು ನಾಲ್ಕುಜನ ಮನುಗಳು, ನನ್ನ ಪ್ರಭಾವದಿಂದಲೇ ಕೂಡಿದವರಾಗಿ ಮನಸ್ಸಿನಿಂದ ಹುಟ್ಟಿರುವವರು ; ಲೋಕದ ಪ್ರಾಣಿಗಳೆಲ್ಲ ಇವರಿಂದಲೇ ಆಗಿರುವವು. ಈ ನನ್ನ ವಿಭೂತಿಯನ್ನೂ ಯೋಗವನ್ನೂ ಯಾವನು ಸರಿಯಾಗಿ ತಿಳಿದುಕೊಳ್ಳುವನೋ ಅವನಿಗೆ ಅಲುಗಾಡದ ಯೋಗವು ಸಿಕ್ಕುವದು ; ಇದಕ್ಕೆ ಸಂಶಯವಿಲ್ಲ. (4–7)

ಟಿ॥ ಜಗತ್ತೆಲ್ಲವೂ ಪರಮಾತ್ಮನ ವಿಭೂತಿಯೇ ಎಂದು ನಿಶ್ಚಿತವಾಗಿ ತಿಳಿದರೆ ಉತ್ತಮಜ್ಞಾನರೂಪವಾದ ಯೋಗವಾಗುವದು, ಆ ಯೋಗವು ಧ್ಯಾನಯೋಗದಂತೆ ಅಲುಗಾಡೀತೆಂಬ ಭಯವಿರುವದಿಲ್ಲ.

ಅಹಂ ಸರ್ವಸ್ಯ ಪ್ರಭವೋ । ಮತ್ತಃ ಸರ್ವಂ ಪ್ರವರ್ತತೇ ।
ಇತಿ ಮತ್ವಾ ಭಜನ್ತೇ ಮಾಂ । ಬುಧಾ ಭಾವಸಮನ್ವಿತಾಃ ॥ 8 ॥

ಮಚ್ಚಿತ್ತಾ ಮದ್ಗತಪ್ರಾಣಾ । ಬೋಧಯನ್ತಃ ಪರಸ್ಪರಮ್ ।
ಕಥಯನ್ತಶ್ಚ ಮಾಂ ನಿತ್ಯಂ । ತುಷ್ಯನ್ತಿ ಚ ರಮನ್ತಿ ಚ ॥ 9 ॥

ತೇಷಾಂ ಸತತಯುಕ್ತಾನಾಂ । ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ । ಯೇನ ಮಾಮುಪಯಾನ್ತಿ ತೇ ॥ 10 ॥

ತೇಷಾಮೇವಾನುಕಂಪಾರ್ಥ-ಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ । ಜ್ಞಾನದೀಪೇನ ಭಾಸ್ವತಾ ॥ 11 ॥

ನಾನು ಎಲ್ಲಕ್ಕೂ ಕಾರಣನು, ಎಲ್ಲವೂ ನನ್ನಿಂದಲೇ ತನ್ನ ತನ್ನ ವ್ಯಾಪಾರದಲ್ಲಿ ತೊಡಗುತ್ತಿರುವದು. ಹೀಗೆಂದು ತಿಳಿದು ಜ್ಞಾನಿಗಳು ಆದರದಿಂದ ನನ್ನನ್ನೇ ಭಜಿಸುತ್ತಿರುವರು. ಅವರು ನನ್ನಲ್ಲಿಯೇ ಚಿತ್ತವಿಟ್ಟಿರುವರು. ನನಗಾಗಿಯೇ ಪ್ರಾಣವನ್ನು ಧರಿಸಿರುವರು ; ಒಬ್ಬರಿಗೊಬ್ಬರು ನನ್ನ ತತ್ತ್ವವನ್ನು ತಿಳಿಸುತ್ತಲೂ ನನ್ನ ಕಥೆಯನ್ನು ಹೇಳುತ್ತಲೂ ಯಾವಾಗಲೂ ಸಂತೃಪ್ತರಾಗಿ ಆನಂದದಿಂದಿರುವರು. ಹೀಗೆ ಎಡೆಬಿಡದೆ ನನ್ನನ್ನೇ ಹೊಂದಿಕೊಂಡು ಪ್ರೇಮಪೂರ್ವಕವಾಗಿ ಭಜಿಸುತ್ತಿರುವದರಿಂದ ಅವರಿಗೆ ನನ್ನನ್ನೇ ಸೇರುವದಕ್ಕೆ ಅನುಕೂಲವಾದ ಬುದ್ಧಿಯೋಗವನ್ನು ಕೊಡುವೆನು. ಅವರ ಮೇಲೆಯೇ ಕನಿಕರವಿರುವದರಿಂದ ನಾನು ಅವರ ಅಂತಃಕರಣಾಶಯದಲ್ಲಿದ್ದುಕೊಂಡು ಝಗಝಗಿಸುವ ಜ್ಞಾನದ ಬೆಳಕಿನಿಂದ ಅಜ್ಞಾನದಿಂದಾಗಿರುವ ಕತ್ತಲೆಯನ್ನು ಹೋಗಲಾಡಿಸುವೆನು. (8–11)

**ಅರ್ಜುನ ಉವಾಚ –**

**ಪರಂ ಬ್ರಹ್ಮ ಪರಂ ಧಾಮ । ಪವಿತ್ರಂ ಪರಮಂ ಭವಾನ್ ।**
**ಪುರುಷಂ ಶಾಶ್ವತಂ ದಿವ್ಯ–ಮಾದಿದೇವಮಜಂ ವಿಭುಮ್ ॥ 12 ॥**

ಆಹುಸ್ತ್ವಾಮೃಷಯಃ ಸರ್ವೇ। ದೇವರ್ಷಿರ್ನಾರದಸ್ತಥಾ।
ಅಸಿತೋ ದೇವಲೋ ವ್ಯಾಸಃ। ಸ್ವಯಂ ಚೈವ ಬ್ರವೀಷಿ ಮೇ ॥ 13 ॥

ಸರ್ವಮೇತದೃತಂ ಮನ್ಯೇ। ಯನ್ಮಾಂ ವದಸಿ ಕೇಶವ।
ನ ಹಿ ತೇ ಭಗವನ್ವ್ಯಕ್ತಿಂ। ವಿದುರ್ದೇವಾ ನ ದಾನವಾಃ ॥ 14 ॥

ಸ್ವಯಮೇವಾತ್ಮನಾತ್ಮಾನಂ। ವೇತ್ಥ ತ್ವಂ ಪುರುಷೋತ್ತಮ।
ಭೂತಭಾವನ ಭೂತೇಶ। ದೇವದೇವ ಜಗತ್ಪತೇ ॥ 15 ॥

ಅರ್ಜುನನು ಕೇಳಿದ್ದು :

ನೀನು ಪರಬ್ರಹ್ಮವು, ಪರಮಪ್ರಕಾಶಸ್ವರೂಪನು, ಪರಮಪಾವನನು, ನೀನು ಶಾಶ್ವತವಾದ ಪುರುಷನೆಂದೂ ಸ್ವರ್ಗದಲ್ಲಿರುವಾತನೆಂದೂ ದೇವತೆಗಳಿಗೆಲ್ಲ ಮೊದಲಿಗನೆಂದೂ ಹುಟ್ಟಿಲ್ಲದವನೆಂದೂ ವ್ಯಾಪಕನೆಂದೂ ಋಷಿಗಳೆಲ್ಲರೂ ದೇವರ್ಷಿಯಾದ ನಾರದನೂ ಅಸಿತದೇವಲನೂ ವ್ಯಾಸನೂ ಹೇಳುತ್ತಾರೆ ; ನೀನೂ ಹಾಗೆಂದೇ ಹೇಳುತ್ತಿರುವೆ. ಎಲೈ ಕೇಶವನೆ, ನನಗಾಗಿ ನೀನು ಹೇಳುತ್ತಿ

ರುವೆಯಲ್ಲ, ಇದೆಲ್ಲವೂ ನಿಜವೆಂದೇ ನಂಬಿರುವೆನು ; ಏಕೆಂದರೆ ಎಲೈ ಭಗವಂತನೆ, ನೀನು ಹುಟ್ಟಿದ್ದನ್ನು ದೇವತೆಗಳಾಗಲಿ ದಾನವರಾಗಲಿ ಅರಿಯರು. ಎಲೈ ಪುರುಷೋತ್ತಮನೆ, ಭೂತಗಳನ್ನುಂಟುಮಾಡುವಾತನೆ. ಸರ್ವಭೂತ ಗಳಿಗೂ ಒಡೆಯನೆ, ದೇವತೆಗಳಿಗೆಲ್ಲ ದೇವನಾಗಿರುವವನೆ, ಜಗದೊಡೆಯನೆ, ನಿನ್ನನ್ನು ನೀನೇ ನಿನ್ನಿಂದಲೇ ತಿಳಿದುಕೊಳ್ಳುವೆ. (12–15)

ಟೀ|| ಪರಮಾತ್ಮನಿಂದ ಆಕಾಶಾದಿಭೂತಗಳೂ ಸಮಸ್ತಪ್ರಾಣಿಗಳೂ ಉಂಟಾಗಿ ಆತನ ಶಾಸನಕ್ಕೆ ಒಳಪಟ್ಟಿರುವವದರಿಂದ ಅವನನ್ನು ಅರಿಯಲಾರವು. ಆತನು ತನ್ನನ್ನು ತಾನೇ ತಿಳಿದಿರುವನು : ಈ ತಿಳಿವಳಿಕೆಗೆ ಸ್ವಯಂಪ್ರಕಾಶನಾದ ಆತನಿಗೆ ಯಾವದೊಂದು ಹೊರಗಿನ ಸಾಧನವೂ ಬೇಕಿರುವದಿಲ್ಲ.

**ವಕ್ತುಮರ್ಹಸ್ಯಶೇಷೇಣ । ದಿವ್ಯಾ ಹ್ಯಾತ್ಮವಿಭೂತಯಃ ।**
**ಯಾಭಿರ್ವಿಭೂತಿಭಿರ್ಲೋಕಾ–ನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ ॥ 16 ॥**

**ಕಥಂ ವಿದ್ಯಾಮಹಂ ಯೋಗಿಂ–ಸ್ತ್ವಾಂ ಸದಾ ಪರಿಚಿನ್ತಯನ್ ।**
**ಕೇಷು ಕೇಷು ಚ ಭಾವೇಷು । ಚಿನ್ತ್ಯೋಽಸಿ ಭಗವನ್ಮಯಾ ॥ 17 ॥**

**ವಿಸ್ತರೇಣಾತ್ಮನೋ ಯೋಗಂ। ವಿಭೂತಿಂ ಚ ಜನಾರ್ದನ।**
**ಭೂಯಃ ಕಥಯ ತೃಪ್ತಿರ್ಹಿ। ಶೃಣ್ವತೋ ನಾಸ್ತಿ ಮೇಽಮೃತಮ್ ॥ 18 ॥**

ನಿನ್ನ ವಿಭೂತಿಗಳು ದಿವ್ಯವಾಗಿರುತ್ತವೆಯಲ್ಲವೆ ? ಯಾವ ವಿಭೂತಿಗಳಿಂದ ನೀನು ಈ ಲೋಕಗಳನ್ನು ವ್ಯಾಪಿಸಿಕೊಂಡಿರುವೆಯೋ ಅವುಗಳನ್ನು ಒಂದೂ ಬಿಡದಂತೆ ದಯವಿಟ್ಟು ನೀನು ಹೇಳಬೇಕು. ಎಲೈ ಯೋಗಿಯೆ, ನಿನ್ನನ್ನು ಯಾವಾಗಲೂ ಧ್ಯಾನಿಸುತ್ತಾ ನಾನು ಹೇಗೆ ಭಾವಿಸಲಿ ? ಎಲೈ ಭಗವಂತನೆ, ಯಾವಯಾವ ವಸ್ತುಗಳಲ್ಲಿ ನಿನ್ನನ್ನು ನಾನು ಚಿಂತಿಸತಕ್ಕದ್ದು? ಎಲೈ ಜನಾರ್ದನನೆ, ನಿನ್ನ ಯೋಗವನ್ನೂ ವಿಭೂತಿಯನ್ನೂ ವಿಸ್ತಾರವಾಗಿ ಮತ್ತೆ ಹೇಳು ; ಏಕೆಂದರೆ ಈ ಅಮೃತವಾಣಿಯನ್ನು ಎಷ್ಟು ಕೇಳಿದರೂ ನನಗೆ ತೃಪ್ತಿಯಾಗುವಂತಿಲ್ಲ. (16–18)

ಟಿ|| ಜಗತ್ತಿಗೆಲ್ಲ ತಾನೇ ಕಾರಣನೆಂದು ಎಂಟನೆಯ ಶ್ಲೋಕದಲ್ಲಿ ಭಗವಂತನು ಹೇಳಿರುವದರಿಂದ ಜಗತ್ತೆಲ್ಲವೂ ಆತನ ವಿಭೂತಿಯೇ ಎಂಬುದು ಸ್ಪಷ್ಟವಾಗಿದೆ. ಆದರೆ ಯಾವ ಬಗೆಯ ವಸ್ತುಗಳಲ್ಲಿ ಭಗವಂತನ ವಿಭೂತಿಯು ವಿಶೇಷವಾಗಿರುವದು ?

ಎಂಬುದನ್ನು ತಿಳಿದು ಧ್ಯಾನಕ್ಕೆ ಇಟ್ಟುಕೊಳ್ಳಬೇಕೆಂದು ಅರ್ಜುನನು ಈ ಪ್ರಶ್ನೆಯನ್ನು ಮಾಡಿರುತ್ತಾನೆ. ಪರಮಾತ್ಮನು ತನ್ನ ವಿಭೂತಿಯನ್ನು ಪ್ರಕಟಮಾಡಿರುವ ಅದ್ಭುತ ಘಟನೆಯನ್ನೇ ಇಲ್ಲಿ ಯೋಗವೆಂದು ಕರೆದಿದೆ ; ಇಡೀ ಜಗತ್ತೇ ಆತನ ಯೋಗದ ಮಹಿಮೆ ಎಂಬುದು 'ಯೋಗಿ' ಎಂಬ ವಿಶೇಷಣದ ಸ್ವಾರಸ್ಯವು.

**ಶ್ರೀಭಗವಾನುವಾಚ –**

**ಹನ್ತ ತೇ ಕಥಯಿಷ್ಯಾಮಿ । ದಿವ್ಯಾ ಹ್ಯಾತ್ಮವಿಭೂತಯಃ**
**ಪ್ರಾಧಾನ್ಯತಃ ಕುರುಶ್ರೇಷ್ಠ । ನಾಸ್ತ್ಯನ್ತೋ ವಿಸ್ತರಸ್ಯ ಮೇ ॥ 19 ॥**

**ಅಹಮಾತ್ಮಾ ಗುಡಾಕೇಶ । ಸರ್ವಭೂತಾಶಯಸ್ಥಿತಃ ।**
**ಅಹಮಾದಿಶ್ಚ ಮಧ್ಯಂ ಚ । ಭೂತಾನಾಮನ್ತ ಏವ ಚ ॥ 20 ॥**

**ಶ್ರೀಭಗವಂತನ ಉತ್ತರ :**

ಅಯ್ಯಾ ಕುರುಶ್ರೇಷ್ಠನೆ, ಈಗ ದಿವ್ಯವಾದ ನನ್ನ ವಿಭೂತಿಗಳಲ್ಲಿ ಮುಖ್ಯವಾದವುಗಳನ್ನು ತಿಳಿಸುವೆನು. ಕೇಳು. ನನ್ನ ವಿಸ್ತಾರಕ್ಕೆ ಕೊನೆಯೆಂಬುದೇ ಇಲ್ಲ.

ಗುಡಾಕೇಶನೆ, ಸರ್ವಭೂತಗಳ ಹೃದಯದಲ್ಲಿರುವ ಆತ್ಮನು ನಾನು. ಭೂತಗಳಿಗೆ ಮೊದಲೂ ನಡುವೆಯೂ ಕೊನೆಯೂ ನಾನೇ. (19–20)

ಟಿ|| ವಿಭೂತಿಗಳನ್ನು ಹೇಳಿರುವುದು ಧ್ಯಾನಕ್ಕೆ . ಸರ್ವರಲ್ಲಿಯೂ ಈಶ್ವರನೇ ಆತ್ಮನಾಗಿರುವನೆಂದು ಧ್ಯಾನಿಸುವುದು ಎಲ್ಲಕ್ಕಿಂತ ಹೆಚ್ಚಿನ ಧ್ಯಾನವು. ಇದು ದಕ್ಕದೆ ಇದ್ದರೆ ಮುಂದೆ ಹೇಳಿರುವ ವಿಭೂತಿಗಳನ್ನು ಧ್ಯಾನಿಸಬೇಕು.

ಆದಿತ್ಯಾನಾಮಹಂ ವಿಷ್ಣು–ರ್ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ। ನಕ್ಷತ್ರಾಣಾಮಹಂ ಶಶೀ ॥ 21 ॥

ವೇದಾನಾಂ ಸಾಮವೇದೋಽಸ್ಮಿ। ದೇವಾನಾಮಸ್ಮಿ ವಾಸವಃ।
ಇನ್ದ್ರಿಯಾಣಾಂ ಮನಶ್ಚಾಸ್ಮಿ। ಭೂತಾನಾಮಸ್ಮಿ ಚೇತನಾ ॥ 22 ॥

ರುದ್ರಾಣಾಂ ಶಙ್ಕರಶ್ಚಾಸ್ಮಿ। ವಿತ್ತೇಶೋ ಯಕ್ಷರಕ್ಷಸಾಮ್ ।
ವಸೂನಾಂ ಪಾವಕಶ್ಚಾಸ್ಮಿ। ಮೇರುಃ-ಶಿಖರಿಣಾಮಹಮ್ ॥ 23 ॥

ಪುರೋಧಸಾಂ ಚ ಮುಖ್ಯಂ ಮಾಂ। ವಿದ್ಧಿ ಪಾರ್ಥ ಬೃಹಸ್ಪತಿಮ್ ।
ಸೇನಾನೀನಾಮಹಂ ಸ್ಕನ್ದಃ। ಸರಸಾಮಸ್ಮಿ ಸಾಗರಃ ॥ 24 ॥

ಮಹರ್ಷೀಣಾಂ ಭೃಗುರಹಂ। ಗಿರಾಮಸ್ಮ್ಯೇಕಮಕ್ಷರಮ್।
ಯಜ್ಞಾನಾಂ ಜಪಯಜ್ಞೋಽಸ್ಮಿ। ಸ್ಥಾವರಾಣಾಂ ಹಿಮಾಲಯಃ ॥ 25 ॥

ಅಶ್ವತ್ಥಃ ಸರ್ವವೃಕ್ಷಾಣಾಂ। ದೇವರ್ಷೀಣಾಂ ಚ ನಾರದಃ।
ಗನ್ಧರ್ವಾಣಾಂ ಚಿತ್ರರಥಃ। ಸಿದ್ಧಾನಾಂ ಕಪಿಲೋ ಮುನಿಃ ॥ 26 ॥

ಉಚ್ಚೈಃಶ್ರವಸಮಶ್ವಾನಾಂ। ವಿದ್ಧಿ ಮಾಮಮೃತೋದ್ಭವಮ್।
ಐರಾವತಂ ಗಜೇನ್ದ್ರಾಣಾಂ। ನರಾಣಾಂ ಚ ನರಾಧಿಪಮ್ ॥ 27 ॥

ಆಯುಧಾನಾಮಹಂ ವಜ್ರಂ। ಧೇನೂನಾಮಸ್ಮಿ ಕಾಮಧುಕ್।
ಪ್ರಜನಶ್ಚಾಸ್ಮಿ ಕನ್ದರ್ಪಃ। ಸರ್ಪಾಣಾಮಸ್ಮಿ ವಾಸುಕಿಃ ॥ 28 ॥

ಅನನ್ತಶ್ಚಾಸ್ಮಿ ನಾಗಾನಾಂ। ವರುಣೋ ಯಾದಸಾಮಹಮ್।
ಪಿತೄಣಾಮರ್ಯಮಾ ಚಾಸ್ಮಿ। ಯಮಃ ಸಂಯಮತಾಮಹಮ್ ॥ 29 ॥

ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ। ಕಾಲಃ ಕಲಯತಾಮಹಮ್।
ಮೃಗಾಣಾಂ ಚ ಮೃಗೇನ್ದ್ರೋಽಹಂ। ವೈನತೇಯಶ್ಚ ಪಕ್ಷಿಣಾಮ್ ॥ 30 ॥

ಪವನಃ ಪವತಾಮಸ್ಮಿ। ರಾಮಃ ಶಸ್ತ್ರಭೃತಾಮಹಮ್ ।
ಝಷಾಣಾಂ ಮಕರಶ್ಚಾಸ್ಮಿ। ಸ್ರೋತಸಾಮಸ್ಮಿ ಜಾಹ್ನವೀ ॥ 31 ॥

ಸರ್ಗಾಣಾಮಾದಿರನ್ತಶ್ಚ । ಮಧ್ಯಂ ಚೈವಾಹಮರ್ಜುನ ।
ಅಧ್ಯಾತ್ಮವಿದ್ಯಾ ವಿದ್ಯಾನಾಂ । ವಾದಃ ಪ್ರವದತಾಮಹಮ್ ॥ 32 ॥

ಅಕ್ಷರಾಣಾಮಕಾರೋಽಸ್ಮಿ। ದ್ವನ್ದ್ವಃ ಸಾಮಾಸಿಕಸ್ಯ ಚ ।
ಅಹಮೇವಾಕ್ಷಯಃ ಕಾಲೋ । ಧಾತಾಹಂ ವಿಶ್ವತೋಮುಖಃ ॥ 33 ॥

ಮೃತ್ಯುಃ ಸರ್ವಹರಶ್ಚಾಹ–ಮುದ್ಭವಶ್ಚ ಭವಿಷ್ಯತಾಮ್ ।
ಕೀರ್ತಿಃ ಶ್ರೀರ್ವಾಕ್ಚ ನಾರೀಣಾಂ । ಸ್ಮೃತಿರ್ಮೇಧಾ ಧೃತಿಃ ಕ್ಷಮಾ ॥ 34 ॥

ಬೃಹತ್ಸಾಮ ತಥಾ ಸಾಮ್ನಾಂ । ಗಾಯತ್ರೀ ಛನ್ದಸಾಮಹಮ್ ।
ಮಾಸಾನಾಂ ಮಾರ್ಗಶೀರ್ಷೋಽಹ–ಮೃತೂನಾಂ ಕುಸುಮಾಕರಃ ॥ 35 ॥

ದ್ಯೂತಂ ಛಲಯತಾಮಸ್ಮಿ। ತೇಜಸ್ತೇಜಸ್ವಿನಾಮಹಮ್ ।
ಜಯೋಽಸ್ಮಿ ವ್ಯವಸಾಯೋಽಸ್ಮಿ। ಸತ್ತ್ವಂ ಸತ್ತ್ವವತಾಮಹಮ್ ॥ 36 ॥

ವೃಷ್ಣೀನಾಂ ವಾಸುದೇವೋಽಸ್ಮಿ। ಪಾಣ್ಡವಾನಾಂ ಧನಞ್ಜಯಃ।
ಮುನೀನಾಮಪ್ಯಹಂ ವ್ಯಾಸಃ। ಕವೀನಾಮುಶನಾ ಕವಿಃ ॥ 37 ॥

ದಣ್ಡೋ ದಮಯತಾಮಸ್ಮಿ । ನೀತಿರಸ್ಮಿ ಜಿಗೀಷತಾಮ್ ।
ಮೌನಂ ಚೈವಾಸ್ಮಿ ಗುಹ್ಯಾನಾಂ। ಜ್ಞಾನಂ ಜ್ಞಾನವತಾಮಹಮ್ ॥ 38 ॥

ಯಚ್ಚಾಪಿ ಸರ್ವಭೂತಾನಾಂ। ಬೀಜಂ ತದಹಮರ್ಜುನ।
ನ ತದಸ್ತಿ ವಿನಾ ಯತ್ಸ್ಯಾ—ನ್ಮಯಾ ಭೂತಂ ಚರಾಚರಮ್ ॥ 39 ॥

ನಾನ್ತೋಽಸ್ತಿ ಮಮ ದಿವ್ಯಾನಾಂ। ವಿಭೂತೀನಾಂ ಪರನ್ತಪ।
ಏಷ ತೂದ್ದೇಶತಃ ಪ್ರೋಕ್ತೋ। ವಿಭೂತೇರ್ವಿಸ್ತರೋ ಮಯಾ ॥ 40 ॥

ದ್ವಾದಶಾದಿತ್ಯರಲ್ಲಿ ನಾನು ವಿಷ್ಣು. ಜ್ಯೋತಿಗಳಲ್ಲಿ ಕಿರಣಗಳಿಂದೊಡಗೂಡಿದ ಸೂರ್ಯನು, ಮರುದ್ಗಣಗಳಲ್ಲಿ ಮರೀಚಿಯು, ನಕ್ಷತ್ರಗಳಲ್ಲಿ ಚಂದ್ರನು, ವೇದಗಳಲ್ಲಿ ಸಾಮವೇದವು, ದೇವತೆಗಳಲ್ಲಿ ಇಂದ್ರನಾಗಿರುವೆನು, ಇಂದ್ರಿಯಗಳಲ್ಲಿ ಮನಸ್ಸಾಗಿರುವೆನು, ಪ್ರಾಣಿಗಳಲ್ಲಿ ಚೇತನ(ಬುದ್ಧಿವೃತ್ತಿಯ ಅರಿ)ವಾಗಿರು

ವೆನು. ಏಕಾದಶರುದ್ರರಲ್ಲಿ ಶಂಕರನಾಗಿರುವೆನು. ಯಕ್ಷರಾಕ್ಷಸರಲ್ಲಿ ಕುಬೇರನಾಗಿರುವೆನು ; ಅಷ್ಟವಸುಗಳಲ್ಲಿ ಅಗ್ನಿಯು. ಕುಲಪರ್ವತಗಳಲ್ಲಿ ಮೇರುಪರ್ವತವು. ಪಾರ್ಥನೆ, ಪುರೋಹಿತರುಗಳಲ್ಲಿ ಮುಖ್ಯನಾದ ಬೃಹಸ್ಪತಿಯೇ ನಾನೆಂದು ತಿಳಿ ; ಸೇನಾನಾಯಕರಲ್ಲಿ ಸ್ಕಂದನು ನಾನು, ಸರೋವರಗಳಲ್ಲಿ ಸಾಗರವಾಗಿರುವೆನು. ಮಹರ್ಷಿಗಳಲ್ಲಿ ಭೃಗುವು ನಾನು. ಶಬ್ದಗಳಲ್ಲಿ ಏಕಾಕ್ಷರವಾದ ಓಂಕಾರವು ; ಯಜ್ಞಗಳಲ್ಲಿ ಜಪಯಜ್ಞವಾಗಿರುವೆನು, ಸ್ಥಾವರಗಳಲ್ಲಿ ಹಿಮಾಲಯವು. ಮರಗಳಲ್ಲಿ ಅರಳಿಯ ಮರವು, ದೇವರ್ಷಿಗಳಲ್ಲಿ ನಾರದನು, ಗಂಧರ್ವರಲ್ಲಿ ಚಿತ್ರರಥನು ಸಿದ್ಧರಲ್ಲಿ ಕಪಿಲಮುನಿಯು. ಕುದುರೆಗಳಲ್ಲಿ ಅಮೃತಕ್ಕಾಗಿ ಕಡೆದ ಸಮುದ್ರದಲ್ಲಿ ಹುಟ್ಟಿದ ಉಚ್ಚೈಃಶ್ರವಸ್ಸೇ ನಾನೆಂದು ತಿಳಿ ; ಗಜಶ್ರೇಷ್ಠಗಳಲ್ಲಿ ಐರಾವತವೆಂದೂ ಜನರಲ್ಲಿ ಅರಸನೆಂದೂ ತಿಳಿ. ಆಯುಧಗಳಲ್ಲಿ ವಜ್ರಾಯುಧವು ನಾನು. ಹಾಲು ಕರೆಯುವ ಹಸುಗಳಲ್ಲಿ ಕಾಮಧೇನುವಾಗಿರುವೆನು ; ಪ್ರಜೆಗಳನ್ನುಂಟುಮಾಡುವ ಕಾಮನಾಗಿರುವೆನು, ಸರ್ಪಗಳಲ್ಲಿ ವಾಸುಕಿಯಾಗಿರುವೆನು. ಮತ್ತು ನಾಗರಲ್ಲಿ ಅನಂತನಾಗಿರುವೆನು, ಜಲಚರಗಳಲ್ಲಿ ನಾನು ವರುಣನಾಗಿರುವೆನು ; ಪಿತೃಗಳಲ್ಲಿ

ಅರ್ಯಮನಾಗಿರುವೆನು, ಆಳುವವರಲ್ಲಿ ನಾನು ಯಮನಾಗಿರುವೆನು. ದೈತ್ಯರಲ್ಲಿ ಪ್ರಹ್ಲಾದನಾಗಿರುವೆನು, ಎಣಿಸುವವರಲ್ಲಿ ನಾನು ಕಾಲನಾಗಿರುವೆನು. ಮೃಗಗಳಲ್ಲಿ ನಾನು ಸಿಂಹವು, ಪಕ್ಷಿಗಳಲ್ಲಿ ವಿನತಾದೇವಿಯ ಮಗನಾದ ಗರುಡನು ನಾನು. ಶುದ್ಧಗೊಳಿಸುವವರಲ್ಲಿ ವಾಯುವಾಗಿರುವೆನು, ಶಸ್ತ್ರಧಾರಿಗಳಲ್ಲಿ ಶ್ರೀರಾಮನಾಗಿ ರುವೆನು ; ಜಲಚರಗಳಲ್ಲಿ ಮೊಸಳೆಯಾಗಿರುವೆನು, ನದಿಗಳಲ್ಲಿ ಗಂಗೆಯಾಗಿರು ವೆನು. ಅರ್ಜುನನೆ, ಸೃಷ್ಟಿಗಳ ಮೊದಲೂ ಕೊನೆಯೂ ನಡುವೆಯೂ ನಾನೇ. ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆಯು, ವಾದಮಾಡುವವರಿಗೆ ವಾದವು ನಾನು. ಅಕ್ಷರಗಳಲ್ಲಿ ಅಕಾರನಾಗಿರುವೆನು, ಸಮಾಸಗಳ ಗುಂಪಿನಲ್ಲಿ ದ್ವಂದ್ವಸಮಾಸ ವಾಗಿರುವೆನು ; ನಾನೇ ನಾಶವರಿಯದ ಕಾಲವು, ನಾನು ಎತ್ತಲೂ ನೋಡುತ್ತಿರುವ ಕರ್ಮಫಲವಿಧಾನವು. ಎಲ್ಲರನ್ನೂ ನಾಶಗೊಳಿಸುವ ಮೃತ್ಯುವು ನಾನು, ಯಾರಿಗೆ ಕಲ್ಯಾಣವಾಗತಕ್ಕದ್ದಿದೆಯೋ ಅವರ ಅಭ್ಯುದಯವು ನಾನು ; ಸ್ತ್ರೀಯರಲ್ಲಿ ಕೀರ್ತಿ, ಶ್ರೀ, ವಾಕ್ಕು, ಸ್ಮೃತಿ, ಮೇಧಾ, ಧೃತಿ, ಕ್ಷಮೆ – ಇವುಗಳ ಅಭಿಮಾನಿ ದೇವತೆಗಳೂ ಮತ್ತು ಸಾಮಗಳಲ್ಲಿ ಬೃಹತ್ಸಾಮವೂ ನಾನು, ಛಂದಸ್ಸುಗಳಲ್ಲಿ

ಗಾಯತ್ರಿಯು ನಾನು. ಮಾಸಗಳಲ್ಲಿ ಮಾರ್ಗಶೀರ್ಷವು ನಾನು, ಋತುಗಳಲ್ಲಿ ವಸಂತವು. ವಂಚಕರಲ್ಲಿ ಪಗಡೆಯಾಟವೇ ಮುಂತಾದ ದ್ಯೂತವಾಗಿರುವೆನು. ತೇಜಸ್ವಿಗಳಲ್ಲಿ ತೇಜವು ನಾನು ; ಗೆಲುವಾಗಿರುತ್ತೇನೆ, ಮನೋನಿಶ್ಚಯವಾಗಿರುತ್ತೇನೆ. ಸಾತ್ತ್ವಿಕರಲ್ಲಿರುವ ಸತ್ತ್ವವು ನಾನು, ವೃಷ್ಣಿಗಳಲ್ಲಿ ವಾಸುದೇವನಾಗಿರುವೆನು. ಪಾಂಡವರಲ್ಲಿ ಧನಂಜಯನಾಗಿರುವೆನು, ಮುನಿಗಳಲ್ಲಿ ನಾನು ವ್ಯಾಸನು. ದೂರದರ್ಶಿಗಳಲ್ಲಿ ಉಶನನೆಂಬ ದೂರದರ್ಶಿಯು. ದಂಡಿಸುವವರಲ್ಲಿ ದಂಡವಾಗಿರುವೆನು, ಗೆಲ್ಲಬೇಕೆನ್ನುವವರಿಗೆ ರಾಜನೀತಿಯಾಗಿರುವೆನು ; ಗುಟ್ಟುಗಳಲ್ಲಿ ಮೌನವಾಗಿರುವೆನು, ಜ್ಞಾನಿಗಳಲ್ಲಿ ಜ್ಞಾನವಾಗಿರುವೆನು. ಮತ್ತು ಅರ್ಜುನನೆ, ಸಕಲಭೂತಗಳಿಗೂ ಬೀಜವಾಗಿರುವದು ಯಾವದೋ ಅದು ನಾನೇ, ನನ್ನನ್ನು ಬಿಟ್ಟು ಇರಬಲ್ಲ ಸ್ಥಾವರಜಂಗಮಭೂತವು ಯಾವದೂ ಇರುವದಿಲ್ಲ . . ಶತ್ರುತಾಪನನಾವ ಅರ್ಜುನನೆ, ನನ್ನ ದಿವ್ಯವಿಭೂತಿಗಳಿಗೆ ಕೊನೆಯೇ ಇರುವದಿಲ್ಲ; ಆದರೆ ಸ್ವಲ್ಪಭಾಗವನ್ನು ತಿಳಿಸಬೇಕೆಂಬ ಉದ್ದೇಶದಿಂದ ಈ ವಿಭೂತಿವಿಸ್ತಾರವನ್ನು ನಾನು ಹೇಳಿದ್ದಾಗಿದೆ. (21–40)

**ಯದ್ಯದ್ವಿಭೂತಿಮತ್ಸತ್ತ್ವಂ। ಶ್ರೀಮದೂರ್ಜಿತಮೇವ ವಾ।**
**ತತ್ತದೇವಾವಗಚ್ಛ ತ್ವಂ। ಮಮ ತೇಜೋಽಂಶಸಮ್ಭವಮ್ ॥ 41 ॥**

ಯಾವಯಾವ ವಸ್ತುವು ಮಹಿಮೆಯಿಂದ ಕೂಡಿರುವದೋ, ಸಂಪದ್ಯುಕ್ತವಾಗಿರುವದೋ, ಅಥವಾ ಉತ್ಸಾಹಶಕ್ತಿಯಿಂದ ಕೂಡಿರುವದೋ, ಅದನ್ನೇ ನನ್ನ ತೇಜಸ್ಸಿನ ಅಂಶದಿಂದ ಉಂಟಾದದ್ದೆಂದು ನೀನು ತಿಳಿ. (41)

ಟಿ॥ ಜಗತ್ತಿನಲ್ಲಿ ಒಳ್ಳೆಯತನ, ಸೌಂದರ್ಯ, ಧರ್ಮ, ಸಾಹಸ, ಸಂಪತ್ತು ಮುಂತಾದ ಮೆಚ್ಚತಕ್ಕ ಗುಣಗಳು ಮಿಗಿಲಿಲ್ಲದಷ್ಟು ಎಲ್ಲೆಲ್ಲಿರುವವೋ ಅದನ್ನೆಲ್ಲ ಪರಮಾತ್ಮನೆಂದು ಧ್ಯಾನಿಸಬೇಕು. ಅಲ್ಲಲ್ಲಿ ಪರಮಾತ್ಮನು ಅಷ್ಟಷ್ಟು ಮಟ್ಟಿಗೆ ಪ್ರಕಟವಾಗಿರುತ್ತಾನೆ. ವಿಭೂತಿಗಳೆಲ್ಲವನ್ನೂ ಒಂದೊಂದಾಗಿ ಹೇಳುವದಕ್ಕಾಗುವಂತಿಲ್ಲವಾದ್ದರಿಂದ ಈ ಹೆಗ್ಗುರುತನ್ನು ಇಲ್ಲಿ ತಿಳಿಸಿದೆ.

**ಅಥವಾ ಬಹುನೈತೇನ। ಕಿಂ ಜ್ಞಾತೇನ ತವಾರ್ಜುನ।**
**ವಿಷ್ಟಭ್ಯಾಹಮಿದಂ ಕೃತ್ಸ್ನ–ಮೇಕಾಂಶೇನ ಸ್ಥಿತೋ ಜಗತ್ ॥ 42 ॥**

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ವಿಭೂತಿಯೋಗೋ ನಾಮ ದಶಮೋಽಧ್ಯಾಯಃ

ಅಥವಾ ಅರ್ಜುನನೆ, ಇಷ್ಟೆಲ್ಲ ತಿಳಿದು ನಿನಗೇನಾಗಬೇಕು ? ನಾನು ಈ ಜಗತ್ತೆಲ್ಲವನ್ನೂ ನನ್ನ ಒಂದಂಶದಿಂದ ಹಿಡಿದೆತ್ತಿಕೊಂಡಿರುವೆನು. (42)

ಟಿ॥ ಪರಮಾತ್ಮಸ್ವರೂಪವು ಜಗದ್ರೂಪವಾದ ವಿಭೂತಿಯನ್ನೂ ಮೀರಿರುವವದರಿಂದ ಅದನ್ನು ಆತನ ಒಂದಂಶವೆಂದು ಹೇಳಿರುತ್ತದೆ.

ವಿಭೂತಿಯೋಗವೆಂಬ ಹತ್ತನೆಯ ಅಧ್ಯಾಯವು ಮುಗಿಯಿತು.

---------

# ಅಥೈಕಾದಶೋऽಧ್ಯಾಯಃ

ಅರ್ಜುನ ಉವಾಚ –

ಮದನುಗ್ರಹಾಯ ಪರಮಂ । ಗುಹ್ಯಮಧ್ಯಾತ್ಮಸಂಜ್ಞಿತಮ್ ।
ಯತ್ತ್ವಯೋಕ್ತಂ ವಚಸ್ತೇನ । ಮೋಹೋऽಯಂ ವಿಗತೋ ಮಮ ॥ 1 ॥

ಭವಾಪ್ಯಯೌ ಹಿ ಭೂತಾನಾಂ । ಶ್ರುತೌ ವಿಸ್ತರಶೋ ಮಯಾ ।
ತ್ವತ್ತಃ ಕಮಲಪತ್ರಾಕ್ಷ । ಮಾಹಾತ್ಮ್ಯಮಪಿ ಚಾವ್ಯಯಮ್ ॥ 2 ॥

ಏವಮೇತದ್ಯಥಾತ್ಥ ತ್ವ–ಮಾತ್ಮಾನಂ ಪರಮೇಶ್ವರ ।
ದ್ರಷ್ಟುಮಿಚ್ಛಾಮಿ ತೇ ರೂಪ–ಮೈಶ್ವರಂ ಪುರುಷೋತ್ತಮ ॥ 3 ॥

ಮನ್ಯಸೇ ಯದಿ ತಚ್ಛಕ್ಯಂ । ಮಯಾ ದ್ರಷ್ಟುಮಿತಿ ಪ್ರಭೋ ।
ಯೋಗೇಶ್ವರ ತತೋ ಮೇ ತ್ವಂ । ದರ್ಶಯಾತ್ಮಾನಮವ್ಯಯಮ್ ॥ 4 ॥

# ಹನ್ನೊಂದನೆಯ ಅಧ್ಯಾಯ

**ಅರ್ಜುನನು ಕೇಳಿಕೊಂಡದ್ದು:**

ನನ್ನಲ್ಲಿ ಅನುಗ್ರಹಮಾಡುವದಕ್ಕಾಗಿ ನೀನು ಅಧ್ಯಾತ್ಮವೆಂಬ ಹೆಸರಿನ ಪರಮರಹಸ್ಯವಾದ ಯಾವ ಮಾತನ್ನು ಹೇಳಿರುವೆಯೋ – ಅದರಿಂದ ಈ ನನ್ನ ಮೋಹವು ತೊಲಗಿತು. ಭೂತಗಳ ಹುಟ್ಟುಹೊಂದುಗಳೆರಡನ್ನೂ ವಿಸ್ತಾರವಾಗಿ ನಾನು ನಿನ್ನಿಂದ ಕೇಳಿದ್ದಾಯಿತು; ಕಮಲಪತ್ರಾಕ್ಷನೆ, ನಾಶವಿಲ್ಲದ ನಿನ್ನ ಮಾಹಾತ್ಮ್ಯವನ್ನೂ ಕೇಳಿದ್ದಾಯಿತು. ಪರಮೇಶ್ವರನೆ. ನೀನು ಹೇಗಿರುವೆಯೆಂದು ತಿಳಿಸಿರುವೆಯೋ ಇದು ಹೀಗೆಯೇ ಸರಿ. ಎಲೈ ಪುರುಷೋತ್ತಮನೆ, ನನಗೆ ನಿನ್ನ ಈ ಐಶ್ವರರೂಪವನ್ನು ನೋಡಬೇಕೆಂಬ ಬಯಕೆ ಇದೆ. ಪ್ರಭುವೆ, ಅದನ್ನು ನಾನು ನೋಡಲಾದೀತೆಂದು ನೀನು ಎಣಿಸುವೆಯಾದರೆ ಆಗ, ಎಲೈ ಯೋಗೇಶ್ವರನೆ, ನಾಶವಿಲ್ಲದ ನಿನ್ನ ರೂಪವನ್ನು ನನಗೆ ತೋರಿಸು. (1–4)

ಟಿ॥ ಪರಮಾತ್ಮನೇ ಎಲ್ಲವೂ ಆಗಿರುವನೆಂಬುದು ಪರಮಾರ್ಥವಾದರೂ ಆತನ ಅನುಗ್ರಹವಿಲ್ಲದವರಿಗೆ ಇದು ಗೋಚರವಾಗುವದಿಲ್ಲ.

ಶ್ರೀಭಗವಾನುವಾಚ –

ಪಶ್ಯ ಮೇ ಪಾರ್ಥ ರೂಪಾಣಿ। ಶತಶೋಽಥ ಸಹಸ್ರಶಃ।
ನಾನಾವಿಧಾನಿ ದಿವ್ಯಾನಿ। ನಾನಾವರ್ಣಾಕೃತೀನಿ ಚ ॥ 5 ॥

ಪಶ್ಯಾದಿತ್ಯಾನ್ವಸೂನ್ ರುದ್ರಾ–ನಶ್ವಿನೌ ಮರುತಸ್ತಥಾ।
ಬಹೂನ್ಯದೃಷ್ಟಪೂರ್ವಾಣಿ। ಪಶ್ಯಾಶ್ಚರ್ಯಾಣಿ ಭಾರತ ॥ 6 ॥

ಇಹೈಕಸ್ಥಂ ಜಗತ್ಕೃತ್ಸ್ನಂ। ಪಶ್ಯಾದ್ಯ ಸಚರಾಚರಮ್।
ಮಮ ದೇಹೇ ಗುಡಾಕೇಶ। ಯಚ್ಚಾನ್ಯದ್ದ್ರಷ್ಟುಮಿಚ್ಛಸಿ ॥ 7 ॥

ನ ತು ಮಾಂ ಶಕ್ಯಸೇ ದ್ರಷ್ಟು–ಮನೇನೈವ ಸ್ವಚಕ್ಷುಷಾ।
ದಿವ್ಯಂ ದದಾಮಿ ತೇ ಚಕ್ಷುಃ। ಪಶ್ಯ ಮೇ ಯೋಗಮೈಶ್ವರಮ್ ॥ 8 ॥

**ಶ್ರೀಭಗವಂತನ ಉತ್ತರ :**

ಎಲೈ ಪಾರ್ಥನೆ, ನೂರುಗಟ್ಟಲೆಯಾಗಿಯೂ ಸಾವಿರಗಟ್ಟಲೆ ಯಾಗಿಯೂ ನಾನಾವಿಧವಾಗಿಯೂ ಬಗೆಬಗೆಯ ಬಣ್ಣಗಳೂ ಆಕಾರಗಳೂ ಇರುವವಾಗಿಯೂ ಇರುವ ನನ್ನ ದಿವ್ಯರೂಪಗಳನ್ನು ನೋಡು. ಆದಿತ್ಯರನ್ನೂ ವಸುಗಳನ್ನೂ ರುದ್ರರನ್ನೂ ಅಶ್ವಿನೀದೇವತೆಗಳನ್ನೂ ಮರುತ್ತರನ್ನೂ ನೋಡು. ಭರತವಂಶೋತ್ಪನ್ನನೆ. ಹಿಂದೆ ಎಂದೂ ನೋಡದ ಇದ್ದ ಇನ್ನೂ ಅನೇಕ ಆಶ್ಚರ್ಯಗಳನ್ನೂ ನೋಡು. ಗುಡಾಕೇಶನೆ, ಇಲ್ಲಿ ನನ್ನ ದೇಹದ ಒಕ್ಕಡೆಯಲ್ಲಿ ಚರಾಚರರೂಪವಾದ ಜಗತ್ತೆಲ್ಲವೂ ಇರುವದನ್ನು ಈಗ ನೋಡು; ಇನ್ನು ಬೇರೆ ಯಾವ ಯಾವದನ್ನು ನೋಡಲಿಚ್ಛಿಸುವೆಯೋ ಅದನ್ನೆಲ್ಲ ನೋಡು. ಆದರೆ ಈ ನಿನ್ನ ಕಣ್ಣಿನಿಂದಲೇ ನನ್ನನ್ನು ನೀನು ನೋಡಲಾರೆ, ನಿನಗೆ ದಿವ್ಯಚಕ್ಷುವನ್ನು ಕೊಡುವೆನು. ಈಶ್ವರನಾದ ನನ್ನ ಯೋಗವನ್ನು ನೋಡು. (5–8)

ಟಿ॥ ಭಗವಂತನು ತನ್ನ ಸ್ವರೂಪದಲ್ಲಿಯೇ ತಾನಿದ್ದುಕೊಂಡು ಏಕಾಂಶದಿಂದ

ಜಗತ್ತೆಲ್ಲವೂ ಆಗಿರುವನೆಂಬುದು ಆತನ ಐಶ್ವರಯೋಗವು. ಇದನ್ನರಿಯುವದಕ್ಕೆ ಆತನ ಅನುಗ್ರಹದಿಂದ ದಿವ್ಯದೃಷ್ಟಿಯು ಬರಬೇಕು.

**ಸಞ್ಜಯ ಉವಾಚ –**

**ಏವಮುಕ್ತ್ವಾ ತತೋ ರಾಜನ್ । ಮಹಾಯೋಗೇಶ್ವರೋ ಹರಿಃ ।**
**ದರ್ಶಯಾಮಾಸ ಪಾರ್ಥಾಯ । ಪರಮಂ ರೂಪಮೈಶ್ವರಮ್ ॥ 9 ॥**

**ಅನೇಕವಕ್ತ್ರನಯನ–ಮನೇಕಾದ್ಭುತದರ್ಶನಮ್ ।**
**ಅನೇಕದಿವ್ಯಾಭರಣಂ । ದಿವ್ಯಾನೇಕೋದ್ಯತಾಯುಧಮ್ ॥ 10 ॥**

**ದಿವ್ಯಮಾಲ್ಯಾಮ್ಬರಧರಂ । ದಿವ್ಯಗನ್ಧಾನುಲೇಪನಮ್ ।**
**ಸರ್ವಾಶ್ಚರ್ಯಮಯಂ ದೇವ–ಮನನ್ತಂ ವಿಶ್ವತೋ ಮುಖಮ್ ॥ 11 ॥**

**ಸಂಜಯನು ಹೇಳಿದ್ದು:**

ರಾಜನೆ, ಮಹಾಯೋಗೇಶ್ವರನಾದ ಹರಿಯು ಹೀಗೆಂದು ನುಡಿದು ಪಾರ್ಥನಿಗೆ ಈಶ್ವರನಾದ ತನ್ನ ಹೆಚ್ಚಿನ ರೂಪವನ್ನು ತೋರಿಸಿದನು. ಆ

ರೂಪದಲ್ಲಿ ಅನೇಕ ಮುಖಗಳೂ ಕಣ್ಣುಗಳೂ ಇದ್ದವು ; ಅಚ್ಚರಿಗೊಳಿಸುವಂಥ ಎಷ್ಟೋ ನೋಟಗಳಿದ್ದವು ; ಲೆಕ್ಕವಿಲ್ಲದಷ್ಟು ದಿವ್ಯವಾದ ಆಭರಣಗಳಿದ್ದವು : ಎತ್ತಿಹಿಡಿದ ದಿವ್ಯವಾದ ಅನೇಕ ಆಯುಧಗಳಿದ್ದವು. ಭಗವಂತನು ದಿವ್ಯವಾದ ಹೂಮಾಲೆಗಳನ್ನೂ ವಸ್ತ್ರಗಳನ್ನೂ ಧರಿಸಿದ್ದನು ; ದಿವ್ಯವಾದ ಗಂಧವನ್ನು ಪೂಸಿಕೊಂಡಿದ್ದನು ; ಸಕಲವಿಧವಾದ ಆಶ್ಚರ್ಯಗಳಿಂದ ಕೂಡಿದ್ದನು ; ಕೊನೆಗಾಣದಂಥ ಆಕಾರವುಳ್ಳವನಾಗಿದ್ದನು ; ಎಲ್ಲಾ ಕಡೆಗೂ ಮುಖವುಳ್ಳವನಾಗಿದ್ದನು. (9–11)

**ದಿವಿ ಸೂರ್ಯಸಹಸ್ರಸ್ಯ । ಭವೇದ್ಯುಗಪದುತ್ಥಿತಾ ।**
**ಯದಿ ಭಾಃ ಸದೃಶೀ ಸಾ ಸ್ಯಾ–ದ್ಭಾಸಸ್ತಸ್ಯ ಮಹಾತ್ಮನಃ ॥ 12 ॥**

**ತತ್ರೈಕಸ್ಥಂ ಜಗತ್ಕೃತ್ಸ್ನಂ । ಪ್ರವಿಭಕ್ತಮನೇಕಧಾ ।**
**ಅಪಶ್ಯದ್ದೇವದೇವಸ್ಯ । ಶರೀರೇ ಪಾಣ್ಡವಸ್ತದಾ ॥ 13 ॥**

ಅಂತರಿಕ್ಷದಲ್ಲಿ ಸಾವಿರ ಸೂರ್ಯರ ಬೆಳಕು ಒಮ್ಮೆಗೇ ಎದ್ದು ತೋರುವದಾದರೆ ಅದು ಆ ಮಹಾತ್ಮನ ಪ್ರಕಾಶಕ್ಕೆ ಸಮನಾದೀತೊ, ಏನೋ ? ಅಲ್ಲಿ ಬಹು ಪ್ರಕಾರವಾಗಿ ವಿಂಗಡಿಸಿಕೊಂಡಿರುವ ಜಗತ್ತೆಲ್ಲವೂ ಆ ದೇವದೇವನ ಶರೀರದಲ್ಲಿ ಒಕ್ಕಡೆಯಲ್ಲಿಯೇ ಇರುವದನ್ನು ಆಗ ಅರ್ಜುನನು ಕಂಡನು. (12–13)

**ತತಃ ಸ ವಿಸ್ಮಯಾವಿಷ್ಟೋ । ಹೃಷ್ಟರೋಮಾ ಧನಞ್ಜಯಃ ।**
**ಪ್ರಣಮ್ಯ ಶಿರಸಾ ದೇವಂ । ಕೃತಾಞ್ಜಲಿರಭಾಷತ ॥ 14 ॥**

ಆಮೇಲೆ ಆ ಧನಂಜಯನು ತುಂಬ ಬೆರಗಾಗಿ ಮೈಗೂದಲು ನೆಟ್ಟಗೆ ನಿಲ್ಲಲು, ಆ ದೇವನಿಗೆ ತಲೆಬಾಗಿ ಕೈಮುಗಿದುಕೊಂಡು ಇಂತೆಂದನು : (14)

**ಅರ್ಜುನ ಉವಾಚ –**

**ಪಶ್ಯಾಮಿ ದೇವಾಂಸ್ತವ ದೇವ ದೇಹೇ ।**
**ಸರ್ವಾಂಸ್ತಥಾ ಭೂತವಿಶೇಷಸಙ್ಘಾನ್ ।**

ಬ್ರಹ್ಮಾಣಮೀಶಂ ಕಮಲಾಸನಸ್ಥ–
ಮೃಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥ 15 ॥

ಅನೇಕಬಾಹೂದರವಕ್ತ್ರನೇತ್ರಂ।
ಪಶ್ಯಾಮಿ ತ್ವಾಂ ಸರ್ವತೋಽನನ್ತರೂಪಮ್।
ನಾನ್ತಂ ನ ಮಧ್ಯಂ ನ ಪುನಸ್ತವಾದಿಂ।
ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ ॥ 16 ॥

ಕಿರೀಟಿನಂ ಗದಿನಂ ಚಕ್ರಿಣಂ ಚ।
ತೇಜೋರಾಶಿಂ ಸರ್ವತೋ ದೀಪ್ತಿಮನ್ತಮ್।
ಪಶ್ಯಾಮಿ ತ್ವಾಂ ದುರ್ನಿರೀಕ್ಷ್ಯಂ ಸಮನ್ತಾ–
ದ್ದೀಪ್ತಾನಲಾರ್ಕದ್ಯುತಿಮಪ್ರಮೇಯಮ್ ॥ 17 ॥

ತ್ವಮಕ್ಷರಂ ಪರಮಂ ವೇದಿತವ್ಯಂ।
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್।

ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ।
ಸನಾತನಸ್ತ್ವಂ ಪುರುಷೋ ಮತೋ ಮೇ ॥ 18 ॥

ಅನಾದಿಮಧ್ಯಾನ್ತಮನನ್ತವೀರ್ಯ–
ಮನನ್ತಬಾಹುಂ ಶಶಿಸೂರ್ಯನೇತ್ರಮ್ ।
ಪಶ್ಯಾಮಿ ತ್ವಾಂ ದೀಪ್ತಹುತಾಶವಕ್ತ್ರಂ ।
ಸ್ವತೇಜಸಾ ವಿಶ್ವಮಿದಂ ತಪನ್ತಮ್ ॥ 19 ॥

ದ್ಯಾವಾಪೃಥಿವ್ಯೋರಿದಮನ್ತರಂ ಹಿ ।
ವ್ಯಾಪ್ತಂ ತ್ವಯೈಕೇನ ದಿಶಶ್ಚ ಸರ್ವಾಃ।
ದೃಷ್ಟ್ವಾದ್ಭುತಂ ರೂಪಮುಗ್ರಂ ತವೇದಂ ।
ಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್ ॥ 20 ॥

ಅರ್ಜುನನು ಹೇಳಿದ್ದು:

ದೇವನೆ, ನಿನ್ನ ದೇಹದಲ್ಲಿ ಎಲ್ಲಾ ದೇವತೆಗಳನ್ನೂ ಬಗೆಬಗೆಯ ಪ್ರಾಣಿಗಳ ಗುಂಪುಗಳನ್ನೂ ಕಮಲಾಸನದಲ್ಲಿ ಕುಳಿತಿರುವ ಬ್ರಹ್ಮದೇವನನ್ನೂ

ಎಲ್ಲಾ ಋಷಿಗಳನ್ನೂ ದೇವಲೋಕದ ಉರಗರನ್ನೂ ಕಾಣುತ್ತಿರುವೆನು. ಎಷ್ಟೋ ತೋಳುಗಳೂ ಎಷ್ಟೋ ಹೊಟ್ಟೆಗಳೂ ಎಷ್ಟೋ ಮುಖಗಳೂ ಎಷ್ಟೋ ಕಣ್ಣುಗಳೂ ಇರುವ ನಿನ್ನನ್ನು ಅನಂತರೂಪಗಳಿಂದ ಎಲ್ಲೆಲ್ಲಿಯೂ ಕಾಣುತ್ತಿರುವೆನು. ಜಗದೊಡೆಯನೆ, ವಿಶ್ವರೂಪನೆ, ನಿನ್ನ ಮೊದಲು, ಕೊನೆ, ನಡುವೆ – ಯಾವದೊಂದೂ ನನಗೆ ಕಾಣಿಸುವದಿಲ್ಲ. ಕಿರೀಟವನ್ನು ಇಟ್ಟುಕೊಂಡು ಗದೆಯನ್ನೂ ಚಕ್ರವನ್ನೂ ಹಿಡಿದು ಎಲ್ಲೆಲ್ಲಿಯೂ ಬೆಳಗುತ್ತಿರುವ ತೇಜಸ್ಸಿನ ರಾಶಿಯಾಗಿ ನೀನು ಕಾಣುತ್ತಿರುವೆ ! ನೋಡಲಶಕ್ಯನಾಗಿ ಎಲ್ಲೆಲ್ಲಿಯೂ ಹೊತ್ತಿಕೊಂಡು ಉರಿಯುವ ಬೆಂಕಿಯ ಮತ್ತು ಸೂರ್ಯನ ಕಾಂತಿಯಿಂದ ಝಗಝಗಿಸುತ್ತಿರುವ ಅಪ್ರಮೇಯನಾದ ನಿನ್ನನ್ನು ಇಲ್ಲಿ ಕಾಣುತ್ತಿದೇನೆ. ನೀನು ಮುಮುಕ್ಷುಗಳು ಅವಶ್ಯವಾಗಿ ಅರಿಯಬೇಕಾದ ನಾಶರಹಿತತತ್ತ್ವವು ; ನೀನು ಈ ಜಗತ್ತಿಗೆಲ್ಲ ಪರಮಾಶ್ರಯನು ; ನೀನು ನಾಶರಹಿತನು, ಶಾಶ್ವತವಾದ ಧರ್ಮವನ್ನು ಕಾಪಾಡುವಾತನು ; ನೀನು ಸನಾತನಪುರುಷನು – ಎಂದು ನನ್ನ ಮತವು. ಮೊದಲು, ನಡುವೆ, ಕೊನೆ– ಎಂಬುದಿಲ್ಲದವನೂ ಕೊನೆಗಾಣದ

ಸಾಮರ್ಥ್ಯವುಳ್ಳವನೂ ಲೆಕ್ಕವಿಲ್ಲದಷ್ಟು ತೋಳುಗಳುಳ್ಳವನೂ ಚಂದ್ರಸೂರ್ಯರೆಂಬ ಕಣ್ಣುಗಳುಳ್ಳವನೂ ಧಗಧಗನೆ ಹೊತ್ತಿಕೊಂಡು ಉರಿಯುತ್ತಿರುವ ಬೆಂಕಿಯೆಂಬ ಮುಖವುಳ್ಳವನೂ ತನ್ನ ತೇಜಸ್ಸಿನಿಂದ ಈ ಜಗತ್ತೆಲ್ಲವನ್ನೂ ಸುಡುತ್ತಿರುವವನೂ ಆಗಿ ನೀನು ಕಾಣುತ್ತಿರುವೆ. ಭೂಲೋಕಕ್ಕೂ ಸ್ವರ್ಗಲೋಕಕ್ಕೂ ನಡುವೆ ಇರುವ ಈ ಅಂತರಿಕ್ಷವೆಲ್ಲವೂ ನಿನ್ನೊಬ್ಬನಿಂದಲೇ ತುಂಬಿಕೊಂಡಿರುತ್ತದೆ ! ದಿಕ್ಕುಗಳೆಲ್ಲವೂ ನಿನ್ನಿಂದಲೇ ತುಂಬಿಕೊಂಡಿರುವವು ! ಎಲೈ ಮಹಾತ್ಮನೆ, ಭಯಂಕರವಾದ ಈ ನಿನ್ನ ಅದ್ಭುತರೂಪವನ್ನು ಕಂಡು ಮೂರು ಲೋಕವೂ ಕಳವಳಗೊಂಡಿರುವವು. (15–20)

**ಅಮೀ ಹಿ ತ್ವಾಂ ಸುರಸಙ್ಘಾ ವಿಶನ್ತಿ।**
**ಕೇಚಿದ್ಭೀತಾಃ ಪ್ರಾಞ್ಜಲಯೋ ಗೃಣನ್ತಿ।**
**ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧಸಙ್ಘಾಃ।**
**ಸ್ತುವನ್ತಿ ತ್ವಾಂ ಸ್ತುತಿಭಿಃ ಪುಷ್ಕಲಾಭಿಃ ॥ 21 ॥**

ಅಗೋ, ಈ ದೇವತೆಗಳ ಗುಂಪುಗಳು ನಿನ್ನನ್ನು ಹೊಗುತ್ತಿದಾರೆ ;

ಕೆಲವರು ಹೆದರಿ ಕೈಮುಗಿದುಕೊಂಡು ನಿನ್ನನ್ನು ಸ್ತೋತ್ರಮಾಡುತ್ತಿರುವರು. ಮಹರ್ಷಿಗಳ ಮತ್ತು ಸಿದ್ಧರ ಗುಂಪುಗಳು 'ಜಗತ್ತಿಗೆ ಸ್ವಸ್ತಿಯಾಗಲಿ !' ಎನ್ನುತ್ತಾ ನಿನ್ನನ್ನು ಅರ್ಥಪೂರ್ಣವಾದ ಸ್ತೋತ್ರಗಳಿಂದ ಕೊಂಡಾಡುತ್ತಿದ್ದಾರೆ. (21)

ಟಿ॥ ದೇವತೆಗಳು ತಮ್ಮ ತಮ್ಮ ಅಂಶವಿಂದ ಭಾರತದ ಪಟುಭಟರಾಗಿ ಜನಿಸಿದ್ದರೆಂದು ಮಹಾಭಾರತವಲ್ಲಿದೆ. ಈಗ ಅವರೆಲ್ಲರೂ ಕಾಲವಶದಿಂದ ಪರಮಾತ್ಮನಲ್ಲಿ ಲಯವಾಗುತ್ತಿವಾರೆ. ಮಹರ್ಷಿಗಳೂ ಸಿದ್ಧರೂ ಜಗತ್ತಿಗೆ ಕಲ್ಯಾಣವಾಗಲೆಂದು ಭಗವಂತನಲ್ಲಿ ಮೊರೆಯಿಡುವದು ಅವರ ಲೋಕಕುಟುಂಬಿತ್ವವನ್ನು ಸೂಚಿಸುತ್ತದೆ.

ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾ –
ವಿಶ್ವೇಽಶ್ವಿನೌ ಮರುತಶ್ಚೋಷ್ಮಪಾಶ್ಚ ।
ಗನ್ಧರ್ವಯಕ್ಷಾಸುರಸಿದ್ಧಸಂಘಾ–
ವೀಕ್ಷನ್ತೇ ತ್ವಾಂ ವಿಸ್ಮಿತಾಶ್ಚೈವ ಸರ್ವೇ ॥ 22 ॥

ರೂಪಂ ಮಹತ್ತೇ ಬಹುವಕ್ತ್ರನೇತ್ರಂ ।
ಮಹಾಬಾಹೋ ಬಹುಬಾಹೂರುಪಾದಮ್ ।

ಬಹೂದರಂ ಬಹುದಂಷ್ಟ್ರಾಕರಾಲಂ।
ದೃಷ್ಟ್ವಾ ಲೋಕಾಃ ಪ್ರವ್ಯಥಿತಾಸ್ತಥಾಹಮ್ ॥ 23 ॥

ನಭಃಸ್ಪೃಶಂ ದೀಪ್ತಮನೇಕವರ್ಣಂ।
ವ್ಯಾತ್ತಾನನಂ ದೀಪ್ತವಿಶಾಲನೇತ್ರಮ್ ।
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾನ್ತರಾತ್ಮಾ।
ಧೃತಿಂ ನ ವಿನ್ದಾಮಿ ಶಮಂ ಚ ವಿಷ್ಣೋ ॥ 24 ॥

ದಂಷ್ಟ್ರಾಕರಾಲಾನಿ ಚ ತೇ ಮುಖಾನಿ ।
ದೃಷ್ಟ್ವೈವ ಕಾಲಾನಲಸನ್ನಿಭಾನಿ।
ದಿಶೋ ನ ಜಾನೇ ನ ಲಭೇ ಚ ಶರ್ಮ।
ಪ್ರಸೀದ ದೇವೇಶ ಜಗನ್ನಿವಾಸ ॥ 25 ॥

ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ।
ಸರ್ವೇ ಸಹೈವಾವನಿಪಾಲಸಙ್ಘೈಃ।

ಭೀಷ್ಮೋ ದ್ರೋಣಃ ಸೂತಪುತ್ರಸ್ತಥಾಸೌ।
ಸಹಾಸ್ಮದೀಯೈರಪಿ ಯೋಧಮುಖ್ಯೈಃ ॥ 26 ॥
ವಕ್ತ್ರಾಣಿ ತೇ ತ್ವರಮಾಣಾ ವಿಶನ್ತಿ।
ದಂಷ್ಟ್ರಾಕರಾಲಾನಿ ಭಯಾನಕಾನಿ।
ಕೇಚಿದ್ವಿಲಗ್ನಾ ದಶನಾನ್ತರೇಷು।
ಸನ್ದೃಶ್ಯನ್ತೇ ಚೂರ್ಣಿತೈರುತ್ತಮಾಙ್ಗೈಃ ॥ 27 ॥
ಯಥಾ ನದೀನಾಂ ಬಹವೋಽಂಬುವೇಗಾಃ।
ಸಮುದ್ರಮೇವಾಭಿಮುಖಾ ದ್ರವನ್ತಿ।
ತಥಾ ತವಾಮೀ ನರಲೋಕವೀರಾ–
ವಿಶನ್ತಿ ವಕ್ತ್ರಾಣ್ಯಭಿವಿಜ್ವಲನ್ತಿ ॥ 28 ॥
ಯಥಾ ಪ್ರದೀಪ್ತಂ ಜ್ವಲನಂ ಪತಙ್ಗಾ–
ವಿಶನ್ತಿ ನಾಶಾಯ ಸಮೃದ್ಧವೇಗಾಃ।

ತಥೈವ ನಾಶಾಯ ವಿಶನ್ತಿ ಲೋಕಾ–
ಸ್ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ || 29 ||

ಲೇಲಿಹ್ಯಸೇ ಗ್ರಸಮಾನಃ ಸಮನ್ತಾ–
ಲ್ಲೋಕಾನ್ಸಮಗ್ರಾನ್ವದನೈರ್ಜ್ವಲದ್ಭಿಃ ।
ತೇಜೋಭಿರಾಪೂರ್ಯ ಜಗತ್ ಸಮಗ್ರಂ
ಭಾಸಸ್ತವೋಗ್ರಾಃ ಪ್ರತಪನ್ತಿ ವಿಷ್ಣೋ || 30 ||

ಆಖ್ಯಾಹಿ ಮೇ ಕೋ ಭವಾನುಗ್ರರೂಪೋ ।
ನಮೋಽಸ್ತು ತೇ ದೇವವರ ಪ್ರಸೀದ ।
ವಿಜ್ಞಾತುಮಿಚ್ಛಾಮಿ ಭವನ್ತಮಾದ್ಯಂ ।
ನ ಹಿ ಪ್ರಜಾನಾಮಿ ತವ ಪ್ರವೃತ್ತಿಮ್ || 31 ||

ಹನ್ನೊಂದುಮಂದಿ ರುದ್ರರು, ಹನ್ನೆರಡುಮಂದಿ ಆದಿತ್ಯರು, ಎಂಟು ಮಂದಿ ವಸುಗಳು, ಹನ್ನೆರಡುಜನ ಸಾಧ್ಯರು, ಹತ್ತುಮಂದಿ ವಿಶ್ವೇದೇವತೆಗಳು,

ಇಬ್ಬರು ಅಶ್ವಿನೀಕುಮಾರರು, (ನಲವತ್ತೊಂಬತ್ತು ಜನ) ಮರುತ್ತರು, ಬಿಸಿಯೂಟದ ಹೊಗೆಯನ್ನು ಕುಡಿಯುವ ಪಿತೃಗಳು, ಗಂಧರ್ವರು, ಯಕ್ಷರು, ಅಸುರರು, ಸಿದ್ಧರು– ಇವರ ಗುಂಪುಗಳೂ ಎಲ್ಲರೂ ಬೆರಗಾಗಿ ನಿನ್ನನ್ನೇ ನೋಡುತ್ತಿರುವರು. ಎಲೈ ಮಹಾಬಾಹುವೆ, ಅನೇಕಬಾಯಿಗಳೂ ಕಣ್ಣುಗಳೂ ಇರುವದಾಗಿಯೂ ಅನೇಕತೋಳುಗಳೂ ತೊಡೆಗಳೂ ಕಾಲುಗಳೂ ಇರುವದಾಗಿಯೂ ಅನೇಕ ಹೊಟ್ಟೆಗಳಿಂದ ಕೂಡಿದ್ದಾಗಿಯೂ ಅನೇಕಕೋರೆದಾಡೆಗಳಿಂದ ವಿಕಾರವಾಗಿ ಕಾಣುತ್ತಿರುವ ನಿನ್ನ ಮಹಾರೂಪವನ್ನು ಕಂಡು ಲೋಕದ ಪ್ರಾಣಿಗಳೆಲ್ಲರೂ ಕಳವಳಗೊಂಡಿರುವರು, ನಾನೂ ಕಳವಳಗೊಂಡಿರುವೆನು. ಎಲೈ ವಿಷ್ಣುವೆ, ಮುಗಿಲು ಮುಟ್ಟುವಂತಿರುವನಾಗಿ ಝಗಝಗಿಸುತ್ತಾ ಬಗೆಬಗೆಯ ಬಣ್ಣಗಳಿಂದ ಕೂಡಿದವನಾಗಿ ಬಾಯಿತೆರೆದುಕೊಂಡು ದೊಡ್ಡ ಉರಿಗಣ್ಣುಗಳಿಂದ ಕೂಡಿರುವ ನಿನ್ನನ್ನು ಕಂಡು ಮನಸ್ಸಿನಲ್ಲಿ ತುಂಬ ಕಳವಳಕ್ಕೊಳಗಾಗಿ ಧೈರ್ಯವನ್ನಾಗಲಿ ಸಮಾಧಾನವನ್ನಾಗಲಿ ಹೊಂದದೆ ಇರುವೆನು. ಕೋರೆದಾಡೆಗಳಿಂದ ಭೀಕರಪ್ರಲಯಾಗ್ನಿಯಂತೆ ತೋರುತ್ತಿರುವ ನಿನ್ನ ಮುಖಗಳನ್ನು ಕಂಡಮಾತ್ರದಿಂದ ದಿಕ್ಕುತೋಚದೆ

ಇರುವೆನು, ಮನಸ್ಸಿಗೆ ಸುಖವೂ ಇಲ್ಲದವನಾಗಿರುವೆನು ; ಎಲೈ ದೇವತೆಗಳೊಡೆಯನೆ, ಜಗನ್ನಿವಾಸನೆ, ಪ್ರಸನ್ನನಾಗು, ಈ ಧೃತರಾಷ್ಟ್ರನ ಮಕ್ಕಳೆಲ್ಲರೂ ರಾಜರುಗಳ ಗುಂಪುಗಳೊಡನೆಯೇ ನಿನ್ನನ್ನು ತ್ವರೆಯಿಂದ ಬಂದು ಸೇರುತ್ತಿದ್ದಾರೆ ; ಭೀಷ್ಮನು, ದ್ರೋಣನು, ಮತ್ತು ಸೂತಪುತ್ರನಾದ ಕರ್ಣನು – ಇವರೆಲ್ಲರೂ ನಮ್ಮ ಕಡೆಯ ಪಟುಭಟರನ್ನೊಡಗೂಡಿ ಕೋರದಾಡೆಗಳಿಂದ ವಿಕಾರವಾಗಿ ಭಯಂಕರವಾಗಿರುವ ನಿನ್ನ ಬಾಯಿಗಳನ್ನು ಹೊಗುತ್ತಿರುವರು. ಕೆಲವರು ಹಲ್ಲುಸಂದುಗಳಲ್ಲಿ ಸಿಕ್ಕಿಕೊಂಡಿರುವರು ; ಅವರ ತಲೆಗಳು ಪುಡಿಪುಡಿಯಾಗಿರುವದು ಕಾಣಿಸುತ್ತಿರುವದು. ಹೇಗೆ ನದಿಗಳ ಎಷ್ಟೋ ಪ್ರವಾಹಗಳು ಸಮುದ್ರದ ಕಡೆಗೇ ಹರಿಯುತ್ತಿರುವವೋ ಅದರಂತೆ ಈ ಮನುಷ್ಯಲೋಕದ ವೀರರು ನಿನ್ನ ಉರಿಯುತ್ತಿರುವ ಬಾಯಿಗಳನ್ನು ಬಂದು ಹೊಗುತ್ತಿರುವರು. ಹೇಗೆ ಧಗಧಗನೆ ಉರಿಯುತ್ತಿರುವ ಬೆಂಕಿಯೊಳಕ್ಕೆ ದೀಪದ ಹುಳುಗಳು ವೇಗವೇಗನೆ ಬಂದು ಬಿದ್ದು ಸಾಯುತ್ತಿರುವವೋ ಅದರಂತೆ ಪ್ರಾಣಿಗಳೆಲ್ಲವೂ ನಿನ್ನ ಬಾಯಿಗಳಲ್ಲಿ ವೇಗವೇಗನೆ ಬಂದು ಬಿದ್ದು ಸಾಯುತ್ತಿರುವವು. ನೀನು ಪ್ರಾಣಿಗಳೆಲ್ಲವನ್ನೂ ಎಲ್ಲಾ ಕಡೆಯಿಂದಲೂ

ಉರಿಯುತ್ತಿರುವ ಬಾಯಿಗಳಿಂದ ನುಂಗುತ್ತಾ ಬಾಯಿಚಪ್ಪರಿಸುತ್ತಿದೀಯೆ. ಎಲೈ ವಿಷ್ಣುವೇ, ನಿನ್ನ ಉಗ್ರವಾದ ಪ್ರಭೆಗಳು ಜಗತ್ತೆಲ್ಲವನ್ನೂ ತಮ್ಮ ಧಗೆಯಿಂದ ತುಂಬಿಕೊಂಡು ಸುಡುತ್ತಿರುವವು. ಈ ಉಗ್ರರೂಪವಾದ ನೀನು ಯಾರೋ ನನಗೆ ಹೇಳು. ಎಲೈ ದೇವಶ್ರೇಷ್ಠನೆ, ನಿನಗೆ ನಮಸ್ಕಾರವಿರಲಿ ! ಪ್ರಸನ್ನನಾಗು. ಎಲ್ಲಕ್ಕೂ ಕಾರಣನಾದ ನಿನ್ನ ಸ್ವರೂಪವನ್ನು ತಿಳಿದುಕೊಳ್ಳಲು ಅಪೇಕ್ಷೆಯುಳ್ಳವನಾಗಿರುವೆನು ; ಏಕೆಂದರೆ ನಿನ್ನ ಪ್ರವೃತ್ತಿಯ ಉದ್ದೇಶವನ್ನು ತಿಳಿಯದವನಾಗಿರುವೆನು.(22–31)

ಶ್ರೀಭಗವಾನುವಾಚ –

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ ।
ಲೋಕಾನ್ಸಮಾಹರ್ತುಮಿಹ ಪ್ರವೃತ್ತಃ ।
ಋತೇಽಪಿ ತ್ವಾಂ ನ ಭವಿಷ್ಯನ್ತಿ ಸರ್ವೇ ।
ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ ॥ 32 ॥

ತಸ್ಮಾತ್ತ್ವಮುತ್ತಿಷ್ಠ ಯಶೋ ಲಭಸ್ವ ।
ಜಿತ್ವಾ ಶತ್ರೂನ್ ಭುಙ್ಕ್ಷ್ವ ರಾಜ್ಯಂ ಸಮೃದ್ಧಮ್ ।
ಮಯ್ಯೈವೈತೇ ನಿಹತಾಃ ಪೂರ್ವಮೇವ ।
ನಿಮಿತ್ತಮಾತ್ರಂ ಭವ ಸವ್ಯಸಾಚಿನ್ ॥ 33 ॥

ಶ್ರೀಭಗವಂತನು ಹೇಳಿದ್ದು:

ನಾನು ಲೋಕವನ್ನೆಲ್ಲ ನಾಶಮಾಡುವ ಕಾಲನಾಗಿರುತ್ತೇನೆ ; ಆದ್ದರಿಂದ ಈಗ ಹೀಗೆ ಬೆಳೆದುಕೊಂಡು ಲೋಕಗಳನ್ನು ಸಂಹಾರಮಾಡುವದಕ್ಕೆ ಹೊರಟಿರುವೆನು. ಹಗೆಗಳ ಸೇನೆಗಳಲ್ಲಿ ಯಾವಯಾವ ಕಾದಾಳುಗಳು ನಿಂತಿರುವರೋ ಅವರಲ್ಲಿ ಎಲ್ಲರೂ ನೀನಿಲ್ಲದಿದ್ದರೂ ಅಳಿಯುವರು. ಆದ್ದರಿಂದ ನೀನು ಏಳು, ಕೀರ್ತಿಯನ್ನು ಗಳಿಸಿಕೊ. ಹಗೆಗಳನ್ನು ಗೆದ್ದು ನಿಷ್ಕಂಟಕವಾಗಿ ರಾಜ್ಯವನ್ನು ಅನುಭವಿಸು. ಎಲೈ ಸವ್ಯಸಾಚಿಯೆ, ಇವರು ಮೊದಲೇ ನನ್ನಿಂದಲೇ ಹತರಾಗಿರುವರು. ನೀನು ಕೇವಲ ನಿಮಿತ್ತನಾಗು. (32–33)

ಟಿ॥ ಕಾಲಕರ್ಮಯೋಗದಿಂದ ಇವರು ತಾವೇ ಮಡಿಯುವರು, ಅದು ಈಶ್ವರನಾದ ನನ್ನ ಕಟ್ಟಳೆ ; ನೀನು ಸುಮ್ಮನೆ ನೆಪಕ್ಕೆ ಯುದ್ಧಮಾಡಬೇಕಾಗಿದೆ– ಎಂದು ಹೇಳಿರುವ ಮಾತಿನ ಸ್ವಾರಸ್ಯವೇನೆಂದರೆ : ಜೀವನದ ಘಟನೆಗಳಿಗೆ ಅವರವರ ಕರ್ಮಗಳು ಮುಖ್ಯಕಾರಣ. ಹೊರಗಿನ ನಿಮಿತ್ತಗಳು ಅಮುಖ್ಯಕಾರಣ.

**ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ ।**
**ಕರ್ಣಂ ತಥಾನ್ಯಾನಪಿ ಯೋಧವೀರಾನ್ ।**
**ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾ ।**
**ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್ ॥ 34 ॥**

ದ್ರೋಣ, ಭೀಷ್ಮ, ಜಯದ್ರಥ, ಕರ್ಣ, ಮಿಕ್ಕ ಕೆಚ್ಚೆದೆಯ ಕಾದಾಳುಗಳು – ನನ್ನಿಂದ ಮೊದಲೇ ಹತರಾಗಿರುವ – ಇವರನ್ನೆಲ್ಲ ನೀನು ನಿಮಿತ್ತಮಾತ್ರನಾಗಿ ಕೊಲ್ಲು, ಅಂಜಿಕೊಳ್ಳದಿರು, ಯುದ್ಧಮಾಡು, ಕದನದಲ್ಲಿ ಹಗೆಗಳನ್ನು ಗೆದ್ದೇ ಗೆಲ್ಲುವೆ. (34)

ಸಞ್ಜಯ ಉವಾಚ –

ಏತಚ್ಛ್ರುತ್ವಾ ವಚನಂ ಕೇಶವಸ್ಯ ।
ಕೃತಾಞ್ಜಲಿರ್ವೇಪಮಾನಃ ಕಿರೀಟೀ ।
ನಮಸ್ಕೃತ್ವಾ ಭೂಯ ಏವಾಹ ಕೃಷ್ಣಂ ।
ಸಗದ್ಗದಂ ಭೀತಭೀತಃ ಪ್ರಣಮ್ಯ ॥ 35 ॥

ಸಂಜಯನು ಹೇಳಿದ್ದು:

ಕೇಶವನ ಈ ಮಾತನ್ನು ಕೇಳಿದ ಕಿರೀಟಿಯು ಕೈಮುಗಿದುಕೊಂಡು ನಡುಗುತ್ತ ನಮಸ್ಕರಿಸಿ ಬಹಳ ಅಂಜಿಕೆಯಿಂದ ತಲೆಬಾಗಿ ಕೃಷ್ಣನನ್ನು ಕುರಿತು ಗದ್ಗದಸ್ವರದಿಂದ ಇಂತೆಂದನು. (35)

ಅರ್ಜುನ ಉವಾಚ –

ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ ।
ಜಗತ್ಪ್ರಹೃಷ್ಯತ್ಯನುರಜ್ಯತೇ ಚ ।

ರಕ್ಷಾಂಸಿ ಭೀತಾನಿ ದಿಶೋ ದ್ರವನ್ತಿ।
ಸರ್ವೇ ನಮಸ್ಯನ್ತಿ ಚ ಸಿದ್ಧಸಂಘಾಃ ॥ 36 ॥

ಕಸ್ಮಾಚ್ಚ ತೇ ನ ನಮೇರನ್ಮಹಾತ್ಮನ್ ।
ಗರೀಯಸೇ ಬ್ರಹ್ಮಣೋಽಪ್ಯಾದಿಕರ್ತ್ರೇ ।
ಅನನ್ತ ದೇವೇಶ ಜಗನ್ನಿವಾಸ ।
ತ್ವಮಕ್ಷರಂ ಸದಸತ್ತತ್ಪರಂ ಯತ್ ॥ 37 ॥

ತ್ವಮಾದಿದೇವಃ ಪುರುಷಃ ಪುರಾಣ–
ಸ್ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್ ।
ವೇತ್ತಾಸಿ ವೇದ್ಯಂ ಚ ಪರಂ ಚ ಧಾಮ
ತ್ವಯಾ ತತಂ ವಿಶ್ವಮನನ್ತರೂಪ ॥ 38 ॥

ವಾಯುರ್ಯಮೋಽಗ್ನಿರ್ವರುಣಃ ಶಶಾಙ್ಕಃ ।
ಪ್ರಜಾಪತಿಸ್ತ್ವಂ ಪ್ರಪಿತಾಮಹಶ್ಚ ।

ನಮೋ ನಮಸ್ತೇಽಸ್ತು ಸಹಸ್ರಕೃತ್ವಃ।
ಪುನಶ್ಚ ಭೂಯೋಽಪಿ ನಮೋ ನಮಸ್ತೇ ॥ 39 ॥
ನಮಃ ಪುರಸ್ತಾದಥ ಪೃಷ್ಠತಸ್ತೇ।
ನಮೋಽಸ್ತು ತೇ ಸರ್ವತ ಏವ ಸರ್ವ।
ಅನನ್ತವೀರ್ಯಾಮಿತವಿಕ್ರಮಸ್ತ್ವಂ।
ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ॥ 40 ॥

ಅರ್ಜುನನು ಇಂತೆಂದನು :

ಎಲೈ ಹೃಷೀಕೇಶನೆ, ನಿನ್ನ ಮಾಹಾತ್ಮ್ಯಸಂಕೀರ್ತನದಿಂದ ಜಗತ್ತು ಹರ್ಷವನ್ನು ಹೊಂದುತ್ತದೆ, ಮತ್ತು ನಿನ್ನಲ್ಲಿ ಅನುರಾಗವುಳ್ಳದ್ದು ಆಗಿರುತ್ತದೆ ; ರಾಕ್ಷಸರು ಹೆದರಿಕೊಂಡು ದಿಕ್ಕುದಿಕ್ಕಿಗೆ ಓಡಿಹೋಗುತ್ತಿರುವರು ; ಸಿದ್ಧರ ಗುಂಪುಗಳೆಲ್ಲವೂ ನಮಸ್ಕರಿಸುತ್ತಿರುವವು. ಇವೆಲ್ಲವೂ ಯುಕ್ತವೇ ಆಗಿವೆ. ಎಲೈ ಮಹಾತ್ಮನೆ, ಎಲ್ಲರಿಗೂ ದೊಡ್ಡವನೂ ಬ್ರಹ್ಮನಿಗೆಕೂಡ ಮೂಲಕಾರಣನೂ ಆದ

ನಿನಗೆ ಅವರು ಏತಕ್ಕೆ ತಾನೆ ನಮಸ್ಕಾರಮಾಡದೆ ಇರುವರು ? ಎಲೈ ಅನಂತನೆ, ದೇವತೆಗಳೊಡೆಯನೆ, ಜಗತ್ತಿಗೆಲ್ಲ ಆಸರೆಯಾಗಿರುವವನೆ, ನೀನು ಸತ್ತೂ (ಇರುವದು) ಆಗಿರುವೆ, ಅಸತ್ತೂ (ಇಲ್ಲದ್ದು) ಆಗಿರುವೆ, ಅವೆರಡಕ್ಕಿಂತಲೂ ಹೆಚ್ಚಿನದಾದ ಅಕ್ಷರವೂ ಆಗಿರುವೆ. ಎಲೈ ಅನಂತರೂಪನೆ, ನೀನು ಮೊಟ್ಟಮೊದಲನೆಯ ದೇವನು, (ಹೃದಯಪುರದಲ್ಲಿ ನೆಲೆಸಿರುವ) ಪುರುಷನು. ಎಲ್ಲರಿಗಿಂತಲೂ ಹಿಂದಿನವನು. ನೀನು ಈ ಜಗತ್ತಿಗೆಲ್ಲ ಕೊನೆಯ ಆಧಾರವು. ಅರಿಯುವ ಸಾಕ್ಷಿಯೂ ಅರಿಯಬರುವ ಜಗತ್ತೂ ಆಗಿರುತ್ತೀಯೆ, ಸರ್ವೋತ್ಕೃಷ್ಟಸ್ಥಾನವಾದ ಮೋಕ್ಷವೂ ಆಗಿರುತ್ತೀಯೆ. ನಿನ್ನಿಂದ ಈ ಜಗತ್ತೆಲ್ಲವೂ ವ್ಯಾಪಿಸಲ್ಪಟ್ಟಿರುವದು. ನೀನು ವಾಯುವು, ಯಮನು, ಅಗ್ನಿಯು, ವರುಣನು, ಚಂದ್ರನು, ಪ್ರಜಾಪತಿಯು ಮತ್ತು ಪ್ರಪಿತಾಮಹನು. ನಮಸ್ಕಾರ ! ನಿನಗೆ ಸಾವಿರಬಾರಿ ನಮಸ್ಕಾರವಿರಲಿ ! ಮತ್ತೂಮತ್ತೂನಮಸ್ಕಾರ ! ನಿನಗೆ ನಮಸ್ಕಾರ ! ಸರ್ವಸ್ವರೂಪನೆ, ನಿನಗೆ ಮುಂಗಡೆ ನಮಸ್ಕಾರ, ಹಿಂಗಡೆ ನಮಸ್ಕಾರ ! ನಿನಗೆ ಎಲ್ಲಾ ಕಡೆಯಿಂದಲೂ ನಮಸ್ಕಾರವಿರಲಿ ! ನೀನು ಅನಂತವೀರ್ಯನು, ಅಪರಿಮಿತಪರಾಕ್ರಮವುಳ್ಳವನು.

ಎಲ್ಲವನ್ನೂ ಚೆನ್ನಾಗಿ ವ್ಯಾಪಿಸಿಕೊಂಡಿರುವೆ, ಆದ್ದರಿಂದ ಎಲ್ಲವೂ ಆಗಿರುವೆ !

(36–40)

ಟಿ॥ ಪರಮಾತ್ಮನು ಜಗತ್ಕಾರಣನು. ಅದರ ಒಡೆಯನು. ಇಷ್ಟೇ ಅಲ್ಲ ; ಆತನು ಸರ್ವಸ್ವರೂಪನೂ ಸರ್ವವ್ಯಾಪಿಯೂ ಸರ್ವವೂ ಆಗಿರುತ್ತಾನೆ. ಆತನಲ್ಲಿಲ್ಲದ ಶಕ್ತಿಯೇ ಇಲ್ಲ.

ಸಖೇತಿ ಮತ್ವಾ ಪ್ರಸಭಂ ಯದುಕ್ತಂ ।
ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಂ ।
ಮಯಾ ಪ್ರಮಾದಾತ್ಪ್ರಣಯೇನ ವಾಪಿ ॥ 41 ॥

ಯಚ್ಚಾವಹಾಸಾರ್ಥಮಸತ್ಕೃತೋಽಸಿ ।
ವಿಹಾರಶಯ್ಯಾಸನಭೋಜನೇಷು ।
ಏಕೋಽಥವಾಪ್ಯಚ್ಯುತ ತತ್ಸಮಕ್ಷಂ ।
ತತ್ಕ್ಷಾಮಯೇ ತ್ವಾಮಹಮಪ್ರಮೇಯಮ್ ॥ 42 ॥

ಪಿತಾಸಿ ಲೋಕಸ್ಯ ಚರಾಚರಸ್ಯ ।
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ ।
ಲೋಕತ್ರಯೇಽಪ್ಯಪ್ರತಿಮಪ್ರಭಾವ ॥ 43 ॥

ತಸ್ಮಾತ್ಪ್ರಣಮ್ಯ ಪ್ರಣಿಧಾಯ ಕಾಯಂ ।
ಪ್ರಸಾದಯೇ ತ್ವಾಮಹಮೀಶಮೀಡ್ಯಮ್ ।
ಪಿತೇವ ಪುತ್ರಸ್ಯ ಸಖೇವ ಸಖ್ಯುಃ ।
ಪ್ರಿಯಃ ಪ್ರಿಯಾಯಾರ್ಹಸಿ ದೇವ ಸೋಢುಮ್ ॥ 44 ॥

ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ ।
ಭಯೇನ ಚ ಪ್ರವ್ಯಥಿತಂ ಮನೋ ಮೇ ।
ತದೇವ ಮೇ ದರ್ಶಯ ದೇವ ರೂಪಂ ।
ಪ್ರಸೀದ ದೇವೇಶ ಜಗನ್ನಿವಾಸ ॥ 45 ॥

**ಕಿರೀಟಿನಂ ಗದಿನಂ ಚಕ್ರಹಸ್ತ–**
**ಮಿಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ ।**
**ತೇನೈವ ರೂಪೇಣ ಚತುರ್ಭುಜೇನ ।**
**ಸಹಸ್ರಬಾಹೋ ಭವ ವಿಶ್ವಮೂರ್ತೇ ॥ 46 ॥**

ನಿನ್ನ ಈ ಮಹಿಮೆಯನ್ನರಿಯದೆ ನೀನು ನನ್ನ ಗೆಳೆಯನೆಂದು ಭಾವಿಸಿ ಚಿತ್ತವನ್ನು ಎತ್ತಲೋ ಇಟ್ಟು ಅಥವಾ ಸ್ನೇಹಭಾವದಿಂದ 'ಎಲೋ ಕೃಷ್ಣ', 'ಎಲೋ ಯಾದವ'. 'ಎಲೋ ಗೆಳೆಯ'– ಎಂದು ತಿರಸ್ಕಾರದಿಂದ ಯಾವ ಯಾವ ಮಾತನ್ನು ಆಡಿರುವೆನೋ, ಮತ್ತು ಓಡಾಡುವಾಗಲೂ ಮಲಗಿರುವಾಗಲೂ ಕುಳಿತಿರುವಾಗಲೂ ಊಟಮಾಡುವಾಗಲೂ ನಾನೊಬ್ಬನೇ ಇದ್ದಾಗ ಅಥವಾ ನಿನ್ನೆದುರಿಗೇ ಏನೇನು ನಿನಗೆ ಅನಾದರಮಾಡಿರುವೆನೋ, ಎಲೈ ಅಚ್ಯುತನೆ, ಅವನ್ನೆಲ್ಲ ಕ್ಷಮಿಸಬೇಕೆಂದು, ಪ್ರಮಾಣಾತೀತನಾದ ನಿನ್ನನ್ನು ಬೇಡಿಕೊಳ್ಳುತ್ತೇನೆ. ನೀನು ಸ್ಥಾವರಜಂಗಮಲೋಕಕ್ಕೆ ತಂದೆಯೂ ಪೂಜ್ಯನೂ ದೊಡ್ಡಗುರುವೂ

ಆಗಿರುತ್ತೀಯೆ : ಮೂರುಲೋಕದಲ್ಲಿಯೂ ನಿನಗೆ ಸಮನಾದವನೇ ಇರುವದಿಲ್ಲ, ಹೀಗಿರುವಲ್ಲಿ, ಎಲೈ ಹೋಲಿಕೆಯನ್ನು ಕೊಡುವದಕ್ಕೆ ಆಗದಂಥ ಪ್ರಭಾವವುಳ್ಳಾತನೆ, ನಿನಗಿಂತ ಬೇರೆ ದೊಡ್ಡವನು ಎಲ್ಲಿದ್ದಾನು ? ಆದ್ದರಿಂದ ಲೋಕೇಶನಾಗಿಯೂ ಸ್ತುತಿಗೆ ತಕ್ಕವನಾಗಿಯೂ ಇರುವ ನಿನಗೆ ಮೈಯೊಡ್ಡಿ ನಮಸ್ಕರಿಸಿ ಪ್ರಸನ್ನನಾಗೆಂದು ಬೇಡಿಕೊಳ್ಳುತ್ತೇನೆ. ದೇವನೆ, ತಂದೆಯು ಮಗನ ತಪ್ಪನ್ನೂ ಗೆಳೆಯನು ಗೆಳೆಯನ ತಪ್ಪನ್ನೂ ಪ್ರೀತಿಯ ಗಂಡನು ತನ್ನ ನಲ್ಲಳ ತಪ್ಪನ್ನೂ ಮನ್ನಿಸುವಂತೆ ನನ್ನ ತಪ್ಪನ್ನು ನೀನು ಮನ್ನಿಸಬೇಕು. ಹೀಗೆ ಎಂದೂ ಕಾಣದ ಈ ರೂಪವನ್ನು ನೋಡಿ ನನಗೆ ರೋಮಾಂಚನವಾಗಿರುವದು, ಮನಸ್ಸು ಅಂಜಿಕೆಯಿಂದ ಬಹುವಾಗಿ ತಲ್ಲಣಿಸುತ್ತಿದೆ. ಎಲೈ ದೇವನೆ, ಆ ಮುನ್ನಿನ ರೂಪವನ್ನೇ ನನಗೆ ತೋರಿಸು ; ದೇವತೆಗಳೊಡೆಯನೆ, ಜಗತ್ತಿಗೆಲ್ಲ ಆಸರೆಯಾದವನೆ, ಪ್ರಸನ್ನನಾಗು. ಕಿರೀಟವನ್ನು ಧರಿಸಿ ಗದೆಯನ್ನು ಹಿಡಿದುಕೊಂಡು ಕೈಯಲ್ಲಿ ಚಕ್ರವನ್ನು ಧರಿಸಿರುವ ನಿನ್ನನ್ನು ಮುನ್ನಿನಂತೆಯೇ ನೋಡಲಿಚ್ಛಿಸುತ್ತೇನೆ. ಸಾವಿರಾರು ತೋಳು

ಗಳುಳ್ಳಾತನೆ, ವಿಶ್ವಮೂರ್ತಿಯೆ, ಆ ನಾಲ್ಕು ತೋಳಿನ ರೂಪದಿಂದಲೇ ಕೂಡಿದವನಾಗು. (41–46)

ಟಿ॥ ಪರಮಾತ್ಮನು ತನ್ನ ಸ್ವರೂಪದಿಂದ ಯಾವ ರೂಪವೂ ಇಲ್ಲದವನಾದರೂ ತನ್ನಿಂದಲೇ ಆಗಿರುವ ವಿಭೂತಿಗಳ ರೂಪದಲ್ಲಿ ವಿಶ್ವರೂಪನಾಗಿರುವನು. ವಿಶ್ವವೇ ತಾನಾಗಿರುವೆನೆಂದು ಮನಗಾಣಿಸುವ ರೂಪವನ್ನು ಅರ್ಜುನನಿಗಾಗಿ ಭಗವಂತನು ತನ್ನ ನಿತ್ಯಸಿದ್ಧವಾದ ಯೋಗಮಹಿಮೆಯಿಂದ ತೋರಿಸಲು ಅವನು ಕೃಷ್ಣನೆಂಬ ಮನುಷ್ಯನು ಎಂಬ ಭ್ರಾಂತಿಯು ತೊಲಗಿತು. ಆದರೆ ಜಗತ್ತೆಲ್ಲವನ್ನೂ ಸಂಹರಿಸುವ ಲೀಲಾಮೂರ್ತಿಯನ್ನು ಕಂಡು ಅಂಜಿದ ಅರ್ಜುನನು ಮೊದಲಿನ ಮನುಷ್ಯರೂಪವನ್ನೇ ತೋರಿಸೆಂದು ಬೇಡಿಕೊಂಡಿರುತ್ತಾನೆ.

ಶ್ರೀಭಗವಾನುವಾಚ –

ಮಯಾ ಪ್ರಸನ್ನೇನ ತವಾರ್ಜುನೇದಂ।
ರೂಪಂ ಪರಂ ದರ್ಶಿತಮಾತ್ಮಯೋಗಾತ್ ।

ತೇಜೋಮಯಂ ವಿಶ್ವಮನನ್ತಮಾದ್ಯಂ।
ಯನ್ಮೇ ತ್ವದನ್ಯೇನ ನ ದೃಷ್ಟಪೂರ್ವಮ್ ॥ 47 ॥

ನ ವೇದಯಜ್ಞಾಧ್ಯಯನೈರ್ನ ದಾನೈ–
ರ್ನ ಚ ಕ್ರಿಯಾಭಿರ್ನ ತಪೋಭಿರುಗ್ರೈಃ।
ಏವಂರೂಪಃ ಶಕ್ಯ ಅಹಂ ನೃಲೋಕೇ।
ದ್ರಷ್ಟುಂ ತ್ವದನ್ಯೇನ ಕುರುಪ್ರವೀರ ॥ 48 ॥

ಶ್ರೀಭಗವಂತನ ಉತ್ತರ :

ಅರ್ಜುನನೆ, ನಾನು ನಿನ್ನಲ್ಲಿ ಪ್ರಸನ್ನನಾಗಿ ಈ ತೇಜೋಮಯವಾಗಿಯೂ ವಿಶ್ವಾಕಾರವಾಗಿಯೂ ಅನಂತವಾಗಿಯೂ ಮೊಟ್ಟಮೊದಲನೆಯದಾಗಿಯೂ ಇರುವ ಈ ಉತ್ಕೃಷ್ಟವಾದ ರೂಪವನ್ನು ನನ್ನ ಮಹಿಮೆಯಿಂದ ತೋರಿಸಿರುತ್ತೇನೆ. ಈ ನನ್ನ ರೂಪವನ್ನು ನಿನ್ನ ಹೊರತು ಮತ್ತೆ ಯಾರೂ ಈವರೆಗೆ ನೋಡಿರುವದಿಲ್ಲ . ಎಲೈ ಕುರುವಂಶದವರಲ್ಲೆಲ್ಲ ಅತಿವೀರನಾದವನೆ, ಈ

ರೂಪದಲ್ಲಿ ನನ್ನನ್ನು ಮನುಷ್ಯಲೋಕದಲ್ಲಿ ನಿನ್ನ ಹೊರತು ಮತ್ತೊಬ್ಬನು ನೋಡುವದು ವೇದಗಳ ಅಧ್ಯಯನದಿಂದಾಗಲಿ, ಯಜ್ಞಗಳ ಪರಿಚಯದಿಂದಲಾಗಲಿ, ಆಗಲಾರದು ; ದಾನಗಳಿಂದಲೂ ಆಗಲಾರದು ; ಅಗ್ನಿಹೋತ್ರಾದಿಗಳಿಂದಲೂ ಆಗಲಾರದು ; ಉಗ್ರವಾದ ತಪಸ್ಸುಗಳಿಂದಲೂ ಆಗಲಾರದು. (47–48)

ಟೀ॥ ಯಜ್ಞ, ದಾನ, ತಪಸ್ಸು – ಇವು ವೇದವಿಹಿತವಾದ ಮುಖ್ಯಕರ್ಮಗಳಾದರೂ ಬರಿಯ ಅವುಗಳಿಂದಲೇ ಭಗವಂತನ ದರ್ಶನವಾಗಲಾರದು.

**ಮಾ ತೇ ವ್ಯಥಾ ಮಾ ಚ ವಿಮೂಢಭಾವೋ ।**
**ದೃಷ್ಟ್ವಾ ರೂಪಂ ಘೋರಮೀದೃಙ್ಮಮೇದಮ್ ।**
**ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ ।**
**ತದೇವ ಮೇ ರೂಪಮಿದಂ ಪ್ರಪಶ್ಯ ॥ 49 ॥**

ಈ ನನ್ನ ಭಯಂಕರವಾದ ರೂಪವನ್ನು ಕಂಡು ನೀನು ತತ್ತರಿಸದಿರು, ಬೆಪ್ಪಾಗದಿರು. ಅಂಜಿಕೆಯನ್ನಳಿದು ಶಾಂತಚಿತ್ತನಾಗಿ ಇರ್ಗೊ. ಆ ಮುನ್ನಿನ ರೂಪವನ್ನೇ ನೋಡು. (49)

ಸಞ್ಜಯ ಉವಾಚ –

ಇತ್ಯರ್ಜುನಂ ವಾಸುದೇವಸ್ತಥೋಕ್ತ್ವಾ ।
ಸ್ವಕಂ ರೂಪಂ ದರ್ಶಯಾಮಾಸ ಭೂಯಃ ।
ಆಶ್ವಾಸಯಾಮಾಸ ಚ ಭೀತಮೇನಂ ।
ಭೂತ್ವಾ ಪುನಃ ಸೌಮ್ಯವಪುರ್ಮಹಾತ್ಮಾ ॥ 50 ॥

ಸಂಜಯನು ಹೇಳಿದ್ದು:

ವಾಸುದೇವನು ಅರ್ಜುನನಿಗೆ ಹೀಗೆಂದು ಹೇಳಿ ಮತ್ತೆ ತನ್ನ ರೂಪವನ್ನೇ ತೋರಿಸಿದನು. ಮತ್ತು ಆ ಮಹಾತ್ಮನು ಮರಳಿಯೂ ತನ್ನ ಸೌಮ್ಯವೇಷವನ್ನು

ತಳೆದವನಾಗಿ ಹೆದರಿದ್ದ ಈ ಅರ್ಜುನನನ್ನು ಸಮಾಧಾನಗೊಳಿಸಿದನು. (50)

ಅರ್ಜುನ ಉವಾಚ –

ದೃಷ್ಟ್ವೇದಂ ಮಾನುಷಂ ರೂಪಂ । ತವ ಸೌಮ್ಯಂ ಜನಾರ್ದನ ।
ಇದಾನೀಮಸ್ಮಿ ಸಂವೃತ್ತಃ । ಸಚೇತಾಃ ಪ್ರಕೃತಿಂ ಗತಃ ॥ 51 ॥

ಅರ್ಜುನನು ಹೇಳಿದ್ದು:

ಜನಾರ್ದನನೆ, ಈ ನಿನ್ನ ಪ್ರಸನ್ನವಾದ ಮಾನುಷವಾದ ರೂಪವನ್ನು ಕಂಡು ಈಗ ಸಮಾಧಾನಚಿತ್ತನಾದೆನು, ಸ್ವಭಾವಸ್ಥಿತಿಯನ್ನು ಹೊಂದಿದೆನು. (51)

ಶ್ರೀ ಭಗವಾನುವಾಚ –

ಸುದುರ್ದರ್ಶಮಿದಂ ರೂಪಂ । ದೃಷ್ಟವಾನಸಿ ಯನ್ಮಮ ।
ದೇವಾ ಅಪ್ಯಸ್ಯ ರೂಪಸ್ಯ । ನಿತ್ಯಂ ದರ್ಶನಕಾಙ್ಕ್ಷಿಣಃ ॥ 52 ॥

ನಾಹಂ ವೇದೈರ್ನ ತಪಸಾ । ನ ದಾನೇನ ನ ಚೇಜ್ಯಯಾ ।
ಶಕ್ಯ ಏವಂವಿಧೋ ದ್ರಷ್ಟುಂ । ದೃಷ್ಟವಾನಸಿ ಮಾಂ ಯಥಾ ॥ 53 ॥
ಭಕ್ತ್ಯಾ ತ್ವನನ್ಯಯಾ ಶಕ್ಯ । ಅಹಮೇವಂವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ । ಪ್ರವೇಷ್ಟುಂ ಚ ಪರನ್ತಪ ॥ 54 ॥

ಶ್ರೀಭಗವಂತನು ಹೇಳಿದ್ದು:

ನೋಡುವದಕ್ಕೆ ಬಹುಕಷ್ಟಸಾಧ್ಯವಾದ ಈ ಯಾವ ನನ್ನ ರೂಪವನ್ನು ನೀನು ನೋಡಿದೆಯೋ, ಈ ರೂಪವನ್ನು ದೇವತೆಗಳು ಕೂಡ ನೋಡಬೇಕೆಂದು ಯಾವಾಗಲೂ ಹಾತುವರಿಯುತ್ತಿರುವರು. ನನ್ನನ್ನು ನೀನು ಯಾವ ರೂಪದಲ್ಲಿ ನೋಡಿದೆಯೋ ಆ ರೂಪದಲ್ಲಿ ನೋಡುವದು ವೇದಾಧ್ಯಯನದಿಂದ ಆಗಲಾರದು, ತಪಸ್ಸಿನಿಂದಲೂ ಆಗಲಾರದು, ದಾನದಿಂದಲೂ ಆಗಲಾರದು, ಯಜ್ಞದಿಂದಲೂ ಆಗಲಾರದು. ಆದರೆ ಅರ್ಜುನನೆ, ಪರಂತಪನೆ, ಅನನ್ಯವಾದ ಭಕ್ತಿಯಿಂದ ಮಾತ್ರ ಈ ರೂಪದಲ್ಲಿ ನನ್ನನ್ನು ಅರಿತುಕೊಳ್ಳುವದಕ್ಕೂ ಸರಿಯಾಗಿ

ಹಾಗೆಯೇ ನೋಡುವದಕ್ಕೂ ನನ್ನಲ್ಲಿಯೇ ಸಾಯುಜ್ಯವನ್ನು ಹೊಂದುವದಕ್ಕೂ ಆಗುತ್ತದೆ. (52–54)

ಟಿ॥ ಬರಿಯ ಕರ್ಮದಿಂದ ಆಗದ್ದು ಭಕ್ತಿಯಿಂದ ಆಗುತ್ತದೆ ; ಅದ್ದರಿಂದ ಭಕ್ತಿಗಾಗಿಯೇ ಕರ್ಮವನ್ನು ಮಾಡಬೇಕು.

**ಮತ್ಕರ್ಮಕೃನ್ಮತ್ಪರಮೋ । ಮದ್ಭಕ್ತಃ ಸಙ್ಗವರ್ಜಿತಃ ।**
**ನಿರ್ವೈರಃ ಸರ್ವಭೂತೇಷು । ಯಃ ಸ ಮಾಮೇತಿ ಪಾಣ್ಡವ ॥ 55 ॥**

**ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ**
**ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ**
**ವಿಶ್ವರೂಪದರ್ಶನಯೋಗೋ ನಾಮೈಕಾದಶೋಽಧ್ಯಾಯಃ**

ಎಲೈ ಪಾಂಡವನೆ, ಯಾವನು ನನ್ನ ಕರ್ಮವನ್ನೇ ಮಾಡುತ್ತಾ, ನನ್ನನ್ನೇ ಪರಗತಿಯೆಂದು ತಿಳಿದು, ನನ್ನ ಭಕ್ತಿಗಾಗಿ, ಸಂಗವನ್ನು ತೊರೆದು, ಯಾವ

ಪ್ರಾಣಿಗಳಲ್ಲಿಯೂ ಹಗೆತನವಿಲ್ಲದೆ ಅವುಗಳನ್ನು ಪ್ರೀತಿಸುತ್ತಾ ಇರುವನೋ ಅವನು ನನ್ನನ್ನು ಸೇರುವನು. (55)

ಟಿ॥ ಗೀತೋಪದಿಷ್ಟವಾದ ಸಾಧನಗಳ ತಿರುಳೇ ಇದು.

ವಿಶ್ವರೂಪದರ್ಶನಯೋಗವೆಂಬ ಹನ್ನೊಂದನೆಯ ಅಧ್ಯಾಯವು ಮುಗಿಯಿತು.

-------

# ಅಥ ದ್ವಾದಶೋಽಧ್ಯಾಯಃ

ಅರ್ಜುನ ಉವಾಚ –

ಏವಂ ಸತತಯುಕ್ತಾ ಯೇ । ಭಕ್ತಾಸ್ತ್ವಾಂ ಪರ್ಯುಪಾಸತೇ ।
ಯೇ ಚಾಪ್ಯಕ್ಷರಮವ್ಯಕ್ತಂ । ತೇಷಾಂ ಕೇ ಯೋಗವಿತ್ತಮಾಃ ॥ 1 ॥

ಶ್ರೀಭಗವಾನುವಾಚ –

ಮಯ್ಯಾವೇಶ್ಯ ಮನೋ ಯೇ ಮಾಂ । ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾ–ಸ್ತೇ ಮೇ ಯುಕ್ತತಮಾ ಮತಾಃ ॥ 2 ॥

ಯೇ ತ್ವಕ್ಷರಮನಿರ್ದೇಶ್ಯ–ಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿನ್ತ್ಯಂ ಚ । ಕೂಟಸ್ಥಮಚಲಂ ಧ್ರುವಮ್ ॥ 3 ॥

ಸನ್ನಿಯಮ್ಯೇನ್ದ್ರಿಯಗ್ರಾಮಂ । ಸರ್ವತ್ರ ಸಮಬುದ್ಧಯಃ ।
ತೇ ಪ್ರಾಪ್ನುವನ್ತಿ ಮಾಮೇವ । ಸರ್ವಭೂತಹಿತೇ ರತಾಃ ॥ 4 ॥

# ಹನ್ನೆರಡನೆಯ ಅಧ್ಯಾಯ

**ಅರ್ಜುನನು ಕೇಳಿದ್ದು:**

ಯಾವ ಭಕ್ತರು ಹೀಗೆ ಯಾವಾಗಲೂ ನಿನ್ನ ಸೇವೆಯಲ್ಲಿಯೇ ತೊಡಗಿದವರಾಗಿ ನಿನ್ನನ್ನು ಉಪಾಸನೆಮಾಡುತ್ತಿರುವರೋ ಅವರು ಮತ್ತು ಯಾರು ಅವ್ಯಕ್ತವಾಗಿರುವ ಅಕ್ಷರ (ಬ್ರಹ್ಮ)ವನ್ನು ಉಪಾಸನೆಮಾಡುತ್ತಿರುವರೋ ಅವರು–ಇವರಿಬ್ಬರಲ್ಲಿ ಯಾರು ಹೆಚ್ಚಿನ ಯೋಗಜ್ಞರು? (1)

**ಶ್ರೀಭಗವಂತನ ಉತ್ತರ:**

ಯಾರು ನನ್ನಲ್ಲಿಯೇ ಮನಸ್ಸಿಟ್ಟು ಹೆಚ್ಚಿನ ಶ್ರದ್ಧೆಯಿಂದ ನನ್ನ ಸೇವೆಯಲ್ಲಿಯೇ ತೊಡಗಿ ನನ್ನನ್ನೇ ಉಪಾಸನೆಮಾಡುತ್ತಿರುವರೋ ಅವರೇ ಹೆಚ್ಚಿನ ಯೋಗಿಗಳೆಂದು ನನ್ನ ಅಭಿಪ್ರಾಯ. ಆದರೆ ಯಾರು ಇಂದ್ರಿಯ ಸಮೂಹವನ್ನು ಬಿಗಿಹಿಡಿದುಕೊಂಡು ಎಲ್ಲೆಲ್ಲಿಯೂ ಸಮಬುದ್ಧಿಯುಳ್ಳವರಾಗಿ ಸಕಲಪ್ರಾಣಿಗಳಿಗೂ ಹಿತವನ್ನು ಮಾಡುವದರಲ್ಲಿ ನಿರತರಾಗಿ ಸರ್ವವ್ಯಾಪಿಯಾಗಿಯೂ ಮನಸ್ಸಿನಿಂದ ಚಿಂತಿಸುವದಕ್ಕೆ ಆಗದ್ದಾಗಿಯೂ ಒಂದೇ ರೂಪದಿಂದಿ

ರುವದಾಗಿಯೂ ಅಲುಗಾಡದೆ ನಿತ್ಯವಾಗಿರುವದಾಗಿಯೂ ಇರುವ, ಹೀಗೆಂದು ಗೊತ್ತುಪಡಿಸಿ ಮಾತಿನಿಂದ ತಿಳಿಸಿ ಹೇಳಲಳವಲ್ಲದ, ಅವ್ಯಕ್ತವಾದ ಅಕ್ಷರಬ್ರಹ್ಮ ವನ್ನು ಉಪಾಸನೆಮಾಡುತ್ತಿರುವರೋ, ಅವರು ನನ್ನನ್ನೇ ಪಡೆಯುವರು. (2–4)

ಟಿ॥ ನಿರ್ಗುಣಸ್ವರೂಪವನ್ನು ಉಪಾಸನೆಮಾಡುವವರಿಗಿಂತ ಸಗುಣರೂಪ ವನ್ನು ಉಪಾಸನೆಮಾಡುವವರು ಯೋಗವನ್ನು ಚೆನ್ನಾಗಿ ಬಲ್ಲವರು; ಏಕೆಂದರೆ ಅವರ ಸಾಧನೆಯೇ ಸುಲಭವಾದದ್ದು.

ಕ್ಲೇಶೋಽಧಿಕತರಸ್ತೇಷಾ–ಮವ್ಯಕ್ತಾಸಕ್ತಚೇತಸಾಮ್ ।
ಅವ್ಯಕ್ತಾ ಹಿ ಗತಿರ್ದುಃಖಂ। ದೇಹವದ್ಭಿರವಾಪ್ಯತೇ ॥ 5 ॥

ಯೇ ತು ಸರ್ವಾಣಿ ಕರ್ಮಾಣಿ । ಮಯಿ ಸಂನ್ಯಸ್ಯ ಮತ್ಪರಾಃ।
ಅನನ್ಯೇನೈವ ಯೋಗೇನ। ಮಾಂ ಧ್ಯಾಯನ್ತ ಉಪಾಸತೇ ॥ 6 ॥

ತೇಷಾಮಹಂ ಸಮುದ್ಧರ್ತಾ। ಮೃತ್ಯುಸಂಸಾರಸಾಗರಾತ್ ।
ಭವಾಮಿ ನ ಚಿರಾತ್ಪಾರ್ಥ। ಮಯ್ಯಾವೇಶಿತಚೇತಸಾಮ್ ॥ 7 ॥

ಅವ್ಯಕ್ತಬ್ರಹ್ಮದಲ್ಲಿಯೇ ಅಂಟಿರುವ ಚಿತ್ತದ ಆ ಜನರಿಗೆ ಕ್ಲೇಶವು ಹೆಚ್ಚು: ಏಕೆಂದರೆ ಅವ್ಯಕ್ತವಾದ ಈ ಗತಿಯನ್ನು ಪಡೆಯುವದು ದೇಹಾಭಿಮಾನಿಗಳಿಗೆ ಕಷ್ಟದಿಂದ ದಕ್ಕುವದು. ಆದರೆ ಯಾರು ಸರ್ವಕರ್ಮಗಳನ್ನೂ ನನ್ನಲ್ಲಿ ಸಮರ್ಪಣೆಮಾಡಿ ನನ್ನಲ್ಲಿಯೇ ತಾತ್ಪರ್ಯವಿಟ್ಟು ಮತ್ತೊಂದು ಆಲಂಬನವಿಲ್ಲದ ಯೋಗದಿಂದ ನನ್ನನ್ನು ಚಿಂತಿಸುತ್ತಾ ಉಪಾಸನೆಮಾಡುತ್ತಿರುವರೋ ಅಂಥ ನನ್ನಲ್ಲಿಯೇ ಇಟ್ಟ ಚಿತ್ತವುಳ್ಳ ಜನರನ್ನು ನಾನು ಸಾವಿನಿಂದೊಡಗೂಡಿದ ಸಂಸಾರವೆಂಬ ಸಾಗರದಿಂದ ಬೇಗನೆ ಉದ್ಧಾರಮಾಡುವನಾಗುವೆನು. (5–7)

ಟಿ॥ ನಿರ್ಗುಣೋಪಾಸಕರು ತಾವೇ ಕಷ್ಟಪಟ್ಟು ಪರಗತಿಯನ್ನು ಕಂಡುಕೊಳ್ಳಬೇಕು ; ಸಗುಣೋಪಾಸಕರನ್ನು ಭಗವಂತನು ಉದ್ಧಾರಮಾಡುವನು. ಆದ್ದರಿಂದ ಅವರ ಸಾಧನವು ಹೆಚ್ಚು ಸುಲಭವಾದದ್ದು.

ಮಯ್ಯೇವ ಮನ ಆಧತ್ಸ್ವ । ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ । ಅತ ಊರ್ಧ್ವಂ ನ ಸಂಶಯಃ ॥ 8 ॥

ಅಥ ಚಿತ್ತಂ ಸಮಾಧಾತುಂ । ನ ಶಕ್ನೋಷಿ ಮಯಿ ಸ್ಥಿರಮ್ ।
ಅಭ್ಯಾಸಯೋಗೇನ ತತೋ । ಮಾಮಿಚ್ಛಾಪ್ತುಂ ಧನಞ್ಜಯ ॥ 9 ॥

ಅಭ್ಯಾಸೇಽಪ್ಯಸಮರ್ಥೋಽಸಿ । ಮತ್ಕರ್ಮಪರಮೋ ಭವ ।
ಮದರ್ಥಮಪಿ ಕರ್ಮಾಣಿ । ಕುರ್ವನ್ಸಿದ್ಧಿಮವಾಪ್ಸ್ಯಸಿ ॥ 10 ॥

ಅಥೈತದಪ್ಯಶಕ್ತೋಽಸಿ । ಕರ್ತುಂ ಮದ್ಯೋಗಮಾಶ್ರಿತಃ ।
ಸರ್ವಕರ್ಮಫಲತ್ಯಾಗಂ । ತತಃ ಕುರು ಯತಾತ್ಮವಾನ್ ॥ 11 ॥

ನನ್ನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊ. ನನ್ನಲ್ಲಿಯೇ ಬುದ್ಧಿಯನ್ನು ಇಟ್ಟುಕೊ; ಹಾಗಾದರೆ ಇನ್ನುಮೇಲೆ ನನ್ನಲ್ಲಿಯೇ ವಾಸಮಾಡುವೆ, ಸಂಶಯವಿಲ್ಲ. ಧನಂಜಯನೆ, ಚಿತ್ತವನ್ನು ಅಲುಗಾಡದಂತೆ ನನ್ನಲ್ಲಿಯೇ ನಿಲ್ಲಿಸಿಕೊಳ್ಳುವದಕ್ಕೆ ನಿನ್ನಿಂದಾಗದೆ ಹೋದರೆ ಅಭ್ಯಾಸಯೋಗದಿಂದ ನನ್ನನ್ನು ಪಡೆಯುವದಕ್ಕೆ ಇಚ್ಛೆ ಮಾಡು. ಅಭ್ಯಾಸಮಾಡುವದಕ್ಕೂ ನಿನ್ನ ಕೈಯಲ್ಲಾಗದಿದ್ದರೆ ನನಗಾಗಿ ಕರ್ಮ ಮಾಡುವದರಲ್ಲಿಯೇ ತಾತ್ಪರ್ಯವುಳ್ಳವನಾಗಿರು : ನನಗಾಗಿ ಕರ್ಮಗಳನ್ನು

ಮಾಡುತ್ತಿದ್ದರೂ ಸಿದ್ಧಿಯನ್ನು ಪಡೆಯುವೆ. ನನ್ನ ಯೋಗವನ್ನಾಶ್ರಯಿಸಿ ಇದನ್ನು ಮಾಡುವದಕ್ಕೂ ನಿನ್ನಿಂದಾಗದಿದ್ದರೆ, ಮನಸ್ಸನ್ನು ಬಿಗಿಹಿಡಿದುಕೊಂಡು ಸರ್ವಕರ್ಮಗಳ ಫಲತ್ಯಾಗವನ್ನು ಮಾಡು. (8–11)

ಟಿ|| ಇದನ್ನು ಮಾಡತಕ್ಕದ್ದೆಂಬ ಬುದ್ಧಿಯಿಂದ ಫಲಾಸಕ್ತಿಯಿಲ್ಲದೆ ಮಾಡುವದು ಸಾಧನದ ಮೊದಲನೆಯ ಮೆಟ್ಟಿಲು ; ಮಾಡುವ ಕರ್ಮಗಳನ್ನು ಭಗವಂತನಿಗಾಗಿ ಮಾಡುವದು ಎರಡನೆಯ ಮೆಟ್ಟಿಲು. ಇವೆರಡೂ ಸೇರಿ ಕರ್ಮಯೋಗವಾಗುತ್ತದೆ. ಪರಮಾತ್ಮನಲ್ಲಿಯೇ ಚಿತ್ತವನ್ನಿಡುವ ಅಭ್ಯಾಸವನ್ನು ಮಾಡುವದು ಮೂರನೆಯ ಮೆಟ್ಟಿಲು ; ಇವರಲ್ಲಿ ಧ್ಯಾನಯೋಗವು ಅಡಕವಾಗಿದೆ. ಪರಮಾತ್ಮನಲ್ಲಿಯೇ ಚಿತ್ತವನ್ನು ನಿಲ್ಲಿಸಿಕೊಂಡುಬಿಡುವದು ನಾಲ್ಕನೆಯ ಮೆಟ್ಟಿಲು ; ಇದೇ ಭಕ್ತಿಯೋಗವು. ಇದೆಲ್ಲವನ್ನೂ ಸೇರಿಸಿ ಒಟ್ಟಾಗಿ ಕರ್ಮಯೋಗವೆಂದೇ ಗೀತೆಯಲ್ಲಿ ಬರೆದಿದೆ. ನಾಲ್ಕನೆಯ ಮೆಟ್ಟಿಲಿಗೆ ಮುಟ್ಟಿದರೆ ಕರ್ಮಯೋಗದ ಫಲವಾದ ಜ್ಞಾನನಿಷ್ಠಾಯೋಗ್ಯತೆಯು ಸಿಕ್ಕುವದು ; ಇಲ್ಲದಿದ್ದರೆ ಕ್ರಮಮುಕ್ತಿಯಾಗುವದು. 18ನೆಯ ಅಧ್ಯಾಯದಲ್ಲಿ 45 ರಿಂದ 49ರ ವರೆಗಿನ ಶ್ಲೋಕಗಳನ್ನು ನೋಡಿ.

ಶ್ರೇಯೋ ಹಿ ಜ್ಞಾನಮಭ್ಯಾಸಾ–ಜ್ಜ್ಞಾನಾದ್ಧ್ಯಾನಂ ವಿಶಿಷ್ಯತೇ ।
ಧ್ಯಾನಾತ್ ಕರ್ಮಫಲತ್ಯಾಗ–ಸ್ತ್ಯಾಗಾಚ್ಛಾನ್ತಿರನನ್ತರಮ್ ॥ 12 ॥

ಅಭ್ಯಾಸಕ್ಕಿಂತ ಜ್ಞಾನವು ಮೇಲು, ಜ್ಞಾನಕ್ಕಿಂತ ಧ್ಯಾನವು ಮೇಲು, ಧ್ಯಾನಕ್ಕಿಂತ ಕರ್ಮಫಲತ್ಯಾಗವು ಮೇಲು, ಕರ್ಮತ್ಯಾಗದಿಂದ ಕೂಡಲೆ ಶಾಂತಿಯು ದೊರೆಯುವದು. (12)

ಟೀ॥ ತಿಳಿಯದೆ ಅಭ್ಯಾಸಯೋಗವನ್ನು ಮಾಡುವದಕ್ಕಿಂತ ತಿಳಿದುಮಾಡುವದು ಮೇಲು ; ಈ ಅಭ್ಯಾಸವು ಬಲಿತು ಪರಮಾತ್ಮಧ್ಯಾನವೇ ಕೈವಶವಾದರೆ ಸರ್ವಕಾಮತ್ಯಾಗವೂ ಆಗಿ ಮೋಕ್ಷವೇ ದೊರಕುತ್ತದೆ. ಆದ್ದರಿಂದ ಮೊದಲಿನಿಂದಲೂ ಸಾಧಕನು ಕಾಮತ್ಯಾಗವನ್ನು ಮಾಡಬೇಕು ; ಇದಕ್ಕಾಗಿ ಕರ್ಮತ್ಯಾಗವನ್ನು ಅಭ್ಯಾಸಮಾಡಬೇಕು.

ಅದ್ವೇಷ್ಟಾ ಸರ್ವಭೂತಾನಾಂ । ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಙ್ಕಾರಃ । ಸಮದುಃಖಸುಖಃ ಕ್ಷಮೀ ॥ 13 ॥
ಸನ್ತುಷ್ಟಃ ಸತತಂ ಯೋಗೀ । ಯತಾತ್ಮಾ ದೃಢನಿಶ್ಚಯಃ ।
ಮಯ್ಯರ್ಪಿತಮನೋಬುದ್ಧಿ–ರ್ಯೋ ಮದ್ಭಕ್ತಃ ಸ ಮೇ ಪ್ರಿಯಃ ॥ 14 ॥

ಯಸ್ಮಾನ್ನೋದ್ವಿಜತೇ ಲೋಕೋ। ಲೋಕಾನ್ನೋದ್ವಿಜತೇ ಚ ಯಃ।
ಹರ್ಷಾಮರ್ಷಭಯೋದ್ವೇಗೈ–ರ್ಮುಕ್ತೋ ಯಃ ಸ ಚ ಮೇ ಪ್ರಿಯಃ ॥ 15 ॥

ಅನಪೇಕ್ಷಃ ಶುಚಿರ್ದಕ್ಷ–ಉದಾಸೀನೋ ಗತವ್ಯಥಃ।
ಸರ್ವಾರಮ್ಭಪರಿತ್ಯಾಗೀ। ಯೋ ಮದ್ಭಕ್ತಃ ಸ ಮೇ ಪ್ರಿಯಃ ॥ 16 ॥

ಯೋ ನ ಹೃಷ್ಯತಿ ನ ದ್ವೇಷ್ಟಿ। ನ ಶೋಚತಿ ನ ಕಾಙ್ಕ್ಷತಿ।
ಶುಭಾಶುಭಪರಿತ್ಯಾಗೀ। ಭಕ್ತಿಮಾನ್ಯಃ ಸ ಮೇ ಪ್ರಿಯಃ ॥ 17 ॥

ಸಮಃ ಶತ್ರೌ ಚ ಮಿತ್ರೇ ಚ। ತಥಾ ಮಾನಾಪಮಾನಯೋಃ।
ಶೀತೋಷ್ಣಸುಖದುಃಖೇಷು। ಸಮಃ ಸಙ್ಗವಿವರ್ಜಿತಃ ॥ 18 ॥

ತುಲ್ಯ ನಿನ್ದಾಸ್ತುತಿರ್ಮೌನೀ। ಸನ್ತುಷ್ಟೋ ಯೇನ ಕೇನಚಿತ್।
ಅನಿಕೇತಃ ಸ್ಥಿರಮತಿ–ರ್ಭಕ್ತಿಮಾನ್ಮೇ ಪ್ರಿಯೋ ನರಃ ॥ 19 ॥

ಯೇ ತು ಧರ್ಮ್ಯಾಮೃತಮಿದಂ। ಯಥೋಕ್ತಂ ಪರ್ಯುಪಾಸತೇ।
ಶ್ರದ್ದಧಾನಾ ಮತ್ಪರಮಾ। ಭಕ್ತಾಸ್ತೇಽತೀವ ಮೇ ಪ್ರಿಯಾಃ ॥ 20 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಭಕ್ತಿಯೋಗೋ ನಾಮ ದ್ವಾದಶೋಽಧ್ಯಾಯಃ

ಯಾವ ಪ್ರಾಣಿಗಳನ್ನೂ ದ್ವೇಷಿಸದೆ, ಮೈತ್ರಿಯೂ ಕರುಣೆಯೂ ಉಳ್ಳವನಾಗಿ, ನನ್ನದೆಂಬುದಿಲ್ಲವೆ ನಾನೆಂಬುದಿಲ್ಲದೆ, ಸುಖದುಃಖಗಳಲ್ಲಿ ಒಂದೇ ಬಗೆಯಿಂದಿರುವ ಮನಸ್ಸುಳ್ಳವನಾಗಿ, ಕ್ಷಮಾಗುಣದಿಂದ ಕೂಡಿ, ಯಾವಾಗಲೂ ಸಂತುಷ್ಟಿಯುಳ್ಳವನಾಗಿ, ಯಾವಾಗಲೂ ಚಿತ್ತಸಮಾಧಾನವುಳ್ಳವನಾಗಿ, ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು, ತತ್ತ್ವದಲ್ಲಿ ಗಟ್ಟಿಯಾಗಿರುವ ನಿಶ್ಚಯವುಳ್ಳವನಾಗಿ, ಮನಸ್ಸನ್ನೂ ಬುದ್ಧಿಯನ್ನೂ ನನಗೆ ಒಪ್ಪಿಸಿ ಯಾವನು ನನ್ನ ಭಕ್ತನಾಗಿರುವನೋ ಅವನು ನನಗೆ ಪ್ರಿಯನು. ಯಾವನಿಂದ ಜನರು ತಳಮಳಗೊಳ್ಳದಿರುವರೋ, ಯಾವನು ಮಿಕ್ಕ ಜನರಿಂದ ತಳಮಳಗೊಳ್ಳದೆ ಇರುವನೋ, ಯಾವನು ಹರ್ಷ, ಅಸಹನೆ, ಅಂಜಿಕೆ, ತಳಮಳ – ಇವುಗಳಿಲ್ಲದವನೋ, ಅವನೂ ನನಗೆ

ಪ್ರಿಯನು. ಯಾವದೊಂದು ಬಯಕೆಯೂ ಇಲ್ಲದೆ ಶುಚಿಯಾಗಿ, ಕಾಲಕ್ಕೆ ತಕ್ಕದನ್ನು ಮಾಡುವ ಸಾಮರ್ಥ್ಯವುಳ್ಳವನಾಗಿ, ಯಾರೊಬ್ಬರ ಪಕ್ಷವನ್ನೂ ಹಿಡಿಯದವನಾಗಿ. ವ್ಯಥೆಗೊಳ್ಳದೆ, ಭೋಗಾರ್ಥವಾದ ಕರ್ಮಗಳೆಲ್ಲವನ್ನೂ ಬಿಟ್ಟು, ಯಾವನು ನನ್ನ ಭಕ್ತನಾಗಿರುವನೋ ಅವನು ನನಗೆ ಪ್ರಿಯನು. ಯಾವನು ಹಿಗ್ಗದೆ. ಹಗೆಮಾಡದೆ, ಅಳದೆ, ಬಯಸದೆ, ಒಳ್ಳೆಯದು– ಕೆಟ್ಟದ್ದು– ಎರಡನ್ನೂ ಬಿಟ್ಟವನಾಗಿ ಭಕ್ತಿವಂತನಾಗಿರುವನೋ ಅವನು ನನಗೆ ಪ್ರಿಯನು. ಹಗೆಯಲ್ಲಿಯೂ ಗೆಳೆಯನಲ್ಲಿಯೂ ಮತ್ತು ಮಾನದಲ್ಲಿಯೂ ಅಪಮಾನದಲ್ಲಿಯೂ ಶೀತೋಷ್ಣಗಳು, ಸುಖದುಃಖಗಳು – ಇವುಗಳಲ್ಲಿಯೂ ಒಂದೇ ರೀತಿಯಿಂದಿರುವವನಾಗಿ ಯಾವದೊಂದನ್ನೂ ಅಂಟಿಸಿಕೊಳ್ಳದೆ ಬೈಗುಳವನ್ನೂ ಹೊಗಳಿಕೆಯನ್ನೂ ಸಮನಾಗಿ ಕಾಣುತ್ತಾ ವಾಗಿಂದ್ರಿಯವನ್ನು ಬಿಗಿಹಿಡಿದುಕೊಂಡು ಎಷ್ಟು ಸಿಕ್ಕಿದರೆ ಅಷ್ಟೇ ಸಾಕೆಂದು ತೃಪ್ತಿಯಿಂದಿರುತ್ತಾ ಇಂಥದ್ದೆಂದು ಗೊತ್ತಾದ ಮನೆಯಿಲ್ಲದೆ ಪರಮಾರ್ಥದಲ್ಲಿಯೇ ನೆಲೆನಿಂತ ಮನಸ್ಸಿನವನಾಗಿ ನನ್ನಲ್ಲಿಯೇ ಭಕ್ತಿಯುಳ್ಳ ಮನುಷ್ಯನು ನನಗೆ ಪ್ರಿಯನು. ಯಾರಾದರೆ ನಾನು ಹೇಳಿರುವ

ಧರ್ಮಸಮ್ಮತವಾದ ಮೋಕ್ಷಕಾರಣವಾಗಿರುವ ಈ ಸಾಧನವನ್ನು ಶ್ರದ್ಧೆಯಿಂದ ನನ್ನಲ್ಲಿಯೇ ತಾತ್ಪರ್ಯವಿಟ್ಟು, ನಡೆಯಿಸುವರೋ ಆ ಭಕ್ತರು ನನಗೆ ಅತ್ಯಂತ ಪ್ರಿಯರು. (13–20)

ಟಿ॥ ಪೂರ್ಣಭಕ್ತಿಯುಳ್ಳ ಜ್ಞಾನಿಯೇ ಭಗವಂತನಿಗೆ ಅತ್ಯಂತಪ್ರಿಯನು. ಜ್ಞಾನಿಯ ಪರಭಕ್ತಿಯನ್ನು ಇಲ್ಲಿ ವರ್ಣಿಸುವದು ಮಿಕ್ಕವರೂ ಇದನ್ನು ಪಡೆಯುವದಕ್ಕೆ ಹವಣಿಸಲೆಂದು.

ಭಕ್ತಿಯೋಗವೆಂಬ ಹನ್ನೆರಡನೆಯ ಅಧ್ಯಾಯವು ಮುಗಿಯಿತು.

——————

## ಅಥ ತ್ರಯೋದಶೋಽಧ್ಯಾಯಃ

ಶ್ರೀಭಗವಾನುವಾಚ –

ಇದಂ ಶರೀರಂ ಕೌನ್ತೇಯ। ಕ್ಷೇತ್ರಮಿತ್ಯಭಿಧೀಯತೇ।
ಏತದ್ಯೋ ವೇತ್ತಿ ತಂ ಪ್ರಾಹುಃ। ಕ್ಷೇತ್ರಜ್ಞ ಇತಿ ತದ್ವಿದಃ ॥ 1 ॥

ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ। ಸರ್ವಕ್ಷೇತ್ರೇಷು ಭಾರತ।
ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ। ಯತ್ತಜ್ಜ್ಞಾನಂ ಮತಂ ಮಮ ॥ 2 ॥

## ಹದಿಮೂರನೆಯ ಅಧ್ಯಾಯ

ಶ್ರೀಭಗವಂತನ ಉತ್ತರ :

ಎಲೈ- ಕೌಂತೇಯನೆ, ಈ ಶರೀರವು ಕ್ಷೇತ್ರವೆನಿಸುವದು, ಇದನ್ನು ಯಾವನು ಅರಿಯುವನೋ ಅವನನ್ನು ಕ್ಷೇತ್ರಜ್ಞನೆಂದು; ಈ ಎರಡನ್ನೂ ಬಲ್ಲವರು ಕರೆಯುತ್ತಾರೆ. ಎಲೈ ಭರತವಂಶೋತ್ಪನ್ನನೆ, ಕ್ಷೇತ್ರಗಳಲ್ಲೆಲ್ಲ ಇರುವ ಕ್ಷೇತ್ರಜ್ಞನು

ನಾನೇ ಎಂದು ತಿಳಿ. ಕ್ಷೇತ್ರ, ಕ್ಷೇತ್ರಜ್ಞ– ಇವೆರಡರ ತಿಳಿವೇ ನಿಜವಾದ ಜ್ಞಾನವೆಂದು ನನ್ನ ಮತವು. (1–2)

ಟಿ॥ ಅರಿಯುವ ವಿಷಯಿಯೇ ಕ್ಷೇತ್ರಜ್ಞನೆಂಬ ಆತ್ಮನು. ಅರಿಯಲ್ಪಡುವ ವಿಷಯವೆಲ್ಲವೂ ಕ್ಷೇತ್ರವು. ಕ್ಷೇತ್ರಜ್ಞನ ಸ್ವರೂಪವನ್ನು ಸರಿಯಾಗಿ ಅರಿತುಕೊಂಡರೆ ಅದೇ ಪರಮಾತ್ಮನಾಗಿರುವದು.

ತತ್ಕ್ಷೇತ್ರಂ ಯಚ್ಚ ಯಾದೃಕ್ಚ । ಯದ್ವಿಕಾರಿ ಯತಶ್ಚ ಯತ್ ।
ಸ ಚ ಯೋ ಯತ್ಪ್ರಭಾವಶ್ಚ । ತತ್ಸಮಾಸೇನ ಮೇ ಶೃಣು ॥ 3 ॥

ಋಷಿಭಿರ್ಬಹುಧಾ ಗೀತಂ । ಛಂದೋಭಿರ್ವಿವಿಧೈಃ ಪೃಥಕ್ ।
ಬ್ರಹ್ಮಸೂತ್ರಪದೈಶ್ಚೈವ । ಹೇತುಮದ್ಭಿರ್ವಿನಿಶ್ಚಿತೈಃ ॥ 4 ॥

ಆ ಕ್ಷೇತ್ರವು ಯಾವದು, ಎಂಥದ್ದು, ಯಾವಯಾವ ವಿಕಾರವುಳ್ಳದ್ದು, ಏತರಿಂದುಂಟಾಗಿರುವದು, ಯಾವ ಅವರಿಂದ ಯಾವದು ಉಂಟಾಗುವದು ? ಮತ್ತು ಆ ಕ್ಷೇತ್ರಜ್ಞನು ಯಾರು, ಎಂಥ ಪ್ರಭಾವವುಳ್ಳವನು ? – ಎಂಬುದನ್ನು

ಸಂಕ್ಷೇಪವಾಗಿ ಹೇಳುವೆನು, ಕೇಳು. ಋಷಿಗಳು ಇದನ್ನು ಬಹುಬಗೆಯಿಂದ ಹಾಡಿಹೊಗಳಿರುತ್ತಾರೆ. ಬೇರೆಬೇರೆ ವೇದವಚನಗಳಲ್ಲಿ ಇದನ್ನು ವಿಂಗಡಿಸಿ ಹೇಳಿರುತ್ತದೆ, ಯುಕ್ತಿಯುಕ್ತವಾಗಿ ನಿಶ್ಚಯಿಸಿ ಬ್ರಹ್ಮವನ್ನು ಸೂತ್ರರೂಪದಿಂದ ಹೇಳುವ ಉಪನಿಷದ್ವಾಕ್ಯಗಳಲ್ಲಿಯೂ ಇದನ್ನು ಹೇಳಿದುತ್ತದೆ. (3–4)

ಟಿ॥ ಸಕಲವೇದಶಾಸ್ತ್ರಗಳಲ್ಲಿಯೂ ಹೇಳಿರುವ ಜ್ಞಾನವು ಇದು.

**ಮಹಾಭೂತಾನ್ಯಹಙ್ಕಾರೋ । ಬುದ್ಧಿರವ್ಯಕ್ತಮೇವ ಚ ।**
**ಇನ್ದ್ರಿಯಾಣಿ ದಶೈಕಂ ಚ । ಪಞ್ಚ ಚೇನ್ದ್ರಿಯಗೋಚರಾಃ ॥ 5 ॥**
**ಇಚ್ಛಾ ದ್ವೇಷಃ ಸುಖಂ ದುಃಖಂ । ಸಙ್ಘಾತಶ್ಚೇತನಾ ಧೃತಿಃ ।**
**ಏತತ್ಕ್ಷೇತ್ರಂ ಸಮಾಸೇನ । ಸವಿಕಾರಮುದಾಹೃತಮ್ ॥ 6 ॥**

ಐದು ಸೂಕ್ಷ್ಮಭೂತಗಳು, ಅಹಂಕಾರವು, ಮಹತ್ತತ್ತ್ವವು, ಅವ್ಯಕ್ತವು, ಇಂದ್ರಿಯಗಳು ಹತ್ತು , ಮತ್ತು ಹನ್ನೊಂದನೆಯದಾದ ಮನಸ್ಸು ಒಂದು, ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳು ಐದು, ಇಚ್ಛೆ, ದ್ವೇಷ, ಸುಖ, ದುಃಖ, ದೇಹೇಂದ್ರಿಯಗಳ ಸಮೂಹ, ಚೇತನಾವೃತ್ತಿಯು, ದೇಹೇಂದ್ರಿಯ

ಗಳನ್ನು ಹಿಡಿದು ನಿಲ್ಲಿಸಿಕೊಂಡಿರುವ ಧೃತಿಯೆಂಬ ಶಕ್ತಿ– ಇಗೊ, ಇದು ಕ್ಷೇತ್ರವು, ಇದರ ವಿಕಾರಗಳೊಡನೆ ಇದನ್ನು ನಿನಗೆ ತಿಳಿಸಿರುತ್ತೇನೆ. (5–6)

ಟಿ॥ ಇಲ್ಲಿ ಹೊರಗಿನ ವಿಕಾರಗಳನ್ನೇ ಅಲ್ಲದೆ, ಒಳಗಿನ ಇಚ್ಛೆ, ದ್ವೇಷ– ಮುಂತಾದ ವಿಕಾರಗಳನ್ನೂ ಕ್ಷೇತ್ರವೆಂದೇ ಹೇಳಿರುವದನ್ನು ನೆನಪಿಡಬೇಕು ; ಏಕೆಂದರೆ ಅವುಗಳನ್ನೇ ನಮ್ಮ ಸ್ವರೂಪವಾದ ಕ್ಷೇತ್ರಜ್ಞನೆಂದು ನಾವು ಅನೇಕ ವೇಳೆಗಳಲ್ಲಿ ಭ್ರಮಿಸುತ್ತೇವೆ.

**ಅಮಾನಿತ್ವಮದಮ್ಭಿತ್ವ–ಮಹಿಂಸಾ ಕ್ಷಾನ್ತಿರಾರ್ಜವಮ್ ।**
**ಆಚಾರ್ಯೋಪಾಸನಂ ಶೌಚಂ । ಸ್ಥೈರ್ಯಮಾತ್ಮವಿನಿಗ್ರಹಃ ॥ 7 ॥**
**ಇನ್ದ್ರಿಯಾರ್ಥೇಷು ವೈರಾಗ್ಯ–ಮನಹಙ್ಕಾರ ಏವ ಚ ।**
**ಜನ್ಮಮೃತ್ಯುಜರಾವ್ಯಾಧಿ–ದುಃಖದೋಷಾನುದರ್ಶನಮ್ ॥ 8 ॥**
**ಅಸಕ್ತಿರನಭಿಷ್ವಙ್ಗಃ । ಪುತ್ರದಾರಗೃಹಾದಿಷು ।**
**ನಿತ್ಯಂ ಚ ಸಮಚಿತ್ತತ್ವ–ಮಿಷ್ಟಾನಿಷ್ಟೋಪಪತ್ತಿಷು ॥ 9 ॥**
**ಮಯಿ ಚಾನನ್ಯಯೋಗೇನ । ಭಕ್ತಿರವ್ಯಭಿಚಾರಿಣೀ ।**
**ವಿವಿಕ್ತದೇಶಸೇವಿತ್ವ–ಮರತಿರ್ಜನಸಂಸದಿ ॥ 10 ॥**

**ಅಧ್ಯಾತ್ಮಜ್ಞಾನನಿತ್ಯತ್ವಂ। ತತ್ತ್ವಜ್ಞಾನಾರ್ಥದರ್ಶನಮ್।**
**ಏತಜ್ಜ್ಞಾನಮಿತಿ ಪ್ರೋಕ್ತ-ಮಜ್ಞಾನಂ ಯದತೋಽನ್ಯಥಾ ॥ 11 ॥**

ಹೆಮ್ಮೆಯಿಲ್ಲದಿರುವದು, ತಾನು ಧರ್ಮಿಷ್ಠನೆಂದು ಹೊರಗೆ ತೋರಿಸಿಕೊಳ್ಳದಿರುವದು, ಪ್ರಾಣಿಗಳನ್ನು ಹಿಂಸಿಸದೆ ಇರುವದು, ಕ್ಷಮೆ, ಸರಳ ಸ್ವಭಾವ, ಗುರುಸೇವೆ, ಶುಚಿಯಾಗಿರುವದು, ಮೋಕ್ಷಮಾರ್ಗದಿಂದ ಕದಲದಿರುವದು, ದೇಹೇಂದ್ರಿಯಮನಗಳನ್ನು ಬಿಗಿಹಿಡಿಯುವದು, ಇಂದ್ರಿಯದ ವಿಷಯಗಳ ಭೋಗಗಳಲ್ಲಿ ವಿರಕ್ತಿ, ಅಹಂಕಾರವಿಲ್ಲದಿರುವದು, ಹುಟ್ಟು ಸಾವು ಮುಪ್ಪು ಬೇನೆಗಳಲ್ಲಿರುವ ದುಃಖದೋಷವನ್ನು ಮನಸ್ಸಿಗೆ ತಂದುಕೊಳ್ಳುತ್ತಿರುವದು, ಹೆಂಡಿರುಮಕ್ಕಳು, ಮನೆಮಾರು- ಮುಂತಾದವುಗಳಲ್ಲಿ ಮನಸ್ಸನ್ನಂಟಿಸಿಕೊಳ್ಳದೆ ಇರುವದು ಮತ್ತು ಅವುಗಳೇ ತಾನೆಂದು ಅಭಿಮಾನಪಡದಿರುವದು, ಬೇಕಾದದ್ದು ದೊರೆತರೂ ಬೇಡಾದದ್ದು ಬಂದೊದಗಿದರೂ ಏರುಪೇರಿಲ್ಲದೆ ಯಾವಾಗಲೂ ಸಮಚಿತ್ತನಾಗಿರುವದು, ಮತ್ತೊಂದರಲ್ಲಿ ಮನಸ್ಸಿಡದೆ ನನ್ನಲ್ಲಿಯೇ ತಪ್ಪದೆ ಮಾಡುವ ಭಕ್ತಿಯು , ಏಕಾಂತಸ್ಥಳದಲ್ಲಿರುವದು, ಪ್ರಾಕೃತಜನರ ಗುಂಪಿನಲ್ಲಿ

ಪ್ರೀತಿಯಿಲ್ಲದಿರುವದು, ಅಧ್ಯಾತ್ಮಜ್ಞಾನದಲ್ಲಿಯೇ ಯಾವಾಗಲೂ ಮನಸ್ಸು ಹಾಕಿರುವದು, ತತ್ತ್ವಜ್ಞಾನದ ಪ್ರಯೋಜನವಾದ ಮೋಕ್ಷವನ್ನು ಕುರಿತು ಆಲೋಚನೆಮಾಡುತ್ತಿರುವದು – ಇದು ಜ್ಞಾನವೆನಿಸುವದು. ಇದಕ್ಕಿಂತ ಬೇರೆಯಾದದ್ದು ಯಾವದೋ ಅದೇ ಅಜ್ಞಾನವು. (7–11)

ಟಿ|| ಅಮಾನಿತ್ವವೇ ಮುಂತಾದವು ಜ್ಞಾನಕ್ಕೆ ಕಾರಣವಾಗುವವು ; ಮಾನಿತ್ವವೇ ಮುಂತಾದವು ಅಜ್ಞಾನದಿಂದ ಸಂಸಾರದಲ್ಲಿ ತೊಳಲುವದಕ್ಕೆ ಕಾರಣವಾಗಿರುವವು.

ಜ್ಞೇಯಂ ಯತ್ತತ್ ಪ್ರವಕ್ಷ್ಯಾಮಿ । ಯಜ್ಜ್ಞಾತ್ವಾಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ । ನ ಸತ್ತನ್ನಾಸದುಚ್ಯತೇ ॥ 12 ॥

ಸರ್ವತಃ ಪಾಣಿಪಾದಂ ತ– ತ್ಸರ್ವತೋಽಕ್ಷಿಶಿರೋಮುಖಮ್ ।
ಸರ್ವತಃ ಶ್ರುತಿಮಲ್ಲೋಕೇ । ಸರ್ವಮಾವೃತ್ಯ ತಿಷ್ಠತಿ ॥ 13 ॥

ಸರ್ವೇನ್ದ್ರಿಯಗುಣಾಭಾಸಂ । ಸರ್ವೇನ್ದ್ರಿಯವಿವರ್ಜಿತಮ್ ।
ಅಸಕ್ತಂ ಸರ್ವಭೃಚ್ಚೈವ । ನಿರ್ಗುಣಂ ಗುಣಭೋಕ್ತೃ ಚ ॥ 14 ॥

ಬಹಿರನ್ತಶ್ಚ ಭೂತಾನಾ–ಮಚರಂ ಚರಮೇವ ಚ ।
ಸೂಕ್ಷ್ಮತ್ವಾತ್ತದವಿಜ್ಞೇಯಂ । ದೂರಸ್ಥಂ ಚಾನ್ತಿಕೇ ಚ ತತ್ ॥ 15 ॥
ಅವಿಭಕ್ತಂ ಚ ಭೂತೇಷು । ವಿಭಕ್ತಮಿವ ಚ ಸ್ಥಿತಮ್ ।
ಭೂತಭರ್ತೃ ಚ ತಜ್ಜ್ಞೇಯಂ । ಗ್ರಸಿಷ್ಣು ಪ್ರಭವಿಷ್ಣು ಚ ॥ 16 ॥
ಜ್ಯೋತಿಷಾಮಪಿ ತಜ್ಜ್ಯೋತಿ–ಸ್ತಮಸಃ ಪರಮುಚ್ಯತೇ ।
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ । ಹೃದಿ ಸರ್ವಸ್ಯ ವಿಷ್ಠಿತಮ್ ॥ 17 ॥

ಜ್ಞೇಯವೆಂಬುದನ್ನು ಈಗ ಹೇಳುವೆನು ಕೇಳು. ಅದನ್ನು ಅರಿತುಕೊಂಡರೆ ಮನುಷ್ಯನು ಮೋಕ್ಷವನ್ನು ಹೊಂದುತ್ತಾನೆ. ಆದಿಯಿಲ್ಲದ ಪರಬ್ರಹ್ಮವೇ ಅದು. ಅದು ಇರುವದೂ ಅಲ್ಲ , ಇಲ್ಲದ್ದೂ ಅಲ್ಲ – ಎನಿಸಿರುವದು. ಅದು ಎಲ್ಲೆಲ್ಲಿಯೂ ಕೈಕಾಲುಗಳುಳ್ಳದ್ದು , ಎಲ್ಲೆಲ್ಲಿಯೂ ಕಣ್ಣುತಲೆಮೋರೆಗಳುಳ್ಳದ್ದು , ಎಲ್ಲೆಲ್ಲಿಯೂ ಕಿವಿಗಳುಳ್ಳದ್ದು ; ಎಲ್ಲವನ್ನೂ ಆವರಿಸಿಕೊಂಡಿರುವದು. ಸಕಲ ಇಂದ್ರಿಯಗಳ ಗುಣಗಳಿಂದ ತೋರಿಬರುವದು. ಯಾವ ಇಂದ್ರಿಯಗಳೂ

ಅದಕ್ಕಿರುವದಿಲ್ಲ; ಯಾವದರ ಸೋಂಕೂ ಅದಕ್ಕಿಲ್ಲ, ಅದು ಎಲ್ಲವನ್ನೂ ಧರಿಸಿರುವದು; ಯಾವ ಗುಣಗಳೂ ಅದಕ್ಕಿರುವದಿಲ್ಲ. ಅದು ಗುಣಗಳನ್ನು ಅನುಭವಿಸುವದಾಗಿರುವದು. ಅದು ಪ್ರಾಣಿಗಳ ಹೊರಗೂ ಒಳಗೂ ಇರುವದು, ಸ್ಥಾವರವೂ ಜಂಗಮವೂ ಆಗಿರುವದು, ಸೂಕ್ಷ್ಮವಾಗಿರುವದರಿಂದ ಅದು ತಿಳಿಯಲಶಕ್ಯವಾಗಿರುವದು, ಅದು ದೂರದಲ್ಲಿಯೂ ಇರುವದು, ಹತ್ತಿರದಲ್ಲಿಯೂ ಇರುವದು. ಅದು ಬೇರೆಬೇರೆಯಾಗಿಲ್ಲದಿದ್ದರೂ ಪ್ರಾಣಿಗಳಲ್ಲಿ ಬೇರೆಬೇರೆಯಾಗಿರುವಂತೆಯೇ ಇರುವದು. ಅದು ಭೂತಗಳನ್ನು ಧರಿಸಿರುವದಾಗಿ ಅವುಗಳನ್ನು ನುಂಗುವದಾಗಿಯೂ ಉಂಟುಮಾಡುವವಾಗಿಯೂ ಇದೆ ಎಂದು ಅರಿಯಬೇಕು. ಅದು ಬೆಳಕುಗಳಿಗೆಲ್ಲ ಬೆಳಕಾಗಿರುವದು, ಕತ್ತಲೆಯ ಆಚೆಗಿರುವದು. ಜ್ಞಾನವೂ ಜ್ಞೇಯವೂ ಜ್ಞಾನದ ಫಲವೂ ಆಗಿ ಎಲ್ಲರ ಹೃದಯದಲ್ಲಿಯೂ ಇರುತ್ತಿರುವದು. (12–17)

ಟಿ॥ ಜ್ಞೇಯವೆಂದರೆ ಬ್ರಹ್ಮವು ಅಥವಾ ಪರಮಾತ್ಮನು. ತನ್ನ ನಿಜವಾದ ರೂಪದಿಂದ ಇಂದ್ರಿಯಗಳಿಗೂ ಮನಸ್ಸಿಗೂ ಎಟುಕದೆ ಯಾವದೊಂದು

ವಿಷಯಧರ್ಮವನ್ನೂ ತಳೆಯದೆ ಎಲ್ಲೆಲ್ಲಿಯೂ ಏಕರೂಪವಾಗಿರುವ ಬ್ರಹ್ಮವೇ, ಹೊರಗಿನ ಉಪಾಧಿಗಳ ಸಂಬಂಧದಿಂದ ಅನೇಕವಾಗಿ ಆಯಾ ಉಪಾಧಿಯ ಗುಣಗಳನ್ನು ತಳೆದಿರುವಂತೆ ತೋರುತ್ತಿರುವದು.

ಇತಿ ಕ್ಷೇತ್ರಂ ತಥಾ ಜ್ಞಾನಂ। ಜ್ಞೇಯಂ ಚೋಕ್ತಂ ಸಮಾಸತಃ।
ಮದ್ಭಕ್ತ ಏತದ್ವಿಜ್ಞಾಯ। ಮದ್ಭಾವಾಯೋಪಪದ್ಯತೇ ॥ 18 ॥

ಹೀಗೆ ಕ್ಷೇತ್ರವನ್ನೂ ಜ್ಞಾನವನ್ನೂ ಮತ್ತು ಜ್ಞೇಯವನ್ನೂ ಸಂಗ್ರಹವಾಗಿ ಹೇಳಿದ್ದಾಯಿತು. ನನ್ನ ಭಕ್ತನಾದವನು ಇದನ್ನು ಅರಿತುಕೊಂಡು ನನ್ನ ಸ್ವರೂಪವನ್ನು ಪಡೆಯಲು ಯೋಗ್ಯನಾಗುತ್ತಾನೆ. (18)

ಪ್ರಕೃತಿಂ ಪುರುಷಂ ಚೈವ। ವಿದ್ಧ್ಯನಾದೀ ಉಭಾವಪಿ।
ವಿಕಾರಾಂಶ್ಚ ಗುಣಾಂಶ್ಚೈವ। ವಿದ್ಧಿ ಪ್ರಕೃತಿಸಮ್ಭವಾನ್ ॥ 19 ॥

ಕಾರ್ಯಕಾರಣಕರ್ತೃತ್ವೇ। ಹೇತುಃ ಪ್ರಕೃತಿರುಚ್ಯತೇ।
ಪುರುಷಃ ಸುಖದುಃಖಾನಾಂ। ಭೋಕ್ತೃತ್ವೇ ಹೇತುರುಚ್ಯತೇ ॥ 20 ॥

**ಪುರುಷಃ ಪ್ರಕೃತಿಸ್ಥೋ ಹಿ । ಭುಙ್ಕ್ತೇ ಪ್ರಕೃತಿಜಾನ್ಗುಣಾನ್ ।**
**ಕಾರಣಂ ಗುಣಸಙ್ಗೋऽಸ್ಯ । ಸದಸದ್ಯೋನಿಜನ್ಮಸು ॥ 21 ॥**

ಪ್ರಕೃತಿ, ಪುರುಷ – ಈ ಎರಡೂ ಅನಾದಿಯೆಂದು ತಿಳಿ. ಬುದ್ಧ್ಯಾದಿ ವಿಕಾರಗಳೂ ಗುಣಗಳೂ ಪ್ರಕೃತಿಯಿಂದುಂಟಾದವುಗಳೆಂದೂ ತಿಳಿ. ಕಾರ್ಯ ಕಾರಣಗಳನ್ನುಂಟುಮಾಡುವದರಲ್ಲಿ ಪ್ರಕೃತಿಯು ಕಾರಣವೆನಿಸುವದು. ಸುಖ ದುಃಖಗಳ ಭೋಕ್ತೃತ್ವಕ್ಕೆ ಪುರುಷನು ಕಾರಣನೆನಿಸುವನು. ಪುರುಷನು ಪ್ರಕೃತಿ ಯಲ್ಲಿದ್ದುಕೊಂಡು ಪ್ರಕೃತಿಯಿಂದಾಗಿರುವ ಗುಣಗಳನ್ನು ಅನುಭವಿಸುವನು ; ಗುಣಗಳಲ್ಲಿ ಉಂಟಾಗುವ ಸಂಗವೇ ಇವನಿಗೆ ಒಳ್ಳೆಯ ಕೆಟ್ಟ ಜನ್ಮಗಳಾಗಲು ಕಾರಣವು. (19–20)

ಟೀ॥ ಕಾರ್ಯಕಾರಣಗಳೆಂಬ ಹೇತು, ಸುಖದುಃಖಗಳೆಂಬ ಫಲ – ಈ ಎರಡು ರೂಪದಲ್ಲಿಯೂ ಪ್ರಕೃತಿಯು ಕಾಣಿಸಿಕೊಳ್ಳುವದು. ಅವುಗಳಲ್ಲಿರುವ ಸಂಗದಿಂದ ಪುರುಷನು ಭೋಕ್ತೃವೆನಿಸಿ ಸಂಸಾರದಲ್ಲಿ ತೊಳಲುವನು.

**ಉಪದ್ರಷ್ಟಾನುಮನ್ತಾ ಚ । ಭರ್ತಾ ಭೋಕ್ತಾ ಮಹೇಶ್ವರಃ ।**
**ಪರಮಾತ್ಮೇತಿ ಚಾಪ್ಯುಕ್ತೋ । ದೇಹೇಽಸ್ಮಿನ್ಪುರುಷಃ ಪರಃ ॥ 22 ॥**

ಈ ದೇಹದಲ್ಲಿರುವ ಪರಮಪುರುಷನು ಉಪದ್ರಷ್ಟೃ, ಒಪ್ಪಿಗೆಯನ್ನು ಕೊಡುವವನು, ಪೋಷಿಸುವವನು, ಭೋಗಿಸುವಾತನು, ಮಹೇಶ್ವರನು ಮತ್ತು ಪರಮಾತ್ಮನು– ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. (22)

ಟಿ॥ ಉಪದ್ರಷ್ಟೃ– ಎಂದರೆ ಯಜ್ಞದಲ್ಲಿ ಋತ್ವಿಜರುಗಳ ಮೇಲು ವಿಚಾರಣೆಯನ್ನು ಮಾಡಿ ನೋಡಿಕೊಳ್ಳುವಂತೆ ಎಲ್ಲವನ್ನೂ ವಿಷಯವಾಗಿಸಿಕೊಂಡು ನೋಡುತ್ತಿರುವ ಸಾಕ್ಷಿಯು. ಒಪ್ಪುವವನು – ಎಂದರೆ ದೇಹೇಂದ್ರಿಯಗಳ ವ್ಯಾಪಾರಕ್ಕೆ ತನ್ನ ಸನ್ನಿಧಿಮಾತ್ರದಿಂದ ಪ್ರೇರಕನಾಗಿರುವವನು. ಪೋಷಿಸುವವನು –ಎಂದರೆ ದೇಹೇಂದ್ರಿಯಗಳ ಸ್ವರೂಪಧಾರಣೆಗೆ ಅವಕ್ಕೆ ಇರವನ್ನು ಕೊಟ್ಟಿರುವವನು. ಮಹೇಶ್ವರನು– ಎಂದರೆ ಎಲ್ಲವನ್ನೂ ಆಳುವ ಸರ್ವಸ್ವತಂತ್ರನು. ಪರಮಾತ್ಮನು– ಎಂದರೆ ನಿಜವಾಗಿಯೂ ಆತ್ಮನಾಗಿರುವಾತನು.

**ಯ ಏವಂ ವೇತ್ತಿ ಪುರುಷಂ । ಪ್ರಕೃತಿಂ ಚ ಗುಣೈಃ ಸಹ ।**
**ಸರ್ವಥಾ ವರ್ತಮಾನೋಽಪಿ । ನ ಸ ಭೂಯೋಽಭಿಜಾಯತೇ ॥ 23 ॥**

ಯಾವನು ಹೀಗೆ ಪುರುಷನನ್ನೂ ಗುಣಗಳಿಂದೊಡಗೂಡಿ ಪ್ರಕೃತಿಯನ್ನೂ ತಿಳಿದುಕೊಳ್ಳುವನೋ ಅವನು ಹೇಗೆ ಇರುತ್ತಿದ್ದರೂ ಮತ್ತೆ ಹುಟ್ಟುವದಿಲ್ಲ.

ಟಿ। ನಿಜವನ್ನರಿತಮೇಲೆ ಅವನಲ್ಲಿ ಪರಮಾರ್ಥವಾಗಿ ಕರ್ಮವಿರುವದಿಲ್ಲವಾದ್ದರಿಂದ ಕರ್ಮಫಲವಾದ ಸಂಸಾರವೂ ಅವನಿಗಿಲ್ಲ.

ಧ್ಯಾನೇನಾತ್ಮನಿ ಪಶ್ಯನ್ತಿ। ಕೇಚಿದಾತ್ಮಾನಮಾತ್ಮನಾ ।
ಅನ್ಯೇ ಸಾಙ್ಖ್ಯೇನ ಯೋಗೇನ । ಕರ್ಮಯೋಗೇನ ಚಾಪರೇ ॥ 24 ॥

ಅನ್ಯೇ ತ್ವೇವಮಜಾನನ್ತಃ। ಶ್ರುತ್ವಾಽನ್ಯೇಭ್ಯ ಉಪಾಸತೇ।
ತೇಽಪಿ ಚಾತಿತರನ್ತ್ಯೇವ । ಮೃತ್ಯುಂ ಶ್ರುತಿಪರಾಯಣಾಃ ॥ 25 ॥

ಕೆಲವರು ಧ್ಯಾನದಿಂದ ಆತ್ಮನನ್ನು ಆತ್ಮಸ್ವರೂಪದಿಂದ ತಮ್ಮ ಬುದ್ಧಿಯಲ್ಲಿ ತಿಳಿದುಕೊಳ್ಳುವರು ; ಮತ್ತೆ ಕೆಲವರು ಸಾಂಖ್ಯಯೋಗದಿಂದ ತಿಳಿದುಕೊಳ್ಳುವರು ; ಇನ್ನು ಕೆಲವರು ಕರ್ಮಯೋಗದಿಂದ ತಿಳಿದುಕೊಳ್ಳುವರು. ಇನ್ನು ಕೆಲವರು ಹೀಗೆಂದು ತಿಳಿಯಲಾರದೆ ಮತ್ತೊಬ್ಬರಿಂದ ಕೇಳಿ ತಿಳಿದುಕೊಂಡು

ಉಪಾಸನೆಮಾಡುವರು ; ಮತ್ತೊಬ್ಬರು ಹೇಳಿದ್ದನ್ನೇ ಪ್ರಮಾಣವೆಂದೆಣಿಸುವ ಅವರೂ ಕೂಡ ಮೃತ್ಯುಸಂಸಾರವನ್ನು ದಾಟುವರು. (24–25)

ಯಾವತ್ಸಞ್ಜಾಯತೇ ಕಿಞ್ಚಿ–ತ್ಸತ್ವಂ ಸ್ಥಾವರಜಙ್ಗಮಮ್ ।
ಕ್ಷೇತ್ರಕ್ಷೇತ್ರಜ್ಞಸಂಯೋಗಾ–ತ್ತದ್ವಿದ್ಧಿ ಭರತರ್ಷಭ ॥ 26 ॥

ಭರತಶ್ರೇಷ್ಠನೆ, ಸ್ಥಾವರಜಂಗಮರೂಪವಾದ ಯಾವಯಾವ ಪ್ರಾಣಿಯು ಹುಟ್ಟುವದೋ ಅದೆಲ್ಲವೂ ಕ್ಷೇತ್ರಕ್ಷೇತ್ರಜ್ಞರಸಂಯೋಗದಿಂದಲೇ ಎಂದು ತಿಳಿ. (26)

ಟಿ॥ ಇಲ್ಲಿ ಸಂಯೋಗವೆಂದರೆ ಕ್ಷೇತ್ರಕ್ಷೇತ್ರಜ್ಞರನ್ನು ಬಿಡಿಸಿ ತಿಳಿದುಕೊಳ್ಳದೆ ಒಂದರಲ್ಲೊಂದನ್ನು ಬೆರಕೆಮಾಡಿ ಎರಡರ ಸ್ವರೂಪವನ್ನೂ ತಪ್ಪಾಗಿ ತಿಳಿದುಕೊಳ್ಳುವದು.

ಸಮಂ ಸರ್ವೇಷು ಭೂತೇಷು । ತಿಷ್ಠನ್ತಂ ಪರಮೇಶ್ವರಮ್ ।
ವಿನಶ್ಯತ್ಸ್ವವಿನಶ್ಯನ್ತಂ । ಯಃ ಪಶ್ಯತಿ ಸ ಪಶ್ಯತಿ ॥ 27 ॥

**ಸಮಂ ಪಶ್ಯನ್ಹಿ ಸರ್ವತ್ರ । ಸಮವಸ್ಥಿತಮೀಶ್ವರಮ್ ।**
**ನ ಹಿನಸ್ತ್ಯಾತ್ಮನಾತ್ಮಾನಂ । ತತೋ ಯಾತಿ ಪರಾಂ ಗತಿಮ್ ॥ 28 ॥**

ಸರ್ವಪ್ರಾಣಿಗಳಲ್ಲಿಯೂ ಒಂದೇಸಮನಾಗಿ ಇರುವವನೂ, ಅವು ನಾಶವಾದರೂ ನಾಶವಾಗದವನೂ ಆಗಿರುವ ಪರಮೇಶ್ವರನನ್ನು ಯಾವನು ಕಂಡುಕೊಳ್ಳುವನೋ ಅವನೇ ಸರಿಯಾಗಿ ತಿಳಿದವನು. ಎಲ್ಲೆಲ್ಲಿಯೂ ಸಮನಾಗಿರುತ್ತಿರುವ ಈಶ್ವರನಾದ ಆತ್ಮನನ್ನು ಕಂಡುಕೊಂಡವನು ತನ್ನನ್ನು ತಾನು ಕೊಂದುಕೊಳ್ಳುವದಿಲ್ಲ, ಆದ್ದರಿಂದ ಪರಗತಿಯನ್ನು ಹೊಂದುತ್ತಾನೆ. (27–28)

ಟೀ॥ ಆತ್ಮರು ಅನೇಕರೆಂದು ಕಾಣುವವನು ಅನಾತ್ಮವನ್ನೇ ಆತ್ಮನೆಂದು ತಿಳಿದುಕೊಳ್ಳುವದರಿಂದ ಅವನು ಆತ್ಮನನ್ನು ಕೊಲ್ಲುತ್ತಿದ್ದಂತೆ ಆಗುವದು.

**ಪ್ರಕೃತ್ಯೈವ ಚ ಕರ್ಮಾಣಿ । ಕ್ರಿಯಮಾಣಾನಿ ಸರ್ವಶಃ ।**
**ಯಃ ಪಶ್ಯತಿ ತಥಾತ್ಮಾನ–ಮಕರ್ತಾರಂ ಸ ಪಶ್ಯತಿ ॥ 29 ॥**

ಯದಾ ಭೂತಪೃಥಗ್ಭಾವ–ಮೇಕಸ್ಥಮನುಪಶ್ಯತಿ।
ತತ ಏವ ಚ ವಿಸ್ತಾರಂ। ಬ್ರಹ್ಮ ಸಂಪದ್ಯತೇ ತದಾ ॥ 30 ॥

ಅನಾದಿತ್ವಾನ್ನಿರ್ಗುಣತ್ವಾತ್। ಪರಮಾತ್ಮಾऽಯಮವ್ಯಯಃ।
ಶರೀರಸ್ಥೋऽಪಿ ಕೌನ್ತೇಯ। ನ ಕರೋತಿ ನ ಲಿಪ್ಯತೇ ॥ 31 ॥

ಯಥಾ ಸರ್ವಗತಂ ಸೌಕ್ಷ್ಮ್ಯಾ–ದಾಕಾಶಂ ನೋಪಲಿಪ್ಯತೇ।
ಸರ್ವತ್ರಾವಸ್ಥಿತೋ ದೇಹೇ। ತಥಾತ್ಮಾ ನೋಪಲಿಪ್ಯತೇ ॥ 32 ॥

ಯಥಾ ಪ್ರಕಾಶಯತ್ಯೇಕಃ। ಕೃತ್ಸ್ನಂ ಲೋಕಮಿಮಂ ರವಿಃ।
ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ । ಪ್ರಕಾಶಯತಿ ಭಾರತ ॥ 33 ॥

ಪ್ರಕೃತಿಯಿಂದಲೇ ಎಲ್ಲಾ ಜಗೆಯ ಕರ್ಮಗಳೂ ಆಗುತ್ತಿರುವವೆಂದೂ ಆತ್ಮನು ಕರ್ತೃವಲ್ಲವೆಂದೂ ಯಾವನು ಅರಿತುಕೊಳ್ಳುವನೋ ಅವನೇ ಸರಿಯಾಗಿ ತಿಳಿದವನು. ಯಾವಾಗ ಪ್ರಾಣಿಗಳ ಭೇದಗಳೆಲ್ಲ ಒಬ್ಬ ಪರಮಾತ್ಮನಲ್ಲಿಯೇ

ಇರುವವೆಂದೂ ಅವನಿಂದಲೇ ಹರಡಿಕೊಂಡಿರುವವೆಂದೂ ಸಾಧಕನು ತಿಳಿದು ಕೊಳ್ಳುವನೋ ಆಗ ಪರಬ್ರಹ್ಮಸ್ವರೂಪವನ್ನು ಪಡೆಯುವನು. ಕೌಂತೇಯನೆ, ಆದಿಯಿಲ್ಲದವನಾಗಿ ನಿರ್ಗುಣನಾಗಿರುವದರಿಂದ ನಾಶರಹಿತನಾಗಿರುವ ಈ ಪರಮಾತ್ಮನು ಶರೀರದಲ್ಲಿದ್ದರೂ ಮಾಡುವದೂ ಇಲ್ಲ, ಕರ್ಮಫಲದ ಅಂಟನ್ನು ಹಚ್ಚಿಕೊಳ್ಳುವದೂ ಇಲ್ಲ. ಹೇಗೆ ಎಲ್ಲೆಲ್ಲಿಯೂ ಇರುವ ಆಕಾಶವು ಸೂಕ್ಷ್ಮವಾಗಿರು ವದರಿಂದ ಮತ್ತೊಂದರ ಅಂಟು ಇಲ್ಲದೆ ಇರುವದೋ ಅದರಂತೆ ದೇಹದಲ್ಲೆಲ್ಲ ಇದ್ದರೂ ಆತ್ಮನಿಗೆ ಅದರ ಅಂಟು ಇರುವದಿಲ್ಲ. ಎಲೈ ಭರತವಂಶೋತ್ಪನ್ನನೆ, ಹೇಗೆ ಸೂರ್ಯನು ಈ ಲೋಕವೆಲ್ಲವನ್ನೂ ಒಬ್ಬನೇ ಬೆಳಗುತ್ತಿರುವನೋ ಅವರಂತೆ ಕ್ಷೇತ್ರಜ್ಞನು ಕ್ಷೇತ್ರವೆಲ್ಲವನ್ನೂ ಬೆಳಗುತ್ತಿರುವನು. (29–33)

ಕ್ಷೇತ್ರಕ್ಷೇತ್ರಜ್ಞಯೋರೇವ–ಮನ್ತರಂ ಜ್ಞಾನಚಕ್ಷುಷಾ ।
ಭೂತಪ್ರಕೃತಿಮೋಕ್ಷಂ ಚ । ಯೇ ವಿದುರ್ಯಾನ್ತಿತೇ ಪರಮ್ ॥ 34 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಕ್ಷೇತ್ರಕ್ಷೇತ್ರಜ್ಞವಿಭಾಗಯೋಗೋ ನಾಮ ತ್ರಯೋದಶೋಽಧ್ಯಾಯಃ

ಹೀಗೆ ತಿಳಿವುಗಣ್ಣಿನಿಂದ ಕ್ಷೇತ್ರ–ಕ್ಷೇತ್ರಜ್ಞರ ಪರಸ್ಪರವೈಲಕ್ಷಣ್ಯವನ್ನೂ ಭೂತಗಳ ಪ್ರಕೃತಿಯಿಂದ ಬಿಡುಗಡೆಯಾಗುವ ಕ್ರಮವನ್ನೂ ಯಾರು ತಿಳಿದುಕೊಳ್ಳುವರೋ ಅವರು ಪರಮಪದವಿಯನ್ನು ಹೊಂದುವರು. (34)

ಕ್ಷೇತ್ರಕ್ಷೇತ್ರಜ್ಞಯೋಗವೆಂಬ ಹದಿಮೂರನೆಯ ಅಧ್ಯಾಯವು ಮುಗಿಯಿತು.

----------

## ಅಥ ಚತುರ್ದಶೋಽಧ್ಯಾಯಃ

ಶ್ರೀಭಗವಾನುವಾಚ –

ಪರಂ ಭೂಯಃ ಪ್ರವಕ್ಷ್ಯಾಮಿ । ಜ್ಞಾನಾನಾಂ ಜ್ಞಾನಮುತ್ತಮಮ್ ।
ಯಜ್ಜ್ಞಾತ್ವಾ ಮುನಯಃ ಸರ್ವೇ । ಪರಾಂ ಸಿದ್ಧಿಮಿತೋ ಗತಾಃ ॥ 1 ॥

ಇದಂ ಜ್ಞಾನಮುಪಾಶ್ರಿತ್ಯ । ಮಮ ಸಾಧರ್ಮ್ಯಮಾಗತಾಃ ।
ಸರ್ಗೇಽಪಿ ನೋಪಜಾಯನ್ತೇ । ಪ್ರಲಯೇ ನ ವ್ಯಥನ್ತಿ ಚ ॥ 2 ॥

## ಹದಿನಾಲ್ಕನೆಯ ಅಧ್ಯಾಯ

ಶ್ರೀಭಗವಂತನೆಂದದ್ದು :

ಜ್ಞಾನಗಳಲ್ಲೆಲ್ಲ ಉತ್ತಮವೆನಿಸುವ ಹೆಚ್ಚಿನ ಜ್ಞಾನವನ್ನು ಮತ್ತೊಮ್ಮೆ ಹೇಳುವೆನು ; ಕೇಳು. ಇದನ್ನರಿತುಕೊಂಡು ಸಕಲಮುನಿಗಳೂ ಈ ಸಂಸಾರ ಬಂಧದಿಂದ ಮುಕ್ತರಾಗಿ ಪರಮಸಿದ್ಧಿಯನ್ನು ಹೊಂದಿದರು. ಈ ಜ್ಞಾನವನ್ನು

ಆಶ್ರಯಿಸಿ ನನಗೆ ಸಮಾನವಾದ ರೂಪವನ್ನು ಪಡೆದವರು ಸೃಷ್ಟಿಯಾದರೂ ಹುಟ್ಟುವದಿಲ್ಲ, ಪ್ರಲಯವಾದರೂ ವ್ಯಥೆಪಡುವದಿಲ್ಲ. (1–2)

ಮಮ ಯೋನಿರ್ಮಹದ್ಬ್ರಹ್ಮ। ತಸ್ಮಿನ್ಗರ್ಭಂ ದಧಾಮ್ಯಹಮ್।
ಸಮ್ಭವಃ ಸರ್ವಭೂತಾನಾಂ। ತತೋ ಭವತಿ ಭಾರತ ॥ 3 ॥

ಸರ್ವಯೋನಿಷು ಕೌನ್ತೇಯ। ಮೂರ್ತಯಃ ಸಮ್ಭವನ್ತಿ ಯಾಃ।
ತಾಸಾಂ ಬ್ರಹ್ಮ ಮಹದ್ಯೋನಿ–ರಹಂ ಬೀಜಪ್ರದಃ ಪಿತಾ ॥ 4 ॥

ಎಲೈ ಭರತವಂಶೋತ್ಪನ್ನನೆ, ಎಲ್ಲಕ್ಕೂ ದೊಡ್ಡದಾಗಿ ಬ್ರಹ್ಮವೆನಿಸಿರುವ ಪ್ರಕೃತಿಯೇ ನನಗೆ ಯೋನಿಯು ; ಅದರಲ್ಲಿ ನಾನು ಗರ್ಭವನ್ನಿಡುವೆನು. ಅದರಿಂದ ಸಕಲಪ್ರಾಣಿಗಳ ಉತ್ಪತ್ತಿಯೂ ಆಗುವದು. ಯಾವಯಾವ ಯೋನಿಗಳಲ್ಲಿ ಯಾವಯಾವ ಆಕಾರಗಳುಂಟಾಗುವದೋ ಅವಕ್ಕೆಲ್ಲ ಈ ದೊಡ್ಡ ಬ್ರಹ್ಮವೇ ಯೋನಿಯು, ನಾನೇ ಗರ್ಭಾಧಾನಮಾಡುವ ತಂದೆ. (3–4)

ಟಿ॥ ಮೂಲಪ್ರಕೃತಿಯನ್ನು ಬ್ರಹ್ಮವೆಂದು ಕರೆಯುವದು ಸಾಂಖ್ಯರ ಪ್ರಕ್ರಿಯೆಯನ್ನನುಸರಿಸಿ ; ಪರಮಾತ್ಮನ ಅಧೀನದಲ್ಲಿದ್ದುಕೊಂಡೇ ಪ್ರಕೃತಿಯು ಸಕಲಕ್ಕೂ ಕಾರಣವಾಗಿರುತ್ತದೆ.

ಸತ್ತ್ವಂ ರಜಸ್ತಮ ಇತಿ। ಗುಣಾಃ ಪ್ರಕೃತಿಸಮ್ಭವಾಃ।
ನಿಬಧ್ನನ್ತಿ ಮಹಾಬಾಹೋ। ದೇಹೇ ದೇಹಿನಮವ್ಯಯಮ್ ॥ 5 ॥

ತತ್ರ ಸತ್ತ್ವಂ ನಿರ್ಮಲತ್ವಾತ್। ಪ್ರಕಾಶಕಮನಾಮಯಮ್।
ಸುಖಸಙ್ಗೇನ ಬಧ್ನಾತಿ। ಜ್ಞಾನಸಙ್ಗೇನ ಚಾನಘ ॥ 6 ॥

ರಜೋ ರಾಗಾತ್ಮಕಂ ವಿದ್ಧಿ। ತೃಷ್ಣಾಸಙ್ಗಸಮುದ್ಭವಮ್।
ತನ್ನಿಬಧ್ನಾತಿ ಕೌನ್ತೇಯ। ಕರ್ಮಸಙ್ಗೇನ ದೇಹಿನಮ್ ॥ 7 ॥

ತಮಸ್ತ್ವಜ್ಞಾನಜಂ ವಿದ್ಧಿ। ಮೋಹನಂ ಸರ್ವದೇಹಿನಾಮ್।
ಪ್ರಮಾದಾಲಸ್ಯನಿದ್ರಾಭಿ–ಸ್ತನ್ನಿಬಧ್ನಾತಿ ಭಾರತ ॥ 8 ॥

ಸತ್ತ್ವಂ ಸುಖೇ ಸಞ್ಜಯತಿ। ರಜಃ ಕರ್ಮಣಿ ಭಾರತ।
ಜ್ಞಾನಮಾವೃತ್ಯ ತು ತಮಃ। ಪ್ರಮಾದೇ ಸಞ್ಜಯತ್ಯುತ ॥ 9 ॥

ಎಲೈ ಮಹಾಬಾಹುವೆ, ಪ್ರಕೃತಿಯಿಂದುಂಟಾಗುವ ಸತ್ತ್ವರಜಸ್ತಮಗಳೆಂಬ ಗುಣಗಳು ದೇಹದಲ್ಲಿರುವ ಅವ್ಯಯವಾದ ದೇಹಿಯನ್ನು ಕಟ್ಟಿಹಾಕುತ್ತಿರುವವು. ಇವುಗಳಲ್ಲಿ ಸತ್ತ್ವವು ನಿರ್ಮಲವಾಗಿರುವದರಿಂದ ಬೆಳಕನ್ನು ಕೊಡತಕ್ಕದ್ದು ಯಾವ ದೋಷವೂ ಇಲ್ಲದ್ದು; ಎಲೈ ಪಾಪರಹಿತನೆ, ಅದು ಸುಖಾಸಕ್ತಿಯಿಂದಲೂ ಜ್ಞಾನಾಸಕ್ತಿಯಿಂದಲೂ ಕಟ್ಟಿಹಾಕುತ್ತದೆ. ರಜೋಗುಣವು ರಾಗರೂಪವಾಗಿರುವದೆಂದು ತಿಳಿ; ಅದು ಬಯಕೆ, ಆಸಕ್ತಿ – ಇವುಗಳಿಗೆ ಕಾರಣವು ಎಂದು ತಿಳಿ. ಎಲೈ ಕೌಂತೇಯನೆ, ಅದು ದೇಹಿಯನ್ನು ಕರ್ಮಸಂಗದಿಂದ ಕಟ್ಟಿಹಾಕುವದು, ಎಲೈ ಭರತವಂಶೋತ್ಪನ್ನನೆ, ತಮಸ್ಸಾದರೋ ಅಜ್ಞಾನದಿಂದಾಗಿರುವದೆಂದು ತಿಳಿ, ಅದು ಎಲ್ಲಾ ದೇಹಿಗಳನ್ನೂ ಮೋಹಗೊಳಿಸುವದು ; ಅದು ಎಚ್ಚರಿಕೆಯಿಲ್ಲದಿರುವಿಕೆ, ಪಾಲುಮಾರಿಕೆ, ನಿದ್ರೆ ಇವುಗಳಿಂದ ಕಟ್ಟಿಹಾಕುವದು. ಭರತವಂಶೋತ್ಪನ್ನನೆ, ಸತ್ತ್ವವು ಸುಖದಲ್ಲಿಯೂ ರಜಸ್ಸು ಕರ್ಮದಲ್ಲಿಯೂ ಆಸಕ್ತಿಯನ್ನುಂಟುಮಾಡುತ್ತದೆ ; ತಮಸ್ಸಾದರೋ ಜ್ಞಾನವನ್ನು ಮುಸುಕಿ ಎಚ್ಚರಿಕೆಯಿಂದಿರದಂತೆ ಮಾಡುವದು. (5–9)

ರಜಸ್ತಮಶ್ಚಾಭಿಭೂಯ। ಸತ್ತ್ವಂ ಭವತಿ ಭಾರತ।
ರಜಃ ಸತ್ತ್ವಂ ತಮಶ್ಚೈವ। ತಮಃ ಸತ್ವಂ ರಜಸ್ತಥಾ ॥ 10 ॥

ಭರತವಂಶೋತ್ಪನ್ನನೆ, ರಜಸ್ಸನ್ನೂ ತಮಸ್ಸನ್ನೂ ಹಿಮ್ಮೆಟ್ಟಿಸಿ ಸತ್ತ್ವವುಂಟಾಗುತ್ತದೆ ; ಸತ್ತ್ವವನ್ನೂ ತಮಸ್ಸನ್ನೂ ಹಿಮ್ಮೆಟ್ಟಿಸಿ ರಜಸ್ಸುಂಟಾಗುತ್ತದೆ ; ಇದರಂತೆ ಸತ್ತ್ವವನ್ನೂ ರಜಸ್ಸನ್ನೂ ಹಿಮ್ಮೆಟ್ಟಿಸಿ ತಮಸ್ಸಾಗುತ್ತದೆ. (10)

ಸರ್ವದ್ವಾರೇಷು ದೇಹೇಽಸ್ಮಿನ್। ಪ್ರಕಾಶ ಉಪಜಾಯತೇ।
ಜ್ಞಾನಂ ಯದಾ ತದಾ ವಿದ್ಯಾ–ದ್ವಿವೃದ್ಧಂ ಸತ್ತ್ವಮಿತ್ಯುತ ॥ 11 ॥

ಲೋಭಃ ಪ್ರವೃತ್ತಿರಾರಮ್ಭಃ। ಕರ್ಮಣಾಮಶಮಃ ಸ್ಪೃಹಾ।
ರಜಸ್ಯೇತಾನಿ ಜಾಯನ್ತೇ। ವಿವೃದ್ಧೇ ಭರತರ್ಷಭ ॥ 12 ॥

ಅಪ್ರಕಾಶೋಽಪ್ರವೃತ್ತಿಶ್ಚ। ಪ್ರಮಾದೋ ಮೋಹ ಏವ ಚ।
ತಮಸ್ಯೇತಾನಿ ಜಾಯನ್ತೇ। ವಿವೃದ್ಧೇ ಕುರುನನ್ದನ ॥ 13 ॥

ಯಾವಾಗ ಈ ದೇಹದಲ್ಲಿರುವ ಇಂದ್ರಿಯದ್ವಾರಗಳಲ್ಲೆಲ್ಲ ಜ್ಞಾನವೆಂಬ ಬೆಳಕು ಉಂಟಾಗುವದೋ ಆಗ ಸತ್ತ್ವವು ಬೆಳೆಯಿತೆಂದು ತಿಳಿದುಕೊಳ್ಳಬೇಕು. ಎಲೈ ಭರತಶ್ರೇಷ್ಠನೆ, ರಜಸ್ಸು ಬೆಳೆದುಕೊಂಡರೆ, ಅತ್ಯಾಶೆ, ಕೆಲಸಕ್ಕೆ ಹವಣಿಸುವದು, ಕರ್ಮಗಳನ್ನು ಮಾಡುವದು, ಶಾಂತಿಯಿಲ್ಲದಿರುವದು, 'ಅದು ಬೇಕು, ಇದು ಬೇಕು' ಎನ್ನುತ್ತಿರುವದು – ಇವುಗಳುಂಟಾಗುವವು. ಎಲೈ ಕುರುನಂದನನೆ, ತಮಸ್ಸು ಬೆಳೆದುಕೊಂಡರೆ ತಿಳಿಯದಿರುವದು, ಕರ್ಮಕ್ಕೆ ಕೈಹಾಕದಿರುವದು, ಅವಧಾನವಿಲ್ಲದಿರುವದು, ಮಂಕು – ಇವುಗಳುಂಟಾಗುವವು. (11–13)

ಟಿ॥ ಈ ಗುರುತುಗಳಿಂದ ಇಂಥಿಂಥ ಗುಣವು ಈಗ ನನ್ನಲ್ಲಿ ಎದ್ದುಕೊಂಡಿದೆ ಎಂದು ತಿಳಿದುಕೊಳ್ಳಬಹುದು.

ಯದಾ ಸತ್ತ್ವೇ ಪ್ರವೃದ್ಧೇ ತು । ಪ್ರಲಯಂ ಯಾತಿ ದೇಹಭೃತ್ ।
ತದೋತ್ತಮವಿದಾಂ ಲೋಕಾ–ನಮಲಾನ್ಪ್ರತಿಪದ್ಯತೇ ॥ 14 ॥

ರಜಸಿ ಪ್ರಲಯಂ ಗತ್ವಾ । ಕರ್ಮಸಙ್ಗಿಷು ಜಾಯತೇ ।
ತಥಾ ಪ್ರಲೀನಸ್ತಮಸಿ । ಮೂಢಯೋನಿಷು ಜಾಯತೇ ॥ 15 ॥

ಕರ್ಮಣಃ ಸುಕೃತಸ್ಯಾಹುಃ । ಸಾತ್ತ್ವಿಕಂ ನಿರ್ಮಲಂ ಫಲಮ್ ।
ರಜಸಸ್ತು ಫಲಂ ದುಃಖ–ಮಜ್ಞಾನಂ ತಮಸಃ ಫಲಮ್ ॥ 16 ॥

ಸತ್ತ್ವಾತ್ಸಞ್ಜಾಯತೇ ಜ್ಞಾನಂ । ರಜಸೋ ಲೋಭ ಏವ ಚ ।
ಪ್ರಮಾದಮೋಹೌ ತಮಸೋ । ಭವತೋಽಜ್ಞಾನಮೇವ ಚ ॥ 17 ॥

ಊರ್ಧ್ವಂ ಗಚ್ಛನ್ತಿ ಸತ್ತ್ವಸ್ಥಾ– ಮಧ್ಯೇ ತಿಷ್ಠನ್ತಿ ರಾಜಸಾಃ ।
ಜಘನ್ಯಗುಣವೃತ್ತಸ್ಥಾ– ಅಧೋ ಗಚ್ಛನ್ತಿ ತಾಮಸಾಃ ॥ 18 ॥

ಸತ್ತ್ವಗುಣವು ಹೆಚ್ಚಿರುವಾಗ ಜೀವನು ಸಾವನ್ನು ಪಡೆದರೆ ಆಗ ಒಳ್ಳೆಯ ತತ್ತ್ವಜ್ಞಾನಿಗಳ ನಿರ್ಮಲವಾದ ಲೋಕಗಳನ್ನು ಹೊಂದುತ್ತಾನೆ ; ರಜಸ್ಸು ಹೆಚ್ಚಿರುವಾಗ ಸತ್ತರೆ ಕರ್ಮಾಸಕ್ತರಾದವರ ಲೋಕದಲ್ಲಿ ಹುಟ್ಟುತ್ತಾನೆ ಮತ್ತು ತಮಸ್ಸು ಹೆಚ್ಚಿರುವಾಗ ಸತ್ತರೆ ಅವಿವೇಕಿಗಳ ಹೊಟ್ಟೆಯಲ್ಲಿ ಹುಟ್ಟುತ್ತಾನೆ. ಪುಣ್ಯಕ್ಕೆ ಸಾತ್ತ್ವಿಕವಾದ ನಿರ್ಮಲವಾದ ಫಲವಾಗುವದೆಂದೂ ರಜಸ್ಸಿಗೆ ದುಃಖವೇ ಫಲವೆಂದೂ ತಮಸ್ಸಿಗೆ ಅಜ್ಞಾನವೇ ಫಲವೆಂದೂ ಬಲ್ಲವರು ಹೇಳುತ್ತಾರೆ.

ಸತ್ತ್ವದಿಂದ ಜ್ಞಾನವುಂಟಾಗುವದು. ರಜಸ್ಸಿನಿಂದ ದುರಾಶೆಯುಂಟಾಗುವದು, ತಮಸ್ಸಿನಿಂದ ಮರವೆಯೂ ಮೋಹವೂ ಅಜ್ಞಾನವೂ ಉಂಟಾಗುವವು. ಸಾತ್ತ್ವಿಕರು ಮೇಲಿನ ಲೋಕಗಳಿಗೆ ಹೋಗುವರು, ರಾಜಸರು ನಡುವಣ ಲೋಕದಲ್ಲಿರುವರು, ಕಡೆಯ ಗುಣದ ಸ್ವಭಾವದವರಾದ ತಾಮಸರು ಅಧೋಗತಿಯನ್ನು ಹೊಂದುವರು. (14–18)

ಟೀ॥ ಈ ಶ್ಲೋಕಗಳಲ್ಲಿ ಸತ್ತ್ವಾದಿ ಮುಂತಾದ ಗುಣಗಳ ಸದ್ಯಃಫಲವನ್ನೂ ಜನ್ಮಾಂತರಲೋಕಾಂತರಫಲವನ್ನೂ ಸಂಗ್ರಹವಾಗಿ ತಿಳಿಸಿದೆ. ಮುಖ್ಯವಾಗಿ ಸಾತ್ತ್ವಿಕಗುಣವು ಉತ್ತಮವಾದದ್ದೆಂಬುದು ಇಲ್ಲಿ ವ್ಯಕ್ತವಾಗಿರುತ್ತದೆ.

ನಾನ್ಯಂ ಗುಣೇಭ್ಯಃ ಕರ್ತಾರಂ। ಯದಾ ದ್ರಷ್ಟಾನುಪಶ್ಯತಿ।
ಗುಣೇಭ್ಯಶ್ಚ ಪರಂ ವೇತ್ತಿ। ಮದ್ಭಾವಂ ಸೋಽಧಿಗಚ್ಛತಿ ॥ 19 ॥

ಗುಣಾನೇತಾನತೀತ್ಯ ತ್ರೀನ್ – ದೇಹೀ ದೇಹಸಮುದ್ಭವಾನ್।
ಜನ್ಮಮೃತ್ಯುಜರಾದುಃಖೈ–ರ್ವಿಮುಕ್ತೋಽಮೃತಮಶ್ನುತೇ ॥ 20 ॥

ಯಾವಾಗ ವಿವೇಕಿಯಾಗಿ ಗುಣಗಳಿಗಿಂತ ಬೇರೆ ಯಾವ ಕರ್ತೃವೂ ಇಲ್ಲವೆಂದು ತಿಳಿದುಕೊಳ್ಳುವನೋ, ಗುಣಗಳಿಗಿಂತ ಬೇರೆಯಾಗಿರುವ ಆತ್ಮನನ್ನೂ ಅರಿತುಕೊಳ್ಳುವನೋ ಆಗ ಅವನು ನನ್ನ ಸ್ವರೂಪವನ್ನು ಹೊಂದುವನು. ದೇಹಕ್ಕೆ ಕಾರಣವಾಗಿರುವ ಈ ಮೂರುಗುಣಗಳನ್ನು ದೇಹಿಯಾದವನು ಮೀರಿದರೆ ಹುಟ್ಟು, ಸಾವು, ಮುಪ್ಪು, ದುಃಖ – ಇವುಗಳಿಂದ ಬಿಡುಗಡೆಯನ್ನು ಹೊಂದಿ ಮೋಕ್ಷವನ್ನು ಪಡೆಯುತ್ತಾನೆ. (19–20)

**ಅರ್ಜುನ ಉವಾಚ –**

**ಕೈರ್ಲಿಙ್ಗೈಸ್ತ್ರೀನ್ಗುಣಾನೇತಾ–ನತೀತೋ ಭವತಿ ಪ್ರಭೋ ।**
**ಕಿಮಾಚಾರಃ ಕಥಂ ಚೈತಾಂ–ಸ್ತ್ರೀನ್ಗುಣಾನತಿವರ್ತತೇ ॥ 21 ॥**

**ಅರ್ಜುನನು ಕೇಳಿದ್ದು:**

ಪ್ರಭುವೆ, ಈ ಮೂರುಗುಣಗಳನ್ನೂ ಮೀರಿದವನೆಂಬುದನ್ನು ಯಾವ ಗುರುತುಗಳಿಂದ ತಿಳಿಯಬೇಕು ? ಗುಣಗಳನ್ನು ಮೀರಿದವನ ಆಚಾರವು ಹೇಗಿರುವುದು ? ಅವನು ಈ ಮೂರು ಗುಣಗಳನ್ನೂ ಹೇಗೆ ಮೀರಿರುತ್ತಾನೆ? (21)

ಶ್ರೀಭಗವಾನುವಾಚ –

ಪ್ರಕಾಶಂ ಚ ಪ್ರವೃತ್ತಿಂ ಚ । ಮೋಹಮೇವ ಚ ಪಾಣ್ಡವ ।
ನ ದ್ವೇಷ್ಟಿ ಸಂಪ್ರವೃತ್ತಾನಿ । ನ ನಿವೃತ್ತಾನಿ ಕಾಙ್ಕ್ಷತಿ ॥ 22 ॥

ಉದಾಸೀನವದಾಸೀನೋ । ಗುಣೈರ್ಯೋ ನ ವಿಚಾಲ್ಯತೇ ।
ಗುಣಾ ವರ್ತನ್ತ ಇತ್ಯೇವ । ಯೋಽವತಿಷ್ಠತಿ ನೇಙ್ಗತೇ ॥ 23 ॥

ಸಮದುಃಖಸುಖಃ ಸ್ವಸ್ಥಃ । ಸಮಲೋಷ್ಟಾಶ್ಮಕಾಞ್ಚನಃ ।
ತುಲ್ಯಪ್ರಿಯಾಪ್ರಿಯೋ ಧೀರ–ಸ್ತುಲ್ಯನಿನ್ದಾತ್ಮಸಂಸ್ತುತಿಃ ॥ 24 ॥

ಮಾನಾಪಮಾನಯೋಸ್ತುಲ್ಯ–ಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಮ್ಭಪರಿತ್ಯಾಗೀ । ಗುಣಾತೀತಃ ಸ ಉಚ್ಯತೇ ॥ 25 ॥

ಎಲೈ ಪಾಂಡುಪುತ್ರನೆ, ಜ್ಞಾನಪ್ರಕಾಶವೂ ಕರ್ಮಪ್ರವೃತ್ತಿಯೂ ಮೋಹವೂ ಬಂದೊದಗಿದರೆ ಬೇಡವೆನ್ನದೆ, ಅದು ಹೋದರೆ ಬೇಕೆನ್ನದೆ,

ಉದಾಸೀನನಂತೆ ಇದ್ದುಕೊಂಡು ಯಾವನು ಗುಣಗಳಿಂದ ತನ್ನ ವಿವೇಕವನ್ನು ಬಿಟ್ಟು ಕದಲದೆ ಇರುವನೋ, ಗುಣಗಳು ತಮ್ಮತಮ್ಮ ವ್ಯಾಪಾರವನ್ನು ಮಾಡುತ್ತವೆಯೆಂದೇ ಯಾವನು ಸುಮ್ಮನಿರುವನೋ, ಸ್ವಲ್ಪವೂ ಅಲುಗಾಡದೆ ಇರುವನೋ, ಸುಖದುಃಖಗಳಲ್ಲಿ ಒಂದೇ ರೀತಿಯಿಂದಿರುತ್ತಾ ತನ್ನ ಸ್ವರೂಪದಲ್ಲಿಯೇ ನಿಂತು ಮಣ್ಣುಹೆಂಟೆ, ಕಲ್ಲು, ಚಿನ್ನ – ಇವುಗಳೆಲ್ಲವನ್ನೂ ಸಮವಾಗಿ ಭಾವಿಸುತ್ತಾ , ಬೇಕಾದದ್ದು ಬೇಡವಾದದ್ದು – ಎರಡರಲ್ಲಿಯೂ ಸಮನಾಗಿ ಬುದ್ಧಿಶಾಲಿಯಾಗಿ ತನ್ನನ್ನು ಜನರು ತೆಗಳಿದರೂ ಹೊಗಳಿದರೂ ಒಂದೇ ರೀತಿಯ ಮನಸ್ಸಿನಿಂದಿರುತ್ತಾ ಮಾನ, ಅಪಮಾನ– ಈ ಎರಡರಲ್ಲಿಯೂ ನಿರ್ವಿಕಾರನಾಗಿ ಮಿತ್ರರು, ಶತ್ರುಗಳು – ಈ ಎರಡು ಕಡೆಯವರಲ್ಲಿಯೂ ಸಮವಾಗಿಯೇ ವರ್ತಿಸುತ್ತಾ ಸರ್ವಕರ್ಮಗಳನ್ನೂ ಬಿಟ್ಟಿರುವನೋ ಅವನು ಗುಣಾತೀತನೆನಿಸುವನು.

(22–25)

ಟಿ॥ ಇಲ್ಲಿ ಹೇಳಿರುವವು ಗುಣಾತೀತನಿಗೆ ಲಕ್ಷಣಗಳು, ಸಾಧಕನಿಗೆ ಗುಣಗಳನ್ನು ಮೀರುವದಕ್ಕೆ ಉಪಾಯಗಳು. ಇದು ಮುಂದಿನ ಶ್ಲೋಕಕ್ಕೂ ಹೊಂದುತ್ತದೆ.

**ಮಾಂ ಚ ಯೋಽವ್ಯಭಿಚಾರೇಣ। ಭಕ್ತಿಯೋಗೇನ ಸೇವತೇ।**
**ಸ ಗುಣಾನ್ಸಮತೀತ್ಯೈತಾನ್। ಬ್ರಹ್ಮಭೂಯಾಯ ಕಲ್ಪತೇ ॥ 26 ॥**

**ಬ್ರಹ್ಮಣೋ ಹಿ ಪ್ರತಿಷ್ಠಾಽಹ–ಮಮೃತಸ್ಯಾವ್ಯಯಸ್ಯ ಚ।**
**ಶಾಶ್ವತಸ್ಯ ಚ ಧರ್ಮಸ್ಯ। ಸುಖಸ್ಯೈಕಾನ್ತಿಕಸ್ಯ ಚ ॥ 27 ॥**

**ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ**
**ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ**
**ಗುಣತ್ರಯವಿಭಾಗಯೋಗೋ ನಾಮ ಚತುರ್ದಶೋಽಧ್ಯಾಯಃ**

ಮತ್ತು ಯಾವನು ನನ್ನನ್ನು ಎಂದೆಂದಿಗೂ ತಪ್ಪದ ಭಕ್ತಿಯೋಗದಿಂದ ಸೇವಿಸುತ್ತಿರುವನೋ ಅವನು ಈ ಗುಣಗಳನ್ನು ಮೀರಿ ಬ್ರಹ್ಮಸ್ವರೂಪವನ್ನು ಹೊಂದಲು ಸಮರ್ಥನಾಗುವನು. ಏಕೆಂದರೆ ನಾಶರಹಿತವಾದ ಎಂದೆಂದಿಗೂ ಸವೆಯದ ಬ್ರಹ್ಮಕ್ಕೂ ಶಾಶ್ವತವಾದ ಧರ್ಮಕ್ಕೂ ನಿಯತವಾಗಿ ಒಂದೇ ರೂಪದಲ್ಲಿರುವ ಸುಖಕ್ಕೂ ನಾನೇ ಆಶ್ರಯನು. (26–27)

ಟಿ॥ ಭಕ್ತಿಯು ಸಗುಣಸಾಕ್ಷಾತ್ಕಾರಕ್ಕೆ ಮಾತ್ರವೇ ಅಲ್ಲದೆ ನಿರ್ಗುಣವಾದ ಪರಬ್ರಹ್ಮಸ್ವರೂಪವನ್ನು ಕಂಡುಕೊಂಡು ಆತ್ಯಂತಿಕಮೋಕ್ಷವನ್ನು ಪಡೆಯುವದಕ್ಕೂ ಕಾರಣವಾಗಿರುತ್ತದೆ.

**ಗುಣತ್ರಯವಿಭಾಗಯೋಗವೆಂಬ ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು.**

---------

# ಅಥ ಪಂಚದಶೋಽಧ್ಯಾಯಃ

ಶ್ರೀಭಗವಾನುವಾಚ –
ಊರ್ಧ್ವಮೂಲಮಧಃ ಶಾಖ–ಮಶ್ವತ್ಥಂ ಪ್ರಾಹುರವ್ಯಯಮ್ ।
ಛನ್ದಾಂಸಿ ಯಸ್ಯ ಪರ್ಣಾನಿ । ಯಸ್ತಂ ವೇದ ಸ ವೇದವಿತ್ ॥ 1 ॥
ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ–
ಗುಣಪ್ರವೃದ್ಧಾ ವಿಷಯಪ್ರವಾಲಾಃ ।
ಅಧಶ್ಚ ಮೂಲಾನ್ಯನುಸನ್ತತಾನಿ ।
ಕರ್ಮಾನುಬನ್ಧೀನಿ ಮನುಷ್ಯಲೋಕೇ ॥ 2 ॥

# ಹದಿನೈದನೆಯ ಅಧ್ಯಾಯ

ಶ್ರೀಭಗವಂತನು ಹೇಳಿದ್ದು:

ಮೇಲೆ ಬೇರೂ ಕೆಳಗೆ ಕೊಂಬೆಗಳೂ ಇರುವ ಅಶ್ವತ್ಥವನ್ನು ಅವ್ಯಯ ವೆನ್ನುವರು. ಇದರ ಎಲೆಗಳು ವೇದಗಳು. ಯಾವನು ಆ ವೃಕ್ಷವನ್ನು ಬಲ್ಲನೋ

ಅವನು ವೇದಾರ್ಥಗಳನ್ನು ಬಲ್ಲವನು. ಗುಣಗಳಿಂದ ಬೆಳೆದುಕೊಂಡು ವಿಷಯಗಳೆಂಬ ಚಿಗುರುಗಳುಳ್ಳ ಅದರ ಕೊಂಬೆಗಳು ಕೆಳಗೂ ಮೇಲೂ ಹಬ್ಬಿರುವವು. ಮತ್ತು ಅದರ ಬಿಳಿಲುಗಳು ಕರ್ಮಗಳನ್ನುಂಟುಮಾಡಿಸುವದಾಗಿ ಮನುಷ್ಯಲೋಕದಲ್ಲಿ ಕೆಳಕ್ಕೆ ಕೂಡ ಒಂದರಹಿಂದೊಂದು ಬಿಡದೆ ಬೆಳೆದುಕೊಂಡಿರುವವು.

ಟಿ॥ ಸಂಸಾರವನ್ನು ಅಶ್ವತ್ಥವೆಂದು ವರ್ಣಿಸುವದು ಶ್ರುತಿಸ್ಮೃತಿಗಳ ರೂಢಿ. ಉತ್ಕೃಷ್ಟವಾದ ಬ್ರಹ್ಮವೇ ಇದಕ್ಕೆ ಮೂಲವು. ಮಹದಹಂಕಾರತನ್ಮಾತ್ರೆಗಳು ಕೆಳಕ್ಕೆ ಹಬ್ಬಿರುವ ಶಾಖೆಗಳು ; ಅನಾದಿಯಾಗಿ ಇದು ಹೀಗೆಯೇ ಇದ್ದುಕೊಂಡಿರುವದರಿಂದ ಇದು ಅವ್ಯಯವು. ಮರವನ್ನು ಕಾಪಾಡುವ ಎಲೆಗಳಂತೆ ವೇದವು ಧರ್ಮಾಧರ್ಮಫಲಗಳನ್ನು ತಿಳಿಸಿ ಈ ವೃಕ್ಷವನ್ನು ಕಾಪಾಡುತ್ತದೆ.

ನ ರೂಪಮಸ್ಯೇಹ ತಥೋಪಲಭ್ಯತೇ ।
ನಾನ್ತೋ ನ ಚಾದಿರ್ನ ಚ ಸಂಪ್ರತಿಷ್ಠಾ ।
ಅಶ್ವತ್ಥಮೇನಂ ಸುವಿರೂಢಮೂಲ–
ಮಸಙ್ಗಶಸ್ತ್ರೇಣ ದೃಢೇನ ಛಿತ್ವಾ ॥ 3 ॥

ತತಃ ಪದಂ ತತ್ಪರಿಮಾರ್ಗಿತವ್ಯಂ।

ಯಸ್ಮಿನ್ಗತಾ ನ ನಿವರ್ತನ್ತಿ ಭೂಯಃ।

ತಮೇವ ಚಾದ್ಯಂ ಪುರುಷಂ ಪ್ರಪದ್ಯೇ।

ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥ 4 ॥

ಇದಕ್ಕೆ ಇಲ್ಲಿ ಇಂಥ ರೂಪವೆಂಬುದು ಕಂಡುಬರುವದಿಲ್ಲ ; ಇದಕ್ಕೆ ಕೊನೆಯಿಲ್ಲ, ಮೊದಲಿಲ್ಲ, ನಡುವಣಸ್ಥಿತಿಯೂ ಇಲ್ಲ. ಚೆನ್ನಾಗಿ ಬೇರುಗಳನ್ನು ಬಿಟ್ಟುಕೊಂಡಿರುವ ಈ ಅಶ್ವತ್ಥವನ್ನು ದೃಢವಾದ ಅಸಂಗವೆಂಬ ಶಸ್ತ್ರದಿಂದ ಕತ್ತರಿಸಿ ಆಮೇಲೆ, ಎಲ್ಲಿಗೆ ಹೋದವರು ಮತ್ತೆ ಹಿಂತಿರುಗುವದಿಲ್ಲವೋ ಆ ಸ್ಥಾನವನ್ನು ಹುಡುಕಬೇಕು. 'ಯಾವನಿಂದ ಈ ಪುರಾತನವಾದ ವೃಕ್ಷವು ಬೆಳೆದುಕೊಂಡುಬಂದಿರುವದೋ ಆ ಆದ್ಯಪುರುಷನನ್ನೇ ಶರಣು ಹೊಕ್ಕಿದ್ದೇನೆ' ಎಂದು ಹುಡುಕಬೇಕು. (3–4)

ನಿರ್ಮಾನಮೋಹಾ ಜಿತಸಙ್ಗದೋಷಾ–

ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ।

**ದ್ವನ್ದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈ–**
**ರ್ಗಚ್ಛನ್ತ್ಯಮೂಢಾಃ ಪದಮವ್ಯಯಂ ತತ್ ॥ 5 ॥**

**ನ ತದ್ಭಾಸಯತೇ ಸೂರ್ಯೋ। ನ ಶಶಾಙ್ಕೋ ನ ಪಾವಕಃ।**
**ಯದ್ಗತ್ವಾ ನ ನಿವರ್ತನ್ತೇ। ತದ್ಧಾಮ ಪರಮಂ ಮಮ ॥ 6 ॥**

ಅಭಿಮಾನವಾಗಲಿ ಅವಿವೇಕವಾಗಲಿ ಇಲ್ಲದವರೂ ಸಂಗದೋಷವನ್ನು ಗೆದ್ದುಕೊಂಡಿರುವವರೂ ಅಧ್ಯಾತ್ಮಚಿಂತನೆಯಲ್ಲಿಯೇ ಯಾವಾಗಲೂ ನಿಂತಿರುವವರೂ ಕಾಮಗಳನ್ನೆಲ್ಲ ತೊಲಗಿಸಿಕೊಂಡವರೂ ಸುಖದುಃಖರೂಪವಾದ ದ್ವಂದ್ವಗಳಿಂದ ಬಿಡುಗಡೆಯನ್ನು ಹೊಂದಿದವರೂ ಆದ ಮೋಹವಿಲ್ಲದ ಜ್ಞಾನಿಗಳು ಆ ಅವ್ಯಯವಾದ ಪರಮಪದವನ್ನು ಸೇರುವರು, ಅದನ್ನು ಸೂರ್ಯನೂ ಬೆಳಗಲಾರನು, ಚಂದ್ರನೂ ಬೆಳಗಲಾರನು. ಅಗ್ನಿಯೂ ಬೆಳಗಲಾರನು. ಎಲ್ಲಿಗೆ ಹೋದವರು ಮರಳಿ ಬರುವದಿಲ್ಲವೋ ಆ ಪರಮಸ್ಥಾನವು ನನ್ನದು. (5–6)

**ಮಮೈವಾಂಶೋ ಜೀವಲೋಕೇ। ಜೀವಭೂತಃ ಸನಾತನಃ।**
**ಮನಃಷಷ್ಠಾನೀನ್ದ್ರಿಯಾಣಿ। ಪ್ರಕೃತಿಸ್ಥಾನಿ ಕರ್ಷತಿ ॥ 7 ॥**

ಶರೀರಂ ಯದವಾಪ್ನೋತಿ। ಯಚ್ಚಾಪ್ಯುತ್ಕ್ರಾಮತೀಶ್ವರಃ।
ಗೃಹೀತ್ವೈತಾನಿ ಸಂಯಾತಿ। ವಾಯುರ್ಗನ್ಧಾನಿವಾಶಯಾತ್ ॥ 8 ॥
ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ। ರಸನಂ ಘ್ರಾಣಮೇವ ಚ।
ಅಧಿಷ್ಠಾಯ ಮನಶ್ಚಾಯಂ। ವಿಷಯಾನುಪಸೇವತೇ ॥ 9 ॥
ಉತ್ಕ್ರಾಮನ್ತಂ ಸ್ಥಿತಂ ವಾಪಿ। ಭುಞ್ಜಾನಂ ವಾ ಗುಣಾನ್ವಿತಮ್।
ವಿಮೂಢಾ ನಾನುಪಶ್ಯನ್ತಿ। ಪಶ್ಯನ್ತಿ ಜ್ಞಾನಚಕ್ಷುಷಃ ॥ 10 ॥

ಸಂಸಾರದಲ್ಲಿ ಅನಾದಿಕಾಲದಿಂದಲೂ ಜೀವನಾಗಿರುವದು ನನ್ನದೇ ಅಂಶವು. ಆ ಜೀವನು ಪ್ರಕೃತಿಯ ಮನಸ್ಸಿನೊಡಗೂಡಿ ಆರಾಗಿರುವ ಇಂದ್ರಿಯ ಗಳನ್ನು ಎಳೆದುಕೊಳ್ಳುವನು. ಈ ಶರೀರದೊಡೆಯನು ಯಾವಾಗ ದೇಹವನ್ನು ಬಿಟ್ಟುಹೋಗುವನೋ (ಆಗ ಅವುಗಳನ್ನು ಎಳೆದುಕೊಳ್ಳುವನು) ; ಯಾವಾಗ ಮತ್ತೊಂದು ಶರೀರವನ್ನು ಹೊಂದುವನೋ ಆಗ ಗಾಳಿಯು ಹೂವೇ ಮುಂತಾದ ಆಶ್ರಯದಿಂದ ವಾಸನೆಯನ್ನು ಎಳೆದುಕೊಂಡು ಹೋಗುವಹಾಗೆ ಇವುಗಳನ್ನು

ತೆಗೆದುಕೊಂಡು ಹೋಗುತ್ತಾನೆ. ಶ್ರೋತ್ರ, ಚಕ್ಷುಸ್ಸು, ಸ್ಪರ್ಶ, ರಸ, ಘ್ರಾಣ – ಇವುಗಳನ್ನೂ ಮನಸ್ಸನ್ನೂ ಆಶ್ರಯಿಸಿಕೊಂಡು ಇವನು ವಿಷಯಗಳನ್ನು ಭೋಗಿಸುತ್ತಾನೆ. ಶರೀರವನ್ನು ಬಿಟ್ಟುಹೋಗುವ, ಅದರಲ್ಲಿರುವ ಅಥವಾ ಗುಣಾನ್ವಿತನಾಗಿ ಭೋಗಿಸುವ ಈ ಜೀವನನ್ನು ಮೂಢರು ಕಾಣದಿರುವರು, ಜ್ಞಾನಚಕ್ಷುಸ್ಸಿನಿಂದೊಡಗೂಡಿದವರು ಕಾಣುವರು. (7–10)

ಟಿ॥ ಜೀವರು ಆತ್ಮನ ಅಂಶವೇ ಆಗಿದ್ದರೂ ಆ ಅಂಶದ ಬಲದಿಂದಲೇ ತಾವು ಎಲ್ಲಾ ವ್ಯವಹಾರವನ್ನೂ ಮಾಡುತ್ತಿದ್ದರೂ ಮೂಢರು ಆತ್ಮಸ್ವರೂಪವನ್ನು ಅರಿತುಕೊಳ್ಳಲಾರದೆ ಇರುವರು.

**ಯತನ್ತೋ ಯೋಗಿನಶ್ಚೈನಂ । ಪಶ್ಯನ್ತ್ಯಾತ್ಮನ್ಯವಸ್ಥಿತಮ್ ।**
**ಯತನ್ತೋಽಪ್ಯಕೃತಾತ್ಮಾನೋ । ನೈನಂ ಪಶ್ಯನ್ತ್ಯಚೇತಸಃ ॥ 11 ॥**

ಸಮಾಹಿತಚಿತ್ತರಾಗಿ ಪ್ರಯತ್ನಮಾಡುವವರು ತಮ್ಮ ಅಂತಃಕರಣದಲ್ಲಿಯೇ ಇವನು ಇರುವನೆಂದು ಅರಿತುಕೊಳ್ಳುವರು. ಯಾರು ಅಂತಃಕರಣ

ಸಂಸ್ಕಾರವಿಲ್ಲದವರೋ ಆ ಅವಿವೇಕಿಗಳು ಪ್ರಯತ್ನಪಟ್ಟರೂ ಇವನನ್ನು ಕಾಣಲರಿಯರು. (11)

ಯದಾದಿತ್ಯಗತಂ ತೇಜೋ । ಜಗದ್ಭಾಸಯತೇಽಖಿಲಮ್ ।
ಯಚ್ಚನ್ದ್ರಮಸಿ ಯಚ್ಚಾಗ್ನೌ । ತತ್ತೇಜೋ ವಿದ್ಧಿ ಮಾಮಕಮ್ ॥ 12 ॥

ಗಾಮಾವಿಶ್ಯ ಚ ಭೂತಾನಿ । ಧಾರಯಾಮ್ಯಹಮೋಜಸಾ ।
ಪುಷ್ಣಾಮಿ ಚೌಷಧೀಃ ಸರ್ವಾಃ । ಸೋಮೋ ಭೂತ್ವಾ ರಸಾತ್ಮಕಃ ॥ 13 ॥

ಅಹಂ ವೈಶ್ವಾನರೋ ಭೂತ್ವಾ । ಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ । ಪಚಾಮ್ಯನ್ನಂ ಚತುರ್ವಿಧಮ್ ॥ 14 ॥

ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟೋ ।
ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ।
ವೇದೈಶ್ಚ ಸರ್ವೈರಹಮೇವ ವೇದ್ಯೋ ।
ವೇದಾನ್ತಕೃದ್ವೇದವಿದೇವ ಚಾಹಮ್ ॥ 15 ॥

ಸೂರ್ಯನಲ್ಲಿರುವ ಯಾವ ತೇಜಸ್ಸು ಜಗತ್ತೆಲ್ಲವನ್ನೂ ಬೆಳಗುತ್ತಿರುವದೋ ಚಂದ್ರನಲ್ಲಿ ಯಾವ ತೇಜಸ್ಸಿರುವದೋ ಮತ್ತು ಅಗ್ನಿಯಲ್ಲಿ ಯಾವ ತೇಜಸ್ಸಿರುವದೋ ಆ ತೇಜಸ್ಸನ್ನು ನನ್ನದೇ ಎಂದು ತಿಳಿ ; ನಾನು ಭೂಮಿಯನ್ನು ಹೊಕ್ಕು ಪ್ರಾಣಿಗಳನ್ನು ನನ್ನ ಬಲದಿಂದ ಹಿಡಿದೆತ್ತಿಕೊಂಡಿರುವೆನು. ರಸಾತ್ಮಕನಾದ ಸೋಮನಾಗಿದ್ದುಕೊಂಡು ಸಕಲಸಸ್ಯಗಳನ್ನೂ ಪೋಷಿಸುವೆನು. ನಾನು ವೈಶ್ವಾನರಾಗ್ನಿಯಾಗಿ ಪ್ರಾಣಿಗಳ ದೇಹವನ್ನು ಆಶ್ರಯಿಸಿ ಪ್ರಾಣಾಪಾನಗಳಿಂದೊಡಗೂಡಿ ನಾಲ್ಕು ಬಗೆಯ ಆಹಾರವನ್ನೂ ಜೀರ್ಣಗೊಳಿಸುವೆನು. ನಾನು ಎಲ್ಲರ ಹೃದಯದಲ್ಲಿಯೂ ಇರುತ್ತಿರುವೆನು ; ನನ್ನಿಂದಲೇ ನೆನಪು, ಅರಿವು, ಇವುಗಳ ನಾಶವು – ಇವೆಲ್ಲವೂ ಆಗುತ್ತಿರುವವು. ಸರ್ವವೇದಗಳಿಂದ ತಿಳಿಯಬೇಕಾದವನು ನಾನೇ. ವೇದಾಂತಾರ್ಥಕ್ಕೆ ಸಂಪ್ರದಾಯಪ್ರವರ್ತಕನು ನಾನೇ, ವೇದಾರ್ಥವನ್ನು ತಿಳಿದಿರುವವನೂ ನಾನೇ. (12–15)

ಟಿ॥ ಮೇಲೆ ವರ್ಣಿಸಿರುವದು ಭಗವಂತನ ವಿಭೂತಿಯು ಮತ್ತು ಮಹಿಮೆಯು.

ದ್ವಾವಿಮೌ ಪುರುಷೌ ಲೋಕೇ। ಕ್ಷರಶ್ಚಾಕ್ಷರ ಏವ ಚ।
ಕ್ಷರಃ ಸರ್ವಾಣಿ ಭೂತಾನಿ। ಕೂಟಸ್ಥೋಽಕ್ಷರ ಉಚ್ಯತೇ ॥ 16 ॥

ಉತ್ತಮಃ ಪುರುಷಸ್ತ್ವನ್ಯಃ। ಪರಮಾತ್ಮೇತ್ಯುದಾಹೃತಃ।
ಯೋ ಲೋಕತ್ರಯಮಾವಿಶ್ಯ। ಭಿಭರ್ತ್ಯವ್ಯಯ ಈಶ್ವರಃ ॥ 17 ॥

ಯಸ್ಮಾತ್ಕ್ಷರಮತೀತೋಽಹ–ಮಕ್ಷರಾದಪಿ ಚೋತ್ತಮಃ।
ಅತೋಽಸ್ಮಿ ಲೋಕೇ ವೇದೇ ಚ। ಪ್ರಥಿತಃ ಪುರುಷೋತ್ತಮಃ ॥ 18 ॥

ಯೋ ಮಾಮೇವಮಸಮ್ಮೂಢೋ। ಜಾನಾತಿ ಪುರುಷೋತ್ತಮಮ್।
ಸ ಸರ್ವವಿದ್ಭಜತಿ ಮಾಂ। ಸರ್ವಭಾವೇನ ಭಾರತ ॥ 19 ॥

ಈ ಲೋಕದಲ್ಲಿ ಕ್ಷರ, ಅಕ್ಷರ–ಎಂಬೀ ಇಬ್ಬರು ಪುರುಷರು ಇರುವರು; ಕ್ಷರವೆಂದರೆ ಸಮಸ್ತಭೂತಗಳು, ಕೂಟಸ್ಥವೇ ಅಕ್ಷರನೆನಿಸುವದು. ಪರಮಾತ್ಮನೆಂದು ಕರೆಯಲ್ಪಡುವ ಉತ್ತಮಪುರುಷನು ಬೇರೆ ; ಆತನು ಮೂರುಲೋಕಗಳನ್ನೂ ಪ್ರವೇಶಿಸಿ ಎಲ್ಲವನ್ನೂ ಧರಿಸಿಕೊಂಡಿರುವ ಅವ್ಯಯನಾದ ಈಶ್ವರನು.

ಹೀಗೆ ನಾನು ಕ್ಷರವನ್ನೂ ಮೀರಿ ಅಕ್ಷರಕ್ಕಿಂತಲೂ ಉತ್ತಮನಾಗಿರುವದರಿಂದ ಲೋಕದಲ್ಲಿಯೂ ವೇದದಲ್ಲಿಯೂ ನಾನು ಪುರುಷೋತ್ತಮನೆಂದು ಪ್ರಸಿದ್ಧನಾಗಿರುತ್ತೇನೆ. ಎಲೈ ಭರತವಂಶೋತ್ಪನ್ನನೆ, ಹೀಗೆ ನಾನು ಪುರುಷೋತ್ತಮನಾಗಿರುವೆನೆಂಬುದನ್ನು ಯಾವನು ತಪ್ಪುತಿಳಿವಳಿಕೆಯನ್ನಳಿದು ತಿಳಿದುಕೊಳ್ಳುವನೋ ಆ ಸರ್ವಜ್ಞನು ನನ್ನನ್ನು ಸರ್ವಾತ್ಮಭಾವದಿಂದ ಭಜಿಸುತ್ತಾನೆ.(16–19)

ಟಿ॥ ಕ್ಷರವೆಂದರೆ ವ್ಯಕ್ತವಾಗಿ ತೋರುತ್ತಾ ನಾಶವಾಗುವ ಕಾರ್ಯರೂಪವು ; ಅಕ್ಷರವೆಂದರೆ ಅವ್ಯಕ್ತವಾಗಿದ್ದುಕೊಂಡು ಜ್ಞಾನದಿಂದಲ್ಲದೆ ಬೇರೊಂದರಿಂದ ನಾಶಪಡಿಸಲಾಗದ ಕಾರಣರೂಪವು ; ಕಾರ್ಯಕಾರಣರೂಪಗಳೆರಡನ್ನೂ ಮೀರಿರುವ ಶುದ್ಧಾತ್ಮನೇ ಪುರುಷೋತ್ತಮನು.

ಇತಿ ಗುಹ್ಯತಮಂ ಶಾಸ್ತ್ರ–ಮಿದಮುಕ್ತಂ ಮಯಾನಘ ।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ । ಕೃತಕೃತ್ಯಶ್ಚ ಭಾರತ ॥ 20 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಪುರುಷೋತ್ತಮಯೋಗೋ ನಾಮ ಪಂಚದಶೋಽಧ್ಯಾಯಃ

ಎಲೈ ಪಾಪರಹಿತನಾದ ಭರತವಂಶೋತ್ಪನ್ನನೆ, ಹೀಗೆ ಅತ್ಯಂತ ರಹಸ್ಯವಾದ ಈ ಶಾಸ್ತ್ರವನ್ನು ನಾನು ಹೇಳಿರುತ್ತೇನೆ. ಇದನ್ನು ತಿಳಿದುಕೊಂಡರೆ ಬುದ್ಧಿವಂತನೂ ಕೃತಕೃತ್ಯನೂ ಆಗುವನು. (20)

ಟೀ॥ ವ್ಯಕ್ತಾವ್ಯಕ್ತಪ್ರಪಂಚಕ್ಕಿಂತಲೂ ಅತಿರಿಕ್ತನಾಗಿರುವ ಶುದ್ಧಪರಮಾತ್ಮನನ್ನು ಅರಿತುಕೊಂಡರೆ ತಿಳಿಯತಕ್ಕದ್ದನ್ನೆಲ್ಲ ತಿಳಿದಂತಾಯಿತು. ಆ ತಿಳಿವು ಬಂದವನು ಮತ್ತೇನೂ ಮಾಡಿಕೊಳ್ಳತಕ್ಕ ಸಾಧನವಿರುವದಿಲ್ಲ. ಸಮಸ್ತಗೀತಾರ್ಥವೂ ವೇದಾರ್ಥವೂ ಇಷ್ಟೇ.

ಪುರುಷೋತ್ತಮಯೋಗವೆಂಬ ಹದಿನೈದನೆಯ ಅಧ್ಯಾಯವು ಮುಗಿಯಿತು.

———————

## ಅಥ ಷೋಡಶೋಽಧ್ಯಾಯಃ

ಶ್ರೀಭಗವಾನುವಾಚ –

ಅಭಯಂ ಸತ್ತ್ವಸಂಶುದ್ಧಿ–ರ್ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ । ಸ್ವಾಧ್ಯಾಯಸ್ತಪ ಆರ್ಜವಮ್ ॥ 1 ॥

ಅಹಿಂಸಾ ಸತ್ಯಮಕ್ರೋಧ–ಸ್ತ್ಯಾಗಃ ಶಾನ್ತಿರಪೈಶುನಮ್ ।
ದಯಾ ಭೂತೇಷ್ವಲೋಲುಪ್ತ್ವಂ । ಮಾರ್ದವಂ ಹ್ರೀರಚಾಪಲಮ್ ॥ 2 ॥

ತೇಜಃ ಕ್ಷಮಾ ಧೃತಿಃ ಶೌಚ–ಮದ್ರೋಹೋ ನಾತಿಮಾನಿತಾ ।
ಭವನ್ತಿಸಮ್ಪದಂ ದೈವೀ–ಮಭಿಜಾತಸ್ಯ ಭಾರತ ॥ 3 ॥

## ಹದಿನಾರನೆಯ ಅಧ್ಯಾಯ

ಶ್ರೀಭಗವಂತನೆಂದದ್ದು:

ಅಂಜಿಕೆಯಿಲ್ಲದಿರುವದು, ಅಂತಃಕರಣಶುದ್ಧಿ, ಜ್ಞಾನದಲ್ಲಿಯೂ ಯೋಗದಲ್ಲಿಯೂ ನೆಲೆನಿಂತಿರುವದು, ದಾನಮಾಡುವದು, ಇಂದ್ರಿಯನಿಗ್ರಹ,

ಯಜ್ಞವನ್ನುಮಾಡುವದು, ವೇದಾಧ್ಯಯನಮಾಡುತ್ತಿರುವದು, ತಪಸ್ಸು, ಸರಳತನದಿಂದಿರುವದು, ಅಹಿಂಸೆ, ಸತ್ಯವನ್ನುನುಡಿಯುವದು, ಸಿಟ್ಟನ್ನು ತಡೆದುಕೊಳ್ಳುವದು, ತ್ಯಾಗವು, ಅಂತಃಕರಣವನ್ನು ಶಾಂತವಾಗಿಟ್ಟುಕೊಳ್ಳುವದು, ಚಾಡಿಯನ್ನು ಹೇಳದಿರುವದು, ಪ್ರಾಣಿಗಳಲ್ಲಿ ದಯೆ, ವಿಷಯಲಂಪಟನಲ್ಲದಿರುವದು, ಮೃದುವಾಗಿರುವದು, ನಾಚಿಕೆ, ಚಾಪಲ್ಯವಿಲ್ಲದಿರುವದು, ಗಟ್ಟಿಗನಾಗಿರುವದು, ತಪ್ಪನ್ನು ಮನ್ನಿಸುವದು, ಕೈಕಾಲುಗಳನ್ನು ಸೋಲಬಿಡದಿರುವ ಧೃತಿ, ಶುಚಿತ್ವ, ಮತ್ತೊಬ್ಬರಿಗೆ ಕೇಡುಬಗೆಯದಿರುವದು, ತಾನು ದೊಡ್ಡವನೆಂದು ಹೆಮ್ಮೆಯಿಲ್ಲದಿರುವದು – ಇವುಗಳೆಲ್ಲವೂ, ಎಲೈ ಭರತವಂಶೋತ್ಪನ್ನನೆ, ದೇವಸಂಪತ್ತಿಗೆ ತಕ್ಕವನಾಗಿ ಹುಟ್ಟಿರುವವನಲ್ಲಿರುವವು. (1–3)

ದಮ್ಭೋ ದರ್ಪೋಽಭಿಮಾನಶ್ಚ । ಕ್ರೋಧಃ ಪಾರುಷ್ಯಮೇವ ಚ ।
ಅಜ್ಞಾನಂ ಚಾಭಿಜಾತಸ್ಯ । ಪಾರ್ಥ ಸಮ್ಪದಮಾಸುರೀಮ್ ॥ 4 ॥

ದೈವೀ ಸಮ್ಪದ್ವಿಮೋಕ್ಷಾಯ । ನಿಬನ್ಧಾಯಾಸುರೀ ಮತಾ ।
ಮಾ ಶುಚಃ ಸಮ್ಪದಂ ದೈವೀ–ಮಭಿಜಾತೋಽಸಿ ಪಾಣ್ಡವ ॥ 5 ॥

ದಾಂಭಿಕತನ, ಸೊಕ್ಕು, ಹೆಮ್ಮೆ, ಸಿಡುಕು, ಮತ್ತೊಬ್ಬರ ಮನಸ್ಸನ್ನು ನೋಯಿಸುವ ಬಿರುನುಡಿ, ಅಜ್ಞಾನ – ಇವುಗಳು ಎಲೈ ಪಾರ್ಥನೆ, ಆಸುರ ಸಂಪತ್ತಿಗೆ ತಕ್ಕವನಾಗಿ ಹುಟ್ಟಿದವನಲ್ಲಿರುವವು. ದೈವಸಂಪತ್ತು ಮೋಕ್ಷಕ್ಕೂ ಆಸುರ ಸಂಪತ್ತು ಬಂಧಕ್ಕೂ ಕಾರಣವಾಗುವವೆಂದು ಬಲ್ಲವರ ಮತವು. ಎಲೈ ಪಾಂಡುಪುತ್ರನೆ, ನೀನು ದೈವಸಂಪತ್ತಿಗೆ ತಕ್ಕವನಾಗಿಯೇ ಹುಟ್ಟಿರುವೆ, ಶೋಕಿಸದಿರು. (4–5)

ಟೀ॥ ಬೆಳೆಯುವ ಪೈರು ಮೊಳಕೆಯಲ್ಲಿಯೇ ತೋರುವದೆಂಬಂತೆ ಮುಂದೆ ಕಲ್ಯಾಣವನ್ನು ಹೊಂದುವವನಲ್ಲಿ ಆಸುರಸಂಪತ್ತು ಇರುವದಿಲ್ಲ. ದೈವಸಂಪತ್ತಿನ ವಿವರದಲ್ಲಿ ಹೇಳಿರುವ ಗುಣಗಳಲ್ಲೆಲ್ಲ ಶಾಸ್ತ್ರಾಚಾರ್ಯರಿಂದ ತತ್ತ್ವವನ್ನು ತಿಳಿದುಕೊಳ್ಳುವದೆಂಬ ಜ್ಞಾನ, ಅದನ್ನೇ ಚಿಂತಿಸುತ್ತಾ ಅನುಭವಕ್ಕೆ ತಂದುಕೊಳ್ಳುವದೆಂಬ ಯೋಗ–ಇವೆರಡರಲ್ಲಿಯೇ ನೆಲೆನಿಂತಿರುವದೆಂಬ ಗುಣವು ಅತಿಮುಖ್ಯವಾದದ್ದು ಮಿಕ್ಕದ್ದೆಲ್ಲ ಇವಕ್ಕೆ ಸಹಕಾರಿಯಾಗಿರುವದು.

ದ್ವೌ ಭೂತಸರ್ಗೌ ಲೋಕೇಽಸ್ಮಿನ್ । ದೈವ ಆಸುರ ಏವ ಚ ।
ದೈವೋ ವಿಸ್ತರಶಃ ಪ್ರೋಕ್ತ—ಆಸುರಂ ಪಾರ್ಥ ಮೇ ಶೃಣು ॥ 6 ॥

ಪ್ರವೃತ್ತಿಂ ಚ ನಿವೃತ್ತಿಂ ಚ । ಜನಾ ನ ವಿದುರಾಸುರಾಃ ।
ನ ಶೌಚಂ ನಾಪಿ ಚಾಚಾರೋ । ನ ಸತ್ಯಂ ತೇಷು ವಿದ್ಯತೇ ॥ 7 ॥

ಅಸತ್ಯಮಪ್ರತಿಷ್ಠಂ ತೇ । ಜಗದಾಹುರನೀಶ್ವರಮ್ ।
ಅಪರಸ್ಪರಸಮ್ಭೂತಂ । ಕಿಮನ್ಯತ್ಕಾಮಹೈತುಕಮ್ ॥ 8 ॥

ಏತಾಂ ದೃಷ್ಟಿಮವಷ್ಟಭ್ಯ । ನಷ್ಟಾತ್ಮಾನೋಽಲ್ಪಬುದ್ಧಯಃ ।
ಪ್ರಭವನ್ತ್ಯುಗ್ರಕರ್ಮಾಣಃ । ಕ್ಷಯಾಯ ಜಗತೋಽಹಿತಾಃ ॥ 9 ॥

ಕಾಮಮಾಶ್ರಿತ್ಯ ದುಷ್ಪೂರಂ । ದಮ್ಭಮಾನಮದಾನ್ವಿತಾಃ ।
ಮೋಹಾದ್ಗೃಹೀತ್ವಾಸದ್ಗ್ರಾಹಾನ್ । ಪ್ರವರ್ತನ್ತೇಽಶುಚಿವ್ರತಾಃ ॥ 10 ॥

ಚಿನ್ತಾಮಪರಿಮೇಯಾಂ ಚ । ಪ್ರಲಯಾನ್ತಾಮುಪಾಶ್ರಿತಾಃ ।
ಕಾಮೋಪಭೋಗಪರಮಾ— ಏತಾವದಿತಿ ನಿಶ್ಚಿತಾಃ ॥ 11 ॥

ಆಶಾಪಾಶಶತೈರ್ಬದ್ಧಾಃ। ಕಾಮಕ್ರೋಧಪರಾಯಣಾಃ।
ಈಹನ್ತೇ ಕಾಮಭೋಗಾರ್ಥ–ಮನ್ಯಾಯೇನಾರ್ಥಸಞ್ಚಯಾನ್ ॥ 12 ॥

ಇದಮದ್ಯ ಮಯಾ ಲಬ್ಧ–ಮಿದಂ ಪ್ರಾಪ್ಸ್ಯೇ ಮನೋರಥಮ್।
ಇದಮಸ್ತೀದಮಪಿ ಮೇ। ಭವಿಷ್ಯತಿ ಪುನರ್ಧನಮ್ ॥ 13 ॥

ಅಸೌ ಮಯಾ ಹತಃ ಶತ್ರು–ರ್ಹನಿಷ್ಯೇ ಚಾಪರಾನಪಿ।
ಈಶ್ವರೋಽಹಮಹಂ ಭೋಗೀ। ಸಿದ್ಧೋಽಹಂ ಬಲವಾನ್ಸುಖೀ ॥ 14 ॥

ಆಢ್ಯೋಽಭಿಜನವಾನಸ್ಮಿ। ಕೋಽನ್ಯೋಽಸ್ತಿ ಸದೃಶೋ ಮಯಾ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ–ಇತ್ಯಜ್ಞಾನವಿಮೋಹಿತಾಃ ॥ 15 ॥

ಅನೇಕಚಿತ್ತವಿಭ್ರಾನ್ತಾ–ಮೋಹಜಾಲಸಮಾವೃತಾಃ।
ಪ್ರಸಕ್ತಾಃ ಕಾಮಭೋಗೇಷು। ಪತನ್ತಿ ನರಕೇಽಶುಚೌ ॥ 16 ॥

ಆತ್ಮಸಮ್ಭಾವಿತಾಃ ಸ್ತಬ್ಧಾ–ಧನಮಾನಮದಾನ್ವಿತಾಃ।
ಯಜನ್ತೇ ನಾಮಯಜ್ಞೈಸ್ತೇ। ದಮ್ಭೇನಾವಿಧಿಪೂರ್ವಕಮ್ ॥ 17 ॥

**ಅಹಙ್ಕಾರಂ ಬಲಂ ದರ್ಪಂ। ಕಾಮಂ ಕ್ರೋಧಂ ಚ ಸಂಶ್ರಿತಾಃ।**
**ಮಾಮಾತ್ಮಪರದೇಹೇಷು। ಪ್ರದ್ವಿಷನ್ತೋಽಭ್ಯಸೂಯಕಾಃ ॥ 18 ॥**

ಈ ಲೋಕದಲ್ಲಿ ದೈವ, ಆಸುರ ಎಂದು ಎರಡು ಬಗೆಯ ಪ್ರಾಣಿಸೃಷ್ಟಿಗಳಿರುವವು. ಎಲೈ ಪಾರ್ಥನೆ, ದೈವಸೃಷ್ಟಿಯನ್ನು ವಿಸ್ತಾರವಾಗಿ ಹೇಳಿದ್ದಾಯಿತು. ಇನ್ನು ಆಸುರಸೃಷ್ಟಿಯನ್ನು ಹೇಳುವೆನು ಕೇಳು. ಆಸುರಜನರಿಗೆ ಇದು ಮಾಡತಕ್ಕದ್ದು, ಇದು ಬಿಡತಕ್ಕದ್ದು – ಎಂಬುದು ತಿಳಿಯದು. ಅವರಲ್ಲಿ ಶುಚಿತ್ವವಿರುವದಿಲ್ಲ, ಆಚಾರವಿರುವದಿಲ್ಲ, ಸತ್ಯವೂ ಇರುವದಿಲ್ಲ. ಜಗತ್ತೆಲ್ಲವೂ ಅಸತ್ಯಮಯವಾಗಿರುವದೆಂದೂ ಅದಕ್ಕೆ ಧರ್ಮಾಧರ್ಮದ ಅಡಿಗಟ್ಟು ಇಲ್ಲವೆಂದೂ ಈಶ್ವರನೂ ಇಲ್ಲವೆಂದೂ ಕಾಮವೆಂಬ ಹೇತುವಿನಿಂದ ಒಬ್ಬರೊಡನೊಬ್ಬರು ಸೇರುವವರಿಂದಲೇ ಎಲ್ಲವೂ ಆಗಿರುವದೇ ಹೊರತು ಮತ್ತೇನು ?– ಎಂದೂ ಅವರು ಹೇಳುತ್ತಿರುವರು. ಈ ದೃಷ್ಟಿಯನ್ನು ಅವಲಂಬಿಸಿ ತಾವೂ ಹಾಳಾಗುವ, ಆ ಅಲ್ಪಮತಿಗಳು ಜಗತ್ತಿಗೇ ಶತ್ರುಗಳಾಗಿ ಅದರ ನಾಶಕ್ಕಾಗಿ ಕ್ರೂರಕರ್ಮಿಗಳಾಗಿ ಹುಟ್ಟುವರು. ಎಂದಿಗೂ ತುಂಬಲಾರದ ಕಾಮವನ್ನು ಅವಲಂಬಿಸಿ ದಂಭ,

ಅಭಿಮಾನ, ಮದ – ಇವುಗಳಿಂದೊಡಗೂಡಿ ಅವಿವೇಕದಿಂದ ಕೆಟ್ಟಸಂಕಲ್ಪ ವನ್ನೇ ಹಿಡಿದು ಅಶುಚಿಯಾದ ವರ್ತನೆಯನ್ನೇ ನಿಯಮವಾಗಿಟ್ಟುಕೊಂಡು ಮುಂದುವರಿಯುತ್ತಿರುವರು. ಸಾಯುವವರೆಗೂ ಅಳತೆಯಿಲ್ಲದಷ್ಟು ಯೋಚನೆಯನ್ನು ಹಚ್ಚಿಕೊಂಡು ವಿಷಯಗಳನ್ನುಪಭೋಗಿಸುವದೇ ಎಲ್ಲಕ್ಕೂ ಹೆಚ್ಚಿನದೆಂದು ತಿಳಿದು, ಇಷ್ಟೇ ಸರಿಯೆಂದು ನಿಶ್ಚಯಿಸಿಕೊಂಡು ನೂರಾರು ಆಶಾಪಾಶಗಳಿಗೆ ಕಟ್ಟುಬಿದ್ದು ಕಾಮಕ್ರೋಧಗಳನ್ನೇ ಮುಖ್ಯವಾಗಿ ಆಶ್ರಯಿಸಿ ವಿಷಯಭೋಗಕ್ಕಾಗಿ ಅನ್ಯಾಯದಿಂದ ಪದಾರ್ಥಗಳನ್ನು ಕೂಡಿಹಾಕಲು ಪ್ರಯತ್ನಿಸುತ್ತಿರುವರು. "ಈಗ ನನಗೆ ಇದು ಸಿಕ್ಕಿರುತ್ತದೆ, ಮುಂದೆ ಈ ಇನ್ನೊಂದು ಮನೋರಥವನ್ನು ದೊರಕಿಸಿಕೊಳ್ಳುವೆನು : ಇದು ಈಗ ಇದೆ, ಮುಂದೆ ಈ ಹಣವು ನನಗೆ ದೊರಕುವುದು ; ಈ ಹಗೆಯು ನನ್ನಿಂದ ಹತನಾದನು, ಮಿಕ್ಕವರನ್ನೂ ಕೊಂದುಹಾಕುವೆನು. ನಾನು ಸ್ವತಂತ್ರನಾಗಿ ಎಲ್ಲವನ್ನೂ ಆಳುತ್ತಿರುವವನು, ನಾನು ಸುಖವನ್ನು ಭೋಗಿಸುತ್ತಿರುವವನು, ನಾನು ಸರ್ವಸಿದ್ಧಿಗಳೂ ಉಳ್ಳವನು, ಬಲವಂತನು, ಸುಖಿಯು, ಹಣವಂತನು, ಉತ್ತಮವಂಶದಲ್ಲಿ ಹುಟ್ಟಿದವನು,

ನನಗೆ ಸಮನಾದವನು ಮತ್ತೆ ಯಾವನಿದ್ದಾನೆ ? ಯಾಗಮಾಡುವೆನು, ದಾನಮಾಡುವೆನು, ಸಮ್ಮಾನವನ್ನು ಪಡೆಯುವೆನು'' – ಎಂದು ತಿಳಿವಳಿಕೆ ಯಿಲ್ಲದೆ ಬಗೆಬಗೆಯಿಂದ ಅವಿವೇಕವನ್ನು ಹೊಂದಿದವರಾಗಿ ಅನೇಕವಿಧವಾದ ಸಂಕಲ್ಪಗಳಿಂದ ಬಗೆಬಗೆಯಾಗಿ ಭ್ರಾಂತಿಯನ್ನು ಹೊಂದಿ ಅವಿವೇಕದ ಬಲೆಯಲ್ಲಿ ಸಿಕ್ಕಿಬಿದ್ದು ವಿಷಯಭೋಗಗಳಲ್ಲಿಯೇ ಹೆಚ್ಚಿನ ಆಸಕ್ತಿಯುಳ್ಳವರಾಗಿ ಹೊಲಸಿನ ನರಕದಲ್ಲಿ ಬೀಳುವರು. ತಮ್ಮನ್ನು ತಾವೇ ದೊಡ್ಡವರೆಂದುಕೊಂಡು ಉಬ್ಬಿ ಹಣದಿಂದಾದ ಅಭಿಮಾನದಿಂದಲೂ ಮದದಿಂದಲೂ ಕೂಡಿದವರಾಗಿ ದಂಭ ದಿಂದ ಯಾವ ವಿಧಿಯನ್ನೂ ಲೆಕ್ಕಿಸದೆ ಹೆಸರಿಗೆ ಮಾತ್ರ ಯಜ್ಞಗಳೆನಿಸುವ ಯಾಗ ಗಳನ್ನು ಮಾಡುವರು. ಅಹಂಕಾರವನ್ನೂ ಬಲವನ್ನೂ ದರ್ಪವನ್ನೂ ಕಾಮವನ್ನೂ ಕ್ರೋಧವನ್ನೂ ಆಶ್ರಯಿಸಿ ತಮ್ಮ ದೇಹದಲ್ಲಿಯೂ ಮಿಕ್ಕವರ ದೇಹದಲ್ಲಿಯೂ ಇರುವ ನನ್ನನ್ನು ಹಗೆಮಾಡುತ್ತಾ ಅಸೂಯೆಯುಳ್ಳವರಾಗಿರುವರು. (6–18)

ಟಿ॥ ಇಲ್ಲಿ ಹೇಳಿರುವ ದೋಷಗಳನ್ನು ಬಿಡಬೇಕೆಂಬುದು ಭಗವಂತನ ಅಭಿಪ್ರಾಯ. ತನ್ನಲ್ಲಿಲ್ಲದ ಗುಣವನ್ನು ಆರೋಪಿಸಿಕೊಳ್ಳುವದು ಅಹಂಕಾರ, ಮತ್ತೊಬ್ಬರನ್ನು ಮುರಿದಿಕ್ಕುವದಕ್ಕೆ ಉಪಯೋಗಿಸುವ ಶಕ್ತಿಯು ಬಲ, ವಸ್ತುಗಳನ್ನು

ಅನ್ಯಾಯಮಾರ್ಗದಿಂದ ಪಡೆಯಲು ಬಯಸುವದು ಕಾಮ, ಅವು ಸಿಕ್ಕದೆ ಇದ್ದರೆ ಮಾಡುವ ಸಿಟ್ಟು ಕ್ರೋಧ, ಶಾಸ್ತ್ರ ವಿಧಿಯನ್ನತಿಕ್ರಮಿಸುವದು ಭಗವದ್ದ್ವೇಷ, ಸರಿಯಾದ ಮಾರ್ಗದರ್ಶಿಗಳಾದವರನ್ನು ಕಂಡರೆ ಆಗದೆ ಇರುವದು ಅಸೂಯೆ, ಇವಿಷ್ಟು ಆಸುರಸಂಪತ್ತಿನವರ ಜೀವನಸಾಮಗ್ರಿಗಳು.

ತಾನಹಂ ದ್ವಿಷತಃ ಕ್ರೂರಾನ್ । ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾ–ನಾಸುರೀಷ್ವೇವ ಯೋನಿಷು ॥ 19 ॥

ಆಸುರೀಂ ಯೋನಿಮಾಪನ್ನಾ– ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌನ್ತೇಯ । ತತೋ ಯಾನ್ತ್ಯಧಮಾಂ ಗತಿಮ್ ॥ 20 ॥

ತ್ರಿವಿಧಂ ನರಕಸ್ಯೇದಂ । ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭ–ಸ್ತಸ್ಮಾದೇತತ್ತ್ರಯಂ ತ್ಯಜೇತ್ ॥ 21 ॥

ಏತೈರ್ವಿಮುಕ್ತಃ ಕೌನ್ತೇಯ । ತಮೋದ್ವಾರೈಸ್ತ್ರಿಭಿರ್ನರಃ ।
ಆಚರತ್ಯಾತ್ಮನಃ ಶ್ರೇಯ–ಸ್ತತೋ ಯಾತಿ ಪರಾಂ ಗತಿಮ್ ॥ 22 ॥

ಹಾಗೆ ದ್ವೇಷಿಸುತ್ತಿರುವ ಕ್ರೂರರಾದ ದುಷ್ಟರಾದ ಆ ನೀಚಜನರನ್ನು ನಾನು ಸಂಸಾರಕ್ಕೆ ಮಾರ್ಗವಾಗಿರುವ ಆಸುರಜನ್ಮಗಳಲ್ಲಿಯೂ ಯಾವಾಗಲೂ ಹಾಕುತ್ತೇನೆ. ಒಂದೊಂದು ಜನ್ಮದಲ್ಲಿಯೂ ಹಾಗೆ ಆಸುರಯೋನಿಯನ್ನು ಹೊಂದುವ ಆ ಅವಿವೇಕಿಗಳು ನನ್ನನ್ನು ಹೊಂದದೆಯೇ ಅದಕ್ಕಿಂತಲೂ ಕೀಳಾದ ಗತಿಯನ್ನು ಹೊಂದುವರು. ನರಕಕ್ಕೆ ಕಾಮ, ಕ್ರೋಧ, ಲೋಭ – ಈ ಮೂರು ಬಗೆಯ ಬಾಗಿಲು ಇರುವದು ; ಇದು ತನ್ನನ್ನು ಹಾಳುಮಾಡುತ್ತದೆ. ಆದ್ದರಿಂದ ಈ ಮೂರನ್ನೂ ಬಿಟ್ಟುಬಿಡಬೇಕು. ಈ ನರಕದ ಬಾಗಿಲುಗಳಿಂದ ಬಿಡುಗಡೆಯನ್ನು ಹೊಂದಿದ ಮನುಷ್ಯನು ತನ್ನ ಶ್ರೇಯಸ್ಸಿಗೆ ಬೇಕಾದದ್ದನ್ನು ಮಾಡಿಕೊಳ್ಳುತ್ತಾನೆ, ಆದರಿಂದ ಉತ್ತಮಗತಿಯನ್ನೇ ಹೊಂದುತ್ತಾನೆ. (19–22)

ಟಿ॥ ಕಾಮಕ್ರೋಧಲೋಭಗಳೇ ಆಸುರಸಂಪತ್ತಿನ ತಿರುಳು ; ಅದನ್ನು ಬಿಟ್ಟವರಿಗೆ ಮಾತ್ರ ಶ್ರೇಯೋಮಾರ್ಗವು ದೊರಕುವದು.

**ಯಃ ಶಾಸ್ತ್ರವಿಧಿಮುತ್ಸೃಜ್ಯ । ವರ್ತತೇ ಕಾಮಕಾರತಃ ।**
**ನ ಸ ಸಿದ್ಧಿಮವಾಪ್ನೋತಿ । ನ ಸುಖಂ ನ ಪರಾಂ ಗತಿಮ್ ॥ 23 ॥**

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ । ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ । ಕರ್ಮ ಕರ್ತುಮಿಹಾರ್ಹಸಿ ॥ 24 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ದೈವಾಸುರಸಂಪದ್ವಿಭಾಗಯೋಗೋ ನಾಮ ಷೋಡಶೋಽಧ್ಯಾಯಃ

ಯಾವನು ಶಾಸ್ತ್ರವಿಧಿಯನ್ನು ಮೀರಿ ತನಗೆ ಇಷ್ಟವಾದಂತೆ ನಡೆಯುವನೋ ಅವನಿಗೆ ಕರ್ಮಸಿದ್ಧಿಯೂ ದೊರಕುವದಿಲ್ಲ, ಸುಖವೂ ದೊರಕುವದಿಲ್ಲ, ಪರಮಗತಿಯೂ ದೊರಕುವದಿಲ್ಲ. ಆದ್ದರಿಂದ ಮಾಡತಕ್ಕದ್ದು, ಮಾಡಬಾರದ್ದು, ಎಂಬುದನ್ನು ಗೊತ್ತುಪಡಿಸುವದಕ್ಕೆ ಶಾಸ್ತ್ರವೇ ನಿನಗೆ ಪ್ರಮಾಣವು. ಶಾಸ್ತ್ರವಿಧಿಯಲ್ಲಿ ಹೇಳಿರುವದನ್ನು ತಿಳಿದೇ ನೀನು ಇಲ್ಲಿ ಕರ್ಮವನ್ನು ಮಾಡಬೇಕು.
(23–24)

ಟಿ॥ ಸ್ವೇಚ್ಛಾಚಾರವನ್ನು ಬಿಟ್ಟು ಶಾಸ್ತ್ರೋಕ್ತರೀತಿಯಿಂದ ಕರ್ಮವನ್ನು ಮಾಡುವದೇ ಕರ್ಮಯೋಗದ ಮೊಟ್ಟಮೊದಲನೆಯ ಮೆಟ್ಟಿಲು. ಹನ್ನೆರಡನೆಯ ಅಧ್ಯಾಯದಲ್ಲಿ ಹೇಳಿರುವ ಮಿಕ್ಕ ಮೆಟ್ಟಿಲುಗಳು ಕ್ರಮಕ್ರಮವಾಗಿ ಇದರಿಂದ ವಶವಾಗುವವು.

ದೈವಾಸುರಸಂಪದ್ವಿಭಾಗಯೋಗವೆಂಬ ಹದಿನಾರನೆಯ ಅಧ್ಯಾಯವು ಮುಗಿಯಿತು.

---------

## ಅಥ ಸಪ್ತದಶೋಽಧ್ಯಾಯಃ

**ಅರ್ಜುನ ಉವಾಚ –**

**ಯೇ ಶಾಸ್ತ್ರವಿಧಿಮುತ್ಸೃಜ್ಯ । ಯಜನ್ತೇ ಶ್ರದ್ಧಯಾನ್ವಿತಾಃ ।**
**ತೇಷಾಂ ನಿಷ್ಠಾ ತು ಕಾ ಕೃಷ್ಣ । ಸತ್ತ್ವಮಾಹೋ ರಜಸ್ತಮಃ ॥ 1 ॥**

## ಹದಿನೇಳನೆಯ ಅಧ್ಯಾಯ

ಅರ್ಜುನನು ಕೇಳಿದ್ದು:

ಎಲೈ ಕೃಷ್ಣನೆ, ಯಾರು ಶಾಸ್ತ್ರವಿಧಿಯನ್ನು ಬಿಟ್ಟು, ಶ್ರದ್ಧೆಯಿಂದೊಡಗೂಡಿ ಪೂಜಿಸುವರೋ ಅವರ ನಿಷ್ಠೆಯು ಸಾತ್ತ್ವಿಕವೊ. ರಾಜಸವೊ, ತಾಮಸವೊ – ಎಂಥದ್ದು? (1)

ಟಿ॥ ಶಾಸ್ತ್ರದಲ್ಲಿ ಏನು ಹೇಳಿದೆಯೆಂಬುದು ತಿಳಿಯದೆ ದೊಡ್ಡವರ ಆಚರಣೆಯ ಆಧಾರದಿಂದಲೇ ಮಾಡುವವರ ಕರ್ಮದ ವಿಚಾರವಿದು.

ಶ್ರೀಭಗವಾನುವಾಚ –

ತ್ರಿವಿಧಾ ಭವತಿ ಶ್ರದ್ಧಾ। ದೇಹಿನಾಂ ಸಾ ಸ್ವಭಾವಜಾ।
ಸಾತ್ತ್ವಿಕೀ ರಾಜಸೀ ಚೈವ। ತಾಮಸೀ ಚೇತಿ ತಾಂ ಶೃಣು ॥ 2 ॥

ಸತ್ತ್ವಾನುರೂಪಾ ಸರ್ವಸ್ಯ। ಶ್ರದ್ಧಾ ಭವತಿ ಭಾರತ।
ಶ್ರದ್ಧಾಮಯೋಽಯಂ ಪುರುಷೋ। ಯೋ ಯಚ್ಛ್ರದ್ಧಃ ಸ ಏವ ಸಃ ॥ 3 ॥

ಯಜನ್ತೇ ಸಾತ್ತ್ವಿಕಾ ದೇವಾನ್। ಯಕ್ಷರಕ್ಷಾಂಸಿ ರಾಜಸಾಃ।
ಪ್ರೇತಾನ್ಭೂತಗಣಾಂಶ್ಚಾನ್ಯೇ। ಯಜನ್ತೇ ತಾಮಸಾ ಜನಾಃ ॥ 4 ॥

ಅಶಾಸ್ತ್ರವಿಹಿತಂ ಘೋರಂ। ತಪ್ಯನ್ತೇ ಯೇ ತಪೋ ಜನಾಃ।
ದಮ್ಭಾಹಙ್ಕಾರಸಂಯುಕ್ತಾಃ। ಕಾಮರಾಗಬಲಾನ್ವಿತಾಃ ॥ 5 ॥

ಕರ್ಷಯನ್ತಃ ಶರೀರಸ್ಥಂ। ಭೂತಗ್ರಾಮಮಚೇತಸಃ।
ಮಾಂ ಚೈವಾನ್ತಃಶರೀರಸ್ಥಂ। ತಾನ್ವಿದ್ಧ್ಯಾಸುರನಿಶ್ಚಯಾನ್ ॥ 6 ॥

ಶ್ರೀಭಗವಂತನ ಉತ್ತರ :

ಜೀವರಿಗೆ ಸ್ವಭಾವದಿಂದ ಉಂಟಾಗುವ ಶ್ರದ್ಧೆಯು ಸಾತ್ತ್ವಿಕ, ರಾಜಸ, ತಾಮಸ – ಎಂದು ಮೂರು ಬಗೆಯಾಗಿರುವದು ; ಅದನ್ನು ತಿಳಿಸುವೆನು ಕೇಳು. ಎಲೈ ಭರತವಂಶೋತ್ಪನ್ನನೆ, ಯಾರ ಶ್ರದ್ಧೆಯಾದರೂ ಅವರವರ ಅಂತಃಕರಣಕ್ಕೆ ತಕ್ಕಂತೆ ಇರುವದು. ಈ ಮನುಷ್ಯನೆಂಬುವನು ಶ್ರದ್ಧಾಮಯನಾಗಿರುತ್ತಾನೆ ; ಯಾವನು ಎಂಥ ಶ್ರದ್ಧೆಯುಳ್ಳವನೋ ಅವನು ಅದಕ್ಕೆ ತಕ್ಕಂತೆಯೇ ಆಗಿರುತ್ತಾನೆ. ಸಾತ್ತ್ವಿಕರು ದೇವತೆಗಳನ್ನು ಪೂಜಿಸುತ್ತಾರೆ ; ರಾಜಸರು ಯಕ್ಷರಾಕ್ಷಸರನ್ನು ಪೂಜಿಸುತ್ತಾರೆ ; ಮಿಕ್ಕ ತಾಮಸಜನರು ಪ್ರೇತಗಳನ್ನೂ ಭೂತಗಳನ್ನೂ ಪೂಜಿಸುತ್ತಾರೆ. ಶಾಸ್ತ್ರವಿಧಿಯಿಲ್ಲದೆ ಯಾರು ತೋರುಗಾಣಿಕೆಗಾಗಿ ಹೆಮ್ಮೆಯಿಂದ ಕೂಡಿ ಕಾಮಗಳಿಂದ ಕೂಡಿದ ಬಲದಿಂದ ಜನರಿಗೆ ತೊಂದರೆಯನ್ನುಂಟುಮಾಡುವ ತಪಸ್ಸನ್ನು ಮಾಡುತ್ತಿರುವರೋ ಯಾರು ಶರೀರದಲ್ಲಿರುವ ಇಂದ್ರಿಯಗಳ ಸಮೂಹವನ್ನು ಕೃಶಗೊಳಿಸುತ್ತಾ ಶರೀರದೊಳಗೆ ಇರುವ ನನ್ನನ್ನೂ ಸೊರಗಿಸು

ತ್ರಿರುವರೋ, ಆ ತಿಳಿಗೇಡಿಗಳನ್ನು ಆಸುರಶ್ರದ್ಧೆಯುಳ್ಳವರೆಂದು ತಿಳಿದುಕೊ. (2–6)

ಟಿ॥ ತಾನು ಪೂಜಿಸುವ ದೇವತೆಯ ಸ್ವಭಾವವನ್ನೂ ತನ್ನ ಚಿತ್ತದ ಸ್ವಭಾವವನ್ನೂ ನೋಡಿ ತನ್ನ ಶ್ರದ್ಧೆಯು ಸಾತ್ತ್ವಿಕರಾಜಸತಾಮಸಗಳಲ್ಲಿ ಯಾವ ವಿಧದ್ದೆಂಬುದನ್ನು ನಿಶ್ಚಯಿಸಬೇಕು.

ಆಹಾರಸ್ತ್ವಪಿ ಸರ್ವಸ್ಯ । ತ್ರಿವಿಧೋ ಭವತಿ ಪ್ರಿಯಃ ।
ಯಜ್ಞಸ್ತಪಸ್ತಥಾ ದಾನಂ । ತೇಷಾಂ ಭೇದಮಿಮಂ ಶೃಣು ॥ 7 ॥

ಪ್ರತಿಯೊಬ್ಬನಿಗೆ ಬೇಕೆನಿಸುವ ಆಹಾರವೂ ಯಜ್ಞದಾನತಪಸ್ಸುಗಳೂ ಮೂರುಬಗೆಯಾಗಿರುವವು. ಅವುಗಳ ವಿಂಗಡವನ್ನು ಹೇಳುವೆನು ಕೇಳು. (7)

ಆಯುಸ್ಸತ್ತ್ವಬಲಾರೋಗ್ಯ–ಸುಖಪ್ರೀತಿವಿವರ್ಧನಾಃ ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ–ಆಹಾರಾಃ ಸಾತ್ತ್ವಿಕಪ್ರಿಯಾಃ ॥ 8 ॥

ಕಟ್ವಮ್ಲಲವಣಾತ್ಯುಷ್ಣ–ತೀಕ್ಷ್ಣರೂಕ್ಷವಿದಾಹಿನಃ।
ಆಹಾರಾ ರಾಜಸಸ್ಯೇಷ್ಟಾ–ದುಃಖಶೋಕಾಮಯಪ್ರದಾಃ ॥ 9 ॥

ಯಾತಯಾಮಂ ಗತರಸಂ। ಪೂತಿ ಪರ್ಯುಷಿತಂ ಚ ಯತ್।
ಉಚ್ಛಿಷ್ಟಮಪಿ ಚಾಮೇಧ್ಯಂ। ಭೋಜನಂ ತಾಮಸಪ್ರಿಯಮ್ ॥ 10 ॥

ಆಯುಸ್ಸನ್ನೂ ಸತ್ತ್ವಗುಣವನ್ನೂ ಬಲವನ್ನೂ ಆರೋಗ್ಯವನ್ನೂ ಸುಖವನ್ನೂ ಸಂತೋಷವನ್ನೂ ಹೆಚ್ಚಿಸುವವಾಗಿಯೂ ಸವಿಯಾಗಿ ಜಿಡ್ಡಾಗಿ ಸಾರವುಳ್ಳವಾಗಿ ಮನೋಹರವಾಗಿರುವವಾಗಿಯೂ ಇರುವ ಆಹಾರಗಳು ಸಾತ್ತ್ವಿಕರಿಗೆ ಬೇಕಾದವುಗಳಾಗಿರುವವು. ಬಲುಕಹಿಯಾಗಿ ಬಲುಹುಳಿಯಾಗಿ ಬಲುಉಪ್ಪಾಗಿ ಬಲುಬಿಸಿಯಾಗಿ ಬಲುಖಾರವಾಗಿ ಬಲುಸೀಕಲಾಗಿ ಅತಿಯಾಗಿ ಹುರಿಯುತ್ತಿರುವವಾಗಿ ಇರುವುದು ಸಂಕಟವನ್ನೂ ಶೋಕವನ್ನೂ ರೋಗವನ್ನೂ ಕೊಡುವ ಆಹಾರಗಳು ರಾಜಸರಿಗೆ ಬೇಕಾದವುಗಳು. ಅರ್ಧಬೆಂದಿರುವ ಸವಿಯಿಲ್ಲದ ದುರ್ವಾಸನೆಯಿಂದ ಕೂಡಿದ, ತಂಗಳಾದ, ಊಡುಮಿಕ್ಕಿರುವ,

ದೇವರಿಗೆ ಅರ್ಪಿಸುವದಕ್ಕೆ ತಕ್ಕದ್ದಲ್ಲದ ಭೋಜನವು ಯಾವದೋ ಅದು ತಾಮಸರಿಗೆ ಬೇಕಾಗಿರುವದು. (೮–10)

ಅಫಲಾಕಾಙ್ಕ್ಷಿಭಿರ್ಯಜ್ಞೋ। ವಿಧಿದೃಷ್ಟೋ ಯ ಇಜ್ಯತೇ।
ಯಷ್ಟವ್ಯಮೇವೇತಿ ಮನಃ। ಸಮಾಧಾಯ ಸ ಸಾತ್ತ್ವಿಕಃ ॥ 11 ॥

ಅಭಿಸನ್ಧಾಯ ತು ಫಲಂ। ದಮ್ಭಾರ್ಥಮಪಿ ಚೈವ ಯತ್।
ಇಜ್ಯತೇ ಭರತಶ್ರೇಷ್ಠ। ತಂ ಯಜ್ಞಂ ವಿದ್ಧಿ ರಾಜಸಮ್ ॥ 12 ॥

ವಿಧಿಹೀನಮಸೃಷ್ಟಾನ್ನಂ। ಮನ್ತ್ರಹೀನಮದಕ್ಷಿಣಮ್।
ಶ್ರದ್ಧಾವಿರಹಿತಂ ಯಜ್ಞಂ। ತಾಮಸಂ ಪರಿಚಕ್ಷತೇ ॥ 13 ॥

ಫಲವನ್ನು ಕೋರದೆ 'ಶಾಸ್ತ್ರದಲ್ಲಿ ಹೇಳಿರುವದರಿಂದ ಈ ಯಾಗವನ್ನು ಮಾಡತಕ್ಕದ್ದು , ಎಂದು ಮನಸ್ಸಮಾಧಾನದಿಂದ ಯಾವ ಯಜ್ಞವನ್ನು ಮಾಡುವರೋ ಅದು ಸಾತ್ತ್ವಿಕವು. ಆದರೆ ಎಲೈ ಭರತಶ್ರೇಷ್ಠನೆ, ಫಲವನ್ನು ಮನಸ್ಸಿನಲ್ಲಿಟ್ಟುಕೊಂಡು ತೋರುಗಾಣಿಕೆಗಾಗಿ ಯಾವ ಯಜ್ಞವನ್ನು ಮಾಡುವರೋ

ಅದನ್ನು ರಾಜಸವೆಂದು ತಿಳಿದುಕೊ. ವಿಧಿಯನ್ನು ಲೆಕ್ಕಿಸದೆ ಅನ್ನದಾನಮಾಡದೆ ಸರಿಯಾದ ಮಂತ್ರವಿಲ್ಲದೆ, ತಕ್ಕಷ್ಟು ದಕ್ಷಿಣೆಯಿಲ್ಲದೆ, ಶ್ರದ್ಧೆಯಿಲ್ಲದೆ, ಮಾಡಿದ ಯಜ್ಞವು ತಾಮಸವೆಂದು ಹೇಳುತ್ತಾರೆ. (11–13)

ದೇವದ್ವಿಜಗುರುಪ್ರಾಜ್ಞ–ಪೂಜನಂ ಶೌಚಮಾರ್ಜವಮ್ ।
ಬ್ರಹ್ಮಚರ್ಯಮಹಿಂಸಾ ಚ । ಶಾರೀರಂ ತಪ ಉಚ್ಯತೇ ॥ 14 ॥

ಅನುದ್ವೇಗಕರಂ ವಾಕ್ಯಂ । ಸತ್ಯಂ ಪ್ರಿಯಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ । ವಾಙ್ಮಯಂ ತಪ ಉಚ್ಯತೇ ॥ 15 ॥

ಮನಃಪ್ರಸಾದಃ ಸೌಮ್ಯತ್ವಂ । ಮೌನಮಾತ್ಮವಿನಿಗ್ರಹಃ ।
ಭಾವಸಂಶುದ್ಧಿರಿತ್ಯೇತ – ತ್ತಪೋ ಮಾನಸಮುಚ್ಯತೇ ॥ 16 ॥

ಶ್ರದ್ಧಯಾ ಪರಯಾ ತಪ್ತಂ । ತಪಸ್ತತ್ತ್ರಿವಿಧಂ ನರೈಃ ।
ಅಫಲಾಕಾಙ್ಕ್ಷಿಭಿರ್ಯುಕ್ತೈಃ । ಸಾತ್ತ್ವಿಕಂ ಪರಿಚಕ್ಷತೇ ॥ 17 ॥

ಸತ್ಕಾರಮಾನಪೂಜಾರ್ಥಂ। ತಪೋ ದಮ್ಭೇನ ಚೈವ ಯತ್।
ಕ್ರಿಯತೇ ತದಿಹ ಪ್ರೋಕ್ತಂ। ರಾಜಸಂ ಚಲಮಧ್ರುವಮ್ ॥ 18 ॥

ಮೂಢಗ್ರಾಹೇಣಾತ್ಮನೋ ಯ–ತ್ಪೀಡಯಾ ಕ್ರಿಯತೇ ತಪಃ।
ಪರಸ್ಯೋತ್ಸಾದನಾರ್ಥಂ ವಾ। ತತ್ತಾಮಸಮುದಾಹೃತಮ್ ॥ 19 ॥

ದೇವತೆಗಳು, ಬ್ರಾಹ್ಮಣರು, ಗುರುಹಿರಿಯರು, ಜ್ಞಾನಿಗಳು– ಇವರನ್ನು ಗೌರವಿಸುವದು, ಶುಚಿಯಾಗಿರುವದು, ಸರಳವಾಗಿರುವದು, ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳುವದು, ಯಾರನ್ನೂ ಹಿಂಸೆಮಾಡದಿರುವದು – ಇದು ಶಾರೀರಕ ತಪಸ್ಸೆನಿಸುವದು. ಮತ್ತೊಬ್ಬರ ಮನಸ್ಸಿಗೆ ನೋವನ್ನುಂಟುಮಾಡದೆ ಸತ್ಯವೂ ಪ್ರಿಯವೂ ಹಿತವೂ ಆದ ಮಾತನ್ನಾಡುವದು, ವೇದಾಭ್ಯಾಸವನ್ನು ಮಾಡುವದು – ಇದು ವಾಙ್ಮಯತಪಸ್ಸೆನಿಸುವದು. ಮನಸ್ಸನ್ನು ನಿರ್ಮಲವಾಗಿಟ್ಟು ಕೊಂಡಿರುವದು, ಸುಮ್ಮಾನದಿಂದಿರುವದು, ಮೌನವಾಗಿರುವದು, ಮನಸ್ಸನ್ನು ಬಿಗಿಹಿಡಿಯುವದು, ಮನಸ್ಸಿನಲ್ಲಿ ಕಾಪಟ್ಯವಿಲ್ಲದೆ ಶುದ್ಧವಾಗಿರುವದು– ಇದು

ಮಾನಸತಪಸ್ಸೆನಿಸುವದು. ಈ ಮೂರು ಬಗೆಯ ತಪಸ್ಸನ್ನೂ ಜನರು ಹೆಚ್ಚಿನ ಶ್ರದ್ಧೆಯಿಂದ ಫಲದ ಬಯಕೆಯಿಲ್ಲದೆ ಸಮಾಹಿತಚಿತ್ತರಾಗಿ ಮಾಡಿದರೆ ಬಲ್ಲವರು ಅದನು ಸಾತ್ತ್ವಿಕ ತಪಸ್ಸೆಂದು ಕರೆಯುತ್ತಾರೆ. ತನಗೆ ಹೊಗಳಿಕೆಯೂ ಮನ್ನಣೆಯೂ ದೊರೆಯಲೆಂದು ದಂಭದಿಂದಲೇ ಯಾವದನ್ನು ಮಾಡುವರೋ ಚಂಚಲವಾಗಿಯೂ ಶಾಶ್ವತಫಲವನ್ನು ಕೊಡಲಾರದ್ದಾಗಿಯೂ ಇರುವ ಅದು ಇಲ್ಲಿ ರಾಜಸವೆನಿಸುವದು. ಏನೂ ತಿಳಿಯದಿದ್ದರಿಂದ ಪಟ್ಟುಹಿಡಿದು ತನಗೆ ಹಾನಿಯಾಗುವಂತೆ ಅಥವಾ ಮತ್ತೊಬ್ಬರನ್ನು ಹಾಳುಮಾಡುವದಕ್ಕಾಗಿ ಯಾವದನ್ನು ಮಾಡುವರೋ ಆ ತಪಸ್ಸು ತಾಮಸವೆನಿಸುವದು. (14–19)

**ದಾತವ್ಯಮಿತಿ ಯದ್ದಾನಂ। ದೀಯತೇಽನುಪಕಾರಿಣೇ।**
**ದೇಶೇ ಕಾಲೇ ಚ ಪಾತ್ರೇ ಚ। ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥ 20 ॥**

**ಯತ್ತು ಪ್ರತ್ಯುಪಕಾರಾರ್ಥಂ। ಫಲಮುದ್ದಿಶ್ಯ ವಾ ಪುನಃ।**
**ದೀಯತೇ ಚ ಪರಿಕ್ಲಿಷ್ಟಂ। ತದ್ದಾನಂ ರಾಜಸಂ ಸ್ಮೃತಮ್ ॥ 21 ॥**

**ಅದೇಶಕಾಲೇ ಯದ್ದಾನ–ಮಪಾತ್ರೇಭ್ಯಶ್ಚ ದೀಯತೇ।**
**ಅಸತ್ಕೃತಮವಜ್ಞಾತಂ। ತತ್ತಾಮಸಮುದಾಹೃತಮ್ ॥ 22 ॥**

ಮುಂದೆ ತನಗೆ ಉಪಕಾರಮಾಡುವ ಸಂಭವವಿಲ್ಲದವನಿಗೆ ಸರಿಯಾದ ದೇಶದಲ್ಲಿ ಸರಿಯಾದ ಕಾಲದಲ್ಲಿ ಸರಿಯಾದ ಪಾತ್ರನೆಂಬುದನ್ನರಿತು ದಾನ ಮಾಡತಕ್ಕದ್ದು ಯುಕ್ತವೆಂಬ ಒಂದೇ ಕಾರಣದಿಂದ ಯಾವ ದಾನವನ್ನು ಕೊಡುತ್ತಾರೋ ಆ ದಾನವು ಸಾತ್ತ್ವಿಕವೆನಿಸುವದು. ಯಾವದು ಪ್ರತ್ಯುಪಕಾರವನ್ನು ಬಯಸಿ ಅಥವಾ ಫಲವನ್ನು ನಿರೀಕ್ಷಿಸಿಕೊಂಡು ಕ್ಲೇಶದಿಂದ ಕೊಡುವ ದಾನವಾಗಿರುವದೋ ಅದು ರಾಜಸವೆನಿಸುವದು. ದೇಶಕಾಲವನ್ನು ಲೆಕ್ಕಿಸದೆ ಅಯೋಗ್ಯರಾದವರಿಗೆ ಅನಾದರದಿಂದಲೂ ತಿರಸ್ಕಾರದಿಂದಲೂ ಯಾವ ದಾನವನ್ನು ಕೊಡುವರೋ ಅದು ತಾಮಸವೆನಿಸುವದು. (20–22)

ಟಿ॥ ಯಜ್ಞದಾನತಪಸ್ಸುಗಳು ಶಾಸ್ತ್ರವಿಹಿತವಾಗಿರುವದರಿಂದ ನಿತ್ಯಕರ್ಮವಾಗಿರುತ್ತವೆ. ಅವುಗಳನ್ನು ಸಾತ್ತ್ವಿಕರೀತಿಯಿಂದ ಮಾಡಿದರೇ ಉತ್ತಮಫಲವುಂಟಾಗುವದು.

**ಓಂ ತತ್ಸದಿತಿ ನಿರ್ದೇಶೋ । ಬ್ರಹ್ಮಣಸ್ತ್ರಿವಿಧಃ ಸ್ಮೃತಃ ।**
**ಬ್ರಾಹ್ಮಣಾಸ್ತೇನ ವೇದಾಶ್ಚ । ಯಜ್ಞಾಶ್ಚ ವಿಹಿತಾಃ ಪುರಾ ॥ 23 ॥**

'ಓಂ, ತತ್, ಸತ್' – ಎಂದು ಬ್ರಹ್ಮಕ್ಕೆ ಮೂರುಬಗೆಯ ಹೆಸರುಂಟೆಂದು ಬಲ್ಲವರು ಹೇಳುತ್ತಾರೆ. ಪೂರ್ವದಲ್ಲಿ ಬ್ರಾಹ್ಮಣರು, ವೇದಗಳು, ಯಜ್ಞಗಳು– ಅದರಿಂದಲೇ ನಿರ್ಮಿತವಾಗಿವೆ. (23)

ಟಿ॥ ಕರ್ಮಾನುಷ್ಠಾನಕ್ಕೆ ಮುಖ್ಯಾಧಿಕಾರಿಗಳಾದ ಬ್ರಾಹ್ಮಣರು, ಮುಖ್ಯ ಸಾಧನವಾದ ವೇದ, ಮುಖ್ಯಕರ್ಮವಾದ ಯಜ್ಞ–ಇವುಗಳನ್ನು ಸೃಷ್ಟಿಸುವ ಮೊದಲು ಬ್ರಹ್ಮನು ಕೂಡ ಉಚ್ಚರಿಸುವ ಪರಮಪವಿತ್ರವಾದ ಪರಮಾತ್ಮನ ನಾಮಗಳು ಇವು.

**ತಸ್ಮಾದೋಮಿತ್ಯುದಾಹೃತ್ಯ । ಯಜ್ಞದಾನತಪಃಕ್ರಿಯಾಃ ।**
**ಪ್ರವರ್ತನ್ತೇ ವಿಧಾನೋಕ್ತಾಃ । ಸತತಂ ಬ್ರಹ್ಮವಾದಿನಾಮ್ ॥ 24 ॥**

**ತದಿತ್ಯನಭಿಸನ್ಧಾಯ । ಫಲಂ ಯಜ್ಞತಪಃಕ್ರಿಯಾಃ ।**
**ದಾನಕ್ರಿಯಾಶ್ಚ ವಿವಿಧಾಃ । ಕ್ರಿಯನ್ತೇ ಮೋಕ್ಷಕಾಙ್ಕ್ಷಿಭಿಃ ॥ 25 ॥**

ಸದ್ಭಾವೇ ಸಾಧುಭಾವೇ ಚ । ಸದಿತ್ಯೇತತ್ಪ್ರಯುಜ್ಯತೇ ।
ಪ್ರಶಸ್ತೇ ಕರ್ಮಣಿ ತಥಾ । ಸಚ್ಛಬ್ದಃ ಪಾರ್ಥ ಯುಜ್ಯತೇ ॥ 26 ॥

ಯಜ್ಞೇ ತಪಸಿ ದಾನೇ ಚ । ಸ್ಥಿತಿಃ ಸದಿತಿ ಚೋಚ್ಯತೇ ।
ಕರ್ಮ ಚೈವ ತದರ್ಥೀಯಂ । ಸದಿತ್ಯೇವಾಭಿಧೀಯತೇ ॥ 27 ॥

ಆದ್ದರಿಂದ ವೇದವಾದಿಗಳು ಮಾಡುವ ಯಜ್ಞದಾನತಪಸ್ಸುಗಳೆಂಬ ವಿಧ್ಯುಕ್ತಕರ್ಮಗಳು ಯಾವಾಗಲೂ ಓಂ ಎಂದು ಹೇಳಿದ ಬಳಿಕ ಪ್ರಾರಂಭವಾಗುತ್ತವೆ. ತತ್ ಎಂಬ ನಾಮವನ್ನು ಹೇಳಿ ಫಲವನ್ನು ಉದ್ದೇಶವಾಗಿಟ್ಟುಕೊಳ್ಳದೆಯೇ ಯಜ್ಞತಪಃಕರ್ಮಗಳನ್ನೂ ಬಗೆಬಗೆಯ ದಾನಕ್ರಿಯೆಗಳನ್ನೂ ಮುಮುಕ್ಷುಗಳು ಮಾಡುವರು. ಇರುವದಕ್ಕೂ ಒಳ್ಳೆಯದಕ್ಕೂ ಸತ್ ಎಂಬುದನ್ನು ಉಪಯೋಗಿಸುತ್ತಾರೆ. ಎಲೈ ಪಾರ್ಥನೆ, ಉತ್ತಮವಾದ ಕರ್ಮಕ್ಕೂ ಸತ್ ಎಂಬ ಶಬ್ದವನ್ನು ಪ್ರಯೋಗಿಸುತ್ತಾರೆ. ಯಜ್ಞದಲ್ಲಿಯೂ ತಪಸ್ಸಿನಲ್ಲಿಯೂ ದಾನದಲ್ಲಿಯೂ ತೊಡಗಿರುವದನ್ನು ಸತ್ ಎಂದು ಕರೆಯುವರು, ಅವುಗಳಿಗಾಗಿ ಮಾಡುವ ಕರ್ಮವನ್ನೂ ಸತ್ ಎಂದೇ ಕರೆಯುತ್ತಾರೆ. (24–27)

ಟೀ॥ ಸತ್ ಎಂಬ ಶಬ್ದದ ಉಚ್ಚಾರಣೆಯಿಂದ ಕರ್ಮಫಲವಾಗಿ ಇದುವರೆಗೆ ನಮ್ಮಲ್ಲಿ ಇಲ್ಲದ್ದು ಉಂಟಾಗುವದು, ಕೆಟ್ಟದ್ದು ಒಳ್ಳೆಯದಾಗುವದು, ಯಜ್ಞದಾನತಪಸ್ಸುಗಳಲ್ಲಿಯೇ ತೊಡಗಿರುವ ಶ್ರದ್ಧೆಯುಂಟಾಗುವದು, ಅದಕ್ಕೆ ತಕ್ಕ ಕರ್ಮಗಳನ್ನು ಮಾಡುವಂತೆಯೂ ಮನಸ್ಸಾಗುವದು. ತತ್, ಓಂ ಎಂಬಿವುಗಳನ್ನು ಉಚ್ಚರಿಸಿದರೂ ಹೀಗೆಯೇ. ಆದ್ದರಿಂದ ಓಂ ತತ್ಸತ್ ಎಂದು ಉಚ್ಚರಿಸುವದು ಕರ್ಮದ ಲೋಪವನ್ನೂ ನ್ಯೂನಾತಿರಿಕ್ತಗಳನ್ನೂ ಕಳೆದು ಅದನ್ನು ಭಗವದರ್ಪಣವಾಗಿಮಾಡಿಸಿ ಅದಕ್ಕೆ ಸಾದ್ಗುಣ್ಯವನ್ನುಂಟುಮಾಡುತ್ತದೆ.

ಅಶ್ರದ್ಧಯಾ ಹುತಂ ದತ್ತಂ। ತಪಸ್ತಪ್ತಂ ಕೃತಂ ಚ ಯತ್ ।
ಅಸದಿತ್ಯುಚ್ಯತೇ ಪಾರ್ಥ । ನ ಚ ತತ್ಪ್ರೇತ್ಯ ನೋ ಇಹ ॥ 28 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಶ್ರದ್ಧಾತ್ರಯವಿಭಾಗಯೋಗೋ ನಾಮ ಸಪ್ತದಶೋಽಧ್ಯಾಯಃ

ಅಶ್ರದ್ಧೆಯಿಂದ ಹೋಮಮಾಡಿದ್ದು, ದಾನಮಾಡಿದ್ದು, ತಪಸ್ಸು ಮಾಡಿದ್ದು – ಯಾವದೇ ಆಗಲಿ ಅಸತ್ ಎನಿಸುವದು. ಅದು ಪರಲೋಕದಲ್ಲಿಯೂ ಫಲವನ್ನು ಕೊಡಲಾರದು. ಇಹಲೋಕದಲ್ಲಿಯೂ ಕೊಡಲಾರದು. (28)

ಶ್ರದ್ಧಾತ್ರಯವಿಭಾಗಯೋಗವೆಂಬ ಹದಿನೇಳನೆಯ ಅಧ್ಯಾಯವು ಮುಗಿಯಿತು.

----------

## ಅಥಾಷ್ಟಾದಶೋಽಧ್ಯಾಯಃ

ಅರ್ಜುನ ಉವಾಚ –

ಸಂನ್ಯಾಸಸ್ಯ ಮಹಾಬಾಹೋ । ತತ್ತ್ವಮಿಚ್ಛಾಮಿ ವೇದಿತುಮ್ ।
ತ್ಯಾಗಸ್ಯ ಚ ಹೃಷೀಕೇಶ । ಪೃಥಕ್ಕೇಶಿನಿಷೂದನ ॥ 1 ॥

## ಹದಿನೆಂಟನೆಯ ಅಧ್ಯಾಯ

ಅರ್ಜುನನು ಕೇಳಿದ್ದು:

ಎಲೈ ಮಹಾಬಾಹುವಾದ ಹೃಷೀಕೇಶನೆ, ಕೇಶಿಯನ್ನು ಕೊಂದಾತನೆ, ಸಂನ್ಯಾಸವ ತತ್ತ್ವವನ್ನೂ ತ್ಯಾಗದ ತತ್ತ್ವವನ್ನೂ ಬೇರೆಬೇರೆಯಾಗಿ ತಿಳಿಯಬೇಕೆಂದು ಅಪೇಕ್ಷಿಸುತ್ತೇನೆ. (1)

ಟಿ॥ ಸಂನ್ಯಾಸ, ತ್ಯಾಗ– ಇವುಗಳ ಅರ್ಥವು ಒಂದೆಯೊ, ಬೇರೆಬೇರೆಯೊ ಹೇಳು – ಎಂದು ಪ್ರಶ್ನೆ.

ಶ್ರೀಭಗವಾನುವಾಚ –

ಕಾಮ್ಯಾನಾಂ ಕರ್ಮಣಾಂ ನ್ಯಾಸಂ। ಸಂನ್ಯಾಸಂ ಕವಯೋ ವಿದುಃ।
ಸರ್ವಕರ್ಮಫಲತ್ಯಾಗಂ। ಪ್ರಾಹುಸ್ತ್ಯಾಗಂ ವಿಚಕ್ಷಣಾಃ ॥ 2 ॥

ಶ್ರೀಭಗವಂತನ ಉತ್ತರ :

ಕಾಮ್ಯಕರ್ಮಗಳನ್ನು ಬಿಡುವದನ್ನು ಸಾಂನ್ಯಾಸವೆಂದು ಕೆಲವರು ಪಂಡಿತರು ಕರೆಯುತ್ತಾರೆ ; ಸರ್ವಕರ್ಮಗಳ ಫಲವನ್ನೂ ಬಿಡುವದು ತ್ಯಾಗವೆಂದು ಜಾಣರು ಹೇಳುತ್ತಾರೆ. (2)

ಟಿ॥ ಸಂನ್ಯಾಸ, ತ್ಯಾಗ – ಇವೆರಡಕ್ಕೂ ಬಿಡುವದೆಂಬ ಒಂದೇ ಅರ್ಥ. ಮುಂದೆ 12ನೆಯ ಶ್ಲೋಕದ ಟಿಪ್ಪಣಿಯನ್ನು ನೋಡಿರಿ.

ತ್ಯಾಜ್ಯಂ ದೋಷವದಿತ್ಯೇಕೇ। ಕರ್ಮ ಪ್ರಾಹುರ್ಮನೀಷಿಣಃ।
ಯಜ್ಞದಾನತಪಃಕರ್ಮ। ನ ತ್ಯಾಜ್ಯಮಿತಿ ಚಾಪರೇ ॥ 3 ॥

ನಿಶ್ಚಯಂ ಶೃಣು ಮೇ ತತ್ರ । ತ್ಯಾಗೇ ಭರತಸತ್ತಮ ।
ತ್ಯಾಗೋ ಹಿ ಪುರುಷವ್ಯಾಘ್ರ । ತ್ರಿವಿಧಃ ಸಂಪ್ರಕೀರ್ತಿತಃ ॥ 4 ॥

ಯಜ್ಞದಾನತಪಃಕರ್ಮ । ನ ತ್ಯಾಜ್ಯಂ ಕಾರ್ಯಮೇವ ತತ್ ।
ಯಜ್ಞೋ ದಾನಂ ತಪಶ್ಚೈವ । ಪಾವನಾನಿ ಮನೀಷಿಣಾಮ್ ॥ 5 ॥

ಏತಾನ್ಯಪಿ ತು ಕರ್ಮಾಣಿ । ಸಙ್ಗಂ ತ್ಯಕ್ತ್ವಾ ಫಲಾನಿ ಚ ।
ಕರ್ತವ್ಯಾನೀತಿ ಮೇ ಪಾರ್ಥ । ನಿಶ್ಚಿತಂ ಮತಮುತ್ತಮಮ್ ॥ 6 ॥

ದೋಷಯುಕ್ತವಾಗಿರುವದರಿಂದ ಕರ್ಮವನ್ನು ಬಿಟ್ಟುಬಿಡಬೇಕೆಂದು ಕೆಲವರು ಹೇಳುತ್ತಾರೆ ; ಯಜ್ಞದಾನತಪಃಕರ್ಮಗಳನ್ನು ಬಿಡಕೂಡದೆಂದು ಮತ್ತೆ ಕೆಲವರು ಹೇಳುತ್ತಾರೆ. ಭರತಶ್ರೇಷ್ಠನೆ, ಈ ತ್ಯಾಗದ ವಿಷಯದಲ್ಲಿ ನನ್ನ ತೀರ್ಪನ್ನು ಹೇಳುವೆನು ಕೇಳು ; ಏಕೆಂದರೆ ಎಲೈ ಪುರುಷಶ್ರೇಷ್ಠನೆ, ತ್ಯಾಗವು ಮೂರು ಬಗೆಯೆಂದು ಹೇಳಿದ್ದಾರೆ. ಯಜ್ಞದಾನತಪಃಕರ್ಮವನ್ನು ಬಿಡತಕ್ಕದ್ದಲ್ಲ, ಅದನ್ನು ಮಾಡಿಯೇತೀರಬೇಕು. ವಿವೇಕಿಗಳಿಗೆ ಯಜ್ಞವೂ ದಾನವೂ ತಪಸ್ಸೂ

ಶುದ್ಧಿಕರವಾಗಿರುತ್ತವೆ. ಆದರೆ ಈ ಕರ್ಮಗಳನ್ನು ಕೂಡ ಸಂಗವನ್ನೂ ಫಲವನ್ನೂ ಬಿಟ್ಟು ಮಾಡತಕ್ಕದ್ದೆಂದು ನನ್ನ ನಿಶ್ಚಿತವಾದ ಉತ್ತಮ ಮತವು. (3–6)

ಟೀ॥ ಕರ್ಮಕ್ಕೆ ಅಧಿಕಾರಿಯಾದ ಮುಮುಕ್ಷುವು ಕಾಮ್ಯಕರ್ಮವನ್ನು ಬಿಡಬೇಕು ; ನಿತ್ಯವಾಗಿರುವ ಯಜ್ಞದಾನತಪಸ್ಸುಗಳನ್ನು ಸಂಗವಿಲ್ಲದೆ ಫಲಾಪೇಕ್ಷೆಯಿಲ್ಲದೆ ಮಾಡಿ ಚಿತ್ತಶುದ್ಧಿಯನ್ನು ಹೊಂದಬೇಕು.

ನಿಯತಸ್ಯ ತು ಸಂನ್ಯಾಸಃ। ಕರ್ಮಣೋ ನೋಪಪದ್ಯತೇ।
ಮೋಹಾತ್ತಸ್ಯ ಪರಿತ್ಯಾಗ–ಸ್ತಾಮಸಃ ಪರಿಕೀರ್ತಿತಃ ॥ 7 ॥

ದುಃಖಮಿತ್ಯೇವ ಯತ್ಕರ್ಮ। ಕಾಯಕ್ಲೇಶಭಯಾತ್ತ್ಯಜೇತ್।
ಸ ಕೃತ್ವಾ ರಾಜಸಂ ತ್ಯಾಗಂ। ನೈವ ತ್ಯಾಗಫಲಂ ಲಭೇತ್ ॥ 8 ॥

ಕಾರ್ಯಮಿತ್ಯೇವ ಯತ್ಕರ್ಮ। ನಿಯತಂ ಕ್ರಿಯತೇಽರ್ಜುನ।
ಸಙ್ಗಂ ತ್ಯಕ್ತ್ವಾ ಫಲಂ ಚೈವ। ಸ ತ್ಯಾಗಃ ಸಾತ್ತ್ವಿಕೋ ಮತಃ ॥ 9 ॥

ನಿತ್ಯಕರ್ಮವನ್ನು ಬಿಡತಕ್ಕದ್ದು ಯುಕ್ತವಲ್ಲ; ಅವಿವೇಕದಿಂದ ಅದನ್ನು ಬಿಡುವದು ತಾಮಸತ್ಯಾಗವೆನಿಸುವದು. ದುಃಖರೂಪವಾಗಿದೆ ಎಂಬ ಕಾರಣ ದಿಂದ ಶರೀರಕ್ಕೆ ಕ್ಲೇಶವಾಗುವದೆಂದು ಅಂಜಿ ಕರ್ಮವನ್ನು ಬಿಡುವನಲ್ಲ, ಅವನು ರಾಜಸತ್ಯಾಗವನ್ನು ಮಾಡಿದವನಾಗುವದರಿಂದ ತ್ಯಾಗಫಲವನ್ನು ಪಡೆಯಲೇ ಆರನು. ಅರ್ಜುನನೆ, ಇದನ್ನು ಮಾಡತಕ್ಕದ್ದು– ಎಂದು ಸಂಗವನ್ನೂ ಫಲವನ್ನೂ ಬಿಟ್ಟು ನಿತ್ಯಕರ್ಮವನ್ನು ಮಾಡುವರಷ್ಟೆ, ಆ ತ್ಯಾಗವು ಸಾತ್ತ್ವಿಕವೆನಿಸುವದು.

(7–9)

ಟಿ|| ಕರ್ಮಕ್ಕೆ ಅಧಿಕಾರಿಯಾದವನು ಸಂಗತ್ಯಾಗ, ಫಲತ್ಯಾಗ – ಇವುಗಳಿಂದಲೇ ಸರಿಯಾದ ತ್ಯಾಗವನ್ನು ಮಾಡಿದವನಾಗುವನು.

**ನ ದ್ವೇಷ್ಟ್ಯಕುಶಲಂ ಕರ್ಮ । ಕುಶಲೇ ನಾನುಷಜ್ಜತೇ ।**
**ತ್ಯಾಗೀ ಸತ್ತ್ವಸಮಾವಿಷ್ಟೋ । ಮೇಧಾವೀ ಛಿನ್ನಸಂಶಯಃ ॥ 10 ॥**

**ನ ಹಿ ದೇಹಭೃತಾ ಶಕ್ಯಂ । ತ್ಯಕ್ತುಂ ಕರ್ಮಾಣ್ಯಶೇಷತಃ ।**
**ಯಸ್ತು ಕರ್ಮಫಲತ್ಯಾಗೀ । ಸ ತ್ಯಾಗೀತ್ಯಭಿಧೀಯತೇ ॥ 11 ॥**

ಈ ತ್ಯಾಗಿಯು ಸತ್ತ್ವಗುಣದಿಂದ ತುಂಬಿದವನಾಗಿ ಆತ್ಮಜ್ಞಾನವನ್ನು ಪಡೆದು ಸಂಶಯಗಳನ್ನೆಲ್ಲ ಕತ್ತರಿಸಿಕೊಂಡು ಕೆಟ್ಟಕರ್ಮವನ್ನು ಹಗೆಮಾಡದೆ ಇರುವನು, ಒಳ್ಳೆಯ ಕರ್ಮದಲ್ಲಿ ಸಂಗವನ್ನೂ ಮಾಡದೆ ಇರುವನು. ದೇಹಧಾರಿಯಾದವನು ಕರ್ಮಗಳೆಲ್ಲವನ್ನೂ ಬಿಡುವದಕ್ಕೆ ಆಗುವದೇ ಇಲ್ಲ ; ಆದರೆ ಯಾವನು ಕರ್ಮಫಲತ್ಯಾಗಿಯೋ ಅವನೇ ತ್ಯಾಗಿಯೆನಿಸುವನು. (10–11)

ಟಿ॥ ಸಾತ್ತ್ವಿಕಕ್ಕಾಗಿಯೇ ಕರ್ಮವನ್ನು ಮೀರುವ ಜ್ಞಾನವನ್ನು ಮುಂದೆ ಪಡೆಯುವನಾದ್ದರಿಂದಲೂ ಅದಕ್ಕಿಂತ ಮೊದಲು ಎಲ್ಲಾ ಕರ್ಮವನ್ನೂ ಬಿಡುವದು ಅಸಾಧ್ಯವಾದ್ದರಿಂದಲೂ ಈ ತ್ಯಾಗಿಯೇ ನಿಜವಾದ ತ್ಯಾಗಿಯು.

ಅನಿಷ್ಟಮಿಷ್ಟಂ ಮಿಶ್ರಂ ಚ । ತ್ರಿವಿಧಂ ಕರ್ಮಣಃ ಫಲಮ್ ।
ಭವತ್ಯತ್ಯಾಗಿನಾಂ ಪ್ರೇತ್ಯ । ನ ತು ಸಂನ್ಯಾಸಿನಾಂ ಕ್ವಚಿತ್- ॥ 12 ॥

ಪಞ್ಚೈತಾನಿ ಮಹಾಬಾಹೋ । ಕಾರಣಾನಿ ನಿಬೋಧ ಮೇ ।
ಸಾಙ್ಖ್ಯೇ ಕೃತಾನ್ತೇ ಪ್ರೋಕ್ತಾನಿ । ಸಿದ್ಧಯೇ ಸರ್ವಕರ್ಮಣಾಮ್ ॥ 13 ॥

ಅಧಿಷ್ಠಾನಂ ತಥಾ ಕರ್ತಾ । ಕರಣಂ ಚ ಪೃಥಗ್ವಿಧಮ್ ।
ವಿವಿಧಾಶ್ಚ ಪೃಥಕ್ಚೇಷ್ಟಾ । ದೈವಂ ಚೈವಾತ್ರ ಪಞ್ಚಮಮ್ ॥ 14 ॥

ಶರೀರವಾಙ್ಮನೋಭಿರ್ಯ–ತ್ಕರ್ಮ ಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ । ಪಞ್ಚೈತೇ ತಸ್ಯ ಹೇತವಃ ॥ 15 ॥

ತತ್ರೈವಂ ಸತಿ ಕರ್ತಾರ–ಮಾತ್ಮಾನಂ ಕೇವಲಂ ತು ಯಃ ।
ಪಶ್ಯತ್ಯಕೃತಬುದ್ಧಿತ್ವಾ–ನ್ನ ಸ ಪಶ್ಯತಿ ದುರ್ಮತಿಃ ॥ 16 ॥

ಯಸ್ಯ ನಾಹಙ್ಕೃತೋ ಭಾವೋ । ಬುದ್ಧಿರ್ಯಸ್ಯ ನ ಲಿಪ್ಯತೇ ।
ಹತ್ವಾಪಿ ಸ ಇಮಾಂಲ್ಲೋಕಾ–ನ್ನಹನ್ತಿ ನ ನಿಬಧ್ಯತೇ ॥ 17 ॥

ಬೇಡವೆನಿಸುವಂಥದ್ದು, ಬೇಕೆನಿಸುವಂಥದ್ದು, ಇವೆರಡರ ಬೆರಕೆಯಿಂದಾದದ್ದು – ಹೀಗೆ ಮೂರುಬಗೆಯ ಕರ್ಮದ ಫಲವು ಕರ್ಮವನ್ನು ಬಿಡಲಾರದವನಿಗೆ ಸತ್ತಮೇಲೆ ಆಗುವದು ; ಆದರೆ ಸರ್ವಕರ್ಮಸಂನ್ಯಾಸಿಗಳಿಗೆ ಇದು

ಎಂದಿಗೂ ಆಗುವದಿಲ್ಲ . ಎಲೈ ಮಹಾಬಾಹುವೆ, ಯಾವ ಕರ್ಮಗಳಿಗಾದರೂ ಫಲವು ಉಂಟಾಗಬೇಕಾದರೆ ಈ ಐದು ಕಾರಣಗಳು– ಎಂದು ವೇದಾಂತ ಸಿದ್ಧಾಂತದಲ್ಲಿ ಹೇಳಿರುತ್ತದೆ. ಅವುಗಳನ್ನು ತಿಳಿಸುವೆನು ಕೇಳು : ಆಶ್ರಯವಾದ ಶರೀರವು, ಕರ್ತೃವು, ಬೇರೆಬೇರೆಯಾಗಿ ತೋರುವ ಹನ್ನೆರಡು ಬಗೆಯ ಕರಣಗಳು, ಬೇರೆಬೇರೆಯಾಗಿರುವ ಆಯಾ ಪ್ರಾಣವ್ಯಾಪಾರಗಳು, ಇವುಗಳಿಗೆ ಐದನೆಯದಾದ ಕರಣಾನುಗ್ರಹದ ದೇವತೆ, ಇವು ಐದು. ಕಾಯ, ವಚನ, ಮನಸ್ಸು – ಎಂಬ ತ್ರಿಕರಣದಿಂದ ಮನುಷ್ಯನು ಯಾವಯಾವ ಶಾಸ್ತ್ರೀಯ ಅಥವಾ ಅಶಾಸ್ತ್ರೀಯಕರ್ಮವನ್ನು ಮಾಡುವನೋ ಅದಕ್ಕೆ ಈ ಐದೂ ಕಾರಣ ವಾಗಿರುತ್ತದೆ. ಹೀಗಿರುವಲ್ಲಿ ಶುದ್ಧನಾದ ಆತ್ಮನನ್ನು ಕರ್ತನೆಂದು ಯಾವನು ತಿಳಿಯುವನೋ ಸರಿಯಾಗಿ ಸಂಸ್ಕಾರವಾದ ಬುದ್ಧಿಯಿಲ್ಲದ ಆ ದುರ್ಬುದ್ಧಿಯವನು ನಿಜವನ್ನು ಅರಿಯನು.

ಯಾವನಿಗೆ ನಾನು ಕರ್ತನೆಂಬ ತಿಳಿವು ಇರುವದಿಲ್ಲವೋ, ಯಾವನ ಬುದ್ಧಿಗೆ ಕರ್ಮದ ಅಂಟು ಹತ್ತಿಕೊಳ್ಳದೆ ಇರುವದೋ, ಅವನು ಈ ಪ್ರಾಣಿಗಳನ್ನೆಲ್ಲ

ಕೊಂದರೂ ನಿಜವಾಗಿ ಕೊಲ್ಲುವದೂ ಇಲ್ಲ; ಕರ್ಮಫಲಕ್ಕೆ ಕಟ್ಟು ಬೀಳುವದೂ ಇಲ್ಲ. (12–17)

ಟೀ॥ ಸಾತ್ತ್ವಿಕತ್ಯಾಗದಿಂದ ಚಿತ್ತಶುದ್ಧಿಯಾಗಿ ಜ್ಞಾನವುಂಟಾದರೆ ಆತ್ಮನು ಪರಿಶುದ್ಧನೆಂದೂ ಅವನಲ್ಲಿ ಯಾವ ಕರ್ಮವೂ ಇಲ್ಲವೆಂದೂ ದೇಹಾದಿಗಳ ಸಂಬಂಧದಿಂದ ಅವನಲ್ಲಿ ಕರ್ಮವೂ ಕರ್ಮಫಲಭೋಕ್ತೃತ್ವವೂ ತೋರುವವೆಂದೂ ಸ್ಪಷ್ಟವಾಗುತ್ತದೆ. ಈ ಜ್ಞಾನವು ಯಾವನಿಗೆ ಉಂಟಾಗುವದೋ ಅವನಿಗೆ ಕರ್ಮವಾಗಲಿ ಕರ್ಮಫಲವಾಗಲಿ ಇರುವದೇ ಇಲ್ಲ.

**ಜ್ಞಾನಂ ಜ್ಞೇಯಂ ಪರಿಜ್ಞಾತಾ । ತ್ರಿವಿಧಾ ಕರ್ಮಚೋದನಾ ।**
**ಕರಣಂ ಕರ್ಮ ಕರ್ತೇತಿ । ತ್ರಿವಿಧಃ ಕರ್ಮಸಙ್ಗ್ರಹಃ ॥ 18 ॥**

ಅರಿವು, ಅರಿಯಲ್ಪಡತಕ್ಕದ್ದು, ಅರಿಯುವಾತನು – ಎಂದು ಕರ್ಮಕ್ಕೆ ಮೂರು ಬಗೆಯ ಪ್ರೇರಕಗಳು ; ಕರಣ, ಕರ್ಮ, ಕರ್ತೃ – ಎಂದು ಕರ್ಮವನ್ನು ಮೂರುಬಗೆಯಲ್ಲಿ ಸಂಗ್ರಹಿಸಿ ಹೇಳಬಹುದು. (18)

ಜ್ಞಾನಂ ಕರ್ಮ ಚ ಕರ್ತಾ ಚ । ತ್ರಿಧೈವ ಗುಣಭೇದತಃ ।
ಪ್ರೋಚ್ಯತೇ ಗುಣಸಙ್ಖ್ಯಾನೇ । ಯಥಾವಚ್ಛೃಣು ತಾನ್ಯಪಿ ॥ 19 ॥
ಸರ್ವಭೂತೇಷು ಯೇನೈಕಂ । ಭಾವಮವ್ಯಯಮೀಕ್ಷತೇ ।
ಅವಿಭಕ್ತಂ ವಿಭಕ್ತೇಷು । ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್ ॥ 20 ॥
ಪೃಥಕ್ತ್ವೇನ ತು ಯಜ್ಜ್ಞಾನಂ । ನಾನಾಭಾವಾನ್ಪೃಥಗ್ವಿಧಾನ್ ।
ವೇತ್ತಿ ಸರ್ವೇಷು ಭೂತೇಷು । ತಜ್ಜ್ಞಾನಂ ವಿದ್ಧಿ ರಾಜಸಮ್ ॥ 21 ॥
ಯತ್ತು ಕೃತ್ಸ್ನವದೇಕಸ್ಮಿನ್ । ಕಾರ್ಯೇ ಸಕ್ತಮಹೈತುಕಮ್ ।
ಅತತ್ತ್ವಾರ್ಥವದಲ್ಪಂ ಚ । ತತ್ತಾಮಸಮುದಾಹೃತಮ್ ॥ 22 ॥
ನಿಯತಂ ಸಙ್ಗರಹಿತ–ಮರಾಗದ್ವೇಷತಃ ಕೃತಮ್ ।
ಅಫಲಪ್ರೇಪ್ಸುನಾ ಕರ್ಮ । ಯತ್ತತ್ಸಾತ್ತ್ವಿಕಮುಚ್ಯತೇ ॥ 23 ॥
ಯತ್ತು ಕಾಮೇಪ್ಸುನಾ ಕರ್ಮ । ಸಾಹಙ್ಕಾರೇಣ ವಾ ಪುನಃ ।
ಕ್ರಿಯತೇ ಬಹುಲಾಯಾಸಂ । ತದ್ರಾಜಸಮುದಾಹೃತಮ್ ॥ 24 ॥

ಅನುಬನ್ಧಂ ಕ್ಷಯಂ ಹಿಂಸಾ—ಮನಪೇಕ್ಷ್ಯ ಚ ಪೌರುಷಮ್ ।
ಮೋಹಾದಾರಭ್ಯತೇ ಕರ್ಮ । ತತ್ತಾಮಸಮುದಾಹೃತಮ್ ॥ 25 ॥
ಮುಕ್ತಸಙ್ಗೋಽನಹಂವಾದೀ । ಧೃತ್ಯುತ್ಸಾಹಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ । ಕರ್ತಾ ಸಾತ್ತ್ವಿಕ ಉಚ್ಯತೇ ॥ 26 ॥
ರಾಗೀ ಕರ್ಮಫಲಪ್ರೇಪ್ಸು—ರ್ಲುಬ್ಧೋ ಹಿಂಸಾತ್ಮಕೋಽಶುಚಿಃ ।
ಹರ್ಷಶೋಕಾನ್ವಿತಃ ಕರ್ತಾ । ರಾಜಸಃ ಪರಿಕೀರ್ತಿತಃ ॥ 27 ॥
ಅಯುಕ್ತಃ ಪ್ರಾಕೃತಃ ಸ್ತಬ್ಧಃ । ಶಠೋ ನೈಷ್ಕೃತಿಕೋಽಲಸಃ ।
ವಿಷಾದೀ ದೀರ್ಘಸೂತ್ರೀ ಚ । ಕರ್ತಾ ತಾಮಸ ಉಚ್ಯತೇ ॥ 28 ॥

ಜ್ಞಾನವೂ ಕರ್ಮವೂ ಕರ್ತನೂ ಗುಣಭೇದದಿಂದ ಮೂರು ಬಗೆಯಾಗಿರುವವೆಂದು ಗುಣಗಳ ವಿಷಯವಾಗಿ ಹೇಳುವ ಸಾಂಖ್ಯಶಾಸ್ತ್ರದಲ್ಲಿ ಹೇಳಿರುತ್ತದೆ. ಅವುಗಳನ್ನು ಇದ್ದಂತೆ ಹೇಳುವೆನು, ಕೇಳು : ಸಮಸ್ತಪ್ರಾಣಿಗಳಲ್ಲಿಯೂ ಒಂದೇ ಆಗಿರುವ, ಅವುಗಳು ಬೇರೆಬೇರೆಯಾಗಿದ್ದರೂ ತಾನು

ಬೇರೆಯಾಗದ, ನಾಶವಿಲ್ಲದ ಆತ್ಮವಸ್ತುವನ್ನೇ ಯಾವ ಜ್ಞಾನದಿಂದ ಕಾಣುವರೋ ಅದು ಸಾತ್ತ್ವಿಕವೆಂದು ತಿಳಿ. ಯಾವ ಜ್ಞಾನವು ಬೇರೆಬೇರೆಯ ತರದ ಬೇರೆಬೇರೆಯ ಆತ್ಮರುಗಳನ್ನು ಪ್ರಾಣಿಗಳಲ್ಲೆಲ್ಲ ಕಾಣುತ್ತಿರುವದೋ ಆ ಜ್ಞಾನವು ರಾಜಸವೆಂದು ತಿಳಿ. ಯಾವದು ಒಂದು ಪ್ರಕೃತಿಕಾರ್ಯದಲ್ಲಿಯೇ ಎಲ್ಲವೂ ಅದೇ – ಎಂಬಂತೆ ಅಯುಕ್ತವಾಗಿ ಅದರಲ್ಲಿಯೇ ಆಸಕ್ತಿಯಿಂದಿರುವದೋ, ತತ್ತ್ವಾರ್ಥವನ್ನು ತಿಳಿಯದ ಅಲ್ಪವಾದ ಆ ತಿಳಿವನ್ನು ತಾಮಸವೆನ್ನುತ್ತಾರೆ. ಯಾವಾಗಲೂ ಸಂಗವಿಲ್ಲದೆ ರಾಗದ್ವೇಷಗಳಿಲ್ಲದೆ ಫಲಾಶೆಯೂ ಇಲ್ಲದೆ ಮಾಡುವ ಕರ್ಮವು ಸಾತ್ತ್ವಿಕವೆನಿಸುವದು. ಯಾವದು ಭೋಗದ ಇಚ್ಛೆಯಿಂದಲೋ ಅಹಂಕಾರ ಪೂರ್ವಕವಾಗಿಯೋ ಬಹಳ ಆಯಾಸದಿಂದ ಮಾಡಲ್ಪಡುವದೋ ಅದು ರಾಜಸವೆನಿಸುವದು. ಮುಂದೆ ಆಗುವ ಫಲ, ಅದಕ್ಕಾಗಬೇಕಾದ ಶಕ್ತಿಕ್ಷಯ, ಅದರಿಂದಾಗುವ ಹಿಂಸೆ, ಅದನ್ನು ಮಾಡುವದಕ್ಕೆ ತನಗೆ ಇರುವ ಸಾಮರ್ಥ್ಯ – ಇವುಗಳೊಂದನ್ನೂ ಲೆಕ್ಕಿಸದೆ ಮೋಹದಿಂದ ಮಾಡುವ ಕರ್ಮವು ತಾಮಸವೆನಿಸುವದು. ಆಸಕ್ತಿಯಿಲ್ಲದವನೂ ನಾನು

ಮಾಡುವೆನೆಂಬ ಹೆಮ್ಮೆಯಿಲ್ಲದವನೂ ಧೃತ್ಯುತ್ಸಾಹಗಳಿಂದ ಕೂಡಿದವನೂ, ಫಲವು ಸಿದ್ಧಿಸಿದರೂ ಸಿದ್ಧಿಸದಿದ್ದರೂ ಯಾವ ಮನೋವಿಕಾರವೂ ಆಗದವನೂ ಆಗಿರುವ ಕರ್ತನು ಸಾತ್ತ್ವಿಕನೆನಿಸುವನು. ವಿಷಯಗಳಲ್ಲಿ ರಾಗವುಳ್ಳವನೂ ಕರ್ಮಫಲದಾಸೆಯುಳ್ಳವನೂ ದುರಾಶೆಯುಳ್ಳವನೂ ಮತ್ತೊಬ್ಬರನ್ನು ಹಿಂಸೆಮಾಡುವ ಮನಸ್ಸಿನವನೂ ಶುಚಿತ್ವವಿಲ್ಲದವನೂ ಹರ್ಷಶೋಕಗಳಿಂದೊಡಗೂಡಿದವನೂ ಆಗಿರುವ ಕರ್ತನು ರಾಜಸನೆನಿಸುವನು. ಚಿತ್ತಸಮಾಧಾನವಿಲ್ಲದವನೂ ಚಿತ್ತಸಂಸ್ಕಾರವಿಲ್ಲದವನೂ ದುರಭಿಮಾನಿಯೂ ಮಾಯಾವಿಯೂ ಮತ್ತೊಬ್ಬರಿಗೆ ಕೇಡುಬಯಸುವವನೂ ಸೋಮಾರಿಯೂ ಯಾವಾಗಲೂ ಉಸ್ಸೆಂದು ಕೂರುವ ಸ್ವಭಾವದವನೂ ಕೆಲಸವನ್ನು ಮುಂದಕ್ಕೆ ತಳ್ಳುವ ಸ್ವಭಾವದವನೂ ಆಗಿರುವ ಕರ್ತನು ತಾಮಸನೆನಿಸುವನು. (19–28)

ಬುದ್ಧೇರ್ಭೇದಂ ಧೃತೇಶ್ಚೈವ । ಗುಣತಸ್ತ್ರಿವಿಧಂ ಶೃಣು ।
ಪ್ರೋಚ್ಯಮಾನಮಶೇಷೇಣ । ಪೃಥಕ್ತ್ವೇನ ಧನಞ್ಜಯ ॥ 29 ॥

ಪ್ರವೃತ್ತಿಂ ಚ ನಿವೃತ್ತಿಂ ಚ । ಕಾರ್ಯಾಕಾರ್ಯೇ ಭಯಾಭಯೇ ।
ಬನ್ಧಂ ಮೋಕ್ಷಂ ಚ ಯಾ ವೇತ್ತಿ । ಬುದ್ಧಿಃ ಸಾ ಪಾರ್ಥ ಸಾತ್ತ್ವಿಕೀ ॥ 30 ॥
ಯಯಾ ಧರ್ಮಮಧರ್ಮಂ ಚ । ಕಾರ್ಯಂ ಚಾಕಾರ್ಯಮೇವ ಚ ।
ಅಯಥಾವತ್ಪ್ರಜಾನಾತಿ । ಬುದ್ಧಿಃ ಸಾ ಪಾರ್ಥ ರಾಜಸೀ ॥ 31 ॥
ಅಧರ್ಮಂ ಧರ್ಮಮಿತಿ ಯಾ । ಮನ್ಯತೇ ತಮಸಾವೃತಾ ।
ಸರ್ವಾರ್ಥಾನ್ವಿಪರೀತಾಂಶ್ಚ । ಬುದ್ಧಿಃ ಸಾ ಪಾರ್ಥ ತಾಮಸೀ ॥ 32 ॥

ಧನಂಜಯನೆ, ಗುಣಭೇದದಿಂದ ಮೂರು ಬಗೆಯಾಗಿರುವ ಬುದ್ಧಿಯ ವಿಧಗಳನ್ನೂ ಧೃತಿಯ ವಿಧಗಳನ್ನೂ ಬೇರೆಬೇರೆಯಾಗಿ ವಿಂಗಡಿಸಿ ಸಂಪೂರ್ಣವಾಗಿ ಹೇಳುವೆನು ಕೇಳು. ಎಲೈ ಪಾರ್ಥನೆ, ಇದು ಪ್ರವೃತ್ತಿಮಾರ್ಗ, ಇದು ನಿವೃತ್ತಿಮಾರ್ಗ– ಎಂಬುದನ್ನೂ ಇದನ್ನು ಮಾಡತಕ್ಕದ್ದು, ಇದು ಮಾಡಬಾರದ್ದು ಇದು ಅಂಜಿಕೆಗೆ ಕಾರಣವಾದದ್ದು , ಇದು ಅಂಜಿಕೆಯಿಲ್ಲದಿರುವಿಕೆಗೆ ಕಾರಣವಾದದ್ದು– ಎಂಬುದನ್ನೂ; ಇದು ಬಂಧವು, ಇದು ಮೋಕ್ಷವು – ಎಂಬುದನ್ನೂ

ಯಾವದು ತಿಳಿಯಬಲ್ಲದೋ ಆ ಬುದ್ಧಿಯು ಸಾತ್ತ್ವಿಕಬುದ್ಧಿಯು. ಎಲೈ ಪಾರ್ಥನೆ, ಯಾವದರಿಂದ ಧರ್ಮವನ್ನೂ, ಅಧರ್ಮವನ್ನೂ, ಮಾಡತಕ್ಕದ್ದನ್ನೂ, ಮಾಡಬಾರದ್ದನ್ನೂ, ಸರಿಯಾಗಿ ತಿಳಿದುಕೊಳ್ಳಲಾಗುವದಿಲ್ಲವೋ ಆ ಬುದ್ಧಿಯು ರಾಜಸವು. ಎಲೈ ಪಾರ್ಥನೆ, ಅಜ್ಞಾನವೆಂಬ ಕತ್ತಲೆಯ ಮುಸುಕಿನಿಂದ ಯಾವ ಬುದ್ಧಿಯು ಅಧರ್ಮವನ್ನು ಧರ್ಮವೆಂದು ತಿಳಿಯುವದೋ ಯಾವ ವಿಷಯವನ್ನಾದರೂ ವಿರುದ್ಧರೂಪದಿಂದಲೇ ಗ್ರಹಿಸುತ್ತಿರುವದೋ ಅದು ತಾಮಸವು. (29–32)

ಧೃತ್ಯಾ ಯಯಾ ಧಾರಯತೇ। ಮನಃಪ್ರಾಣೇನ್ದ್ರಿಯಕ್ರಿಯಾಃ।
ಯೋಗೇನಾವ್ಯಭಿಚಾರಿಣ್ಯಾ। ಧೃತಿಃ ಸಾ ಪಾರ್ಥ ಸಾತ್ತ್ವಿಕೀ ॥ 33 ॥

ಯಯಾ ತು ಧರ್ಮಕಾಮಾರ್ಥಾನ್। ಧೃತ್ಯಾ ಧಾರಯತೇಽರ್ಜುನ।
ಪ್ರಸಙ್ಗೇನ ಫಲಾಕಾಙ್ಕ್ಷೀ। ಧೃತಿಃ ಸಾ ಪಾರ್ಥ ರಾಜಸೀ ॥ 34 ॥

ಯಯಾ ಸ್ವಪ್ನಂ ಭಯಂ ಶೋಕಂ। ವಿಷಾದಂ ಮದಮೇವ ಚ।
ನ ವಿಮುಞ್ಚತಿ ದುರ್ಮೇಧಾ – ಧೃತಿಃ ಸಾ ಪಾರ್ಥ ತಾಮಸೀ ॥ 35 ॥

ಪಾರ್ಥನೆ, ಸ್ವಲ್ಪವೂ ತಪ್ಪದಿರುವ ಯಾವ ಧೃತಿಯಿಂದ ಮನಸ್ಸು, ಪ್ರಾಣ, ಇಂದ್ರಿಯ – ಇವುಗಳನ್ನು ಯೋಗದಿಂದ ಹಿಡಿದು ನಿಲ್ಲಿಸಿಕೊಳ್ಳುತ್ತಾನೋ ಆ ಧೃತಿಯು ಸಾತ್ತ್ವಿಕವು. ಆದರೆ ಅರ್ಜುನನೆ, ಯಾವ ಧೃತಿಯಿಂದ ಧರ್ಮ, ಕಾಮ, ಅರ್ಥ – ಇವುಗಳನ್ನು ಧರಿಸಿರುವನೋ ಆಯಾ ಪ್ರಸಂಗದಿಂದ ಆಯಾ ಫಲವನ್ನು ಕೋರುವನೋ ಅದು ರಾಜಸವು. ಎಲೈ ಪಾರ್ಥನೆ, ಯಾವದರಿಂದ ನಿದ್ರೆ, ಅಂಜಿಕೆ, ಅಳು, ದುಃಖದಿಂದ ಕುಗ್ಗುವದು, ಮದ – ಇವುಗಳನ್ನು ಅವಿವೇಕಿಯಾಗಿ ಬಿಡದಿರುವನೋ ಆ ಧೃತಿಯು ತಾಮಸವು. (33–35)

ಸುಖಂ ತ್ವಿದಾನೀಂ ತ್ರಿವಿಧಂ । ಶೃಣು ಮೇ ಭರತರ್ಷಭ ।
ಅಭ್ಯಾಸಾದ್ರಮತೇ ಯತ್ರ । ದುಃಖಾನ್ತಂ ಚ ನಿಗಚ್ಛತಿ ॥ 36 ॥
ಯತ್ತದಗ್ರೇ ವಿಷಮಿವ । ಪರಿಣಾಮೇಽಮೃತೋಪಮಮ್ ।
ತತ್ಸುಖಂ ಸಾತ್ತ್ವಿಕಂ ಪ್ರೋಕ್ತ–ಮಾತ್ಮಬುದ್ಧಿಪ್ರಸಾದಜಮ್ ॥ 37 ॥
ವಿಷಯೇನ್ದ್ರಿಯಸಂಯೋಗಾ–ದ್ಯತ್ತದಗ್ರೇಽಮೃತೋಪಮಮ್ ।
ಪರಿಣಾಮೇ ವಿಷಮಿವ । ತತ್ಸುಖಂ ರಾಜಸಂ ಸ್ಮೃತಮ್ ॥ 38 ॥

**ಯದಗ್ರೇ ಚಾನುಬನ್ಧೇ ಚ । ಸುಖಂ ಮೋಹನಮಾತ್ಮನಃ ।**
**ನಿದ್ರಾಲಸ್ಯಪ್ರಮಾದೋತ್ಥಂ । ತತ್ತಾಮಸಮುದಾಹೃತಮ್ ॥ 39 ॥**

ಎಲೈ ಭರತಶ್ರೇಷ್ಠನೆ, ಈಗ ಮೂರು ಬಗೆಯಾದ ಸುಖವನ್ನು ಹೇಳುವೆನು ಕೇಳು: ಮತ್ತೆಮತ್ತೆ ಅಭ್ಯಾಸಮಾಡಿದರೆ ಯಾವದರಲ್ಲಿಯೇ ರತಿಯುಂಟಾಗುವದೋ ಯಾವದರಲ್ಲಿ ದುಃಖದ ನಾಶವನ್ನು ಸಂಪೂರ್ಣವಾಗಿ ಪಡೆಯಬಹುದೋ ಯಾವದು ಮೊದಲು ವಿಷದಂತೆಯೂ ಕೊನೆಯಲ್ಲಿ ಅಮೃತದಂತೆಯೂ ಇರುವದೋ, ಆತ್ಮಬುದ್ಧಿಯ ಪ್ರಸನ್ನತೆಯಿಂದ ಉಂಟಾದ ಆ ಸುಖವನ್ನು ಸಾತ್ತ್ವಿಕವೆನ್ನುವರು. ಯಾವದು ವಿಷಯೇಂದ್ರಿಯಗಳ ಕೂಡುವಿಕೆಯಿಂದುಂಟಾಗಿ ಮೊದಲು ಅಮೃತದಂತೆಯೂ ಕೊನೆಯಲ್ಲಿ ವಿಷದಂತೆಯೂ ಇರುವದೋ, ಆ ಸುಖವನ್ನು ರಾಜಸವೆನ್ನುವರು. ಯಾವದು ಮೊದಲೂ ಕೊನೆಯಲ್ಲಿಯೂ ತನಗೆ ಮೋಹವನ್ನುಂಟುಮಾಡುವದೋ, ನಿದ್ರೆ, ಆಲಸ್ಯ, ಅವಧಾನವಿಲ್ಲದಿರುವದು – ಇವುಗಳಿಂದುಂಟಾದ ಆ ಸುಖವನ್ನು ತಾಮಸವೆನ್ನುವರು. (36–39)

ಟಿ॥ ಕ್ರಿಯಾಕಾರಕಫಲರೂಪವಾಗಿರುವ ಸಂಸಾರವೆಲ್ಲವೂ ತ್ರಿಗುಣಾತ್ಮಕವಾಗಿರುವದು. ಅದರಲ್ಲಿ ಸಾತ್ತ್ವಿಕಸುಖವನ್ನು ಪಡೆಯಬೇಕೆನ್ನುವವರು ಸಾತ್ತ್ವಿಕಜ್ಞಾನವನ್ನು ಪಡೆಯಬೇಕು. ಸಾತ್ತ್ವಿಕಕರ್ಮವನ್ನು ಸಾತ್ತ್ವಿಕಬುದ್ಧಿಯಿಂದಲೂ ಸಾತ್ತ್ವಿಕಧೃತಿಯಿಂದಲೂ ನೆರವೇರಿಸುವ ಸಾತ್ತ್ವಿಕಕರ್ತನು ಆ ಫಲವನ್ನು ಪಡೆಯುತ್ತಾನೆ.

ನ ತದಸ್ತಿ ಪೃಥಿವ್ಯಾಂ ವಾ । ದಿವಿ ದೇವೇಷು ವಾ ಪುನಃ ।
ಸತ್ತ್ವಂ ಪ್ರಕೃತಿಜೈರ್ಮುಕ್ತಂ । ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ ॥ 40 ॥

ಭೂಮಿಯಮೇಲಾಗಲಿ, ಅಂತರಿಕ್ಷದಲ್ಲಾಗಲಿ, ದೇವತೆಗಳ ಲೋಕದಲ್ಲಾಗಲಿ, ಪ್ರಕೃತಿಯಿಂದಾಗಿರುವ ಈ ಮೂರು ಗುಣಗಳಿಂದಾಗಿಲ್ಲದ ವಸ್ತುವೇ ಇರುವದಿಲ್ಲ. (40)

ಬ್ರಾಹ್ಮಣಕ್ಷತ್ರಿಯವಿಶಾಂ । ಶೂದ್ರಾಣಾಂ ಚ ಪರನ್ತಪ ।
ಕರ್ಮಾಣಿ ಪ್ರವಿಭಕ್ತಾನಿ । ಸ್ವಭಾವಪ್ರಭವೈರ್ಗುಣೈಃ ॥ 41 ॥
ಶಮೋ ದಮಸ್ತಪಃ ಶೌಚಂ । ಕ್ಷಾನ್ತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ । ಬ್ರಹ್ಮಕರ್ಮ ಸ್ವಭಾವಜಮ್ ॥ 42 ॥

ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ। ಯುದ್ಧೇ ಚಾಪ್ಯಪಲಾಯನಮ್।
ದಾನಮೀಶ್ವರಭಾವಶ್ಚ। ಕ್ಷಾತ್ರಂ ಕರ್ಮ ಸ್ವಭಾವಜಮ್ ॥ 43 ॥
ಕೃಷಿಗೋರಕ್ಷ್ಯವಾಣಿಜ್ಯಂ। ವೈಶ್ಯಕರ್ಮ ಸ್ವಭಾವಜಮ್।
ಪರಿಚರ್ಯಾತ್ಮಕಂ ಕರ್ಮ। ಶೂದ್ರಸ್ಯಾಪಿ ಸ್ವಭಾವಜಮ್ ॥ 44 ॥
ಸ್ವೇ ಸ್ವೇ ಕರ್ಮಣ್ಯಭಿರತಃ। ಸಂಸಿದ್ಧಿಂ ಲಭತೇ ನರಃ।
ಸ್ವಕರ್ಮನಿರತಃ ಸಿದ್ಧಿಂ। ಯಥಾ ವಿನ್ದತಿ ತಚ್ಛೃಣು ॥ 45 ॥
ಯತಃ ಪ್ರವೃತ್ತಿರ್ಭೂತಾನಾಂ। ಯೇನ ಸರ್ವಮಿದಂ ತತಮ್।
ಸ್ವಕರ್ಮಣಾ ತಮಭ್ಯರ್ಚ್ಯ। ಸಿದ್ಧಿಂ ವಿನ್ದತಿ ಮಾನವಃ ॥ 46 ॥
ಶ್ರೇಯಾನ್ಸ್ವಧರ್ಮೋ ವಿಗುಣಃ। ಪರಧರ್ಮಾತ್ ಸ್ವನುಷ್ಠಿತಾತ್।
ಸ್ವಭಾವನಿಯತಂ ಕರ್ಮ। ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥ 47 ॥
ಸಹಜಂ ಕರ್ಮ ಕೌನ್ತೇಯ। ಸದೋಷಮಪಿ ನ ತ್ಯಜೇತ್।
ಸರ್ವಾರಮ್ಭಾ ಹಿ ದೋಷೇಣ। ಧೂಮೇನಾಗ್ನಿರಿವಾವೃತಾಃ ॥ 48 ॥

ಎಲೈ ಶತ್ರುತಾಪನನೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ – ಇವರಿಗೂ ಶೂದ್ರರಿಗೂ ಪ್ರಕೃತಿಯಿಂದುಂಟಾದ ಗುಣಗಳಿಂದ ಕರ್ಮಗಳು ಬೇರೆಬೇರೆಯಾಗಿ ವಿಂಗಡಿಸಲ್ಪಟ್ಟಿರುತ್ತದೆ. ಶಮ, ದಮ, ತಪಸ್ಸು, ಶುಚಿತ್ವ, ಕ್ಷಮೆ, ಸರಳತನ, ಜ್ಞಾನ, ವಿಜ್ಞಾನ, ಆಸ್ತಿಕ್ಯಬುದ್ಧಿ – ಇವು ಪ್ರಕೃತಿಯಿಂದಾಗಿರುವ ಬ್ರಾಹ್ಮಣಕರ್ಮಗಳು. ಶೌರ್ಯವು, ಕೆಚ್ಚೆದೆ, ಧೃತಿಯು, ಕಾರ್ಯದಕ್ಷತೆ, ಯುದ್ಧದಲ್ಲಿ ಕಾಲ್ತೆಗೆಯದಿರುವದು, ದಾನಮಾಡುವದು, ಪ್ರಭುಶಕ್ತಿಯನ್ನು ತೋರಿಸಿಕೊಳ್ಳುವದು – ಇವು ಕ್ಷತ್ರಿಯರಿಗೆ ಪ್ರಕೃತಿಯಿಂದಾಗಿರುವ ಕರ್ಮಗಳು. ವ್ಯವಸಾಯ, ಪಶುಪಾಲನೆ, ವ್ಯಾಪಾರ – ಇವು ವೈಶ್ಯರಿಗೆ ಪ್ರಕೃತಿಯಿಂದುಂಟಾಗಿರುವ ಕರ್ಮಗಳು ; ಮತ್ತು ಸೇವಾರೂಪಕರ್ಮವು ಶೂದ್ರನಲ್ಲಿ ಪ್ರಕೃತಿಯಿಂದುಂಟಾಗಿರುವ ಕರ್ಮವು. ತನ್ನತನ್ನ ಕರ್ಮದಲ್ಲಿ ನಿರತನಾಗಿದ್ದರೆ ಮನುಷ್ಯನು ಸಿದ್ಧಿಯನ್ನು ಹೊಂದುವನು ; ಸ್ವಕರ್ಮದಲ್ಲಿ ನಿರತನಾದವನು ಸಿದ್ಧಿಯನ್ನು ಹೇಗೆ ಹೊಂದುವನೆಂದರೆ, ಕೇಳು : ಯಾವನಿಂದ ಪ್ರಾಣಿಗಳ ಉತ್ಪತ್ತಿವ್ಯಾಪಾರಗಳು ನಡೆಯುತ್ತಿರುವವೋ, ಯಾವಾತನಿಂದ ಇದೆಲ್ಲವೂ ವ್ಯಾಪ್ತವಾಗಿರುತ್ತದೆಯೋ, ಆತನನ್ನು ತನ್ನ ಕರ್ಮದಿಂದ ಆರಾಧನೆಮಾಡಿದರೆ

ಮನುಷ್ಯನು ಸಿದ್ಧಿಹೊಂದುವನು. ಚೆನ್ನಾಗಿ ಮಾಡುವ ಮತ್ತೊಬ್ಬನ ಕರ್ಮ ಕ್ಕಿಂತಲೂ ಒಂದಿಷ್ಟು ಕೊರತೆಯಿರುವಂತೆ ಮಾಡಿದರೂ ತನ್ನ ಕರ್ಮವೇ ಮೇಲು; ತನ್ನ ಸ್ವಭಾವದಿಂದ ಗೊತ್ತಾಗಿರುವ ಕರ್ಮವನ್ನು ಮಾಡಿದರೆ ಪಾಪವು ಉಂಟಾ– ಗದು. ಕೌಂತೇಯನೆ, ತನ್ನ ಕರ್ಮದಲ್ಲಿ ದೋಷವಿದ್ದರೂ ಅದನ್ನು ಬಿಡಬಾರದು ; ಏಕೆಂದರೆ ಬೆಂಕಿಯನ್ನು ಹೊಗೆಯು ಮುಸುಕಿರುವಂತೆ ಸಕಲಕರ್ಮಗಳನ್ನೂ ದೋಷವು ಮುಸುಕಿಕೊಂಡಿರುವದು. (41–48)

ಟೀ॥ ತನ್ನ ಕರ್ಮವನ್ನು ಮಾಡಿದರೆ ಸ್ವರ್ಗವೂ ಉತ್ತಮಜನ್ಮವೂ ದೊರಕು ತ್ತವೆ; ಅದನ್ನು ಭಗವಂತನಿಗೆ ಅರ್ಪಿಸಿದರೆ ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆಯು ಸಿದ್ಧಿಯಾಗುತ್ತದೆ, ತನ್ನ ಕರ್ಮವು ದೋಷಯುಕ್ತವೆಂದು ಬಿಟ್ಟು ಮತ್ತೊಬ್ಬರ ಕರ್ಮಕ್ಕೆ ಕೈ ಹಾಕಿದರೆ ಕರ್ಮಮಾತ್ರದಲ್ಲಿ ದೋಷವಿದ್ದೇ ಇರುವದರಿಂದ ಆ ದೋಷವು ತಪ್ಪದು, ಅದರ ಜೊತೆಗೆ ಶಾಸ್ತ್ರವನ್ನು ಮೀರಿದ ದೋಷವೊಂದು ಗಂಟುಬೀಳುತ್ತದೆ.

ಅಸಕ್ತಬುದ್ಧಿಃ ಸರ್ವತ್ರ । ಜಿತಾತ್ಮಾ ವಿಗತಸ್ಪೃಹಃ ।
ನೈಷ್ಕರ್ಮ್ಯಸಿದ್ಧಿಂ ಪರಮಾಂ । ಸಂನ್ಯಾಸೇನಾಧಿಗಚ್ಛತಿ ॥ 49 ॥

ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ। ತಥಾಪ್ನೋತಿ ನಿಬೋಧ ಮೇ।
ಸಮಾಸೇನೈವ ಕೌನ್ತೇಯ। ನಿಷ್ಠಾ ಜ್ಞಾನಸ್ಯ ಯಾ ಪರಾ ॥ 50 ॥

ಬುದ್ಧ್ಯಾ ವಿಶುದ್ಧಯಾ ಯುಕ್ತೋ। ಧೃತ್ಯಾತ್ಮಾನಂ ನಿಯಮ್ಯ ಚ।
ಶಬ್ದಾದೀನ್ವಿಷಯಾಂಸ್ತ್ಯಕ್ತ್ವಾ। ರಾಗದ್ವೇಷೌ ವ್ಯುದಸ್ಯ ಚ ॥ 51 ॥

ವಿವಿಕ್ತಸೇವೀ ಲಘ್ವಾಶೀ। ಯತವಾಕ್ಕಾಯಮಾನಸಃ।
ಧ್ಯಾನಯೋಗಪರೋ ನಿತ್ಯಂ। ವೈರಾಗ್ಯಂ ಸಮುಪಾಶ್ರಿತಃ ॥ 52 ॥

ಅಹಙ್ಕಾರಂ ಬಲಂ ದರ್ಪಂ। ಕಾಮಂ ಕ್ರೋಧಂ ಪರಿಗ್ರಹಮ್।
ವಿಮುಚ್ಯ ನಿರ್ಮಮಃ ಶಾನ್ತೋ। ಬ್ರಹ್ಮಭೂಯಾಯ ಕಲ್ಪತೇ ॥ 53 ॥

ಯಾವ ವಿಷಯದಲ್ಲಿಯೂ ಆಸಕ್ತಿಯಿಲ್ಲದವನಾಗಿ ಮನಸ್ಸನ್ನು ಗೆದ್ದು ಕೊಂಡು ಮತ್ತೊಂದರ ಬಯಕೆಯಿಲ್ಲದವನು ಸಂನ್ಯಾಸದಿಂದ ನೈಷ್ಕರ್ಮ್ಯವೆಂಬ ಪರಮಸಿದ್ಧಿಯನ್ನು ಹೊಂದುವನು. ಎಲೈ ಕೌಂತೇಯನೆ, ಸಿದ್ಧಿಯನ್ನು ಹೊಂದಿದವನು ಬ್ರಹ್ಮವನ್ನು ಹೇಗೆ ಹೊಂದುವನೋ ಅದನ್ನು ಸಂಕ್ಷೇಪದಿಂದ

ಹೇಳುವೆನು ಕೇಳು ; ಅದು ಜ್ಞಾನದ ಪರಮನಿಷ್ಠೆಯು. ಪರಿಶುದ್ಧವಾದ ಬುದ್ಧಿಯಿಂದೊಡಗೂಡಿ ಶರೀರೇಂದ್ರಿಯಗಳನ್ನು ಧೃತಿಯಿಂದ ತಡೆದಿರಿಸಿಕೊಂಡು ಶಬ್ದಾದಿವಿಷಯಗಳನ್ನು ಕೈಬಿಟ್ಟು, ರಾಗದ್ವೇಷಗಳನ್ನು ತೊಲಗಿಸಿಕೊಂಡು ಏಕಾಂತಸ್ಥಳದಲ್ಲಿರುತ್ತಾ ಮಿತಾಹಾರಿಯಾಗಿ ಮನೋವಾಕ್ಕಾಯಗಳನ್ನು ಬಿಗಿಹಿಡಿದುಕೊಂಡು ಯಾವಾಗಲೂ ವೈರಾಗ್ಯವನ್ನವಲಂಬಿಸಿ ಧ್ಯಾನಯೋಗಗಳಲ್ಲಿಯೇ ತಾತ್ಪರ್ಯವುಳ್ಳವನಾಗಿ, ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ, ವಿಷಯಗಳನ್ನು ಕೂಡಿಹಾಕುವದು– ಇವುಗಳನ್ನು ಬಿಟ್ಟು ತನ್ನದೆಂಬುದಿಲ್ಲದೆ ಶಾಂತನಾಗಿರುವಾತನು ಬ್ರಹ್ಮಸ್ವರೂಪನಾಗುವದಕ್ಕೆ ತಕ್ಕವನಾಗುವನು.

(49–53)

ಟಿ॥ ಜ್ಞಾನನಿಷ್ಠೆಯ ಯೋಗ್ಯತೆಯನ್ನು ಹೊಂದಿದವನು ನಿಜವಾದ ಸಿದ್ಧಿಯನ್ನು ಎಂದರೆ ಜ್ಞಾನದಿಂದ ಅಕರ್ತ್ರಾತ್ಮನಾದ ಬ್ರಹ್ಮವೇ ತಾನೆಂಬ ಅರಿವಿನಲ್ಲಿ ನಿಲುಗಡೆಯನ್ನು ಹೊಂದುವ ಕ್ರಮವನ್ನು, ಇಲ್ಲಿ ತಿಳಿಸಿದೆ. ಇಲ್ಲಿ ಧ್ಯಾನ, ಯೋಗ– ಎಂಬ ಮಾತುಗಳಿಗೆ

ಧ್ಯಾಸ, ಭಕ್ತಿ – ಎಂದು ಅರ್ಥಮಾಡಿಕೊಳ್ಳಬೇಕು; ಏಕೆಂದರೆ ಯೋಗಿಗಳಲ್ಲೆಲ್ಲ ಭಕ್ತಿಯೋಗಿಯೇ ಶ್ರೇಷ್ಠನೆಂದು ಆರನೆಯ ಅಧ್ಯಾಯದಲ್ಲಿಯೇ ಹೇಳಿದೆ.

**ಬ್ರಹ್ಮಭೂತಃ ಪ್ರಸನ್ನಾತ್ಮಾ। ನ ಶೋಚತಿ ನ ಕಾಙ್ಕ್ಷತಿ।**
**ಸಮಃ ಸರ್ವೇಷು ಭೂತೇಷು। ಮದ್ಭಕ್ತಿಂ ಲಭತೇ ಪರಾಮ್ ॥ 54 ॥**

**ಭಕ್ತ್ಯಾ ಮಾಮಭಿಜಾನಾತಿ। ಯಾವಾನ್ಯಾಶ್ಚಾಸ್ಮಿ ತತ್ತ್ವತಃ।**
**ತತೋ ಮಾಂ ತತ್ತ್ವತೋ ಜ್ಞಾತ್ವಾ। ವಿಶತೇ ತದನನ್ತರಮ್ ॥ 55 ॥**

ಬ್ರಹ್ಮಸ್ವರೂಪನಾದವನು ಅಂತಃಕರಣಪ್ರಸಾದವನ್ನು ಹೊಂದುವನು. ಅವನು ಶೋಕಿಸುವದಿಲ್ಲ, ಹಂಬಲಿಸುವದಿಲ್ಲ ; ಎಲ್ಲಾ ಪ್ರಾಣಿಗಳಲ್ಲಿಯೂ ಸಮಬುದ್ಧಿಯುಳ್ಳವನಾಗಿರುವನು, ನನ್ನಲ್ಲಿ ಪರಮಭಕ್ತಿಯನ್ನು ಹೊಂದಿರುವನು. ಈ ಭಕ್ತಿಯಿಂದ ನನ್ನನ್ನು ಸೋಪಾಧಿಕರೂಪದಿಂದ ನಾನು ಎಷ್ಟು ವಿಸ್ತಾರವಾಗಿ ರುವೆನೆಂಬುದನ್ನೂ ನಿರುಪಾಧಿಕನಾಗಿ ಯಾವ ರೂಪದಲ್ಲಿರುವೆನೆಂಬುದನ್ನೂ – ಸರಿಯಾಗಿ ಅರಿತುಕೊಳ್ಳುವನು. ಹೀಗೆ ನನ್ನನ್ನು ಸರಿಯಾಗಿ ಅರಿತುಕೊಂಡು ಒಡನೆಯೇ ನನ್ನೊಳಗೆ ಸೇರಿಹೋಗುವನು. (54–55)

ಸರ್ವಕರ್ಮಾಣ್ಯಪಿ ಸದಾ। ಕುರ್ವಾಣೋ ಮದ್ವ್ಯಪಾಶ್ರಯಃ।
ಮತ್ಪ್ರಸಾದಾದವಾಪ್ನೋತಿ। ಶಾಶ್ವತಂ ಪದಮವ್ಯಯಮ್ ॥ 56 ॥
ಚೇತಸಾ ಸರ್ವಕರ್ಮಾಣಿ। ಮಯಿ ಸಂನ್ಯಸ್ಯ ಮತ್ಪರಃ।
ಬುದ್ಧಿಯೋಗಮುಪಾಶ್ರಿತ್ಯ। ಮಚ್ಚಿತ್ತಃ ಸತತಂ ಭವ ॥ 57 ॥
ಮಚ್ಚಿತ್ತಃ ಸರ್ವದುರ್ಗಾಣಿ। ಮತ್ಪ್ರಸಾದಾತ್ತರಿಷ್ಯಸಿ।
ಅಥ ಚೇತ್ತ್ವಮಹಙ್ಕಾರಾ–ನ್ನ ಶ್ರೋಷ್ಯಸಿ ವಿನಙ್ಕ್ಷ್ಯಸಿ ॥ 58 ॥
ಯದಹಙ್ಕಾರಮಾಶ್ರಿತ್ಯ। ನ ಯೋತ್ಸ್ಯ ಇತಿ ಮನ್ಯಸೇ।
ಮಿಥ್ಯೈಷ ವ್ಯವಸಾಯಸ್ತೇ। ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ ॥ 59 ॥
ಸ್ವಭಾವಜೇನ ಕೌನ್ತೇಯ। ನಿಬದ್ಧಃ ಸ್ವೇನ ಕರ್ಮಣಾ।
ಕರ್ತುಂ ನೇಚ್ಛಸಿ ಯನ್ಮೋಹಾತ್। ಕರಿಷ್ಯಸ್ಯವಶೋಽಪಿ ತತ್ ॥ 60 ॥
ಈಶ್ವರಃ ಸರ್ವಭೂತಾನಾಂ। ಹೃದ್ದೇಶೇಽರ್ಜುನ ತಿಷ್ಠತಿ।
ಭ್ರಾಮಯನ್ಸರ್ವಭೂತಾನಿ। ಯನ್ತ್ರಾರೂಢಾನಿ ಮಾಯಯಾ ॥ 61 ॥

**ತಮೇವ ಶರಣಂ ಗಚ್ಛ । ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ಪರಾಂ ಶಾನ್ತಿಂ । ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥ 62 ॥**

ಎಲ್ಲಾ ಕರ್ಮಗಳನ್ನೂ ಯಾವಾಗಲೂ ಮಾಡುವನಾದರೂ ನನ್ನನ್ನು ಅವಲಂಬಿಸಿದರೆ ನನ್ನ ಪ್ರಸಾದದಿಂದ ಶಾಶ್ವತವಾದ ಎಂದಿಗೂ ಸವೆಯದ ಮೋಕ್ಷಪದವಿಯನ್ನು ಹೊಂದುವನು. ವಿವೇಕಯುಕ್ತವಾದ ಬುದ್ಧಿಯಿಂದ ಸರ್ವಕರ್ಮಗಳನ್ನೂ ನನ್ನಲ್ಲಿ ಸಮರ್ಪಿಸಿ ನಾನೇ ಎಲ್ಲಕ್ಕೂ ಹೆಚ್ಚೆಂದರಿತು ಸಮತ್ವರೂಪವಾದ ಬುದ್ಧಿಯೋಗವನ್ನು ಅವಲಂಬಿಸಿ ಯಾವಾಗಲೂ ನನ್ನಲ್ಲಿಯೇ ಚಿತ್ತವನ್ನಿಡು. ನನ್ನಲ್ಲಿಯೇ ಚಿತ್ತವನ್ನಿಟ್ಟರೆ ಸಕಲ ಕಷ್ಟಗಳನ್ನೂ ನನ್ನ ಅನುಗ್ರಹದಿಂದ ದಾಟುವೆ ; ಹಾಗಿಲ್ಲದೆ ಅಹಂಕಾರದಿಂದ ನನ್ನ ಮಾತನ್ನು ಕೇಳದೆಹೋಗುವೆ ಯಾದರೆ ಹಾಳಾಗುವೆ. ಅಹಂಕಾರವನ್ನು ಆಶ್ರಯಿಸಿ ನಾನು ಯುದ್ಧಮಾಡುವದೇ ಇಲ್ಲ – ಎಂದುಕೊಂಡಿರುವೆಯಷ್ಟೆ ; ಈ ನಿನ್ನ ನಿಶ್ಚಯವು ಸುಳ್ಳಾಗುವದು, ಏಕೆಂದರೆ ಪ್ರಕೃತಿಯು ನಿನ್ನನ್ನು ಯುದ್ಧಕ್ಕೆ ದೂಡುವದು. ಎಲೈ ಕೌಂತೇಯನೆ, ಸ್ವಭಾವದಿಂದಾಗಿರುವ ನಿನ್ನ ಕರ್ಮಕ್ಕೆ ಕಟ್ಟುಬಿದ್ದು ಈಗ ಅವಿವೇಕದಿಂದ

ಯಾವದನ್ನು ಮಾಡಲೊಲ್ಲೆನೆನ್ನುತ್ತಿರುವೆಯೋ ಅದನ್ನು ಪರವಶನಾಗಿಯಾದರೂ ಮಾಡುವೆ. ಅರ್ಜುನನೆ, ಮಾಯೆಯಿಂದ ದೇಹಯಂತ್ರವನ್ನು ಏರಿರುವ ಸಕಲ ಪ್ರಾಣಿಗಳನ್ನೂ ತಿರುಗಿಸುತ್ತಾ ಈಶ್ವರನು ಸರ್ವಭೂತಗಳ ಹೃದಯದಲ್ಲಿಯೂ ಕುಳಿತಿರುವನು. ಎಲೈ ಭರತಕುಲೋತ್ಪನ್ನನೆ, ಅವನನ್ನೇ ಸರ್ವಭಾವದಿಂದಲೂ ಶರಣುಹೊಂದು ; ಆತನ ಅನುಗ್ರಹದಿಂದ ಪರಮಶಾಂತಿರೂಪವಾದ ಮೋಕ್ಷವೆಂಬ ಶಾಶ್ವತಸ್ಥಾನವನ್ನು ಪಡೆಯುವೆ. (56–62)

ಟಿ|| ಕರ್ಮಯೋಗದ ಮೂಲಕ ಭಗವಂತನನ್ನು ಶರಣುಹೊಂದುವವನು ಯಾವ ಅಡ್ಡಿಯೂ ಇಲ್ಲದೆ ಸದ್ಗತಿಯನ್ನು ಹೊಂದುತ್ತಾನೆ ; ಅದನ್ನು ಬಿಟ್ಟು ಕರ್ಮವನ್ನೇ ಮಾಡುವದಿಲ್ಲವೆಂದು ಹಟಹಿಡಿಯುವ ಮೂರ್ಖನಿಗೆ ಸದ್ಗತಿಯಂತೂ ಇಲ್ಲವೇ ಇಲ್ಲ ; ಅವನು ಕೆಟ್ಟಫಲವನ್ನೂ ಉಂಡು ಕೆಟ್ಟುಹೋಗುತ್ತಾನೆ. ಆದ್ದರಿಂದ ಭಗವಂತನನ್ನೇ ಶರಣುಹೊಂದಬೇಕು.

ಇತಿ ತೇ ಜ್ಞಾನಮಾಖ್ಯಾತಂ । ಗುಹ್ಯಾದ್ಗುಹ್ಯತರಂ ಮಯಾ ।
ವಿಮೃಶ್ಯೈತದಶೇಷೇಣ । ಯಥೇಚ್ಛಸಿ ತಥಾ ಕುರು ॥ 63 ॥

ಇದೋ, ಗುಟ್ಟುಗಳಲ್ಲೆಲ್ಲ ಗುಟ್ಟಾದ ಜ್ಞಾನವನ್ನು ನಾನು ನಿನಗೆ ಹೇಳಿರುತ್ತೇನೆ. ಇದನ್ನೆಲ್ಲ ಆಲೋಚನೆಮಾಡಿ ನೋಡಿ, ನಿನಗೆ ಇಚ್ಛೆ ಬಂದಂತೆ ಮಾಡು. (63)

ಟಿ॥ ಕೆಡುವದಕ್ಕೂ ಸದ್ಗತಿಯನ್ನು ಹೊಂದುವದಕ್ಕೂ ಜೀವನಿಗೆ ಸ್ವಾತಂತ್ರ್ಯವುಂಟು ; ಶಾಸ್ತ್ರಗುರುಗಳು ಮಾರ್ಗವನ್ನು ಮಾತ್ರ ತೋರಿಸಬಲ್ಲರು.

**ಸರ್ವಗುಹ್ಯತಮಂ ಭೂಯಃ। ಶೃಣು ಮೇ ಪರಮಂ ವಚಃ।**
**ಇಷ್ಟೋಽಸಿ ಮೇ ದೃಢಮಿತಿ। ತತೋ ವಕ್ಷ್ಯಾಮಿ ತೇ ಹಿತಮ್ ॥ 64 ॥**

**ಮನ್ಮನಾ ಭವ ಮದ್ಭಕ್ತೋ। ಮದ್ಯಾಜೀ ಮಾಂ ನಮಸ್ಕುರು।**
**ಮಾಮೇವೈಷ್ಯಸಿ ಸತ್ಯಂ ತೇ। ಪ್ರತಿಜಾನೇ ಪ್ರಿಯೋಽಸಿ ಮೇ ॥ 65 ॥**

**ಸರ್ವಧರ್ಮಾನ್ಪರಿತ್ಯಜ್ಯ। ಮಾಮೇಕಂ ಶರಣಂ ವ್ರಜ।**
**ಅಹಂ ತ್ವಾ ಸರ್ವಪಾಪೇಭ್ಯೋ। ಮೋಕ್ಷಯಿಷ್ಯಾಮಿ ಮಾ ಶುಚಃ ॥ 66 ॥**

ಗುಟ್ಟುಗಳಲ್ಲೆಲ್ಲ ಹೆಚ್ಚಿನದಾದ ಗುಟ್ಟನ್ನು ಮತ್ತೂ ಹೇಳುವೆನು, ಈ ನನ್ನ ಸರ್ವೋತ್ತಮವಚನವನ್ನು ಆಲಿಸು. ನೀನು ನನಗೆ ಬಲವಾಗಿ ಪ್ರಿಯನಾಗಿರುವೆ

ಯಾದ್ದರಿಂದ ನಿನಗೆ ಹಿತವಾದದ್ದನ್ನು ಹೇಳುವೆನು ಕೇಳು : ನನ್ನಲ್ಲಿಯೇ ಮನಸ್ಸನ್ನಿಟ್ಟಿರು, ನನ್ನ ಭಕ್ತನಾಗಿರು, ನನ್ನನ್ನೇ ಪೂಜಿಸು ; ನನ್ನನ್ನೇ ನಮಸ್ಕರಿಸು ; ಹೀಗೆ ಮಾಡಿದರೆ ನನ್ನನ್ನೇ ಹೊಂದುವೆ. ಇದನ್ನು ಆಣೆಮಾಡಿ ಹೇಳಿರುತ್ತೇನೆ, ಏಕೆದಂರೆ ನೀನು ನನಗೆ ಪ್ರಿಯನಾಗಿರುತ್ತೀಯೆ. ಸರ್ವಧರ್ಮಗಳನ್ನೂ ಬಿಟ್ಟು ನನ್ನೊಬ್ಬನನ್ನೇ ಶರಣುಹೊಂದು ; ನಾನು ನಿನ್ನನ್ನು ಸಕಲಪಾಪಗಳಿಂದಲೂ ಬಿಡುಗಡೆಹೊಂದಿಸುವೆನು, ಶೋಕಿಸಬೇಡ. (64–66)

ಟಿ॥ ಕರ್ಮಯೋಗದಲ್ಲಿ ನಿಷ್ಠೆಯನ್ನು ಹೊಂದಿ ಈಶ್ವರನ ಭಕ್ತನಾಗುವದು, ಮತ್ತು ಅದರ ಫಲವಾಗಿ ಜ್ಞಾನನಿಷ್ಠೆಯನ್ನು ಹೊಂದುವದು – ಇವೆರಡಕ್ಕಿಂತ ಹೆಚ್ಚಿನ ಅಧ್ಯಾತ್ಮರಹಸ್ಯವೇ ಇಲ್ಲ. ಈ ರಹಸ್ಯವನ್ನೇ ಇಲ್ಲಿ ಉಪಸಂಹಾರಮಾಡಿದೆ.

ಇದಂ ತೇ ನಾತಪಸ್ಕಾಯ । ನಾಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ । ನ ಚ ಮಾಂ ಯೋಽಭ್ಯಸೂಯತಿ ॥ 67 ॥
ಯ ಇಮಂ ಪರಮಂ ಗುಹ್ಯಂ । ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ । ಮಾಮೇವೈಷ್ಯತ್ಯಸಂಶಯಃ ॥ 68 ॥

**ನ ಚ ತಸ್ಮಾನ್ಮನುಷ್ಯೇಷು । ಕಶ್ಚಿನ್ಮೇ ಪ್ರಿಯಕೃತ್ತಮಃ ।**
**ಭವಿತಾ ನ ಚ ಮೇ ತಸ್ಮಾ-ದನ್ಯಃ ಪ್ರಿಯತರೋ ಭುವಿ ॥ 69 ॥**
**ಅಧ್ಯೇಷ್ಯತೇ ಚ ಯ ಇಮಂ । ಧರ್ಮ್ಯಂ ಸಂವಾದಮಾವಯೋಃ ।**
**ಜ್ಞಾನಯಜ್ಞೇನ ತೇನಾಹ-ಮಿಷ್ಟಃ ಸ್ಯಾಮಿತಿ ಮೇ ಮತಿಃ ॥ 70 ॥**
**ಶ್ರದ್ಧಾವಾನನಸೂಯಶ್ಚ । ಶೃಣುಯಾದಪಿ ಯೋ ನರಃ ।**
**ಸೋಽಪಿ ಮುಕ್ತಃ ಶುಭಾಂಲ್ಲೋಕಾ-ನ್ಪ್ರಾಪ್ನುಯಾತ್ಪುಣ್ಯಕರ್ಮಣಾಮ್ ॥ 71 ॥**

ಇದನ್ನು ತಪಸ್ವಿಯಲ್ಲದವನಿಗೆ ಹೇಳಬಾರದು ; ಭಕ್ತನಲ್ಲದವನಿಗೆ ಎಂದಿಗೂ ಹೇಳತಕ್ಕದ್ದಲ್ಲ; ಗುರುಶುಶ್ರೂಷೆಯನ್ನು ಮಾಡದವನಿಗೂ ಹೇಳಬಾರದು. ನನ್ನಲ್ಲಿ ಅಸೂಯೆಯಿರುವವನಿಗೂ ಹೇಳತಕ್ಕದ್ದಲ್ಲ. ಯಾವನು ಈ ಪರಮರಹಸ್ಯವನ್ನು ನನ್ನಲ್ಲಿರುವ ಪರಮಭಕ್ತಿಯಿಂದ ನನ್ನ ಭಕ್ತರಲ್ಲಿ ಹೇಳುವನೋ, ಅವನು ನನ್ನನ್ನೇ ಹೊಂದುತ್ತಾನೆ, ಇದಕ್ಕೆ ಸಂಶಯವಿಲ್ಲ; ಮತ್ತು ಮನುಷ್ಯರಲ್ಲಿ ಆತನಿಗಿಂತ ನನಗೆ ಪ್ರಿಯವಾದದ್ದನ್ನು ಮಾಡಿದವರು ಮತ್ತೆಯಾರೂ

ಬ್ಬರೂ ಇರುವದಿಲ್ಲ. ಭೂಲೋಕದಲ್ಲಿ ನನಗೆ ಅವನಿಗಿಂತ ಹೆಚ್ಚು ಪ್ರಿಯವಾದವನು ಮತ್ತೆ ಯಾವನೂ ಮುಂದೆ ಹುಟ್ಟಲಾರನು. ಧರ್ಮಸಮ್ಮತವಾದ ಈ ನಮ್ಮಿಬ್ಬರ ಸಂವಾದವನ್ನು ಯಾವನು ಓದುವನೋ ಅವನು ನನಗಾಗಿ ಜ್ಞಾನಯಜ್ಞವನ್ನು ಮಾಡಿದವನಾಗುವನು– ಎಂದು ನನ್ನ ಮತವು. ಮತ್ತು ಯಾವ ಮನುಷ್ಯನು ಶ್ರದ್ಧೆಯಿಂದ ಅಸೂಯೆಯಿಲ್ಲದೆ ಕೇಳುವನೋ ಅವನೂ ಪಾಪದಿಂದ ಮುಕ್ತನಾಗಿ ಪುಣ್ಯಕರ್ಮವನ್ನು ಮಾಡಿದವರು ಹೊಂದುವ ಶುಭಲೋಕಗಳನ್ನು ಪಡೆಯುವನು. (67–71)

ಟಿ॥ ಈ ಗ್ರಂಥವನ್ನು ಭಕ್ತಿಯುಳ್ಳ ಅಧಿಕಾರಿಗಳಿಗೆ ಹೇಳುವದೂ ಅದನ್ನು ಅಧಿಕಾರಿಯಾದವನು ಭಕ್ತಿಯಿಂದ ಕೇಳುವದೂ ಸದ್ಗತಿಗೆ ಕಾರಣವಾಗುವದು.

**ಕಚ್ಚಿದೇತಚ್ಛ್ರುತಂ ಪಾರ್ಥ । ತ್ವಯ್ಯೈಕಾಗ್ರೇಣ ಚೇತಸಾ ।**
**ಕಚ್ಚಿದಜ್ಞಾನಸಮ್ಮೋಹಃ । ಪ್ರಣಷ್ಟಸ್ತೇ ಧನಞ್ಜಯ ॥ 72 ॥**

ಪಾರ್ಥನೆ, ಇದನ್ನು ನೀನು ಏಕಾಗ್ರಚಿತ್ತದಿಂದ ಕೇಳಿದೆಯ ? ಧನಂಜಯನೆ, ನಿನಗೆ ಅಜ್ಞಾನದಿಂದಾಗಿದ್ದ ಮೋಹವು ಕಳೆದುಹೋಯಿತೆ ? (72)

ಅರ್ಜುನ ಉವಾಚ –

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ। ತ್ವತ್ಪ್ರಸಾದಾನ್ಮಯಾಚ್ಯುತ।
ಸ್ಥಿತೋಽಸ್ಮಿ ಗತಸನ್ದೇಹಃ। ಕರಿಷ್ಯೇ ವಚನಂ ತವ ॥ 73 ॥

ಅರ್ಜುನನು ಹೇಳಿದ್ದು :

ಅಚ್ಯುತನೆ, ನಿನ್ನ ಅನುಗ್ರಹದಿಂದ ನನ್ನ ಮೋಹವು ತೊಲಗಿತು, ನನಗೆ ಆತ್ಮಸ್ಮೃತಿಯು ದೊರಕಿತು ; ಸಂಶಯಗಳು ಯಾವವೂ ಇಲ್ಲದೆ ಇರುವೆನು. ಇನ್ನು ನೀನು ಹೇಳಿದಂತೆ ಮಾಡುವೆನು. (73)

ಟಿ॥ ಶಿಷ್ಯನು ಕೃತಾರ್ಥನಾಗುವವರೆಗೂ ಗುರುಗಳಲ್ಲಿ ವಿಚಾರಮಾಡಬೇಕು.

ಸಞ್ಜಯ ಉವಾಚ –

ಇತ್ಯಹಂ ವಾಸುದೇವಸ್ಯ। ಪಾರ್ಥಸ್ಯ ಚ ಮಹಾತ್ಮನಃ।
ಸಂವಾದಮಿಮಮಶ್ರೌಷ–ಮದ್ಭುತಂ ರೋಮಹರ್ಷಣಮ್ ॥ 74 ॥

ವ್ಯಾಸಪ್ರಸಾದಾಚ್ಛ್ರುತವಾ–ನೇತದ್ಗುಹ್ಯಮಹಂ ಪರಮ್ ।
ಯೋಗಂ ಯೋಗೇಶ್ವರಾತ್ಕೃಷ್ಣಾ–ತ್ಸಾಕ್ಷಾತ್ಕಥಯತಃ ಸ್ವಯಮ್ ॥ 75 ॥

ರಾಜನ್ಸಂಸ್ಮೃತ್ಯ ಸಂಸ್ಮೃತ್ಯ । ಸಂವಾದಮಿಮಮದ್ಭುತಮ್ ।
ಕೇಶವಾರ್ಜುನಯೋಃ ಪುಣ್ಯಂ । ಹೃಷ್ಯಾಮಿ ಚ ಮುಹುರ್ಮುಹುಃ ॥ 76 ॥

ತಚ್ಚ ಸಂಸ್ಮೃತ್ಯ ಸಂಸ್ಮೃತ್ಯ । ರೂಪಮತ್ಯದ್ಭುತಂ ಹರೇಃ ।
ವಿಸ್ಮಯೋ ಮೇ ಮಹಾನ್ರಾಜನ್ । ಹೃಷ್ಯಾಮಿ ಚ ಪುನಃ ಪುನಃ ॥ 77 ॥

ಯತ್ರ ಯೋಗೇಶ್ವರಃ ಕೃಷ್ಣೋ । ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿ–ರ್ಧ್ರುವಾ ನೀತಿರ್ಮತಿರ್ಮಮ ॥ 78 ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ
ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ಮೋಕ್ಷಸಂನ್ಯಾಸಯೋಗೋ ನಾಮ ಅಷ್ಟಾದಶೋಽಧ್ಯಾಯಃ

**ಸಂಯಜನು ಹೇಳಿದ್ದು:**

ಈ ರೀತಿಯಲ್ಲಿ ವಾಸುದೇವನಿಗೂ ಮಹಾತ್ಮನಾದ ಪಾರ್ಥನಿಗೂ ನಡೆದ ಈ ಅದ್ಭುತವಾದ ರೋಮಾಂಚನವನ್ನುಂಟುಮಾಡುವ ಸಂವಾದವನ್ನು ನಾನು ಕೇಳಿದೆನು. ಈ ಪರಮರಹಸ್ಯವನ್ನು ಯೋಗೇಶ್ವರನಾದ ಕೃಷ್ಣನು ತಾನೇ ಹೇಳಿದ್ದನ್ನೇ ನಾನು ವ್ಯಾಸರ ಅನುಗ್ರಹದಿಂದ ಕೇಳಿದೆನು. ರಾಜನೆ, ಈ ಅದ್ಭುತವಾದ ಕೇಶವಾರ್ಜುನರ ಶುಭಸಂವಾದವನ್ನು ನೆನೆನೆನೆದು ಮತ್ತೆಮತ್ತೆ ನನಗೆ ರೋಮಾಂಚನವುಂಟಾಗುತ್ತಿದೆ. ಮತ್ತು ಎಲೈ ರಾಜನೆ, ಆ ಹರಿಯ ಅತ್ಯದ್ಭುತವಾದ ರೂಪವನ್ನು ನೆನೆನೆನೆದು ನನಗೆ ಹೆಚ್ಚಿನ ವಿಸ್ಮಯವಾಗಿರುತ್ತದೆ. ಮತ್ತೆಮತ್ತೆ ರೋಮಾಂಚನವೂ ಆಗುತ್ತಿದೆ. ಯಾರ ಕಡೆಯಲ್ಲಿ ಯೋಗೇಶ್ವರನಾದ ಕೃಷ್ಣನಿರುವನೋ, ಯಾರ ಕಡೆಯಲ್ಲಿ ಧನುರ್ಧಾರಿಯಾದ ಅರ್ಜುನನಿರುವನೋ, ಅಲ್ಲಿಯೇ ಎಡೆಬಿಡದೆ ಸಂಪತ್ತೂ ಗೆಲವೂ ಏಳಿಗೆಯೂ ನೀತಿಯು ನೆಲೆಸಿರುವದೆಂದು ನನ್ನ ಮತವು. (74–78)

ಟಿ॥ ದೊಡ್ಡವರ ಅನುಗ್ರಹದಿಂದಲೇ ಈ ಸಂವಾದವು ಕಿವಿಗೆ ಬೀಳುವದು; ಅದರಿಂದ ಕೇಳಿದವನಿಗೆ ಸಾತ್ತ್ವಿಕಭಾವಗಳುಂಟಾಗುವವು. ಪರಮಾತ್ಮನ ಅದ್ಭುತವಾದ ಉಪದೇಶ, ಆತನ ಅದ್ಭುತವಾದ ವಿಶ್ವರೂಪ– ಇವುಗಳ ನಿಜವನ್ನರಿತುಕೊಂಡರೆ ಗೀತೆಯನ್ನು ತಿಳಿದುಕೊಂಡಂತಾಯಿತು. ಶ್ರೀಕೃಷ್ಣನ ಭಕ್ತನಿಗೆ ಐಹಿಕಸುಖವೂ ಪರಮಪುರುಷಾರ್ಥವೂ ಕಟ್ಟಿಟ್ಟ ಬುತ್ತಿಯಾಗಿರುವವು.

ಮೋಕ್ಷಸಂನ್ಯಾಸವೆಂಬ ಹದಿನೆಂಟನೆಯ ಅಧ್ಯಾಯವು ಮುಗಿಯಿತು.

--------

# ಅಥ ಗೀತಾಮಾಹಾತ್ಮ್ಯಮ್

ಧರೋವಾಚ –

ಭಗವನ್ ಪರಮೇಶಾನ । ಭಕ್ತಿರವ್ಯಭಿಚಾರಿಣೀ ।
ಪ್ರಾರಬ್ಧಂ ಭುಜ್ಯಮಾನಸ್ಯ । ಕಥಂ ಭವತಿ ಹೇ ಪ್ರಭೋ ॥ 1 ॥

## ಗೀತೆಯ ಹೆಚ್ಚುಗಾರಿಕೆಯು

ಭೂದೇವಿಯು ಕೇಳಿದ್ದು :

ಪರಮೇಶ್ವರನಾದ ಭಗವಂತನೆ, ಪ್ರಭುವೆ, ಪ್ರಾರಬ್ಧವನ್ನು ಅನುಸರಿಸುತ್ತಿರುವಾತನಿಗೆ ಅನನ್ಯಭಕ್ತಿಯು ಹೇಗೆ ಉಂಟಾಗುವದು ? (1)

ಶ್ರೀವಿಷ್ಣುರುವಾಚ–

ಪ್ರಾರಬ್ಧಂ ಭುಜ್ಯಮಾನೋ ಹಿ । ಗೀತಾಭ್ಯಾಸರತಃ ಸದಾ ।
ಸ ಮುಕ್ತಃ ಸ ಸುಖೀ ಲೋಕೇ । ಕರ್ಮಣಾ ನೋಪಲಿಪ್ಯತೇ ॥ 2 ॥

ಮಹಾಪಾಪಾದಿಪಾಪಾನಿ। ಗೀತಾಧ್ಯಾನಂ ಕರೋತಿ ಚೇತ್।
ಕ್ವಚಿತ್ಸ್ಪರ್ಶಂ ನ ಕುರ್ವಂತಿ। ನಲಿನೀದಲಮಮ್ಬುವತ್ ॥ 3 ॥

ಶ್ರೀವಿಷ್ಣುವಿನ ಉತ್ತರ :

ಯಾವನು ಪ್ರಾರಬ್ಧವನ್ನು ಅನುಭವಿಸುತ್ತಿರುವಾಗ ಯಾವಾಗಲೂ ಗೀತಾಭ್ಯಾಸದಲ್ಲಿ ನಿರತನಾಗಿರುವನೋ ಅವನೇ ಈ ಲೋಕದಲ್ಲಿ ಮುಕ್ತನು, ಅವನೇ ಸುಖಿಯು, ಅವನಿಗೆ ಕರ್ಮದ ಅಂಟು ಉಂಟಾಗುವದಿಲ್ಲ. ಮನುಷ್ಯನು ಗೀತಾಧ್ಯಾನವನ್ನು ಮಾಡುತ್ತಿದ್ದರೆ ತಾವರೆಯೆಲೆಗೆ ನೀರು ಸೋಂಕದಿರುವಂತೆ ಅವನಿಗೆ ಮಹಾಪಾತಕಗಳೇ ಮುಂತಾದ ಪಾಪಗಳು ಎಂದಿಗೂ ತಗಲದೆ ಇರುವವು. (2–3)

ಗೀತಾಯಾಃ ಪುಸ್ತಕಂ ಯತ್ರ। ಯತ್ರ ಪಾಠಃ ಪ್ರವರ್ತತೇ।
ತತ್ರ ಸರ್ವಾಣಿ ತೀರ್ಥಾನಿ। ಪ್ರಯಾಗಾದೀನಿ ತತ್ರ ವೈ ॥ 4 ॥

ಸರ್ವೇ ದೇವಾಶ್ಚ ಋಷಯೋ । ಯೋಗಿನಃ ಪನ್ನಗಾಶ್ಚ ಯೇ ।
ಗೋಪಾಲಾ ಗೋಪಿಕಾ ವಾಪಿ । ನಾರದೋದ್ಧವಪಾರ್ಷದ್ಯೈಃ ॥ 5 ॥

ಸಹಾಯೋ ಜಾಯತೇ ಶೀಘ್ರಂ । ಯತ್ರ ಗೀತಾ ಪ್ರವರ್ತತೇ ।
ಯತ್ರ ಗೀತಾ ವಿಚಾರಶ್ಚ । ಪಠನಂ ಪಾಠನಂ ಶ್ರುತಮ್ ॥ 6 ॥

ತತ್ರಾಹಂ ನಿಶ್ಚಿತಂ ಪೃಥ್ವಿ । ನಿವಸಾಮಿ ಸದೈವ ಹಿ ।

ಎಲ್ಲಿ ಗೀತೆಯ ಪುಸ್ತಕವಿರುವದೋ, ಎಲ್ಲಿ ಗೀತೆಯ ಪಾರಾಯಣವು ನಡೆಯುತ್ತಿರುವದೋ ಅಲ್ಲಿ ಸರ್ವತೀರ್ಥಗಳೂ ಇರುವವು. ಪ್ರಯಾಗಾದಿಗಳು ಅಲ್ಲಿಯೇ ಇರುವವು. ಎಲ್ಲಿ ಗೀತೆಯ ಪಾರಾಯಣವಾಗುತ್ತಿರುವದೋ ಅಲ್ಲಿ ಎಲ್ಲಾ ದೇವತೆಗಳೂ, ಋಷಿಗಳೂ, ಯೋಗಿಗಳೂ, ಅನಂತನೇ ಮುಂತಾದ ನಾಗರೂ ವ್ರಜದ ಗೋಪಾಲರೂ ಗೋಪಿಯರೂ ನಾರದ, ಉದ್ಧವ – ಮುಂತಾದ ಭಗವತ್ಪಾರ್ಷದರೊಡನೆ ಯಾವಾಗಲೂ ವಾಸಮಾಡುತ್ತಿರುವರು. ಎಲ್ಲಿ ಗೀತೆಯ ಅಭ್ಯಾಸವು ನಡೆದಿರುವದೋ ಅಲ್ಲಿ ಬೇಗನೆ ಬೇಕಾದ ಸಹಾಯವುಂಟಾಗುವದು.

ಎಲ್ಲೈ ಪೃಥ್ವೀದೇವಿಯೆ, ಎಲ್ಲಿ ಗೀತೆಯ ವಿಚಾರವೂ ಪಾರಾಯಣವೂ ಬೋಧನೆಯೂ ಕೇಳಿಬರುತ್ತಿರುವದೋ ಅಲ್ಲಿ ನಾನು ನಿಶ್ಚಯವಾಗಿಯೂ ಯಾವಾಗಲೂ ವಾಸಮಾಡುತ್ತಿರುವೆನು. (4–6)

ಗೀತಾಶ್ರಯೇಽಹಂ ತಿಷ್ಠಾಮಿ । ಗೀತಾ ಮೇ ಚೋತ್ತಮಂ ಗೃಹಮ್ ।
ಗೀತಾಜ್ಞಾನಮುಪಾಶ್ರಿತ್ಯ । ತ್ರೀಲ್ಲೋಕಾನ್ ಪಾಲಯಾಮ್ಯಹಮ್ ॥ 7 ॥

ಗೀತಾ ಮೇ ಪರಮಾ ವಿದ್ಯಾ । ಬ್ರಹ್ಮರೂಪಾ ನ ಸಂಶಯಃ ।
ಅರ್ಧಮಾತ್ರಾಕ್ಷರಾ ನಿತ್ಯಾ । ಸ್ವಾನಿರ್ವಾಚ್ಯಪದಾತ್ಮಿಕಾ ॥ 8 ॥

ಚಿದಾನಂದೇನ ಕೃಷ್ಣೇನ । ಪ್ರೋಕ್ತಾ ಸ್ವಮುಖತೋಽರ್ಜುನಮ್ ।
ವೇದತ್ರಯೀ ಪರಾನಂದಾ । ತತ್ತ್ವಾರ್ಥಜ್ಞಾನಸಂಯುತಾ ॥ 9 ॥

ನಾನು ಗೀತೆಯೆಂಬ ವಸತಿಯಲ್ಲಿಯೇ ನೆಲೆಸಿರುವೆನು. ಗೀತೆಯೇ ನನಗೆ ಉತ್ತಮವಾದ ಮನೆಯು. ಗೀತಾಜ್ಞಾನವನ್ನವಲಂಬಿಸಿಯೇ ನಾನು ಮೂರು

ಲೋಕಗಳನ್ನೂ ಕಾಪಾಡುತ್ತಿರುವೆನು. ಗೀತೆಯೇ ನನ್ನ ಬ್ರಹ್ಮವಿದ್ಯಾರೂಪವಾದ ಪರಮವಿದ್ಯೆಯು, ಇದಕ್ಕೆ ಸಂಶಯವಿಲ್ಲ ; ಇದೇ ನಿತ್ಯವಾಗಿಯೂ ನನ್ನ ಅನಿರ್ವಾಚ್ಯವಾದ ಪದವನ್ನು ತಿಳಿಸುವ ಪ್ರಣವದ ಅರ್ಧಮಾತ್ರೆಯಾಗಿಯೂ ಇರುವುದು. ಇದು ಚಿದಾನಂದನಾದ ಕೃಷ್ಣನು ಅರ್ಜುನನಿಗೆ ತಾನೇ ಹೇಳಿದ ಋಗ್ವೇದಾದಿವೇದತ್ರಯದ ಸಾರವು, ತತ್ತ್ವಜ್ಞಾನಾರ್ಥವಾದ ಪರಮಾನಂದ ದಾಯಕವು. (7–9)

ಯೋಽಷ್ಟಾದಶಜಪೋ ನಿತ್ಯಂ। ನರೋ ನಿಶ್ಚಲಮಾನಸಃ।
ಜ್ಞಾನಸಿದ್ಧಿಂ ಸ ಲಭತೇ। ತತೋ ಯಾತಿ ಪರಂ ಪದಮ್ ॥ 10 ॥

ಪಾಠೇಽಸಮರ್ಥಃ ಸಂಪೂರ್ಣೇ। ತತೋಽರ್ಧಂ ಪಾಠಮಾಚರೇತ್।
ತದಾ ಗೋದಾನಜಂ ಪುಣ್ಯಂ। ಲಭತೇ ನಾತ್ರ ಸಂಶಯಃ ॥ 11 ॥

ತ್ರಿಭಾಗಂ ಪಠಮಾನಸ್ತು। ಗಂಗಾಸ್ನಾನಫಲಂ ಲಭೇತ್।
ಷಡಂಶಂ ಜಪಮಾನಸ್ತು। ಸೋಮಯಾಗಫಲಂ ಲಭೇತ್ ॥ 12 ॥

**ಏಕಾಧ್ಯಾಯಂ ತು ಯೋ ನಿತ್ಯಮ್ । ಪಠತೇ ಭಕ್ತಿಸಂಯುತಃ ।**
**ರುದ್ರಲೋಕಮವಾಪ್ನೋತಿ । ಗಣೋ ಭೂತ್ವಾ ವಸೇಚ್ಚಿರಮ್ ॥ 13 ॥**

ಯಾವ ಮನುಷ್ಯನು ಈ ಗೀತೆಯನ್ನು ನಿತ್ಯವೂ ಹದಿನೆಂಟು ಅಧ್ಯಾಯ ಪೂರ್ತಿಯಾಗಿ ಚಿತ್ತಚಾಂಚಲ್ಯವಿಲ್ಲದೆ ಜಪಿಸುವನೋ ಅವನು ಜ್ಞಾನಸಿದ್ಧಿಯನ್ನು ಹೊಂದಿ ಅದರಿಂದ ಮೋಕ್ಷವನ್ನು ಹೊಂದುವನು. ಸಂಪೂರ್ಣ ಗೀತೆಯನ್ನು ಪಾರಾಯಣಮಾಡಲು ಅಸಮರ್ಥನಾದವನು ನಿತ್ಯವೂ ಅರ್ಧಭಾಗವನ್ನು ಪಠಿಸಬೇಕು ; ಇದರಿಂದ ಗೋದಾನವನ್ನು ಮಾಡುವದರಿಂದಾಗುವ ಪುಣ್ಯವು ಲಭಿಸುವದು, ಇದಕ್ಕೆ ಸಂಶಯವಿಲ್ಲ. ಈ ಗೀತೆಯ ಮೂರನೆಯ ಒಂದು ಭಾಗವನ್ನು ನಿತ್ಯವೂ ಪಠಿಸುವವನಿಗೆ ಗಂಗೆಯಲ್ಲಿ ಸ್ನಾನಮಾಡಿದ ಫಲವು ದೊರಕುತ್ತದೆ ; ಆರನೆಯ ಒಂದಂಶವನ್ನು ಜಪಿಸುವವನಿಗೆ ಸೋಮಯಾಗವನ್ನು ಮಾಡಿದ ಫಲವು ಬರುವದು. ಯಾವನು ನಿತ್ಯವೂ ಒಂದೊಂದು ಅಧ್ಯಾಯವನ್ನು ಭಕ್ತಿಯಿಂದ ಪಠಿಸುವನೋ ಅವನು ರುದ್ರಲೋಕವನ್ನು ಸೇರಿ ರುದ್ರಗಣಗಳಲ್ಲಿ ಒಬ್ಬನಾಗಿ ಬಹುಕಾಲ ಅಲ್ಲಿ ವಾಸವಾಗಿರುವನು. (10–13)

ಅಧ್ಯಾಯ ಶ್ಲೋಕಪಾದಂ ವಾ। ನಿತ್ಯಂ ಯಃ ಪಠತೇ ನರಃ।
ಸ ಯಾತಿ ನರತಾಂ ಯಾವನ್–ಮನ್ವಂತರಂ ವಸುಂಧರೇ ॥ 14 ॥

ಗೀತಾಯಾಃ ಶ್ಲೋಕದಶಕಂ। ಸಪ್ತ ಪಂಚ ಚತುಷ್ಟಯಮ್।
ದ್ವೌ ತ್ರೀನೇಕಂ ತದರ್ಧಂ ವಾ। ಶ್ಲೋಕಾನಾಂ ಯಃ ಪಠೇನ್ನರಃ ॥ 15 ॥
ಚಂದ್ರಲೋಕಮವಾಪ್ನೋತಿ। ವರ್ಷಾಣಾಮಯುತಂ ಧ್ರುವಮ್।

ಅಥವಾ ಯಾವ ಮನುಷ್ಯನು ಅಧ್ಯಾಯದ ಒಟ್ಟು ಶ್ಲೋಕಗಳ ಕಾಲು ಪಾಲನ್ನು ನಿತ್ಯವೂ ಪಠಿಸುತ್ತಿರುವನೋ ಅವನು ಎಲೌ ಭೂದೇವಿಯೆ, ಒಂದು ಮನ್ವಂತರದವರೆಗೆ ಮಾನವಜನ್ಮವನ್ನೇ ಹೊಂದುವನು. ಗೀತೆಯಲ್ಲಿ ಹತ್ತು ಶ್ಲೋಕಗಳನ್ನು, ಏಳು, ಐದು, ನಾಲ್ಕು, ಮೂರು, ಎರಡು, ಒಂದು ಅಥವಾ ಕೊನೆಗೆ ಅರ್ಧಶ್ಲೋಕವನ್ನಾದರೂ ಯಾವ ಮನುಷ್ಯನು ನಿತ್ಯವೂ ಓದುವನೋ ಅವನು ಚಂದ್ರಲೋಕವನ್ನು ಹೊಂದಿ ಹತ್ತುಸಾವಿರವರ್ಷಗಳು ಅಲ್ಲಿ ನೆಲೆಸಿರುವನು. ಇದು ನಿಶ್ಚಯವು. (14–15)

ಗೀತಾಪಾಠಸಮಾಯುಕ್ತೋ। ಮೃತೋ ಮಾನುಷತಾಂ ವ್ರಜೇತ್ ॥ 16 ॥

ಗೀತಾಭ್ಯಾಸಂ ಪುನಃ ಕೃತ್ವಾ ಲಭತೇ ಮುಕ್ತಿಮುತ್ತಮಾಮ್ ।

ಗೀತೇತ್ಯುಚ್ಚಾರಸಂಯುಕ್ತೋ। ಮ್ರಿಯಮಾಣೋ ಗತಿಂ ಲಭೇತ್ ॥ 17 ॥

ಗೀತಾರ್ಥಶ್ರವಣಾಸಕ್ತೋ। ಮಹಾಪಾಪಯುತೋಽಪಿ ವಾ ।

ವೈಕುಂಠಂ ಸಮವಾಪ್ನೋತಿ। ವಿಷ್ಣುನಾ ಸಹ ಮೋದತೇ ॥ 18 ॥

ಗೀತೆಯನ್ನು ಪಾರಾಯಣಮಾಡುತ್ತಾ ಮೃತನಾದವನು ಮತ್ತೊಮ್ಮೆ ಮನುಷ್ಯಜನ್ಮವನ್ನೇ ಪಡೆಯುತ್ತಾನೆ ; ಮತ್ತು ಗೀತಾಭ್ಯಾಸವನ್ನು ಮಾಡಿ ಉತ್ತಮವಾದ ಮುಕ್ತಿಯನ್ನೇ ಹೊಂದುತ್ತಾನೆ. 'ಗೀತಾ' ಎಂದು ಶಬ್ದವನ್ನು ಉಚ್ಚರಿಸುತ್ತಾ ಪ್ರಾಣವನ್ನು ಬಿಟ್ಟವನೂ ಸದ್ಗತಿಯನ್ನು ಹೊಂದುವನು. ಮಹಾಪಾತಕಗಳಿಂದೊಡಗೂಡಿದವನು ಕೂಡ ಗೀತಾರ್ಥವನ್ನು ಶ್ರವಣಮಾಡುವದರಲ್ಲಿ ಆಸಕ್ತನಾಗಿದ್ದರೆ ವೈಕುಂಠವನ್ನು ಹೊಂದಿ ವಿಷ್ಣುವಿನೊಡನೆ ಸಂತೋಷದಿಂದಿರುವನು. (16–18)

ಗೀತಾರ್ಥಂ ಧ್ಯಾಯತೇ ನಿತ್ಯಂ। ಕೃತ್ವಾ ಕರ್ಮಾಣಿ ಭೂರಿಶಃ।
ಜೀವನ್ಮುಕ್ತಃ ಸ ವಿಜ್ಞೇಯೋ ।ದೇಹಾಂತೇ ಪರಮಂ ಪದಮ್ ॥ 19 ॥

ಗೀತಾಮಾಶ್ರಿತ್ಯ ಬಹವೋ । ಭೂಭುಜೋ ಜನಕಾದಯಃ ।
ನಿರ್ಧೂತಕಲ್ಮಷಾ ಲೋಕೇ । ಗೀತಾ ಯಾತಾಃ ಪರಂ ಪದಮ್ ॥ 20 ॥

ಎಷ್ಟೇ ಕರ್ಮಗಳನ್ನು ಮಾಡುತ್ತಿದ್ದರೂ ಯಾವನು ಗೀತಾರ್ಥವನ್ನು ಚಿಂತಿಸುತ್ತಿರುವನೋ ಅವನು ಜೀವನ್ಮುಕ್ತನೆಂದು ತಿಳಿಯತಕ್ಕದ್ದು. ಅವನಿಗೆ ದೇಹಾಂತದಲ್ಲಿ ಪರಮಪದವೇ ದೊರಕುವದು. ಜನಕನೇ ಮೊದಲಾದ ಅನೇಕ ರಾಜರು ಗೀತೆಯನ್ನು ಆಶ್ರಯಿಸಿ ಪಾಪರಹಿತರಾಗಿ ಲೋಕದಲ್ಲಿ ಕೀರ್ತಿವಂತರಾಗಿ ಬಾಳಿ ಉತ್ತಮಪದವನ್ನು ಸೇರಿರುತ್ತಾರೆ. (16–20)

ಗೀತಾಯಾಃ ಪಠನಂ ಕೃತ್ವಾ । ಮಾಹಾತ್ಮ್ಯಂ ನೈವ ಯಃ ಪಠೇತ್ ।
ವೃಥಾ ಪಾಠೋ ಭವೇತ್ತಸ್ಯ । ಶ್ರಮ ಏವ ಹ್ಯುದಾಹೃತಃ ॥ 21 ॥

ಏತನ್ಮಾಹಾತ್ಮ್ಯಸಂಯುಕ್ತಂ। ಗೀತಾಭ್ಯಾಸಂ ಕರೋತಿ ಯಃ।
ಸ ತತ್ಫಲಮವಾಪ್ನೋತಿ। ದುರ್ಲಭಾಂ ಗತಿಮಾಪ್ನುಯಾತ್ ॥ 22 ॥

ಯಾವನು ಗೀತೆಯನ್ನು ಪಠಿಸಿ ಅದರ ಮಾಹಾತ್ಮ್ಯವನ್ನು ಓದುವದಿಲ್ಲವೋ ಅವನ ಪಾಠವು ವ್ಯರ್ಥವು ; ಏಕೆಂದರೆ ಅದಕ್ಕೆ ಆಗಬೇಕಾದ ಫಲವು ಆಗುವದೇ ಇಲ್ಲ; ಅವನ ಪಾಠವು ಬರಿಯ ಶ್ರಮವೇ ಎಂದು ಬಲ್ಲವರು ಹೇಳುತ್ತಾರೆ. ಯಾವನು ಈ ಮಾಹಾತ್ಮ್ಯದಿಂದೊಡಗೂಡಿದ ಗೀತೆಯನ್ನು ಅಭ್ಯಾಸಮಾಡುವನೋ ಅವನಿಗೆ ಅದರ ಪೂರ್ಣಫಲವು ದೊರಕುವದು. ದುರ್ಲಭವಾದ ಗತಿಯೂ ದೊರಕುವದು. (21–22)

ಸೂತ ಉವಾಚ –

ಮಾಹಾತ್ಮ್ಯಮೇತದ್ಗೀತಾಯಾ ಮಯಾ ಪ್ರೋಕ್ತಂ ಸನಾತನಮ್ ।
ಗೀತಾನ್ತೇ ಚ ಪಠೇದ್ಯಸ್ತು ಯದುಕ್ತಂ ತತ್ಫಲಂ ಲಭೇತ್ ॥ 23 ॥

ಇತಿ ಶ್ರೀವಾರಾಹಪುರಾಣೇ ಗೀತಾಮಾಹಾತ್ಮ್ಯಂ ಸಂಪೂರ್ಣಮ್

ಓಂ ತತ್ಸತ್

**ಸೂತನು ಶೌನಕಾದಿಗಳಿಗೆ ಹೇಳಿದ್ದು:**

ಈ ನಾನು ಹೇಳಿರುವ ಗೀತಾಮಾಹಾತ್ಮ್ಯವು ಸನಾತನವಾದದ್ದು. ಇದನ್ನು ಗೀತೆಯ ಕೊನೆಯಲ್ಲಿ ಯಾವನು ಪಠಿಸುವನೋ ಅವನಿಗೆ ಅದರ ಪೂರ್ಣಫಲವು ದೊರಕುವದು. (23)

**ವಾರಾಹಪುರಾಣೋಕ್ತವಾದ ಗೀತಾಮಾಹಾತ್ಮ್ಯವು ಮುಗಿಯಿತು.**

---------